prajavani.net | prajavani
ಶುಕ್ರವಾರ, ಜೂನ್ 26, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 176 | ಪುಟ 20
www.prajavani.net

ಶಫಾಲಿ ಮಿಂಚು

ಭಾರತ ತಂಡದ ಶಫಾಲಿ ವರ್ಮಾ (53;34ಎ) ಟಿ20 ವಿಶ್ವಕಪ್‌ನಲ್ಲಿ ಗುರುವಾರ ಬಾಂಗ್ಲಾದೇಶ ವಿರುದ್ಧ ಅರ್ಧಶತಕ ದಾಖಲಿಸಿದರು. ಭಾರತ 5 ವಿಕೆಟ್‌ಗಳಿಂದ ಜಯಿಸಿತು

ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 77,100 | ನಿಫ್ಟಿ 24,056 | $/₹ 94.45 | ಚಿನ್ನ (Std. 10g) ₹1,44,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,29,600 (ಬೆಂಗಳೂರು)

ಹುದ್ದೆ ಭರ್ತಿಗೆ ಕಾಲಮಿತಿ

ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 72,186 ಹುದ್ದೆಗಳ ನೇಮಕಾತಿ ತ್ವರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ, ಸುಮಾರು 72,186 ಹುದ್ದೆಗಳ ನೇಮಕಾತಿಯನ್ನು ಆರು ತಿಂಗಳುಗಳಲ್ಲಿ ಪೂರ್ಣಗೊಳಿಸಿ, ಅರ್ಹರಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಕಡ್ಡಾಯವಾಗಿ ಹೊರಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಮೇಲುಸ್ತುವಾರಿಗಾಗಿ ಉನ್ನತಮಟ್ಟದ ಅಧಿಕಾರಿಗಳನ್ನು ನೇಮಿಸಲಾಗಿದೆ. ಇದೇ 20ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ಈ ತೀರ್ಮಾನವು ಸರ್ಕಾರಿ ಹುದ್ದೆ ಗಿಟ್ಟಿಸಿ-ಕೊಳ್ಳುವ ನಿರೀಕ್ಷೆಯಲ್ಲಿರುವ ರಾಜ್ಯದ ಲಕ್ಷಾಂತರ ಸಂಖ್ಯೆಯ ಆಕಾಂಕ್ಷಿಗಳ ಮೊಗದಲ್ಲಿ ಸಂತಸ ಮೂಡಿಸಿದೆ.

2023–24ನೇ ಸಾಲಿನಿಂದ ಇಲ್ಲಿಯವರೆಗೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 40,009 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 32,177 ಹುದ್ದೆಗಳನ್ನು ಆದಷ್ಟು ಶೀಘ್ರ ಭರ್ತಿ ಮಾಡಲು ಸರ್ಕಾರ ಉದ್ದೇಶಿಸಿದೆ.

40,009 ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಈಗಾಗಲೇ ಅನುಮೋದನೆ ನೀಡಿದೆ. ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಹುದ್ದೆಗಳ ಪೈಕಿ ಶೇಕಡ 80ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಪರಿಭಾವಿತ (ಡೀಮ್ಡ್) ಒಪ್ಪಿಗೆ ಸೂಚಿಸಿದೆ.

ಈ ಎಲ್ಲ ನೇರ ನೇಮಕಾತಿ ಹುದ್ದೆಗಳಿಗೆ ಮುಂದಿನ ಎರಡು ತಿಂಗಳುಗಳಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ನಾಲ್ಕು ತಿಂಗಳುಗಳಲ್ಲಿ ನೇಮಕಾತಿ ಪರೀಕ್ಷೆಗಳನ್ನು ನಡೆಸಲು ಹಾಗೂ ಆರು ತಿಂಗಳಲ್ಲಿ ಇಡೀ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ನೇಮಕಾತಿ ಆದೇಶಗಳನ್ನು ಹೊರಡಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಇಲಾಖೆಗಳ ಮುಖ್ಯಸ್ಥರು, ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿ, ಕೇಂದ್ರೀಕೃತ ದಾಖಲಾತಿ ಘಟಕದ ಜಂಟಿ ನಿರ್ದೇಶಕರು, ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದರ್ಶಿ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಸೂಚನೆ ನೀಡಿದೆ.

40,009	32,177
ಉಳಿಕೆ ಮೂಲವೃಂದದ ಹುದ್ದೆಗಳು	ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು

ನೇಮಕಾತಿ ಹಂತ

ಎರಡು ತಿಂಗಳುಗಳಲ್ಲಿ ಅಧಿಸೂಚನೆ	ನಾಲ್ಕು ತಿಂಗಳುಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ	ಆರು ತಿಂಗಳಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣ

ಯಾರಿಗೆ ಹೊಣೆ?

17 ಇಲಾಖೆಗಳಲ್ಲಿ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಲು ಮೇಲುಸ್ತುವಾರಿಗೆ ಅಭಿವೃದ್ಧಿ ಆಯುಕ್ತೆ ಉಮಾ ಮಹದೇವನ್ ಅವರಿಗೆ ಜವಾಬ್ದಾರಿ ನೀಡಲಾಗಿದೆ.

34 ಇಲಾಖೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಮೇಲುಸ್ತುವಾರಿಗೆ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ ಅವರಿಗೆ ಹೊಣೆ ವಹಿಸಲಾಗಿದೆ.

ಈ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಆಯ್ಕೆ ಪ್ರಾಧಿಕಾರಗಳಾದ ಕೆಪಿಎಸ್‌ಸಿ ಮತ್ತು ಕೆಇಎಯಿಂದ ಕ್ರಿಯಾ ಯೋಜನೆಯನ್ನು ಪಡೆದು ಅನುಮೋದನೆಗಾಗಿ ಡಿಪಿಎಆರ್ ಇದೇ 20ರಂದು ನಡೆದ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಸಲ್ಲಿಸಿತ್ತು. ಈ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವ ಕುರಿತು ಮೇಲುಸ್ತುವಾರಿ ಮಾಡಲು ಅಧಿಕಾರಿಗಳಿಗೆ ಜವಾಬ್ದಾರಿ ನೀಡುವ ನಿರ್ಣಯವನ್ನೂ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಗಿತ್ತು.

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೆ ನಡೆಸಿದ ಚೊಚ್ಚಲ ಸಚಿವ ಸಂಪುಟ ಸಭೆಯಲ್ಲಿಯೇ ಡಿ.ಕೆ.ಶಿವಕುಮಾರ್ ಅವರು, ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಶೀಘ್ರವೇ ವೇಳಾಪಟ್ಟಿ ಪ್ರಕಟಿಸುವ ನಿರ್ಣಯ ತೆಗೆದುಕೊಂಡಿದ್ದರು.

9

ನೆಲಕ್ಕುರುಳಿದ ಬಹುಮಹಡಿ ಕಟ್ಟಡಗಳು • ಸಾವಿರಕ್ಕೂ ಅಧಿಕ ಜನರಿಗೆ ಗಾಯ

ವೆನೆಜುವೆಲಾ ಭೂಕಂಪ: 188 ಸಾವು

ಕರಾಕಸ್ (ಎ.ಪಿ): ವೆನೆಜುವೆಲಾದಲ್ಲಿ ಬುಧವಾರ ಸಂಜೆ ಸಂಭವಿಸಿದ ಎರಡು ಪ್ರಬಲ ಭೂಕಂಪಗಳಿಂದಾಗಿ ಕನಿಷ್ಠ 188 ಜನರು ಮೃತಪಟ್ಟಿದ್ದು, 1,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಅಲ್ಲದೆ ದೇಶದಾದ್ಯಂತ ಅಪಾರ ಹಾನಿ ಉಂಟಾಗಿದೆ.

ಸಂಜೆ 6 ಗಂಟೆಯ ಸುಮಾರಿಗೆ 7.2ರಷ್ಟು ತೀವ್ರತೆಯ ಭೂಕಂಪ ಸಂಭವಿಸಿದೆ. ಅದಾದ ಕೆಲ ಸೆಕೆಂಡುಗಳ ಅಂತರದಲ್ಲಿಯೇ ಮತ್ತೆ 7.5ರಷ್ಟು ತೀವ್ರತೆಯ ಭಾರಿ ಭೂಕಂಪ ಸಂಭವಿಸಿದೆ. ಇದರಿಂದ ದೇಶದ ವಿವಿಧೆಡೆ ಕಟ್ಟಡಗಳು ಕುಸಿದಿದ್ದು, ಅವಶೇಷಗಳ ಅಡಿ ನೂರಾರು ಜನ ಸಿಲುಕಿದ್ದಾರೆ. ದೇಶದ ಪ್ರಮುಖ ವಿಮಾನ ನಿಲ್ದಾಣಕ್ಕೂ ಹಾನಿಯಾಗಿದ್ದು, ಸಂಚಾರ ಸ್ಥಗಿತಗೊಳಿಸಲಾಗಿದೆ.

‘ತುರ್ತು ರಕ್ಷಣಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದು, ಕಟ್ಟಡಗಳ ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಒಂದರ ಹಿಂದೆ ಒಂದರಂತೆ ಸಂಭವಿಸಿದ ಭಾರಿ ಭೂಕಂಪಗಳಿಂದ ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ’ ಎಂದು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ಮಾಹಿತಿ ನೀಡಿದರು.

ತುರ್ತು ಪರಿಸ್ಥಿತಿ ಘೋಷಣೆ: ಎರಡು ಭೂಕಂಪಗಳ ಬೆನ್ನಲ್ಲೇ ಬುಧವಾರ ತಡರಾತ್ರಿ ದೇಶವನ್ನು ಉದ್ದೇಶಿಸಿ ಮಾತನಾಡಿದ ರಾಡ್ರಿಗಸ್ ಅವರು ದೇಶದಾದ್ಯಂತ ತುರ್ತು ಪರಿಸ್ಥಿತಿ ಘೋಷಿಸಿದರು.

12

ವೆನೆಜುವೆಲಾದಲ್ಲಿ ಸಂಭವಿಸಿದ ಎರಡು ಪ್ರಬಲ ಭೂಕಂಪಗಳಿಂದ ಕ್ಯಾಟಿಯಾ ಲಾ ಮಾರ್ ನಗರದಲ್ಲಿ ಕುಸಿದಿರುವ ಕಟ್ಟಡದ ಅವಶೇಷಗಳ ಬಳಿ ಬದುಕುಳಿದಿರುವವರಿಗೆ ಜನರು ಶೋಧ ನಡೆಸಿದರು —ಎಎಫ್‌ಪಿ ಚಿತ್ರ

ಎಲ್ಲೆಲ್ಲಿ ಭೂಕಂಪ

ಬ್ರೆಜಿಲ್‌ನ ಅಮೆಜಾನ್‌ನಲ್ಲಿರುವ ಮನೌಸ್, ಬೆಲೆಮ್ ಮತ್ತು ಮಕಾಪಾ, ಕೊಲಂಬಿಯಾದ ಕೆರಿಬಿಯನ್ ಮತ್ತು ಈಶಾನ್ಯ ಪ್ರದೇಶಗಳಲ್ಲಿ ಭೂಕಂಪದ ಅನುಭವವಾಗಿದ್ದು, ಕೆಲವೆಡೆ ಹಾನಿ ಸಂಭವಿಸಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಶತಮಾನದ ಅವಧಿಯಲ್ಲಿ ವೆನೆಜುವೆಲಾದಲ್ಲಿ ಸಂಭವಿಸಿದ ಪ್ರಬಲ ಭೂಕಂಪಗಳಲ್ಲಿ ಇದೂ ಒಂದು ಎಂದು ಹೇಳಲಾಗಿದೆ. ಭಾರಿ ಭೂಕಂಪದಿಂದ ದೇಶದ ಜನ ಆತಂಕಕ್ಕೀಡಾಗಿದ್ದಾರೆ. ಕರಾಕಸ್‌ನಿಂದ 1,700 ಕಿ.ಮೀ. ದೂರದಲ್ಲಿರುವ ಅಮೆಜಾನ್‌ವರೆಗಿನ (ಬ್ರೆಜಿಲ್) ಕಟ್ಟಡಗಳಿಂದ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ ಎಂಬ ವರದಿಗಳಿವೆ. ಅಮೆರಿಕದ ಪೆಸಿಫಿಕ್ ಸುನಾಮಿ ಕೇಂದ್ರವು ಭೂಕಂಪಗಳ ಬೆನ್ನಲ್ಲೇ ಸುನಾಮಿ ಎಚ್ಚರಿಕೆ ಸಂದೇಶ ರವಾನಿಸಿತ್ತು. ಬಳಿಕ ಕೇಂದ್ರವು ಸುನಾಮಿ ಎಚ್ಚರಿಕೆಯನ್ನು ಹಿಂಪಡೆಯಿತು.

ಬೀದಿಗಳಲ್ಲಿ ರಾತ್ರಿ ಕಳೆದ ಜನ

ಎರಡು ಪ್ರಬಲ ಭೂಕಂಪಗಳಿಂದ ಕರಾಕಸ್ ಮತ್ತು ಇತರ ನಗರಗಳಲ್ಲಿ ಹಲವು ಬಹುಮಹಡಿ ಕಟ್ಟಡಗಳು ನೆಲಕ್ಕುರುಳಿದ್ದವು. ಕೆಲ ಕಟ್ಟಡಗಳು ವಾಲಿದ್ದವು. ಇದರಿಂದ ಬೆಚ್ಚಿಬಿದ್ದ ಜನರು ಕಟ್ಟಡಗಳನ್ನು ತೊರೆದು ರಸ್ತೆಗಳಲ್ಲಿಯೇ ನಡುಗುತ್ತಾ ಬುಧವಾರ ರಾತ್ರಿ ಕಳೆದರು. ಈ ವೇಳೆ ಮೊಬೈಲ್ ಫೋನ್ ಸೇವೆಗಳೂ ಸ್ಥಗಿತವಾಗಿದ್ದವು. ಇದರಿಂದ ಕುಟುಂಬದ ಇತರರನ್ನು ಸಂಪರ್ಕಿಸಲು ಜನ ಪರಿದಾಡಿದರು.

‘ಕಟ್ಟಡಗಳು ಅಲುಗಾಡಿದವು. ಏನಾಗುತ್ತಿದೆ ಎಂದು ಆರಂಭದಲ್ಲಿ ಗೊತ್ತಾಗಲಿಲ್ಲ. ಎಲ್ಲರೂ ಹೊರಕ್ಕೆ ಓಡಿದೆವು’ ಎಂದು ಕರಾಕಸ್ ನಿವಾಸಿಗಳಾದ ಹೆಕ್ಟರ್ ರಿಕ್ಕಿ ಮತ್ತು ರಾಬರ್ಟ್ ಗಾಮಾ ಪ್ರತಿಕ್ರಿಯಿಸಿದರು.

ಮಂಜುನಾಥ್, ಆಪ್ತರ ಬಳಿ ₹5.5 ಕೋಟಿ ನಗದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಅಬಕಾರಿ ಇಲಾಖೆ ಬೆಳಗಾವಿ, ಕಲಬುರಗಿ, ದಾವಣಗೆರೆ ವಿಭಾಗದ ಹೆಚ್ಚುವರಿ ಆಯುಕ್ತ ವೈ.ಡಿ.ಮಂಜುನಾಥ್ ಮತ್ತು ಆಪ್ತರ ಮನೆಯಿಂದ ₹5.5 ಕೋಟಿ ನಗದು ಸೇರಿ ₹13.35 ಕೋಟಿ ಮೌಲ್ಯದ ಚರಾಸ್ತಿಗಳನ್ನು ವಶಕ್ಕೆ ಪಡೆದಿದ್ದಾರೆ.

ವೈ.ಡಿ. ಮಂಜುನಾಥ್

ಬೆಂಗಳೂರು ನಗರ ಅಬಕಾರಿ ಜಿಲ್ಲೆ-8ರ ಉಪ ಆಯುಕ್ತ ಜಗದೀಶ್ ನಾಯ್ಕ್ ಅವರು ಮದ್ಯ ಮಾರಾಟ ಸನ್ನದು ಕೋರಿದ್ದ ಅರ್ಜಿದಾರರಿಂದ ₹25 ಲಕ್ಷ ಲಂಚ ಪಡೆಯುವಾಗ ಇದೇ ಜ.17ರಂದು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು.

12

ಡಿಜಿಟಲ್ ಅರೆಸ್ಟ್: 80 ಕಡೆ ಸಿಬಿಐ ದಾಳಿ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಅಧಿಕೃತ ವೆಬ್‌ಸೈಟ್‌ನ ಯುಆರ್‌ಎಲ್ (ಯೂನಿಫಾರ್ಮ್ ರಿಸೋರ್ಸ್ ಲೊಕೇಟರ್) ಹೋಲುವ ವೆಬ್ ವಿಳಾಸ ಬಳಸಿಕೊಂಡು ದೇಶದಾದ್ಯಂತ ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ನೂರಾರು ಜನರನ್ನು ವಂಚಿಸಿದ್ದ ಸೈಬರ್ ವಂಚಕರ ಬೃಹತ್ ಜಾಲವನ್ನು ಭೇದಿಸಲು ಸಿಬಿಐ ಗುರುವಾರ ದೇಶದ 16 ರಾಜ್ಯಗಳ 80 ಸ್ಥಳಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿತು.

ಪಂಜಾಬ್ ಮತ್ತು ಗುಜರಾತ್‌ನಿಂದ ಹಿಡಿದು ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮಣಿಪುರದವರೆಗೆ ಹರಡಿದ್ದ ಈ ಜಾಲವು ದೇಶದಾದ್ಯಂತ ಕನಿಷ್ಠ 200 ಜನರನ್ನು ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವಂಚಿಸಿದೆ. ವಂಚಕರ ಜಾಲವನ್ನು ಪತ್ತೆಹಚ್ಚಲು ನುರಿತ ಅಧಿಕಾರಿಗಳನ್ನು ಒಳಗೊಂಡ ಒಟ್ಟು 60 ವಿಶೇಷ ತಂಡಗಳನ್ನು ರಚಿಸಿ ‘ಆಪರೇಷನ್ ಚಕ್ರ-06’ ಮೂಲಕ ಸಿಬಿಐ ಕಾರ್ಯಾಚರಣೆ ನಡೆಸಿತು.

‘ಪೊಲೀಸ್ ಅಧಿಕಾರಿಗಳು, ಕೇಂದ್ರ ತನಿಖಾ ಸಂಸ್ಥೆಗಳು, ನ್ಯಾಯಾಂಗ ಅಧಿಕಾರಿಗಳೆಂದು ಪರಿಚಯಿಸಿಕೊಳ್ಳುತ್ತಿದ್ದ ಸೈಬರ್ ವಂಚಕರು ಜನರನ್ನು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಸುಲಿಗೆ ಮಾಡುತ್ತಿದ್ದರು. ಇತ್ತೀಚೆಗೆ ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನ ನಕಲಿ ಡೊಮೈನ್ ಬಳಕೆ ಆಗುತ್ತಿರುವ ಕುರಿತು ಸುಪ್ರೀಂ ಕೋರ್ಟ್ ರಿಜಿಸ್ಟ್ರಿಯಿಂದ ದೂರು ಬಂದಿತ್ತು. ಇದರ ಆಧಾರದಲ್ಲಿ ಎಫ್‌ಐಆರ್ ದಾಖಲಿಸಿಕೊಂಡ ಸಿಬಿಐ ದೇಶದಾದ್ಯಂತ ಶೋಧ ನಡೆಸಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

12

ಹೂಳು ತೆಗೆಯಲು ಕೇಂದ್ರ ಯೋಜನೆ

ಕೊಪ್ಪಳ: ‘ದೇಶದ ಬಹುತೇಕ ಜಲಾಶಯಗಳಲ್ಲಿ ಶೇ 15ಕ್ಕಿಂತಲೂ ಹೆಚ್ಚು ಹೂಳು ತುಂಬಿಕೊಂಡಿದ್ದು, ನೀರು ಸಂಗ್ರಹಣಾ ಸಾಮರ್ಥ್ಯ ಕುಸಿದಿದೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ ಬೃಹತ್ ಯೋಜನೆ ಸಿದ್ಧಪಡಿಸುತ್ತಿದ್ದು, ಶೀಘ್ರದಲ್ಲಿಯೇ ಪ್ರಕಟಿಸಲಿದೆ’ ಎಂದು ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ್ ಹೇಳಿದರು.

ವಿವರ 4

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಸೂರ್ಯೋದಯ: 5:56 ಸೂರ್ಯಾಸ್ತ : 6:49 | ಚಂದ್ರೋದಯ: ಮ. 3:04 ಚಂದ್ರಾಸ್ತ: ರಾ. 2:02 | ಗುರುವಾರದ ಉಷ್ಣಾಂಶ : ಗರಿಷ್ಠ 30° ಕನಿಷ್ಠ 21°
ಶುಕ್ರವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ | ಶನಿವಾರ 30° : 21° | ಭಾನುವಾರ 30° : 21° | ಸೋಮವಾರ 30° : 21°
ಶುಕ್ರವಾರ ● ಜೂನ್ 26, 2026
ಪ್ರಜಾವಾಣಿ
ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ

‘ಷರತ್ತಿಲ್ಲದೆ ಮೀಸಲು ಜಾರಿಗೊಳಿಸಿ’

ಸಮಾಲೋಚನಾ ಸಭೆಯಲ್ಲಿ ಮಹಿಳೆಯರ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ‘ಮೀಸಲಾತಿಗೂ, ಕ್ಷೇತ್ರ ಪುನರ್ ವಿಂಗಡಣೆಗೂ ಸಂಬಂಧ ಯಾಕೆ?’
- ಮೀಸಲು ಅನುಷ್ಠಾನ ವಿಳಂಬ: ಕಳವಳ

ಬೆಂಗಳೂರು: ‘ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ನೀಡುವ ಮೀಸಲಾತಿಗೂ, ಜನಗಣತಿಗೂ, ಕ್ಷೇತ್ರ ಪುನರ್ ವಿಂಗಡಣೆಗೂ ಸಂಬಂಧ ಯಾಕೆ ಕಲ್ಪಿಸುತ್ತೀರಿ? ಶೇ 33 ಮೀಸಲಾತಿಯನ್ನು ಷರತ್ತುಗಳಿಲ್ಲದೇ ಕೂಡಲೇ ಜಾರಿ ಮಾಡಿ. ಇದು ಮಹಿಳಾ ನಾಯಕತ್ವದ ಸಮಯವಾಗಿದ್ದು, ಅಧಿಕಾರ ಹಂಚಿಕೊಳ್ಳಿ’ ಎಂದು ಮಹಿಳೆಯರು ಆಗ್ರಹಿಸಿದರು.

‘ನಾವೆದ್ದು ನಿಲ್ಲದಿದ್ದರೆ ಕರ್ನಾಟಕ’, ‘ಮಹಿಳಾ ಮೀಸಲಾತಿಗಾಗಿ ರಾಷ್ಟ್ರೀಯ ಒಕ್ಕೂಟ- ಕರ್ನಾಟಕ’ವು ಗುರುವಾರ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯಲ್ಲಿ ಈ ಒತ್ತಾಯ ಮಾಡಲಾಯಿತು.

ಸಂವಿಧಾನದ 106ನೇ ತಿದ್ದುಪಡಿ ಮೂಲಕ ತರಲಾದ ‘ನಾರಿ ಶಕ್ತಿ ವಂದನ್ ಅಧಿನಿಯಮ’ವನ್ನು (ಮಹಿಳಾ ಮೀಸಲಾತಿ ಕಾಯ್ದೆ, 2023) ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿರುವುದು ಮತ್ತು ಅದರ ಅನುಷ್ಠಾನವನ್ನು ವಿಳಂಬಗೊಳಿಸುತ್ತಿರುವುದಕ್ಕೆ ಸಭೆಯಲ್ಲಿ ಕಳವಳ ವ್ಯಕ್ತವಾಯಿತು.

ಷರತ್ತುಗಳಿಲ್ಲದೆ ಮಹಿಳಾ ಮೀಸಲಾತಿ ಕಾಯ್ದೆಯನ್ನು ಕೇಂದ್ರ ಸರ್ಕಾರ ತಕ್ಷಣವೇ ಜಾರಿಗೆ ತರಬೇಕು. ಈ ಬಗ್ಗೆ ಕರ್ನಾಟಕ ವಿಧಾನಸಭೆಯ ಮುಂಬರುವ ಮುಂಗಾರು ಅಧಿವೇಶನದಲ್ಲಿ ಸ್ಪಷ್ಟವಾದ ನಿರ್ಣಯವನ್ನು ಅಂಗೀಕರಿಸುವಂತೆ ಒತ್ತಾಯಿಸಲು ಮುಖ್ಯಮಂತ್ರಿ ಹಾಗೂ ಸರ್ಕಾರದ ಇತರ ಪ್ರತಿನಿಧಿಗಳನ್ನು ನಿಯೋಗ ಭೇಟಿ ಮಾಡಲು ಸಭೆಯಲ್ಲಿ ನಿರ್ಧರಿಸಲಾಯಿತು.

ಮಹಿಳಾ ಮೀಸಲಾತಿ ಕಾಯ್ದೆಯನ್ನು ಜನಗಣತಿ ಮತ್ತು ಕ್ಷೇತ್ರ ಮರುವಿಂಗಡಣೆಯ ನಿಬಂಧನೆಗಳಿಂದ ಮುಕ್ತಗೊಳಿಸಬೇಕು. ಮಹಿಳಾ ಸಬಲೀಕರಣದ ನೆಪದಲ್ಲಿ ಕ್ಷೇತ್ರ ಮರುವಿಂಗಡಣೆ ಮತ್ತು ಸಂಸದೀಯ ಸ್ಥಾನಗಳ ವಿಸ್ತರಣೆಯನ್ನು ಬಲವಂತವಾಗಿ ಹೇರಬಾರದು. ಪ್ರಾತಿನಿಧ್ಯದ ಯಾವುದೇ ರೀತಿಯ ಮರುರಚನೆಯು ರಾಜ್ಯಗಳು ಮತ್ತು ಎಲ್ಲ ಪಾಲುದಾರರನ್ನು ಒಳಗೊಂಡ ಸ್ವತಂತ್ರ, ಪಾರದರ್ಶಕ ಮತ್ತು ಪ್ರಜಾತಾಂತ್ರಿಕ ಪ್ರಕ್ರಿಯೆಯ ಮೂಲಕವೇ ನಡೆಯಬೇಕು ಎಂದು ಒತ್ತಾಯಿಸಲಾಯಿತು.

‘ಮಹಿಳಾ ಮೀಸಲಾತಿ ಕಾಯ್ದೆ ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚೆ ಮತ್ತು ಸಾರ್ವಜನಿಕ ಸಮಾಲೋಚನೆ’ ಕಾರ್ಯಕ್ರಮದಲ್ಲಿ ಡಾ.ಅಂಜಲಿ ನಿಂಬಾಳ್ಕರ್ ಮಾತನಾಡಿದರು.ಅಕ್ಕೈ ಪದ್ಮಶಾಲಿ, ರುತ್ ಮನೋರಮಾ, ಉಮಾ, ಬಿ.ಟಿ. ಲಲಿತಾ ನಾಯಕ್, ಕಲ್ಪನಾ ಶಿವಣ್ಣ, ಮಂಜುಳಾ ನಾಯ್ಡು, ಇಶ್ರತ್ ನಿಸಾರ್ ಉಪಸ್ಥಿತರಿದ್ದರು

–ಪ್ರಜಾವಾಣಿ ಚಿತ್ರ

ಶೇ 33 ಮಹಿಳಾ ಸ್ಥಾನಗಳನ್ನು ಗುರುತಿಸಲು ಭಾಗವಹಿಸುವಿಕೆ ಮತ್ತು ಒಳಗೊಳ್ಳುವಿಕೆಯ ಪ್ರಕ್ರಿಯೆಯನ್ನು ಖಚಿತಪಡಿಸಬೇಕು. ಈಗಾಗಲೇ ಸಾಂವಿಧಾನಿಕವಾಗಿ ಮೀಸಲಾತಿಯ ಚೌಕಟ್ಟಿನಲ್ಲಿರುವ ದಲಿತ ಮತ್ತು ಆದಿವಾಸಿ ಸಮುದಾಯಗಳ ಮಹಿಳೆಯರ ಹೊರತಾಗಿ ಹೊರಗುಳಿದಿರುವ ಒಬಿಸಿ, ಅಲ್ಪಸಂಖ್ಯಾತ ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರು ಮತ್ತು ಇತರ ಅಂಚಿನಲ್ಲಿರುವ ಮಹಿಳೆಯರ ಪ್ರಾತಿನಿಧ್ಯವನ್ನು ಖಾತರಿಪಡಿಸಬೇಕು ಎಂದು ಆಗ್ರಹಿಸಲಾಯಿತು.

ಹೋರಾಟಗಾರರಾದ ಅಕ್ಕೈ ಪದ್ಮಶಾಲಿ, ರುತ್ ಮನೋರಮಾ, ಉಮಾ, ಬಿ.ಟಿ.ಲಲಿತಾ ನಾಯಕ್, ಕಲ್ಪನಾ ಶಿವಣ್ಣ, ಮಂಜುಳಾ ನಾಯ್ಡು, ಡಾ.ಅಂಜಲಿ ನಿಂಬಾಳ್ಕರ್, ಇಶ್ರತ್ ನಿಸಾರ್, ಮೋಟಮ್ಮ, ಮಧು ಭೂಷಣ್, ಆಶಾ ರಮೇಶ್, ಜ್ಯೋತಿ ಅನಂತ ಸುಬ್ಬರಾವ್, ಮಲ್ಲಿಗೆ ಸಿರಿಮನೆ, ಮಮತಾ ಯಜಮಾನ್, ಅನಿತಾ ಚೆರಿಯಾ, ಮೀನಾಕ್ಷಿ, ಶಿಲ್ಪಾ ಭಾಗವಹಿಸಿದ್ದರು.

ಒಆರ್‌ಆರ್ ಸಮಗ್ರ ಅಭಿವೃದ್ಧಿಗೆ ಮರು ಟೆಂಡರ್ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ವರ್ತುಲ ರಸ್ತೆಯ (ಒಆರ್‌ಆರ್) ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರವರೆಗಿನ ರಸ್ತೆಯ ಸಮಗ್ರ ಅಭಿವೃದ್ಧಿಗೆ ಬಿ-ಸ್ಮೈಲ್ ಮರು ಟೆಂಡರ್ ಆಹ್ವಾನಿಸಿದೆ.

ಈ ಹಿಂದೆ ಕರೆಯಲಾಗಿದ್ದ ಟೆಂಡರ್‌ಗೆ ಬಿಡ್ ಸಲ್ಲಿಸಿದವರು ಅರ್ಹತೆ ಹೊಂದಿಲ್ಲದ ಕಾರಣ ಮತ್ತೆ ಟೆಂಡರ್ ಕರೆಯಲಾಗಿದೆ. ಎರಡು ಪ್ಯಾಕೇಜ್‌ಗಳಲ್ಲಿ ಒಟ್ಟು ₹266.16 ಕೋಟಿ ಅಂದಾಜು ವೆಚ್ಚಕ್ಕೆ ಜುಲೈ 8ರೊಳಗೆ ಬಿಡ್ ಸಲ್ಲಿಸಬಹುದು.

ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಇಬ್ಲೂರು ಜಂಕ್ಷನ್‌ವರೆಗಿನ 5.44 ಕಿ.ಮೀ ಸಮಗ್ರ ಅಭಿವೃದ್ಧಿವರೆಗೆ ಮೊದಲ ಪ್ಯಾಕೇಜ್ ಆಹ್ವಾನಿಸಲಾಗಿದೆ. ಜಿಎಸ್‌ಟಿ ಹೊರತಾಗಿ ಈ ಪ್ಯಾಕೇಜ್‌ನ ಅಂದಾಜು ಮೊತ್ತ ₹81.67 ಕೋಟಿಯಾಗಿದೆ. ಇಬ್ಲೂರು ಜಂಕ್ಷನ್‌ನಿಂದ ಕೆ.ಆರ್. ಪುರ ಮೆಟ್ರೊ ನಿಲ್ದಾಣದವರೆಗಿನ 11.57 ಕಿ.ಮೀ ಸಮಗ್ರ ಅಭಿವೃದ್ಧಿಗೆ ₹184.49 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

ಮುಖ್ಯ ರಸ್ತೆ ಅಭಿವೃದ್ಧಿಗೆ ಬಹುಪಾಲು ಮೊತ್ತವನ್ನು ಮೀಸಲಿರಿಸಲಾಗಿದ್ದು, ಇದರೊಂದಿಗೆ ಸರ್ವಿಸ್ ರಸ್ತೆ ಅಭಿವೃದ್ಧಿ, ಸರ್ವಿಸ್ ರಸ್ತೆ ಮೀಡಿಯನ್, ಪಾದಚಾರಿ ರಸ್ತೆ ಅಭಿವೃದ್ಧಿ, ಯುಟಿಲಿಟಿ ಡಕ್ಟ್, ಯುಟಿಲಿಟಿ ಕ್ರಾಸ್ ಡಕ್ಟ್, ವಿಭಜಕ ಪುನರ್‌ಅಭಿವೃದ್ಧಿ, ಲ್ಯಾಂಡ್ ಸ್ಕೇಪಿಂಗ್, ಆರ್‌ಸಿಸಿ ಚರಂಡಿ, ಸೂಚನಾ ಫಲಕ- ಸುರಕ್ಷಾ ಸಾಧನಗಳು, ಅಡ್ಡರಸ್ತೆ ಅಭಿವೃದ್ಧಿ, ಬಸ್ ಬೇ, ತಂಗುದಾಣ, ಬೀದಿ ದೀಪ, ಪ್ರಮುಖ ಜಂಕ್ಷನ್ ಅಭಿವೃದ್ಧಿ, ಮ್ಯಾನ್‌ಹೋಲ್ ಪುನರ್ ಸ್ಥಾಪನೆ, ಹದಗೆಟ್ಟಿರುವ ರಸ್ತೆಗಳಿಗೆ ಡಾಂಬರೀಕರಣ, ಹೋಮ್ ಗಾರ್ಡ್‌ಗಳ ನೇಮಕವು ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಸೇರಿವೆ.



ನಮ್ಮ ಮೆಟ್ರೊ ಮಾರ್ಗದ ಅಕ್ಕಪಕ್ಕ, ಹೊರ ವರ್ತುಲ ರಸ್ತೆಯ ಸಮಗ್ರ ಅಭಿವೃದ್ಧಿಯ ಮಾದರಿ

ಮುಖ್ಯಾಂಶಗಳು
- ಎರಡು ಪ್ಯಾಕೇಜ್‌ಗಳಲ್ಲಿ ಒಟ್ಟು ₹266.16 ಕೋಟಿ ಅಂದಾಜು ವೆಚ್ಚ
- ಜುಲೈ 8ರೊಳಗೆ ಬಿಡ್ ಸಲ್ಲಿಸಲು ಅವಕಾಶ
- ಬಿ-ಸ್ಮೈಲ್ ವತಿಯಿಂದ ಯೋಜನೆ ಅನುಷ್ಠಾನ

ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ-ಸ್ಮೈಲ್) ವತಿಯಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಮೊದಲ ಬಾರಿಗೆ ಟೆಂಡರ್ ಕರೆದಾಗ ಕೆಲವೇ ಸಂಸ್ಥೆಗಳು ಭಾಗವಹಿಸಿದ್ದವು. ಬಿ-ಸ್ಮೈಲ್ ನೀಡಿದ್ದ ಗುರಿಯನ್ನು ಆ ಕಂಪನಿಗಳು ಮುಟ್ಟದ ಕಾರಣ ಮತ್ತೆ ಟೆಂಡರ್ ಕರೆಯಲಾಗಿದೆ.

‘ಪಾಲಿಕೆ ವಾರ್ಡ್‌ಗಳಲ್ಲಿ ಅಕ್ರಮ ಎಸ್‌ಐಆರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರ ಪಾಲಿಕೆಗಳ 27 ವಾರ್ಡ್‌ಗಳಲ್ಲಿ ರಾಜ್ಯ ಚುನಾವಣಾ ಆಯೋಗವು ಕಾನೂನುಬಾಹಿರವಾಗಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುತ್ತಿದ್ದು, ತಕ್ಷಣವೇ ಇದನ್ನು ತಡೆಯಿರಿ’ ಎಂದು ಕೋರಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ರಾಜ್ಯದ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

‘ಕೇಂದ್ರ ಚುನಾವಣಾ ಆಯೋಗದ ಆದೇಶದಂತೆ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಈಗಾಗಲೇ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸುತ್ತಿದೆ. ಈ ಮಧ್ಯೆ ರಾಜ್ಯ ಚುನಾವಣಾ ಆಯೋಗವು ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಪಾಲಿಕೆಗಳಲ್ಲಿ ಎಸ್‌ಐಆರ್ ನಡೆಸಿದೆ’ ಎಂದು ಮನವಿಯಲ್ಲಿ ವಿವರಿಸಿದ್ದಾರೆ.

‘ಆ ಮತದಾರರ ಪಟ್ಟಿಗೆ ಆಕ್ಷೇಪ ಬಂದಿದೆ ಎಂದು ಕಾಂಗ್ರೆಸ್‌ನ ಕೆಲವರು ದೂರು ನೀಡಿದರು ಎಂದು 27 ವಾರ್ಡ್‌ಗಳ ಮತದಾರರ ಪಟ್ಟಿಯನ್ನು ತಡೆಹಿಡಿದಿದೆ. ಅವುಗಳನ್ನು ಮತ್ತೆ ಎಸ್‌ಐಆರ್‌ಗೆ ಒಳಪಡಿಸಲು ಆದೇಶಿಸಿದೆ. ಇದು ಸಂಪೂರ್ಣವಾಗಿ ಕಾನೂನು ಬಾಹಿರ. ಇದನ್ನು ತಡೆಯುವ ಸಲುವಾಗಿ ಕೇಂದ್ರ ಚುನಾವಣಾ ಆಯೋಗಕ್ಕೆ ಪತ್ರ ಬರೆಯಿರಿ’ ಎಂದು ನಾರಾಯಣಸ್ವಾಮಿ ಮನವಿ ಮಾಡಿದ್ದಾರೆ.

ವಿ.ಅನ್ಬುಕುಮಾರ್ ಅವರನ್ನು ಭೇಟಿ ಮಾಡಿದ ನಂತರ ಸುದ್ದಿಗಾರರ ಜತೆ ಅವರು ಮಾತನಾಡಿದರು.

‘ಪ್ರತ್ಯೇಕ ಎಸ್‌ಐಆರ್ ನಡೆಸಲು ರಾಜ್ಯ ಚುನಾವಣಾ ಆಯೋಗಕ್ಕೆ ಆದೇಶ ನೀಡಿದವರು ಯಾರು? ರಾಜ್ಯದ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಂತೆ ರಾಜ್ಯ ಚುನಾವಣಾ ಆಯೋಗ ವರ್ತಿಸಬಾರದು. ಕೇಂದ್ರ ಚುನಾವಣಾ ಆಯೋಗದ ಅಧೀನ ಸಂಸ್ಥೆಯಾಗಿ ಕೆಲಸ ಮಾಡಬೇಕು’ ಎಂದರು.

‘ಪ್ರತ್ಯೇಕ ಎಸ್‌ಐಆರ್ ವಿಚಾರವನ್ನು ಕೇಂದ್ರ ಚುನಾವಣಾ ಆಯೋಗದ ಗಮನಕ್ಕೆ ತರುತ್ತೇನೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಅನ್ಬು ಕುಮಾರ್ ಅವರು ತಿಳಿಸಿದ್ದಾರೆ’ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ವಾರ್ಡ್ ಮತದಾರರ ಪಟ್ಟಿ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಚುನಾವಣಾ ಆಯೋಗದ ನಿರ್ದೇಶನಗಳ ಅನುಸಾರ ವಾರ್ಡ್ ಮತದಾರರ ಪಟ್ಟಿಯನ್ನು ನಿಖರ, ದೋಷರಹಿತ ಹಾಗೂ ಪಾರದರ್ಶಕವಾಗಿ ಸಿದ್ಧಪಡಿಸಬೇಕು ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಹಾಗೂ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಡಿ.ಎಸ್. ರಮೇಶ್ ಸೂಚಿಸಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದ ವಿಶೇಷ ಪರಿಷ್ಕೃತ ಕರಡು ಮತದಾರರ ಪಟ್ಟಿ ಸಿದ್ಧತೆ ಕುರಿತ ಸಭೆಯಲ್ಲಿ ಅವರು ಮಾತನಾಡಿದರು.

ಕ್ಷೇತ್ರ ವ್ಯಾಪ್ತಿಗೆ ಒಳಪಡುವ 23 ವಾರ್ಡ್‌ಗಳ ಮತದಾರರ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸಲಾಗಿದೆ. ಆಯೋಗದ ನಿರ್ದೇಶನದಂತೆ ನಗರ ಪಾಲಿಕೆ ವಾರ್ಡ್‌ಗಳ ಮತದಾರರ ಪಟ್ಟಿಯನ್ನು ಪರಿಷ್ಕರಣೆಗೆ ಒಳಪಡಿಸಿ ಹೊಸದಾಗಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸಬೇಕು ಎಂದರು. ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು, ಬಿಎಲ್‌ಒ ಮೇಲ್ವಿಚಾರಕರು ಹಾಗೂ ಮತಗಟ್ಟೆ ಮಟ್ಟದ ಅಧಿಕಾರಿಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು. ನಿಗದಿತ ಕಾಲಮಿತಿಯಲ್ಲಿ ಪರಿಣಾಮಕಾರಿಯಾಗಿ ಪರಿಷ್ಕರಿಸಬೇಕು ಎಂದು ಸೂಚಿಸಿದರು.

...ವಾಗಿ ಸ್ಥಗಿತಗೊಂಡಿದ್ದ ಮೆಟ್ರೊ

...ಲ್ಲಿ ಗುರುವಾರ ರಾತ್ರಿ ...ಲಿನ ಬಾಗಿಲು

ಸುಮಾರಿಗೆ ಮೆಟ್ರೊ ರೈಲು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಕ್ಕೆ ಬಂದಿತ್ತು. ಮೆಟ್ರೊದಿಂದ ಪ್ರಯಾಣಿಕರು ಇಳಿಯುವುದು, ಹತ್ತುವುದು ಆದ ಬಳಿಕ ಬಾಗಿಲು ಮುಚ್ಚಲು ಆಗಿರಲಿಲ್ಲ.

'ಪ್ರಯಾಣಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಮುನ್ನೆಚ್ಚರಿಕೆ ಕ್ರಮವಾಗಿ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಸುರಕ್ಷಿತವಾಗಿ ಇಳಿಸಲಾಯಿತು. ಪ್ರಯಾಣಿಕರನ್ನು ಹೊರಗೆ ಕಳುಹಿಸುವ ಪ್ರಕ್ರಿಯೆಗೆ 17 ನಿಮಿಷ ಬೇಕಾಯಿತು. ಆ ನಂತರದ ಐದು ರೈಲುಗಳ ಸಂಚಾರ ಸ್ಥಗಿತವಾಯಿತು.

ಕಾರ್ಯಾಚರಣೆ ಮತ್ತು ನಿರ್ವಹಣಾ ತಂಡಗಳು ತಾಂತ್ರಿಕ ದೋಷವನ್ನು ತ್ವರಿತವಾಗಿ ಸರಿಪಡಿಸಿದ್ದು, ಮೆಟ್ರೊ ರೈಲು ಸಂಚಾರವು ಸಂಪೂರ್ಣವಾಗಿ ಸಹಜ ಸ್ಥಿತಿಗೆ ಮರಳಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಎರಡು ದಿನಗಳ ಹಿಂದೆಯಷ್ಟೇ ಇದೇ ಮಾರ್ಗದಲ್ಲಿ ಕಬ್ಬನ್ ಪಾರ್ಕ್ ನಿಲ್ದಾಣದ ಬಳಿಯೇ ಥರ್ಡ್ ರೈಲ್ (ವಿದ್ಯುತ್ ಪೂರೈಸುವ ಫೈಬರ್ ಕ್ಯಾಪ್‌ನ ಹಳಿ) ಮತ್ತು ಕರೆಂಟ್ ಕಲೆಕ್ಟರ್ ಡಿವೈಸ್ ಸಮಸ್ಯೆಯಾಗಿ ಮೆಟ್ರೊ ಸಂಚಾರ ನಿಂತು ಹೋಗಿತ್ತು.

ಗುರುವಾರ ಮತ್ತೆ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಪ್ರಯಾಣಿಕರು ಆತಂಕಕ್ಕೆ ಒಳಗಾಗಿದ್ದರು.

...ರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ ...9ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2ರವರೆಗೆ ನೇರ ...ವ ಹಮ್ಮಿಕೊಳ್ಳಲಾಗಿದೆ.

...ಲ್ಲಿ ಕೋಶಮಟ್ಟಂ ಫೈನಾನ್ಸ್ ಲಿಮಿಟೆಡ್ ಹಾಗೂ ಅದ್ವೈತ್ ...ಪ್ರೈ.ಲಿ. ಸಂಸ್ಥೆಗಳು ಭಾಗವಹಿಸಿ ಅಭ್ಯರ್ಥಿಗಳನ್ನು ಆಯ್ಕೆ ...ಳ್ಳಲಿವೆ. ಸಂದರ್ಶನದಲ್ಲಿ ಪಿಯುಸಿ ಹಾಗೂ ಯಾವುದೇ ...ದ್ಯಾರ್ಹತೆ ಪೂರೈಸಿದ 35 ವರ್ಷ ವಯೋಮಿತಿಯೊಳಗಿನ ಅಭ್ಯರ್ಥಿಗಳು ಭಾಗವಹಿಸಬಹುದು.

ಆಸಕ್ತರು ಬಯೊಡೇಟಾ, ವಿದ್ಯಾರ್ಹತೆ ಮೂಲ ದಾಖಲಾತಿಗಳು, ಅನುಭವ ಪ್ರಮಾಣಪತ್ರದೊಂದಿಗೆ (ಅನ್ವಯಿಸುವವರಿಗೆ ಮಾತ್ರ) ಉಪ ಪ್ರಾದೇಶಿಕ ಉದ್ಯೋಗ ವಿನಿಮಯ ಕಚೇರಿ, ಸಿ.ಓ.ಇ. ಕಟ್ಟಡ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣ, ತುಮಕೂರು ರಸ್ತೆ, ಪೀಣ್ಯ ಇಲ್ಲಿಗೆ ಹಾಜರಾಗಬೇಕು ಎಂದು ಕಚೇರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಂಪರ್ಕ ಸಂಖ್ಯೆ: 8970615380

... ವೇದಿಕೆ ಸ್ಥಾಪನೆ

...ಮಾಡಲಾಗುತ್ತದೆ. ಸಂಜೆ 6 ...ಗಂಟೆಯಿಂದ ದಿ ನ್ಯೂಟೌನ್ ಕ್ಲಬ್ ...ಮುಂಭಾಗ ಆರ್ಕೆಸ್ಟ್ರಾ ಹಾಗೂ ವಿವಿಧ ...ಕಾರ್ಯಕ್ರಮಗಳನ್ನು ನಡೆಸಲಾಗು...ತ್ತಿದ್ದು, ಗ್ರೇಟರ್ ಬೆಂಗಳೂರು ...ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ...ಅವರು ಉದ್ಘಾಟಿಸುತ್ತಾರೆ' ಎಂದು ...ಹೇಳಿದರು.

'ಯಲಹಂಕ ಶಾಸಕ ಎಸ್. ...ಆರ್.ವಿಶ್ವನಾಥ್ ಅವರು ...ವೇದಿಕೆಯ ನಾಮಫಲಕವನ್ನು ...ಅನಾವರಣ ಮಾಡುತ್ತಾರೆ. ಮುಖ್ಯ ...ಅತಿಥಿಯಾಗಿ ಚಿಕ್ಕಬಳ್ಳಾಪುರದ ...ಸಂಸದ ಕೆ. ಸುಧಾಕರ್ ಹಾಗೂ ...ಚಲನಚಿತ್ರ ನಿರ್ಮಾಪಕಿ ಅಶ್ವಿನಿ ...ಪುನೀತ್ ರಾಜ್‌ಕುಮಾರ್ ಅವರು ...ಭಾಗವಹಿಸುತ್ತಾರೆ' ಎಂದು ...ತಿಳಿಸಿದ್ದಾರೆ. ವೇದಿಕೆ ರಾಜ್ಯಾಧ್ಯಕ್ಷ ...ಎಚ್. ಮಾರಪ್ಪ, ಉಪಾಧ್ಯಕ್ಷರಾದ ...ಜಗದೀಶ್ ಗೌಡ, ಪಿ. ಮಂಜುನಾಥ್, ...ಪ್ರಧಾನ ಕಾರ್ಯದರ್ಶಿ ರಮೇಶ್ ...ಆರ್. ಉಪಸ್ಥಿತರಿದ್ದರು.

...ಲಿತಾಗೆ ಪ್ರಶಸ್ತಿ

...ಸಂಘ ನೀಡುವ 2025ನೇ ಸಾಲಿನ ...ಲಿತಾ ಅವರ 'ತೊಲ್ಕಾಪ್ಪಿಯಂ' ಕೃತಿ ...

...ಯಿಂದ ಕನ್ನಡಕ್ಕೆ ಅನುವಾದಗೊಂಡ ...ಆಹ್ವಾನಿಸಲಾಗಿತ್ತು. 'ತೊಲ್ಕಾಪ್ಪಿಯಂ' ... ಕನ್ನಡಕ್ಕೆ ಅನುವಾದಗೊಂಡಿದೆ. ...ನಗದು ಒಳಗೊಂಡಿದೆ.

...ಜಕುಮಾರ್ ಹಾಗೂ ಸೆಲ್ವಕುಮಾರಿ ...ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿ ...ಲಿದೆ ಎಂದು ಸಂಘದ ಅಧ್ಯಕ್ಷೆ ಆರ್.

इसरो दूरमिति अनुवर्तन तथा आदेश संचारजाल (इस्ट्रैक), बेंगलुरू
ISRO Telemetry Tracking and Command Network (ISTRAC), Bengaluru

Advt. No:ISTRAC:01:2026 दिनांक : 22.06.2026

वर्ष 2026-2027 के लिए स्नातक, डिप्लोमा व ट्रेड प्रशिक्षुओं को नियोजित करने के बारे में
ENGAGING GRADUATE, DIPLOMA & TRADE APPRENTICES
FOR THE YEAR 2026-2027

बेंगलूरू, लखनऊ और श्री विजय पुरम (अंडमान व निकोबार द्वीप समूह) स्थित इस्ट्रैक, कार्यालयों में विभिन्न ट्रेड में प्रशिक्षु प्रशिक्षणार्थी पदों (स्नातक / डिप्लोमा / आई टी आई) के लिए भारतीय नागरिकों से ऑनलाइन आवेदन आमंत्रित किया जाता है। Online applications are invited from the eligible Indian Citizens for Apprentice Trainee positions (Graduate / Diploma / ITI) in various trades at Bengaluru, Lucknow and Sri Vijaya Puram (Andaman & Nicobar Islands), ISTRAC Facilities.

पूर्ण विवरण के लिए हमारे निम्नलिखित वेबसाइट देखें For complete details, visit our websites
https://www.isro.gov.in/ISTRACRecruitment3.html or
https://www.istrac.gov.in/Apprentices_Trainee.html

Sd/-
प्रशासनिक अधिकारी Admin. Officer

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಹಟ್ಟಿ - 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ.
ದೂರವಾಣಿ: 08537-275022,
CIN No. U85110KA1947SGC001321

ನೇರ ಸಂದರ್ಶನ

ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಹಟ್ಟಿಯಲ್ಲಿರುವ 120 ಹಾಸಿಗೆಗಳ ಆಸ್ಪತ್ರೆಗೆ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳ ಅವಶ್ಯಕತೆಯಿರುತ್ತದೆ.

1	ವೈದ್ಯಾಧಿಕಾರಿಗಳು	:	3 ಹುದ್ದೆಗಳು
	ವಿದ್ಯಾರ್ಹತೆ	:	ಎಂಬಿಬಿಎಸ್
	ಕ್ರೋಢೀಕೃತ ಸಂಬಳ	:	ರೂ.75,000/- ಮಾಹೆಯಾನ

ದಿನಾಂಕ 11.07.2026ರಂದು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಹಟ್ಟಿ – 584 115 ನಲ್ಲಿರುವ ಆಡಳಿತ ಕಛೇರಿಯಲ್ಲಿ ನೇರ ಸಂದರ್ಶನ ಕೈಗೊಳ್ಳಲಾಗುವುದು. ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ತಮ್ಮ ಪೂರ್ಣ ವಿವರಗಳನ್ನೊಳಗೊಂಡ ಅರ್ಜಿಯನ್ನು ಮತ್ತು ಶೈಕ್ಷಣಿಕ ವಿದ್ಯಾರ್ಹತೆಯ ದಾಖಲೆ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ ಇತ್ಯಾದಿಗಳ ಮೂಲ ಮತ್ತು ಪ್ರತಿಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದ ಜೊತೆಗೆ ಹಾಜರುಪಡಿಸಬೇಕು.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು.

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

केनरा बैंक
Canara Bank
A Government of India Undertaking
Together We Can

MINISTRY OF SOCIAL JUSTICE & EMPOWERMENT GOVERNMENT OF INDIA
NASHA MUKT BHARAT ABHIYAAN

...A MUKT BHARAT SAPTAH

Celebration of International Day ...inst Drug Abuse and Illicit Trafficking

...: "Nasha Mukt Bharat Abhiyaan - ...iksit Bharat Ki Pehchaan"

...7th June to 26th June 2026

14446
National De addiction Helpline

#NashaMuktBharat

www.canarabank.bank.in

ವಜ್ರ, ನಿಮ್ಮಂಥಾ ಅಮೂಲ್ಯ ವಜ್ರಕ್ಕಾಗಿ

ಫ್ಲಾಟ್ 100%* ಕಡಿತ
ತಯಾರಿಸುವ ಚಾರ್ಜುಗಳ ಮೇಲೆ ನೇರ
ಎಲ್ಲಾ ವಜ್ರದ ಡಿಸೈನ್‌ಗಳ ಮೇಲೂ ಮಾನ್ಯ

Download the CaratLane app

STORES IN KARNATAKA

North Bengaluru : Hennur - Geddalahalli, New BEL Road - KGE Layout, Phoenix Mall of Asia - Bellary Road, RMZ Galleria Mall - Yelahanka | South Bengaluru : Banashankari - IV Phase, Electronic City - Neeladri Road, Forum South Bengaluru Mall - Konanakunte cross, Jayanagar - 4th Block, JP Nagar - 24th Main Road, Kanakapura Road - Raghuvanahalli, Royal Meenakshi Mall - Bannerghatta Road, RR Nagar - Jawaharlal Nehru Road, Vega City Mall - Dollar layout | South-East Bengaluru : Bommanahalli - Bandepalya, M5 Mall ECity, Nexus Koramangala, HSR Layout, Koramangala - 100 Feet Road | East Bengaluru : KR Puram - Old Madras Road, Sarjapur Road - Doddakannelli, Nexus Shantiniketan - Whitefield, Indiranagar - 100 Feet Road, Kammanahalli - HRBR Layout, Marathahalli - Outer Ring Road, Phoenix Market city - Mahadevapura, Whitefield | West Bengaluru : Margosa Road - Malleshwaram, Orion Mall - Malleshwaram | Central Bengaluru : M.G Road, Commercial Street - Kamaraj Road | Belgaum : Tilakwadi - Goaves Circle | Hubli: Koppikar Road | Mangaluru: Bejai-Kapikad Road, Fiza by Nexus Mall - Pandeshwar | Mysore : Devaraja Urs Road, Nexus Centre City Mall - Hyderali Road | Gulbarga : Station Road

www.caratlane.com - Now available in Hindi | 380+ stores across India | 044 42935000

CARATLANE A TATA PRODUCT
FLAT 100%* Off On Making Charges
CARATLANE A TATA PRODUCT
FLAT 100%* Off On Making Charges

CARATLANE A TATA PRODUCT
FLAT 100% Off On Making Charges
CARATLANE A TATA PRODUCT
FLAT 100% Off On Making Charges

ಚಿಟಿಕೆ ಸುದ್ದಿ

ವಾರವಿಡೀ ಜಾನಪದ ಲೋಕ ಪ್ರವಾಸಿಗರಿಗೆ ಮುಕ್ತ

ಜಾನಪದ ಲೋಕ

ರಾಮನಗರ: ಕರ್ನಾಟಕದ ಗ್ರಾಮೀಣ ಸಂಸ್ಕೃತಿ ಮತ್ತು ಕಲೆಗಳನ್ನು ಬಿಂಬಿಸುವ ಪ್ರಮುಖ ಜಾನಪದ ವಸ್ತು ಸಂಗ್ರಹಾಲಯವಾದ ಜಾನಪದ ಲೋಕವು ಜುಲೈ ತಿಂಗಳಿನಿಂದ ವಾರದ ಏಳೂ ದಿನವೂ ತೆರೆದಿರುತ್ತದೆ. ಬೆಳಿಗ್ಗೆ 9.30ರಿಂದ ಸಂಜೆ 5ರವರೆಗೆ ಪ್ರವಾಸಿಗರಿಗೆ ಮುಕ್ತವಾಗಿರಲಿದೆ.

ಜಾನಪದ ಲೋಕದ ಸಂಸ್ಥಾಪಕ ಎಚ್.ಎಲ್.ನಾಗೇಗೌಡ ಅವರ ನೆನಪಿನಾರ್ಥವಾಗಿ ತಿಂಗಳಿಗೊಮ್ಮೆ 'ಲೋಕಸಿರಿ' ತಿಂಗಳ ಅತಿಥಿ ಕಾರ್ಯಕ್ರಮ ಜರುಗಲಿದೆ. ಅಂದು ನಾಡಿನ ಜಾನಪದ ಕಲಾದವಿದರೊಬ್ಬರನ್ನು ಕರೆಯಿಸಿ ಅವರ ಕಲೆ ಪ್ರದರ್ಶನ, ಸಂವಾದ ಹಾಗೂ ಸನ್ಮಾನ ಕಾರ್ಯಕ್ರಮ ನಡೆಸಲಾಗುವುದು. ಪ್ರವಾಸಿಗರು ಇದನ್ನು ಸಹ ಕಣ್ತುಂಬಿಕೊಳ್ಳಬಹುದು ಎಂದು ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಪ್ರೊ.ಹಿ.ಚಿ.ಬೋರಲಿಂಗಯ್ಯ ತಿಳಿಸಿದ್ದಾರೆ.

ಕೆಎಸ್‌ಒಯು: ಜ್ಞಾನಪ್ರಕಾಶ್ ಕುಲಪತಿ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ (ಕೆಎಸ್‌ಒಯು) ನೂತನ ಕುಲಪತಿಯಾಗಿ ಮೈಸೂರು ವಿಶ್ವವಿದ್ಯಾಲಯದ ಭೌತವಿಜ್ಞಾನ ವಿಭಾಗದ ಪ್ರಾಧ್ಯಾಪಕ ಎ.ಪಿ. ಜ್ಞಾನಪ್ರಕಾಶ್ ಅವರು ಗುರುವಾರ ಸಂಜೆ ಅಧಿಕಾರ ಸ್ವೀಕರಿಸಿದರು.

ಜ್ಞಾನಪ್ರಕಾಶ್

ಕುಲಪತಿಯಾಗಿದ್ದ ಪ್ರೊ.ಶರಣಪ್ಪ ವಿ. ಹಲಸೆ ಅವರ ಅಧಿಕಾರಾವಧಿ ಅಂತ್ಯವಾದ ಕಾರಣ ಹೊಸ ಕುಲಪತಿ ನೇಮಕ ನಡೆದಿದೆ.

ಜ್ಞಾನಪ್ರಕಾಶ್ ಅವರು ಈ ಹಿಂದೆ ಮೈಸೂರು ವಿ.ವಿ. ಪರೀಕ್ಷಾಂಗ ಕುಲಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

ಮಗುವಿನೊಂದಿಗೆ ಬಾವಿಗೆ ಬಿದ್ದು ತಾಯಿ ಆತ್ಮಹತ್ಯೆ

ಆಳಂದ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಚಿಂಚನಸೂರ ಗ್ರಾಮದಲ್ಲಿ ಮಹಿಳೆಯೊಬ್ಬರು ಗುರುವಾರ ತನ್ನ ಮಗುವನ್ನು ತಬ್ಬಿಕೊಂಡು ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಂಬಿಕಾ ವೀರಭದ್ರಪ್ಪ ವಾಡಿ (26) ಹಾಗೂ ಪುತ್ರಿ ಲಕ್ಷ್ಮಿ (2) ಮೃತರು. ಬೆಳಿಗ್ಗೆ ನಸುಕಿನ ಜಾವದಲ್ಲಿ ಮಗುವನ್ನು ಹೊತ್ತುಕೊಂಡು ಮನೆಯಿಂದ ತೆರಳಿದ ಮಹಿಳೆಯು, ಸಂಗೋಳಗಿ ಗ್ರಾಮದ ಸಮೀಪದ ರೈತರೊಬ್ಬರ ಬಾವಿಗೆ ಜಿಗಿದಿದ್ದಾರೆ.

ಕುಟುಂಬಸ್ಥರು ತಾಯಿ, ಮಗುವಿಗಾಗಿ ಹುಡುಕಾಡಿದಾಗ ಸಂಗೋಳಗಿ ಸಮೀಪದ ಬಾವಿಯ ಮೇಲೆ ಮಹಿಳೆಯ ಚಪ್ಪಲಿ ಕಂಡುಬಂದಿದೆ. ಬಾವಿಯಲ್ಲಿ ಶೋಧಕಾರ್ಯ ನಡೆಸಿದಾಗ ತಾಯಿ, ಮಗುವಿನ ಶವ ಪತ್ತೆಯಾಗಿದೆ. ಅಗ್ನಿಶಾಮಕ ದಳ ಸಿಬ್ಬಂದಿ ನೆರವಿನೊಂದಿಗೆ ಶವ ಹೊರ ತೆಗೆಯಲಾಗಿದೆ.

ನರೋಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಡಿವೈಎಸ್‌ಪಿ ತಮ್ಮರಾಯ ಪಾಟೀಲ, ಪಿಐ ಶರಣಬಸಪ್ಪ ಕೋಡ್ಲಾ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ದೇವಾಲಯಕ್ಕೆ ₹2 ಕೋಟಿ ಮೌಲ್ಯದ ಭೂಮಿ ದೇಣಿಗೆ

ಉದ್ಯಮಿ ವಾಸುದೇವ ಬೈಂದೂರು ಅವರು ದಾನದ ಜಮೀನಿನ ಪತ್ರವನ್ನು ದೇವಾಲಯ ಸಮಿತಿ ಅಧ್ಯಕ್ಷ ಎಸ್.ಎಸ್. ಹೆಗಡೆ ಅವರಿಗೆ ನೀಡಿದರು

ಕುಮಟಾ: ತಾಲ್ಲೂಕಿನ ಬಾಡದಲ್ಲಿರುವ ₹2 ಕೋಟಿ ಮೌಲ್ಯದ ತಮ್ಮ ಮಾಲೀಕತ್ವದ 34 ಗುಂಟೆ ಜಮೀನನ್ನು ಉದ್ಯಮಿ ವಾಸುದೇವ ಬೈಂದೂರು ಅವರು ಸಮೀಪದ ಕಾಂಚಿಕಾ ಪರಮೇಶ್ವರಿ ದೇವಸ್ಥಾನಕ್ಕೆ ದೇಣಿಗೆಯಾಗಿ ನೀಡಿದರು.

ಅವರು ದಾನ ನೀಡಿದ ಭೂಮಿಯ ಒಡೆತನದ ದಾಖಲೆಯನ್ನು ದೇವಾಲಯ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಎಸ್.ಎಸ್. ಹೆಗಡೆ ಅವರಿಗೆ ಹಸ್ತಾಂತರಿಸಿದರು.

'ಉಡುಪಿ ಜಿಲ್ಲೆಯ ಬೈಂದೂರಿನವರಾದ ವಾಸುದೇವ ಬೈಂದೂರು ಅವರು ಕುಮಟಾದಲ್ಲಿ ಕೆಲ ದಶಕಗಳವರೆಗೆ ಉದ್ಯಮ ನಡೆಸಿದ್ದರು. ಹಿಂದಿನಿಂದಲೂ ಬಾಡದ ಕಾಂಚಿಕಾ ಪರಮೇಶ್ವರಿ ದೇವಿಯ ಭಕ್ತರಾದ ಅವರು ಪೂಜೆ ಸಲ್ಲಿಸುತ್ತಿದ್ದರು. ಈಗ ದೇವಾಲಯಕ್ಕೆ ಕೊಡುಗೆ ರೂಪದಲ್ಲಿ ಬೆಲೆಬಾಳುವ ಭೂಮಿ ನೀಡಿದ್ದಾರೆ' ಎಂದು ಎಸ್.ಎನ್.ಹೆಗಡೆ ತಿಳಿಸಿದರು.

ಹೂಳು ತೆಗೆಯಲು ಕೇಂದ್ರದಿಂದ ಯೋಜನೆ

ತುಂಗಭದ್ರಾ ಜಲಾಶಯದ 33 ಕ್ರೆಸ್ಟ್‌ಗೇಟ್‌ಗಳ ಲೋಕಾರ್ಪಣೆ
ಸಚಿವ ಸಿ.ಆರ್. ಪಾಟೀಲ್ ಘೋಷಣೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ದೇಶದ ಬಹುತೇಕ ಜಲಾಶಯಗಳಲ್ಲಿ ಶೇ 15ಕ್ಕಿಂತಲೂ ಹೆಚ್ಚು ಹೂಳು ತುಂಬಿಕೊಂಡಿದ್ದು, ನೀರು ಸಂಗ್ರಹಣಾ ಸಾಮರ್ಥ್ಯ ಕುಸಿದಿದೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ ಬೃಹತ್ ಯೋಜನೆ ಸಿದ್ಧಪಡಿಸುತ್ತಿದ್ದು, ಶೀಘ್ರದಲ್ಲಿಯೇ ಪ್ರಕಟಿಸಲಿದೆ' ಎಂದು ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ ಹೇಳಿದರು.

ರಾಜ್ಯದ ಜಲಸಂಪನ್ಮೂಲ ಇಲಾಖೆ ಹಾಗೂ ತುಂಗಭದ್ರಾ ಮಂಡಳಿ ಸಹಯೋಗದಲ್ಲಿ ತಾಲ್ಲೂಕಿನ ಮುನಿರಾಬಾದ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ ತುಂಗಭದ್ರಾ ಜಲಾಶಯದ ನೂತನ ಕ್ರೆಸ್ಟ್‌ಗೇಟ್‌ಗಳ ಮರುಜೋಡಣೆಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹೂಳಿಗೆ ಪರಿಹಾರ ಕಂಡುಕೊಳ್ಳುವ ಯೋಜನೆಯ ತಾಂತ್ರಿಕ ಸಹಯೋಗವನ್ನು ಕೇಂದ್ರ ಸರ್ಕಾರ ನೀಡಲಿದೆ. ಅನುಷ್ಠಾನದ ಜವಾಬ್ದಾರಿಯನ್ನು ಆಯಾ ರಾಜ್ಯ ಸರ್ಕಾರಗಳು ಹೊರಬೇಕಾಗುತ್ತದೆ. ಯೋಜನೆ ಯಶಸ್ವಿಯಾದರೆ ತುಂಗಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯ ಶೇ 25ರಿಂದ ಶೇ 30ರಷ್ಟು ಹೆಚ್ಚಿಸಬಹುದು' ಎಂದರು.

ಕಾರ್ಯಕ್ರಮಕ್ಕೂ ಮುನ್ನ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳು ಕೇಂದ್ರ ಸಚಿವರ ಸಮ್ಮುಖದಲ್ಲಿ ಸಭೆ ನಡೆಸಿ, ತುಂಗಭದ್ರಾ ನದಿ ನೀರು ಹಂಚಿಕೆ, ಹೂಳಿಗೆ ಪರ್ಯಾಯ ಕ್ರಮಗಳ ಬಗ್ಗೆ ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ. ಆದರೆ, ನಿರ್ದಿಷ್ಟವಾಗಿ ಯಾವ ತೀರ್ಮಾನಕ್ಕೂ ಬಂದಿಲ್ಲ ಎಂದು ಗೊತ್ತಾಗಿದೆ.

ವೇದಿಕೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ನವಲಿ ಸಮಾನಾಂತರ ಜಲಾಶಯ, ತುಂಗಭದ್ರಾ ಹೂಳೆತ್ತುವ ಅವಕಾಶಗಳ ಬಗ್ಗೆ ಸುದೀರ್ಘ ಚರ್ಚೆ ಮಾಡಿದ್ದೇವೆ. ಒಕ್ಕೂಟ ವ್ಯವಸ್ಥೆಯಲ್ಲಿ ನಮ್ಮ ಹಕ್ಕುಗಳನ್ನು ರಕ್ಷಿಸಲು ನಮ್ಮ ನೀರು ನಮ್ಮ ಹಕ್ಕು ಎಂಬ ಘೋಷಣೆಯಡಿ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಒಮ್ಮತದ ಐತಿಹಾಸಿಕ ತೀರ್ಮಾನಕ್ಕೆ ಬಂದಿದ್ದೇವೆ' ಎಂದು ಹೇಳಿದರು. ಆ ತೀರ್ಮಾನವನ್ನು ಕೇಂದ್ರ ಸಚಿವರೇ ಪ್ರಕಟಿಸುತ್ತಾರೆ ಎಂದು ತಿಳಿಸಿದರು. ಆದರೆ, ಕೇಂದ್ರ ಸಚಿವರು ತುಂಗಭದ್ರಾ ಜಲಾಶಯಕ್ಕೆ ಸಂಬಂಧಿಸಿದಂತೆ ಯಾವ ನಿರ್ಧಾರವನ್ನೂ ಕಾರ್ಯಕ್ರಮದಲ್ಲಿ ಪ್ರಕಟಿಸಲಿಲ್ಲ.

ರೈತರ ಅಸಮಾಧಾನ: ಹೂಳಿಗೆ ಪರ್ಯಾಯವಾಗಿ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಿಸಬೇಕೆನ್ನುವ ಬೇಡಿಕೆ ದಶಕಗಳಿಂದಲೂ ಇದೆ. ತುಂಗಭದ್ರಾ ಜಲಾಶಯ ವ್ಯಾಪ್ತಿಯ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಒಂದೇ ವೇದಿಕೆಯಲ್ಲಿದ್ದರಿಂದ ಇದರ ಬಗ್ಗೆ ನಿರ್ದಿಷ್ಟ ತೀರ್ಮಾನ ಕೈಗೊಳ್ಳುತ್ತಾರೆ ಎನ್ನುವ ನಿರೀಕ್ಷೆ ಇಲ್ಲಿನ ಜನರಲ್ಲಿತ್ತು.

'ಸಮಾನಾಂತರ ಜಲಾಶಯದ ಬಗ್ಗೆ ಯಾರೂ ಸ್ಪಷ್ಟವಾಗಿ ಏನನ್ನೂ ಹೇಳದಿರುವುದರಿಂದ ನಮ್ಮ ನಿರೀಕ್ಷೆ ಹುಸಿಯಾಗಿದೆ. ಈ ಸಂದರ್ಭದಲ್ಲಿ ನಿಶ್ಚಿತ ನಿರ್ಧಾರ ಕೈಗೊಳ್ಳಬೇಕಿತ್ತು' ಎಂದು ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಭೀಮಸೇನ ಕಲಕೇರಿ ಬೇಸರ ವ್ಯಕ್ತಪಡಿಸಿದರು.

> **ಜೊತೆಗೂಡುವುದು ಆರಂಭ, ಜತೆಗೂಡಿ ಚರ್ಚಿಸುವುದು ಪ್ರಗತಿ, ಜತೆಗೂಡಿ ಕೆಲಸ ಮಾಡುವುದು ಯಶಸ್ಸು ಎಂಬ ತತ್ವದಡಿ ಮೂರೂ ರಾಜ್ಯಗಳು ಒಟ್ಟಾಗಿ ಕೆಲಸ ಮಾಡುತ್ತಿವೆ**
> **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

> **ನಮಗೆ ಕೇವಲ ರಾಜಕೀಯದ ಪಂಚಾಯಿತಿಗಿಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಬೇಕು. ಕೇಂದ್ರ ಜಲಶಕ್ತಿ ಸಚಿವರು ಮಧ್ಯಸ್ಥಿಕೆ ವಹಿಸಿ ಪರಿಹಾರ ಕಲ್ಪಿಸಬೇಕು**
> **ಎ.ರೇವಂತ್ ರೆಡ್ಡಿ,** ತೆಲಂಗಾಣ ಮುಖ್ಯಮಂತ್ರಿ

'ರಾಷ್ಟ್ರೀಯ ಯೋಜನೆಯೆಂದು ಘೋಷಿಸಿ'

ಕೇಂದ್ರ ಸರ್ಕಾರ ಗೋದಾವರಿ ಮತ್ತು ಕಾವೇರಿ ನದಿಗಳ ಜೋಡಣೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಿಸಿ ಅನುಷ್ಠಾನಕ್ಕೆ ತರಬೇಕು ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮನವಿ ಮಾಡಿದರು.

ಗೋದಾವರಿ–ಕಾವೇರಿ ನದಿ ಜೋಡಣೆಯಾದರೆ ಆಂಧ್ರ, ತೆಲಂಗಾಣ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಿಗೆ ದೀರ್ಘಕಾಲಿಕ ಪ್ರಯೋಜನ ದೊರೆಯಲಿದೆ. ಇನ್ನೊಂದೆಡೆ ಗಂಗಾ–ಕಾವೇರಿ ನದಿಗಳ ಜೋಡಣೆ ಯಶಸ್ವಿಯಾದರೆ ಭಾರತದ ಅಭಿವೃದ್ಧಿಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದರು.

ಮುಖ್ಯಮಂತ್ರಿಗಳ ಸಂಗಮ

ತುಂಗಭದ್ರಾ ಜಲಾಶಯಕ್ಕೆ ಕೇವಲ ಆರು ತಿಂಗಳಲ್ಲಿ 33 ಹೊಸ ಕ್ರೆಸ್ಟ್‌ಗೇಟ್‌ಗಳನ್ನು ಅಳವಡಿಸಲಾಗಿದ್ದು, ಅವುಗಳನ್ನು ಕೇಂದ್ರ ಸಚಿವ ಸಿ.ಆರ್. ಪಾಟೀಲ ಉದ್ಘಾಟಿಸಿದರು.

ಇದಕ್ಕೆ ನೀರಿನ ಪಾಲುದಾರ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾದರು. ನಾಲ್ಕು ಗೇಟ್‌ಗಳನ್ನು ಎತ್ತುವ ಮೂಲಕ ಲೋಕಾರ್ಪಣೆ ಮಾಡಲಾಯಿತು. ಆಂಧ್ರ ಮತ್ತು ತೆಲಂಗಾಣ ರಾಜ್ಯಗಳ ಸಿಎಂಗಳು ಕಾರ್ಯಕ್ರಮಕ್ಕೆ ಬಂದು ವಾಪಸ್ ಹೋಗುವ ತನಕವೂ ಶಿವಕುಮಾರ್ ಅವರೇ ಮುತುವರ್ಜಿ ವಹಿಸಿದ್ದರು.

ಕೊಪ್ಪಳ ಜಿಲ್ಲೆಯ ತುಂಗಭದ್ರಾ ಜಲಾಶಯದಲ್ಲಿ ಗುರುವಾರ ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ, ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್, ಚಂದ್ರಬಾಬು ನಾಯ್ಡು, ಎ.ರೇವಂತ ರೆಡ್ಡಿ ಅವರು ಹೊಸ ಕ್ರೆಸ್ಟ್‌ಗೇಟ್‌ಗಳನ್ನು ಲೋಕಾರ್ಪಣೆ ಮಾಡಿದರು –ಪಿಟಿಐ ಚಿತ್ರ

'ತುಂಗಭದ್ರಾ ಗೇಟ್ ಸುಭದ್ರ: 50 ವರ್ಷ ನಿರಾತಂಕ'

ಹೊಸಪೇಟೆ (ವಿಜಯನಗರ): 'ರೈತರ ಹಿತದೃಷ್ಟಿಯಿಂದ ತಂಗಭದ್ರಾ ಅಣೆಕಟ್ಟೆಗೆ ನಾಲ್ಕೇ ತಿಂಗಳಲ್ಲಿ ಕ್ರೆಸ್ಟ್ ಗೇಟ್‌ಗಳನ್ನು ಅಳವಡಿಸಲಾಗಿದೆ. ಮುಂದಿನ 50 ವರ್ಷ ಜಲಾಶಯದಲ್ಲಿ ನೀರು ಸಂಗ್ರಹಕ್ಕೆ ಆತಂಕ ಇಲ್ಲ' ಎಂದು ಗೇಟ್ ತಜ್ಞ ಕನ್ನಯ್ಯ ನಾಯ್ಡು ಹೇಳಿದರು.

ಕನ್ನಯ್ಯ ನಾಯ್ಡು

ನೂತನ ಕ್ರೆಸ್ಟ್‌ಗೇಟ್‌ಗಳ ಉದ್ಘಾಟನೆ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಗೇಟ್‌ಗಳಿಗೆ ಸಂಬಂಧಿಸಿದ ಮೆಕ್ಯಾನಿಕಲ್ ಕೆಲಸಗಳು ಮುಗಿದಿವೆ. ಮುಂದೆ ಸಿವಿಲ್ ಕೆಲಸಗಳು ನಡೆಯುತ್ತಿರಬೇಕು. ಅಣೆಕಟ್ಟೆ, ಕ್ರೆಸ್ಟ್‌ಗೇಟ್, ಚೈನ್‌ಗಳ ನಿರ್ವಹಣೆ ಆಗಾಗ್ಗೆ ನಡೆಯುತ್ತಿರಬೇಕು. ಇದರಿಂದ ಅಣೆಕಟ್ಟೆಯ ಆಯಸ್ಸು ಕನಿಷ್ಠ 50 ವರ್ಷಗಳಿಗೂ ಹೆಚ್ಚು ದೀರ್ಘವಾಗುತ್ತದೆ' ಎಂದರು.

ಅಣೆಕಟ್ಟೆ ಬಲಿಷ್ಠ: ಸರ್ ಎಂ.ವಿಶ್ವೇಶ್ವರಯ್ಯ ಅವರ ಜೀವಿತದ ಕೊನೆಯ ಅವಧಿಯಲ್ಲಿ ನಿರ್ಮಾಣಗೊಂಡ ಈ ಅಣೆಕಟ್ಟೆಗೆ ಬಳಸಿದ್ದು ಕಲ್ಲು ಮತ್ತು ಗಾರೆ. ಆಗ ಸಿಮೆಂಟ್ ಸುಲಭವಾಗಿ ಸಿಗುತ್ತಿರಲಿಲ್ಲ. ಸುಣ್ಣ ಮತ್ತು ಕರಕ್ಕಾಯಿಯಿಂದ ತಯಾರಿಸಿದ 'ಸುರ್ಕಿ ಮಾರ್ಕರ್' ಮೂಲಕ ಅಣೆಕಟ್ಟೆಯನ್ನು ಕಟ್ಟಲಾಗಿತ್ತು. ಅರ್ಧ ಸಿಮೆಂಟ್ ಮತ್ತು ಅರ್ಧ ಸುರ್ಕಿ ಬಳಸಿ ಕಟ್ಟಲಾದ ಈ ಅಣೆಕಟ್ಟೆಯ ಗೇಟ್‌ಗಳನ್ನು ಬರೋಬ್ಬರಿ 74 ವರ್ಷಗಳ ನಂತರ ಬದಲಾಯಿಸಲಾಗಿದೆ' ಎಂದರು.

ಮೃತರ ಖಾತೆಗೆ ₹115 ಕೋಟಿ ಜಮೆ

ಪ್ರಜಾವಾಣಿ ವಾರ್ತೆ

ಇಲಾಖೆ ಸ್ಪಷ್ಟೀಕರಣ

ಬೆಂಗಳೂರು: ಮಾಹಿತಿ ಇಲ್ಲದ ಕಾರಣಕ್ಕೆ, ಗೃಹಲಕ್ಷ್ಮಿ ಯೋಜನೆಯಲ್ಲಿ 1.08 ಲಕ್ಷ ಮೃತ ಫಲಾನುಭವಿಗಳ ಖಾತೆಗಳಿಗೆ ₹115 ಕೋಟಿ ಹಣ ಜಮೆಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸ್ಪಷ್ಟೀಕರಣ ನೀಡಿದೆ.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಹಣ ನೀಡುವಲ್ಲಿ ಒಟ್ಟು ₹225 ಕೋಟಿ ಅಕ್ರಮ ನಡೆದಿರುವ ಬಗ್ಗೆ ಮಹಾಲೇಖಪಾಲರು (ಸಿಎಜಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವರಣೆ ಕೇಳಿದ್ದಾರೆ ಎಂದು 'ಪ್ರಜಾವಾಣಿ' ವರದಿ ಮಾಡಿತ್ತು. ಈ ಕುರಿತು ಇಲಾಖೆಯ ನಿರ್ದೇಶಕರು ಸ್ಪಷ್ಟೀಕರಣ ನೀಡಿದ್ದಾರೆ.

'ಯೋಜನೆ ಆರಂಭವಾದಾಗಿನಿಂದ 2.88 ಲಕ್ಷ ಫಲಾನುಭವಿಗಳು ಮೃತಪಟ್ಟಿದ್ದಾರೆ. ಈ ಪೈಕಿ 1.03 ಲಕ್ಷ ಫಲಾನುಭವಿಗಳ ಕುಟುಂಬದವರು ನೂತನ ಫಲಾನುಭವಿಯನ್ನು ನೋಂದಣಿ ಮಾಡಿದ್ದಾರೆ. 1.08 ಲಕ್ಷ ಫಲಾನುಭವಿಗಳ ಮೃತಪಟ್ಟ ಮಾಹಿತಿ ಲಭ್ಯವಾಗದೇ ಇರುವ ಕಾರಣಕ್ಕೆ ಅವರ ಖಾತೆಗಳಿಗೆ ₹115 ಕೋಟಿ ಜಮೆಯಾಗಿದೆ. ಈ ಪೈಕಿ, ಈವರೆಗೆ ₹15.24 ಕೋಟಿಯಷ್ಟು ಮೊತ್ತವನ್ನು ವಾಪಸ್ ಪಡೆಯಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ಮೃತಪಟ್ಟ ಉಳಿದ ಫಲಾನುಭವಿಗಳ ಕುಟುಂಬದವರು ಮಾಹಿತಿಯನ್ನು ಒದಗಿಸಿ, ನೂತನ ಫಲಾನುಭವಿಗಳನ್ನು ನೋಂದಣಿ ಮಾಡಿಸಿರುವುದಿಲ್ಲ' ಎಂದು ವಿವರಿಸಿದ್ದಾರೆ.

'ಒಂದೇ ಕುಟುಂಬದವರಾಗಿದ್ದರೂ ಪ್ರತ್ಯೇಕ ಮನೆಗಳಲ್ಲಿ ವಾಸವಿದ್ದು, ಪ್ರತ್ಯೇಕ ಪಡಿತರ ಚೀಟಿ ಹೊಂದಿರುವ ಹಲವು ಫಲಾನುಭವಿಗಳು ಇದ್ದಾರೆ. ತಾಯಿ–ಮಗಳು ಅಥವಾ ಅತ್ತೆ–ಸೊಸೆ ಜಂಟಿ ಬ್ಯಾಂಕ್ ಖಾತೆ ಹೊಂದಿದ್ದು, ಇಬ್ಬರೂ ಫಲಾನುಭವಿಗಳಾಗಿದ್ದ ಸಂದರ್ಭದಲ್ಲಿ ಒಂದೇ ಖಾತೆಗೆ ಗೃಹಲಕ್ಷ್ಮಿಯ ಹಣ ಪಾವತಿಯಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್‌ಗ

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ಏಷ್ಯಾದಲ್ಲಿ ವಿನೂತನ ಡಿಜಿಟಲ್ ವೇದಿಕೆ ವಿಭಾಗದಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಅಂತರ್ಜಾಲ ಪುಟಗಳಿಗೆ ಎರಡು ಪ್ರಶಸ್ತಿಗಳು ಲಭಿಸಿವೆ.

ಸುದ್ದಿ ಪ್ರಕಾಶಕರ ಜಾಗತಿಕ ಸಂಸ್ಥೆ (ವ್ಯಾನ್ ಇಫ್ರಾ) ಆಯೋಜಿಸಿದ್ದ ಡಿಜಿಟಲ್ ಮಾಧ್ಯಮ ಸಮಾವೇಶದ ಒಂಬತ್ತನೇ ಆವೃತ್ತಿಯಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಅತ್ಯುತ್ತಮ ಡಿಜಿಟಲ್ ಸುದ್ದಿ ತಾಣ ವಿಭಾಗದಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್'ನ ಇ–ಪೇಪರ್ ಹಾಗೂ ಕೃತಕ ಬುದ್ಧಿಮತ್ತೆ ಆಧಾರಿತ ಡಿಜಿಟಲ್ ವೇದಿಕೆ 'ವಾರ್ತಾ ಸೇತು' ಯೋಜನೆಗಾಗಿ ಈ ಬಹುಮಾನಗಳು ಲಭಿಸಿವೆ.

ವ್ಯಾನ್ ಇಫ್ರಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸ್ಟಿಗ್ ಆರ್ಸ್ಕೋವ್ ಹಾಗೂ ಮನೋರಮಾ ಆನ್‌ಲೈನ್ ಸಿಇಒ ಮರಿಯಮ್ ಮಾಮನ್ ಮ್ಯಾಥ್ಯೂ ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಒಟ್ಟು ಹನ್ನೆರಡು ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಯಿತು. ಇವುಗಳಲ್ಲಿ 115 ಪ್ರವೇಶಗಳು ಬಂದಿದ್ದವು ಎಂದು ಆಯೋಜಕರು ತಿಳಿಸಿದರು.

'ಡಿಜಿಟಲ್ ಮೀಡಿಯಾ ಇಂಡಿಯಾ' ಎರಡು ದಿನಗಳ ವಾರ್ಷಿಕ ಸಮಾವೇಶದಲ್ಲಿ ಹಲವು ಗೋಷ್ಠಿಗಳು ನಡೆದವು. ಕೃತಕ ಬುದ್ಧಿಮತ್ತೆ ಯುಗದಲ್ಲಿ ಮಾಧ್ಯಮಗಳ ಪಾತ್ರ ಕುರಿತು ತಜ್ಞರು ತಮ್ಮ ವಿಚಾರಗಳನ್ನು ಮಂಡಿಸಿದರು.

ಭಾರತದಲ್ಲಿ ಡಿಜಿಟಲ್ ಸುದ್ದಿ ತಾಣಗಳ ವ್ಯವಹಾರಗಳ ಬೆಳವಣಿಗೆ, ಅವಕಾಶಗಳು ಮತ್ತು 2030ರ ಯೋಜನೆ ಕುರಿತು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ನಿರ್ದೇಶಕಿ ಕೆ.ಟಿ. ಸೌಭಾಗ್ಯ ಲಕ್ಷ್ಮಿ ಅವರು ಮಾತನಾಡಿದರು. ಈ ಚರ್ಚೆಯಲ್ಲಿ ದಿ ಹಿಂದೂ ಪತ್ರಿಕೆಯ ಸಿಇಒ ಎಲ್.ವಿ. ನವನೀತ್, ಎಬಿಪಿ ನೆಟ್‌ವರ್ಕ್‌ನ ಸುಮಂತ ದತ್ತ ತಮ್ಮ ವಿಚಾರಗಳನ್ನು ಮಂಡಿಸಿದರು. ವ್ಯಾನ್ ಇಫ್ರಾದ ಸಿಒಒ ಥಾಮಸ್ ಜಾಕೋಬ್ ಗೋಷ್ಠಿಯನ್ನು ನಿರ್ವಹಿಸಿದರು.

ಭಾರತದ ಪ್ರಮುಖ ಸುದ್ದಿ ಸಂಸ್ಥೆಗಳನ್ನೂ ಒಳಗೊಂಡು ದಕ್ಷಿಣ ಏಷ್ಯಾದ ಮಾಧ್ಯಮ ಸಂಸ್ಥೆಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್
ಡಿಜಿಟಲ್ ತಾಣ ವಿಭಾಗದಲ್ಲಿ ಪ್ರಶಸ್ತಿ
ಮರಿಯಮ್ ಮಾಮನ್ ಮ್ಯಾಥ್ಯೂ
ಸಂಸ್ಥೆಯ ಪರವಾಗಿ 'ಪ್ರಜಾವಾಣಿ'ಯ
ಇ.ಎಸ್. ಸುಧೀಂದ್ರ ಪ್ರಸಾದ್, ಡಿಜಿಟಲ
ಸುಹೈಬ್ ಹುಸೇನ್, ಮುಖ್ಯ ತಂತ್ರಜ್ಞಾ
ಪ್ರಶಸ್ತಿ ಸ್ವೀಕರಿಸಿದರು

ಪಿಂಚಣಿ: 'ಸಂಯೋಜನೆ' ಮೊಬೈಲ್ ತಂತ್ರಾಂಶದಲ್ಲಿ ಪರಿಶೀಲನೆ

23.13 ಲಕ್ಷ ಮಂದಿ ಅನರ್ಹರೆಂಬ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ವಿವಿಧ ಮಾದರಿಯ ಪಿಂಚಣಿ ಪಡೆಯುತ್ತಿರುವ ಒಟ್ಟು 83,11,493 ಫಲಾನುಭವಿಗಳ ಪೈಕಿ, ಪ್ರಾಥಮಿಕ ತಪಾಸಣೆಯ ಸಂದರ್ಭದಲ್ಲಿ 23,13,664 ಫಲಾನುಭವಿಗಳ ವಿವರಗಳು ಸಂಶಯಾಸ್ಪದವಾಗಿವೆ.

ಈ ಕುರಿತು ಕಂದಾಯ ಇಲಾಖೆಯ ಜಂಟಿ ನಿರ್ದೇಶಕರು ತಮ್ಮ ಪ್ರಕಟಣೆಯಲ್ಲಿ ವಿವರ ನೀಡಿದ್ದಾರೆ.

ವಯಸ್ಸಿನ ದೃಢೀಕರಣದ ಕುರಿತು ತಪ್ಪು ಮತ್ತು ನಕಲಿ ದಾಖಲೆಗಳನ್ನು ನೀಡಿ ಕಾನೂನುಬಾಹಿರವಾಗಿ ಪಿಂಚಣಿ ಪಡೆಯುತ್ತಿದ್ದ 91,152 ಅನರ್ಹ ಫಲಾನುಭವಿಗಳನ್ನು ಪತ್ತೆಹಚ್ಚಿ, ಅಂಥವರ ಪಿಂಚಣಿಯನ್ನು ತಕ್ಷಣದಿಂದಲೇ ರದ್ದುಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಪಾರದರ್ಶಕತೆ ಮತ್ತು ಅರ್ಹತೆ ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅನುಮಾನಾಸ್ಪದ ಖಾತೆಗಳನ್ನು 'ಸಂಯೋಜನೆ' ಮೊಬೈಲ್ ತಂತ್ರಾಂಶದ ಮೂಲಕ ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ.

ಸಂಶಯಾಸ್ಪದವೆಂದು ಗುರುತಿಸಲಾಗಿದ್ದ ಖಾತೆಗಳ ಪೈಕಿ, ಗ್ರಾಮ ಆಡಳಿತಾಧಿಕಾರಿಗಳು ಸ್ಥಳದಲ್ಲೇ ಪರಿಶೀಲನೆ ನಡೆಸಿ ಅರ್ಹರೆಂದು ವರದಿ ಮಾಡಿದ 3,35,610 ಫಲಾನುಭವಿಗಳು ಸೇರಿದಂತೆ ಒಟ್ಟು 63,04,554 ಅರ್ಹ ಫಲಾನುಭವಿಗಳಿಗೆ ಇದೇ ಮೇ ತಿಂಗಳವರೆಗಿನ ಪಿಂಚಣಿಯನ್ನು ಪಾವತಿಸಲಾಗಿದೆ. ಗ್ರಾಮ ಆಡಳಿತ ಅಧಿಕಾರಿಗಳು ನಡೆಸಿದ ಪರಿಶೀಲನೆಯ ಸಂದರ್ಭದಲ್ಲಿ ಯಾವುದೇ ಅಧಿಕೃತ ದಾಖಲೆಗಳನ್ನು ಹಾಜರುಪಡಿಸಲು ವಿಫಲರಾದ, ನೀಡಿದ್ದ ವಿಳಾಸದಲ್ಲಿ ವಾಸ ಇಲ್ಲದ ಹಾಗೂ ಆದಾಯ ಪ್ರಮಾಣಪತ್ರ ಸಲ್ಲಿಸದ ಒಟ್ಟು 16,42,303 ಫಲಾನುಭವಿಗಳ ಪಿಂಚಣಿಯನ್ನು ಸದ್ಯ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ದಾಖಲೆಗಳ ಕೊರತೆಯಿಂದಾಗಿ ಪಿಂಚಣಿ ಸ್ಥಗಿತಗೊಂಡಿರುವ 16,42,303 ಫಲಾನುಭವಿಗಳಿಗೆ ಸೂಕ್ತ ತಿಳಿವಳಿಕೆ ಪತ್ರ ನೀಡಲು ಸೂಚನೆ ನೀಡಲಾಗಿದೆ. ಸಂಬಂಧಪಟ್ಟ ತಹಶೀಲ್ದಾರ್ ಮೂಲಕ ನೋಟಿಸ್ ನೀಡಿ, ಅರ್ಹತಾ ದಾಖಲೆಗಳನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಲಾಗಿದೆ. ನಿಗದಿತ ಅವಧಿಯಲ್ಲಿ ಫಲಾನುಭವಿಗಳು ಸಲ್ಲಿಸುವ ದಾಖಲೆಗಳನ್ನು ಪರಿಶೀಲಿಸಿದ ನಂತರ, ನಿಜವಾಗಿಯೂ ಅರ್ಹರಾಗಿದ್ದರೆ ಅಂಥವರಿಗೆ ಪಿಂಚಣಿಯನ್ನು ತಕ್ಷಣವೇ ಮುಂದುವರಿಸಲು ಕ್ರಮ ಕೈಗೊಳ್ಳುವಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಹಾಗೂ ತಹಶೀಲ್ದಾರ್‌ಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ.

ಅಂಕಿ ಅಂಶಗಳು

83,11,493
ಒಟ್ಟು ಪಿಂಚಣಿದಾರರು

23,13,664
ಸಂಶಯಾಸ್ಪದ ಫಲಾನುಭವಿಗಳು

91,152
ವಯಸ್ಸಿನ ನಕಲಿ ದಾಖಲೆ ನೀಡಿದವರು

16,42,303
ದಾಖಲೆ ಸಲ್ಲಿಸಲು ವಿಫಲರಾದವರು

ಹೆಸರು ತೆಗೆಯಲು 'ಎ

ಎಸ್‌ಐಆರ್: ಶಾಸಕ ಸಂತೋಷ ಲಾಡ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಾಮಾಜಿಕ ಜಾಲತಾಣದಲ್ಲಿರುವ ಕಾಂಗ್ರೆಸ್ ನಾಯಕರ ಅನುಯಾಯಿಗಳ ಮಾಹಿತಿ ಸಂಗ್ರಹಿಸಿ, ಎಐ ಮಾದರಿಯ ತಂತ್ರಾಂಶದ ಮೂಲಕ ಅವರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಯಲು ಷಡ್ಯಂತ್ರ ನಡೆಸಿದೆ' ಎಂದು ಶಾಸಕ ಸಂತೋಷ ಲಾಡ್ ಆರೋಪಿಸಿದರು.

ಇಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಸಾಧನೆ ಮಾಡಿರುವುದಾಗಿ ಹೇಳಿಕೊಳ್ಳುವ ಕೇಂದ್ರ ಸರ್ಕಾರವು ಯಾಕೆ ಕಾನೂನು ಬದ್ಧವಾಗಿರುವ ಆಧಾರ್ ಕಾರ್ಡ್‌ನ್ನು ಮತದಾರರ ಪಟ್ಟಿಗೆ ಲಿಂಕ್ ಮಾಡುತ್ತಿಲ್ಲ? ಸುಲಭದ ಮಾರ್ಗ ಅನುಸರಿಸುವ ಬದಲು ಏಕೆ ಎಸ್‌ಐಆರ್ (ವಿಶೇಷ ಸಮಗ್ರ ಪರಿಷ್ಕರಣೆ) ಕ್ರಮಕ್ಕೆ ಮುಂದಾಗಿದೆ' ಎಂದರು.

'ಆಧಾರ್ ಕಾರ್ಡ್ ಸಿದ್ಧಪಡಿಸುವ ವೇಳೆ ಆಯಾ ವ್ಯಕ್ತಿಯ ಹತ್ತು ಬೆರಳಚ್ಚು ಜೊತೆಗೆ ಕಣ್ಣಿನ ರೆಟಿನಾ (ಅಕ್ಷಿಪಟ) ಚಿತ್ರವನ್ನೂ ತೆಗೆದುಕೊಳ್ಳಲಾಗುತ್ತದೆ. ವ್ಯಕ್ತಿಯ ವಿವರ ಒಳಗೊಂಡ ಆಧಾರ್ ಕಾರ್ಡ್‌ನ್ನು ಮತದಾರರ ಪಟ್ಟಿಗೆ ಲಿಂಕ್

> **ಎಲ್ಲ ಶಾಸಕರು ಸಚಿವ ಸ್ಥಾನಕ್ಕೆ ಅರ್ಹರಾಗಿದ್ದಾರೆ. ಅವರಲ್ಲಿ ನಾನು ಸಹ ಒಬ್ಬ. ಸಂಪುಟಕ್ಕೆ ಯಾರನ್ನು ಸೇರಿಸಿಕೊಳ್ಳಬೇಕು ಎನ್ನುವುದು ಹೈಕಮಾಂಡ್ ನಿರ್ಧಾರವಾಗಿದ್ದು, ಅದಕ್ಕೆ ಒಪ್ಪಿಕೊಳ್ಳಬೇಕು**
> **ಸಂತೋಷ ಲಾಡ್,** ಶಾಸಕ

ಬರ ನಿರ್ವಹಣೆಗೆ ಸಜ್ಜಾಗಿ: ಡಿಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮಳೆ ಕೊರತೆಯಾಗಿದ್ದು, ಸಂಭವನೀಯ ಬರವನ್ನು ಪರಿಣಾಮಕಾರಿಯಾಗಿ ಎದುರಿಸಲು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಿ' ಎಂದು ಕಂದಾಯ ಖಾತೆಯನ್ನೂ ಹೊಂದಿರುವ ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಅವರು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ವಿಧಾನಸೌಧದಲ್ಲಿ ಅವರು ಗುರುವಾರ ಸಭೆ ನಡೆಸಿದರು. ಬರ ನಿರ್ವಹಣೆಗಾಗಿ ಈವರೆಗೆ ತೆಗೆದುಕೊಂಡಿರುವ ಕ್ರಮ, ಕುಡಿಯುವ ನೀರು ಮತ್ತು ಮೇವಿನ ಕೊರತೆ ನೀಗಿಸಲು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಜಾಗತಿಕ ಹವಾಮಾನ ವೈಪರೀತ್ಯದ ಕಾರಣದಿಂದ ಎಲ್ ನಿನೊ ತಲೆದೋರುತ್ತಿದೆ. ಇದರಿಂದಾಗಿ ರಾಜ್ಯದಲ್ಲಿ ಉಂಟಾಗಬಹುದಾದ ಸಂಭವನೀಯ ಪರಿಣಾಮಗಳ ಬಗ್ಗೆ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕುಡಿಯುವ ನೀರಿನ ಲಭ್ಯತೆ, ಜಾನುವಾರುಗಳಿಗೆ ಮೇವು, ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ನೀರಿನ ಸಂರಕ್ಷಣೆಗೆ ಸಂಬಂಧಿಸಿದಂತೆ ಜಿಲ್ಲಾವಾರು ಕಾರ್ಯಯೋಜನೆಗಳನ್ನು ಸಿದ್ಧಪಡಿಸಬೇಕು ಎಂದು ಇಲಾಖಾ ಮುಖ್ಯಸ್ಥರಿಗೆ ಉಪ ಮುಖ್ಯಮಂತ್ರಿ ಸೂಚಿಸಿದರು ಎಂದಿವೆ.

122 ತಾಲ್ಲೂಕುಗಳಲ್ಲಿ ನೀರಿನ ಸಮಸ್ಯೆ: 122 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 139 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. 789 ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಪಡೆಯಲಾಗಿದ್ದು, 669 ಹಳ್ಳಿಗಳಲ್ಲಿ ಖಾಸಗಿ ಕೊಳವೆಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು ಎಂದು ಮೂಲಗಳು ತಿಳಿಸಿವೆ.

ಜಲಾಶಯಗಳ ನೀರಿನ ಮಟ್ಟ, ಅಂತರ್ಜಲ ಪರಿಸ್ಥಿತಿ, ನೀರಿನ ಬಳಕೆಯ ಮೇಲ್ವಿಚಾರಣೆಯನ್ನು ನಡೆಸಬೇಕು. ಕುಡಿಯುವ ನೀರಿಗಾಗಿ ಕೊಳವೆಬಾವಿ ಕೊರೆಸಲು ಅನುಮತಿಯನ್ನು ತ್ವರಿತಗತಿಯಲ್ಲಿ ನೀಡಬೇಕು ಎಂದು ಮುಖ್ಯಮಂತ್ರಿ ಸೂಚಿಸಿರುವುದಾಗಿ ತಿಳಿಸಿವೆ.

ಪ್ರಕೃತಿ ವಿಕೋಪ: ಸಚಿವರಿಗೆ ಹೊಣೆ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರಕೃತಿ ವಿಕೋಪ ಸಂಭವಿಸಿದಾಗ ನಿರ್ವಹಣೆಯ ಮೇಲುಸ್ತುವಾರಿಗೆ ಸಚಿವರನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಿಯೋಜಿಸಿದ್ದಾರೆ.

ತಮಗೆ ವಹಿಸಿದ ಜಿಲ್ಲೆಯಲ್ಲಿ ಪ್ರವಾಹ, ಭೂಕುಸಿತದಂತಹ ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಲು ಮತ್ತು ತುರ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಸಚಿವರಿಗೆ ಹೊಣೆ ನೀಡಲಾಗಿದೆ.

ಯಾರಿಗೆ, ಯಾವ ಜಿಲ್ಲೆ ಹಂಚಿಕೆ?

ಸಚಿವರು	ಜಿಲ್ಲೆ
ಜಿ. ಪರಮೇಶ್ವರ	ತುಮಕೂರು, ಚಿತ್ರದುರ್ಗ
ಕೆ.ಎಚ್. ಮುನಿಯಪ್ಪ	ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ವಿಜಯನಗರ
ರಾಮಲಿಂಗಾ ರೆಡ್ಡಿ	ಬೆಂಗಳೂರು ದಕ್ಷಿಣ, ಮಂಡ್ಯ
ಎಂ.ಬಿ. ಪಾಟೀಲ	ವಿಜಯಪುರ, ಬಾಗಲಕೋಟೆ
ಕೆ.ಜೆ. ಜಾರ್ಜ್	ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ
ಕೃಷ್ಣ ಬೈರೇಗೌಡ	ಬೆಂಗಳೂರು ನಗರ, ಹಾಸನ
ಈಶ್ವರ ಖಂಡ್ರೆ	ಬೀದರ್, ಗದಗ
ಸತೀಶ ಜಾರಕಿಹೊಳಿ	ಬೆಳಗಾವಿ, ಧಾರವಾಡ, ಹಾವೇರಿ
ಪ್ರಿಯಾಂಕ್ ಖರ್ಗೆ	ಕಲಬುರಗಿ, ಯಾದಗಿರಿ
ಶರಣಪ್ರಕಾಶ್ ಪಾಟೀಲ	ರಾಯಚೂರು, ಕೊಪ್ಪಳ
ಯು.ಟಿ. ಖಾದರ್	ಉಡುಪಿ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ
ಬೈರತಿ ಸುರೇಶ್	ಕೋಲಾರ, ಚಿಕ್ಕಬಳ್ಳಾಪುರ
ಯತೀಂದ್ರ ಸಿದ್ದರಾಮಯ್ಯ	ಮೈಸೂರು, ಚಾಮರಾಜನಗರ

'ಆರ್‌ಎಸ್‌ಎಸ್ ನಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು (ಆರ್‌ಎಸ್‌ಎಸ್) ಈಗಾಗಲೇ ಮೂರು ಬಾರಿ ನಿಷೇಧಿಸಿದ್ದೇವೆ. ಅದರ ನಿಷೇಧವೇ ನಮ್ಮ ಮುಂದಿನ ಹೋರಾಟ' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು.

ಬಿ.ಕೆ. ಹರಿಪ್ರಸಾದ್

'ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ಟೀಕಿಸಿ ಮಾತನಾಡುತ್ತಿರುವುದಕ್ಕೆ ಜನರ ಗಮನ ಬೇರೆಡೆ ಸೆಳೆಯಲು ಬಿಜೆಪಿಯು ಭೂ ಹಗರಣದಲ್ಲಿ ಮಲ್ಲಿಕಾರ್ಜುನ ಖರ್ಗೆ ಭಾಗಿ ಆಗಿದ್ದಾರೆಂದು ಆರೋಪಿಸುತ್ತಿದೆ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ₹4 ಸಾವಿರ ಕೋಟಿ ಹಣ ಸಂಗ್ರಹಿಸಿದೆ. ನಮ್ಮ

‘64.84 ಲಕ್ಷ ಮಕ್ಕಳಿಗೆ ಲಸಿಕೆ ಗುರಿ’

1.14 ಲಕ್ಷ ಕಾರ್ಯಕರ್ತರ ಬಳಕೆ
36 ಸಾವಿರ ಬೂತ್‌ಗಳ ವ್ಯವಸ್ಥೆ: ಖಾದರ್

ಪ್ರಜಾವಾಣಿ ವಾರ್ತೆ

ಪಲ್ಸ್ ಪೋಲಿಯೊ

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಇದೇ ಭಾನುವಾರ (ಜೂನ್ 28) ಪಲ್ಸ್ ಪೋಲಿಯೊ ಹನಿ ಹಾಕುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, 5 ವರ್ಷದೊಳಗಿನ 64.84 ಲಕ್ಷ ಮಕ್ಕಳನ್ನು ತಲುಪುವ ಗುರಿ ಹಾಕಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಆರೋಗ್ಯ ಸಚಿವ ಯು.ಟಿ. ಖಾದರ್, ‘ಪೋಲಿಯೊ ಹನಿ ವಿತರಣೆಗೆ 36,076 ಬೂತ್‌ಗಳನ್ನು ಗುರುತಿಸಲಾಗಿದೆ. ಗುಡ್ಡಗಾಡು ಪ್ರದೇಶಗಳನ್ನು ತಲುಪಲು 988 ಮೊಬೈಲ್ ತಂಡ ರಚಿಸಲಾಗಿದೆ. 2,125 ಟ್ರಾನ್ಸಿಟ್ ತಂಡವು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿ ಲಸಿಕೆ ವಿತರಿಸಲಿವೆ. ಈ ಕಾರ್ಯಕ್ರಮಕ್ಕೆ 1.14 ಲಕ್ಷ ಕಾರ್ಯಕರ್ತರನ್ನು ಬಳಸಿಕೊಳ್ಳಲಾಗುತ್ತಿದೆ. 7,197 ಮೇಲ್ವಿಚಾರಕರನ್ನು ನೇಮಿಸಲಾಗಿದೆ’ ಎಂದು ಹೇಳಿದರು.

‘ಐದು ವರ್ಷದೊಳಗಿನ ಎಲ್ಲ ಮಕ್ಕಳೂ ಲಸಿಕೆ ಪಡೆದುಕೊಳ್ಳಬೇಕು. ಈ ಮೂಲಕ ಪೋಲಿಯೊ ವಿರುದ್ಧದ ಹೋರಾಟದಲ್ಲಿ ವಿಜಯ ಸಾಧಿಸುವುದನ್ನು ಮುಂದುವರಿಸಲು ಕೈಜೋಡಿಸಬೇಕು. ರಾಜ್ಯದ ಎಲ್ಲ ಆಸ್ಪತ್ರೆಗಳು, ಗ್ರಾಮೀಣ ಪ್ರದೇಶ, ಗುಡ್ಡಗಾಡು ಪ್ರದೇಶ ಸೇರಿದಂತೆ ವಿವಿಧೆಡೆ ಲಸಿಕೆ ಹಾಕಲು ವ್ಯವಸ್ಥೆ ಮಾಡಲಾಗಿದೆ. ಪೋಲಿಯೊ ಹನಿ ಸಂಪೂರ್ಣ ಸುರಕ್ಷಿತವಾಗಿದ್ದು, ಯಾವುದೇ ವದಂತಿಗಳಿಗೆ ಕಿವಿಗೊಡಬಾರದು’ ಎಂದು ತಿಳಿಸಿದರು.

‘ಭಾರತ ಈಗ ಪೋಲಿಯೊ ಮುಕ್ತವಾಗಿದೆ. ಈ ಸ್ಥಿತಿಯನ್ನು ಕಾಯ್ದುಕೊಳ್ಳಬೇಕು. ಆದ್ದರಿಂದ ಕಡ್ಡಾಯವಾಗಿ ಪೋಲಿಯೊ ಹನಿ ಹಾಕಿಸಬೇಕು. ಹತ್ತಿರದ ಲಸಿಕಾ ಕೇಂದ್ರ ಪತ್ತೆಗೆ ‘Nearby Vaccination centre Karnataka’ ಆ್ಯಪ್ ಅಭಿವೃದ್ಧಿ ಪಡಿಸಲಾಗಿದ್ದು, ಪ್ಲೇ ಸ್ಟೋರ್‌ನಲ್ಲಿರುವ ಈ ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಿಕೊಂಡು ಕೇಂದ್ರ ಹುಡುಕಬಹುದು’ ಎಂದು ಸಚಿವರು ಹೇಳಿದರು.

‘ಆಂಬುಲೆನ್ಸ್ ಸೇವೆಗೆ ವೇಗ’

ಖಾದರ್

‘ರಾಜ್ಯದಲ್ಲಿ ‘108 ಆರೋಗ್ಯ ಕವಚ’ ಯೋಜನೆಯಡಿ ಆಂಬುಲೆನ್ಸ್ ಸೇವೆ ಬಲಪಡಿಸಲು ಆದ್ಯತೆ ನೀಡಲಾಗಿದೆ. ರಾಷ್ಟ್ರೀಯ ಮಾನದಂಡದ ಪ್ರಕಾರ ಆಂಬುಲೆನ್ಸ್ ರೋಗಿಯನ್ನು ಚಿಕಿತ್ಸಾ ಕೇಂದ್ರಕ್ಕೆ ಕರೆದೊಯ್ಯುವ ಸಮಯದ ಮಿತಿ (ಗೋಲ್ಡನ್ ಅವರ್) 20 ನಿಮಿಷವಿದೆ. ವಿವಿಧ ಕಾರಣಗಳಿಂದ ಈ ಸಮಯದ ಮಿತಿಯೊಳಗೆ ರೋಗಿಯನ್ನು ಕರೆದೊಯ್ಯಲು ರಾಜ್ಯದಲ್ಲಿ ಸಾಧ್ಯವಾಗುತ್ತಿರಲಿಲ್ಲ. ಈಗ ವ್ಯವಸ್ಥೆಯಲ್ಲಿ ಕೆಲ ಬದಲಾವಣೆ ಮಾಡಿ, 10 ನಿಮಿಷಗಳ (ಪ್ಲಾಟಿನಂ ಅವರ್) ಮಿತಿಯನ್ನು ಗೊತ್ತುಪಡಿಸಲಾಗುತ್ತಿದೆ. ಆಂಬುಲೆನ್ಸ್ ರೋಗಿಯ ಬಳಿ ತಲುಪಿದ ಬಳಿಕ ತುರ್ತು ಚಿಕಿತ್ಸೆ ಲಭ್ಯವಾಗುತ್ತದೆ. ಆಂಬುಲೆನ್ಸ್‌ನಲ್ಲಿ ಶುಶ್ರೂಷಕರು ಹಾಗೂ ತಂತ್ರಜ್ಞರು ಇರುತ್ತಾರೆ’ ಎಂದು ಸಚಿವ ಯು.ಟಿ. ಖಾದರ್ ವಿವರಿಸಿದರು.

ಜನೌಷಧ ಕೇಂದ್ರಗಳಲ್ಲಿ ಬ್ರ್ಯಾಂಡೆಡ್ ಔಷಧಗಳ ಮಾರಾಟದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಈ ಕೇಂದ್ರಗಳಲ್ಲಿ ಯಾವುದೇ ಖಾಸಗಿ ಕಂಪನಿಯ ಔಷಧಗಳನ್ನು ನೇರವಾಗಿ ಮಾರಾಟ ಮಾಡಲು ಅವಕಾಶ ಇರುವುದಿಲ್ಲ. ಆರೋಗ್ಯ ಇಲಾಖೆಯ ಅಥವಾ ನಿಗದಿತ ಮಾನದಂಡಗಳ ಪ್ರಕಾರವೇ ಕಂಪನಿಗಳು ಔಷಧಗಳನ್ನು ಮಾರಾಟ ಮಾಡಬೇಕು. ಜನೌಷಧ ಕೇಂದ್ರಗಳಲ್ಲಿ ಕಡಿಮೆ ಬೆಲೆಗೆ ಔಷಧಗಳು ದೊರೆಯುತ್ತವೆ ಎಂಬ ಕಾರಣಕ್ಕೆ, ಸರ್ಕಾರದ ಮಾನದಂಡಗಳಿಗೆ ಅನುಗುಣವಾಗಿರದ ಔಷಧಗಳನ್ನು ಮಾರಾಟ ಮಾಡಿ ಜನರನ್ನು ತಪ್ಪುದಾರಿಗೆಳೆಯುವ ಕೆಲಸ ಆಗಬಾರದು’ ಎಂದು ಹೇಳಿದರು.

ಮೊಹರಂ ತ್ಯಾಗದ ಸ್ಮರಣೆ

• ಬಷೀರಅಹ್ಮದ್ ನಗಾರಿ

ಮೊಹರಂ ಎಂಬುದು ಇಸ್ಲಾಮಿಕ್ ಕ್ಯಾಲೆಂಡರ್‌ನ ಮೊದಲ ತಿಂಗಳ ಹೆಸರು. ಸಂಭ್ರಮ, ಗೆಲುವು, ಸೋಲು–ನೋವಿನಂಥ ಕಾರಣಕ್ಕೆ ಈ ತಿಂಗಳು ಸಾಕ್ಷಿಯಾಗಿದೆ. ಮೊದಲ ಪ್ರವಾದಿ ಆದಂ, ಅಲ್ಲಾಹುವಿನ ಆಜ್ಞೆ ಮೀರಿ ‘ಜ್ಞಾನ’ದ ಹಣ್ಣು ಸವಿದ ತಪ್ಪನ್ನು ಮನ್ನಿಸಿದ್ದು, ಪ್ರವಾದಿ ಇಬ್ರಾಹಿಮರು ಅಗ್ನಿಕುಂಡದಿಂದ ರಕ್ಷೆ ಪಡೆದಿದ್ದು, ಪ್ರವಾದಿ ಮೂಸಾ ಹಾಗೂ ಅವರ ಸಮುದಾಯವು ಕ್ರೂರ ಆಡಳಿತಕ್ಕೆ ಹೆಸರಾಗಿದ್ದ ಫಿರೌನ್ ಸೇನೆಯಿಂದ ವಿಶಾಲ ಸಾಗರದಲ್ಲಿ ರಕ್ಷಣೆ ಪಡೆದಿದ್ದು, ಪ್ರವಾದಿ ಯೂನೂಸ್ ಅವರು ತಿಮಿಂಗಲದ ಹೊಟ್ಟೆಯಿಂದ ಪಾರಾದ ಘಟನೆಗಳೆಲ್ಲ ಘಟಿಸಿದ್ದು 10ನೇ ಮೊಹರಂ ದಿನ.

ಮೊಹರಂ ಸಮಯದಲ್ಲಿ ಬಹುತೇಕ ಮುಸ್ಲಿಂ ರಾಷ್ಟ್ರಗಳಲ್ಲಿ ಶೋಕದ ಕಾರ್ಮೋಡ ಕವಿಯುತ್ತದೆ. ಅದಕ್ಕೆ ಪ್ರಮುಖ ಕಾರಣ ಕರ್ಬಲಾದಲ್ಲಿ ನಡೆದ ಯುದ್ಧ. ಅದು ಘಟಿಸಿದ್ದು ಮೊಹರಂ ತಿಂಗಳ 10ನೇ ದಿನ.

ಏನಿದು ಕರ್ಬಲಾ ಕದನ ಕಥನ?: ಇದು ಅರಸೊತ್ತಿಗೆ ಆಳ್ವಿಕೆಯ ವಿರುದ್ಧ ಪ್ರಜಾಪ್ರಭುತ್ವ ಮಾದರಿಯ ಆಡಳಿತಕ್ಕಾಗಿ ನಡೆದ ಕದನ. ಇಸ್ಲಾಂನ ಕೊನೆಯ ಪ್ರವಾದಿ ಮುಹಮ್ಮದರು ಹಾಗೂ ಅವರ ನಂತರದ ನಾಲ್ವರು ಖಲೀಫಾಗಳು (ಆಡಳಿತಗಾರ) ಪ್ರಜಾಪ್ರಭುತ್ವ ಮಾದರಿಯ ಇಸ್ಲಾಮಿಕ್ ಆಡಳಿತ ನೀಡಿದ್ದರು. ಬಳಿಕ ಆಮೀರ್ ಮುಆವಿಯಾ ಖಲೀಫಾ ಆದರು. ಆಗ ಆಡಳಿತ ಪದ್ಧತಿಯು ಅರಸೊತ್ತಿಗೆ ಆಳ್ವಿಕೆಯತ್ತ ವಾಲಿತು. ಮುಆವಿಯಾ ಪ್ರಜಾಪ್ರಭುತ್ವ ಮಾದರಿಯಲ್ಲಿ ಉತ್ತರಾಧಿಕಾರಿ ಆಯ್ಕೆ ಮಾಡಲಿಲ್ಲ. ಸ್ವಂತ ಮಗ ಯಜೀದ್‌ನಿಗೆ ಅಧಿಕಾರ ಹಸ್ತಾಂತರಿಸಿದ.

ಯಜೀದ್ ಇಸ್ಲಾಮಿಕ್ ಆಡಳಿತ ಬಿಟ್ಟು, ‘ಆಜ್ಞಾಪಾಲಕ’ ಆಡಳಿತಕ್ಕೆ ಒತ್ತು ನೀಡಿದ. ಇದನ್ನು ಪ್ರವಾದಿ ಮುಹಮ್ಮದರ ಮೊಮ್ಮಗ (ಅವರ ಪುತ್ರಿಯ 2ನೇ ಮಗ) ಇಮಾಮ್ ಹುಸೇನ್ ಹಾಗೂ ಇತರು ವಿರೋಧಿಸಿದರು. ಈ ವಿರೋಧ ಮಟ್ಟಹಾಕಲು ಯಜೀದ್ ನಡೆಸಿದ ಹೋರಾಟವೇ ‘ಕರ್ಬಲಾ ಕದನ’. ಇದರಲ್ಲಿ ಇಮಾಮ್ ಹುಸೇನ್ ಅವರ ಪರಿವಾರ, ಅನುಯಾಯಿಗಳು ಹುತಾತ್ಮರಾದರು. ಆ ದಿನ ಮೊಹರಂನ 10ನೇ ದಿನ ಆಗಿತ್ತು. ‘ಸತ್ಯಮಾರ್ಗ’ಕ್ಕಾಗಿ ಹುತಾತ್ಮರಾದ ಸ್ಮರಣೆಗೆ ಅಂದಿನಿಂದ ಮೊಹರಂನ ಆಚರಣೆ ಜಾರಿಯಲ್ಲಿದೆ.

ವಿಶ್ವದಾದ್ಯಂತ ಮುಸ್ಲಿಮರಿಂದ ಮೊಹರಂ ತಿಂಗಳ 9ನೇ ದಿನವನ್ನು ಖತಲ್ ರಾತ್ರಿ, 10ನೇ ದಿನವನ್ನು ‘ಆಶೂರಾ’ ಆಗಿ ಆಚರಿಸುತ್ತಾರೆ. ಆಚರಣೆಯ ಉದ್ದೇಶವು ಹುಸೇನರ ಅಪ್ರತಿಮ ತ್ಯಾಗದ ಸ್ಮರಣೆಯೇ ಆಗಿದೆ. ಅದಾಗ್ಯೂ, ಆಚರಣೆಗಳು ವಿಭಿನ್ನವಾಗಿವೆ.

ಹಲವರು ಸಿಂಗರಿಸಿದ ಪಂಜಾಗಳನ್ನು ಸ್ಥಾಪಿಸಿ, ಆಲಂಕಾರಿಕ ಡೋಲಿ ನಿರ್ಮಿಸಿ, ಎದುರು ಭೇಟಿ ಮಾಡಿಸಿ, ಕೊನೆಗೆ ಅದನ್ನು ಜಲಮೂಲಕ್ಕೆ ಒಯ್ದು ವಿಸರ್ಜಿಸುವ ಮೂಲಕ ಮೊಹರಂ ಆಚರಿಸುತ್ತಾರೆ. ಮತ್ತೆ ಕೆಲವರು ಇದನ್ನು ಒಪ್ಪುವುದಿಲ್ಲ. ‘ಇದು ಶೋಕಾಚರಣೆಯ ಸಮಯ. ಹೀಗಾಗಿ ಉಪವಾಸ, ದಾನ, ವಿಶೇಷ ನಮಾಜ್‌ಗಳ ಮೂಲಕ ಸ್ಮರಣೆ ಮಾಡುವ ಸಮಯ’ ಎಂಬುದು ಅವರ ಅಂಬೋಣ. ಶಿಯಾ ಪಂಗಡದವರು ಇಮಾಮ್ ಹುಸೇನರು ಹುತಾತ್ಮರಾದ ಸ್ಮರಣೆಗೆ ಬಾರುಕೋಲು, ಪುಟಾಣಿ ಕತ್ತಿಗಳ ಗುಚ್ಛದಿಂದ ಹೊಡೆದುಕೊಂಡು ಶೋಕವನ್ನು ವ್ಯಕ್ತಪಡಿಸುತ್ತಾರೆ.

ರಾಜ್ಯದಲ್ಲಿ ಭಾವೈಕ್ಯದ ಬೆಸುಗೆ: ಕರ್ನಾಟಕದಲ್ಲಿ ಮೊಹರಂ ಆಚರಣೆಯು ಹಿಂದೂ–ಮುಸ್ಲಿಮರ ಭಾವೈಕ್ಯಕ್ಕೆ ಹೆಸರಾಗಿದೆ. ಇಲ್ಲಿ ಮೊಹರಂ ಆಚರಣೆ ಸಾರ್ವಜನಿಕ ಗಣೇಶೋತ್ಸವದ ಸ್ವರೂಪ ಪಡೆಯುತ್ತದೆ. ಮುಸ್ಲಿಮರು ಇಲ್ಲದ ಊರುಗಳಲ್ಲೂ ಮೊಹರಂ ಆಚರಣೆ ಕಾಣುತ್ತೇವೆ. ಪಂಜಾಗಳ ಸ್ಥಾಪನೆ, ಡೋಲಿಗಳ ಮೆರವಣಿಗೆ, ಹೆಜ್ಜೆ ಕುಣಿತ, ಅಳ್ಳಳ್ಳಿ ಬಚ್ಚ ಕುಣಿತ, ಹಲಗೆ ವಾದನ, ಹರಕೆ ಕಟ್ಟುವುದು–ತೀರಿಸುವುದು, ಕೆಂಡ ಹಾಯುವಿಕೆ, ಶೋಕಗೀತೆಗಳ ಹಾಡುಗಾರಿಕೆ ಇಲ್ಲಿ ಸಾಮಾನ್ಯ. ರಾಯಚೂರು ಜಿಲ್ಲೆಯ ಮುದಗಲ್, ಧಾರವಾಡ ಜಿಲ್ಲೆಯ ಯರಗುಪ್ಪಿ, ಬಾಗಲಕೋಟೆ ಜಿಲ್ಲೆಯ ಮುಮರಡ್ಡಿ ಕೊಪ್ಪ ಸೇರಿದಂತೆ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಧಾರ್ಮಿಕ ಆಚರಣೆಗೂ ಹೆಚ್ಚಾಗಿ ಸೌಹಾರ್ದದ ಕೊಂಡಿಯಾಗಿ ಮೊಹರಂ ಆಚರಣೆಯಲ್ಲಿದೆ. ❖

ಕಟ್ಟಡ ನಿರ್ಮಾಣಕ್ಕೆ ಸ್ಥಳ ಗುರುತಿಸಿದ ಬಿಎಂಸಿಆರ್‌ಐ • ಇನ್ಫೊಸಿಸ್ ಪ್ರಯೋಗಾಲಯದಲ್ಲಿ ರೋಗಿಗಳ ದಟ್ಟಣೆ

ರೋಗ ನಿರ್ಣಯಕ್ಕೆ ಕೇಂದ್ರೀಕೃತ ಪ್ರಯೋಗಾಲಯ

• ವರುಣ ಹೆಗಡೆ

ವಿಕ್ಟೋರಿಯಾ ಆಸ್ಪತ್ರೆಯ ಇನ್ಫೊಸಿಸ್ ಪ್ರಯೋಗಾಲಯದಲ್ಲಿ ರೋಗಿಗಳ ದಟ್ಟಣೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯ ನಿರ್ವಹಿಸುತ್ತಿರುವ ವಿಕ್ಟೋರಿಯಾ ಆಸ್ಪತ್ರೆಯ ಇನ್ಫೊಸಿಸ್ ಪ್ರಯೋಗಾಲಯದಲ್ಲಿ ರೋಗಿಗಳ ದಟ್ಟಣೆ ಹೆಚ್ಚುತ್ತಿದೆ. ಆದ್ದರಿಂದ ಬಿಎಂಸಿಆರ್‌ಐ ರೋಗ ನಿರ್ಣಯಕ್ಕೆ ಕೇಂದ್ರೀಕೃತ ಪ್ರಯೋಗಾಲಯ ಸ್ಥಾಪಿಸಲು ಮುಂದಾಗಿದೆ.

ಮೂರು ಮಹಡಿಗಳ ಇನ್ಫೊಸಿಸ್ ಪ್ರಯೋಗಾಲಯದಲ್ಲಿ ರಕ್ತ ಹಾಗೂ ಮೂತ್ರ ಸೇರಿ ವಿವಿಧ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಸುತ್ತಮುತ್ತಲಿನ ಆಸ್ಪತ್ರೆಗಳಿಂದಲೂ ರೋಗಿಗಳು ಈ ಪ್ರಯೋಗಾಲಯಕ್ಕೆ ಭೇಟಿ ನೀಡುತ್ತಿರುವುದರಿಂದ ಪರೀಕ್ಷೆಗಳು ಮತ್ತು ವರದಿಗಳು ವಿಳಂಬವಾಗುತ್ತಿವೆ. ಆದ್ದರಿಂದ ಈ ಪ್ರಯೋಗಾಲಯದ ಮೇಲಿನ ಒತ್ತಡ ಕಡಿಮೆ ಮಾಡಲು ನಿರ್ಧರಿಸಿರುವ ಬಿಎಂಸಿಆರ್‌ಐ, ಇನ್ಫೊಸಿಸ್ ಪ್ರಯೋಗಾಲಯ ಹಾಗೂ ಸುತ್ತಮುತ್ತಲಿನ ಆಸ್ಪತ್ರೆಗಳ ಪ್ರಯೋಗಾಲಯಗಳನ್ನು ಒಂದೇ ಸೂರಿನಡಿ ತರಲು ಕಾರ್ಯಯೋಜನೆ ರೂಪಿಸಿದೆ.

ವಿಕ್ಟೋರಿಯಾ ಆಸ್ಪತ್ರೆಗೆ ಹೊರರಾಜ್ಯಗಳಿಂದಲೂ ರೋಗಿಗಳು ಬರುತ್ತಿದ್ದು, ಪ್ರತಿನಿತ್ಯ ಸಾವಿರಕ್ಕೂ ಅಧಿಕ ಮಂದಿ ಹೊರರೋಗಿಗಳಾಗಿ ತಪಾಸಣೆಗೆ ಒಳಪಡುತ್ತಿದ್ದಾರೆ. ಸದಾ 500ಕ್ಕೂ ಅಧಿಕ ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಾರೆ. ಆರ್ಥೋಪೆಡಿಕ್ಸ್, ಡರ್ಮಟಾಲಜಿ, ಸೈಕಿಯಾಟ್ರಿ, ರೇಡಿಯಾಲಜಿ, ರೇಡಿಯೊಥೆರಪಿ, ಫಿಸಿಯೋಥೆರಪಿ, ನ್ಯೂರಾಲಜಿ, ನ್ಯೂರೋಸರ್ಜರಿ, ಕಾರ್ಡಿಯಾಲಜಿ ಸೇರಿ ವಿವಿಧ ವಿಭಾಗಗಳಿವೆ. ಎಕ್ಸ್‌–ರೆ, ಸಿ.ಟಿ ಸ್ಕ್ಯಾನ್ ಸೇರಿದಂತೆ ವಿವಿಧ ಪರೀಕ್ಷೆಗಳು ಲಭ್ಯವಿದೆ. ಇದರಿಂದಾಗಿ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದ್ದು, ಪ್ರಯೋಗಾಲಯದಲ್ಲಿಯೂ ದಟ್ಟಣೆ ಉಂಟಾಗುತ್ತಿದೆ.

ಸ್ಥಳ ಗುರುತು: ಇನ್ಫೊಸಿಸ್ ಪ್ರಯೋಗಾಲಯ 2006ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಮೂರು ಮಹಡಿಗಳನ್ನು ಒಳಗೊಂಡಿದೆ. ಇದನ್ನು ಇನ್ಫೊಸಿಸ್ ಪ್ರತಿಷ್ಠಾನ ನಿರ್ಮಿಸಿಕೊಟ್ಟಿದೆ. ನೆಲಮಹಡಿಯಲ್ಲಿ ಎಚ್‌ಐವಿ ಪರೀಕ್ಷೆ ಹಾಗೂ ಕೌನ್ಸಿಲಿಂಗ್ ಕೇಂದ್ರವಿದೆ. ರೋಗಿಗಳ ರೋಗ ನಿರ್ಣಯ ಮಾದರಿ ಸಂಗ್ರಹ ಕೊಠಡಿ, ಬಿಲ್ಲಿಂಗ್ ವಿಭಾಗ, ವರದಿ ನೀಡುವ ಕೌಂಟರ್, ಶೌಚಗೃಹವಿದೆ. ಈ ಕಟ್ಟಡವನ್ನು ವಿಸ್ತರಿಸಲು ಸ್ಥಳಾವಕಾಶ ಕೊರತೆ ಇರುವ ಕಾರಣ, ಕೇಂದ್ರೀಕೃತ ಪ್ರಯೋಗಾಲಯ ನಿರ್ಮಾಣಕ್ಕೆ ವಿಕ್ಟೋರಿಯಾ ಹೊರರೋಗಿ ವಿಭಾಗದ ಕಟ್ಟಡದ ಮೇಲಿನ ಮಹಡಿಯನ್ನು ಗುರುತಿಸಲಾಗಿದೆ.

‘ತಪಾಸಣೆ, ಪ್ರಯೋಗಾಲಯ ವರದಿ, ಚಿಕಿತ್ಸೆ ಇತ್ಯಾದಿಗಾಗಿ ರೋಗಿಗಳ ಅಲೆದಾಟ ತಪ್ಪಿಸಲು ಒಂದೇ ಸೂರಿನಡಿ ಪ್ರಯೋಗಾಲಯ ಸೌಲಭ್ಯ ಕಲ್ಪಿಸುವ ಅಗತ್ಯವಿದೆ. ನೂತನ ಪ್ರಯೋಗಾಲಯ ವ್ಯವಸ್ಥೆಗೆ ಸಿಎಸ್‌ಆರ್ ಅಡಿಯೂ ಅನುದಾನ ಬಳಸಿಕೊಳ್ಳಲಾಗುವುದು. ವೈದ್ಯಕೀಯ ಶಿಕ್ಷಣ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಬಿಎಂಸಿಆರ್‌ಐ ಪ್ರಾಧ್ಯಾಪಕರೊಬ್ಬರು ತಿಳಿಸಿದರು.

ವಿವಿಧ ಆಸ್ಪತ್ರೆ ಅವಲಂಬನೆ

ವಿಕ್ಟೋರಿಯಾದ ಇನ್ಫೊಸಿಸ್ ಪ್ರಯೋಗಾಲಯವನ್ನು ವಾಣಿವಿಲಾಸ, ಟ್ರಾಮಾ ಕೇರ್ ಕೇಂದ್ರ, ನೆಫ್ರೊ–ಯೂರಾಲಜಿ ಸಂಸ್ಥೆ, ಗ್ಯಾಸ್ಟ್ರೋಎಂಟರಾಲಜಿ ವಿಜ್ಞಾನ ಮತ್ತು ಅಂಗಾಂಗ ಕಸಿ ಸಂಸ್ಥೆ (ಐಗಾಟ್), ಮಿಂಟೊ ಕಣ್ಣಿನ ಆಸ್ಪತ್ರೆ ಸೇರಿ ಸುತ್ತಮುತ್ತಲಿನ ಆಸ್ಪತ್ರೆಗಳ ರೋಗಿಗಳೂ ಅವಲಂಬಿಸಿದ್ದಾರೆ. ನಿತ್ಯ 900ರಿಂದ 1 ಸಾವಿರ ರೋಗಿಗಳು ಪ್ರಯೋಗಾಲಯಕ್ಕೆ ಬರುತ್ತಾರೆ. ಸುತ್ತಮುತ್ತಲಿನ ಒಳರೋಗಿಗಳ ಮಾದರಿಗಳೂ ಸೇರಿ ಸುಮಾರು 1,500 ರೋಗಿಗಳ ಮಾದರಿಗಳ ಪರೀಕ್ಷೆ ನಡೆಸಬೇಕಾಗುತ್ತಿದೆ.

ಒಪಿಡಿಯಲ್ಲಿ ಮಾದರಿ ಸಂಗ್ರಹ

ರಕ್ತ ಮತ್ತು ಮೂತ್ರದ ಮಾದರಿಯನ್ನು ಹೊರರೋಗಿ ವಿಭಾಗದಲ್ಲಿ ಸಂಗ್ರಹಿಸಿ, ಪ್ರಯೋಗಾಲಯಕ್ಕೆ ರವಾನಿಸಲು ಯೋಜನೆ ರೂಪಿಸಲಾಗಿದೆ. ಇದರಿಂದ ರೋಗಿಗಳು ಕಟ್ಟಡದಲ್ಲಿ ಪರೀಕ್ಷೆಗಾಗಿ ಅಲೆದಾಡುವುದು ಹಾಗೂ ಸರದಿಯಲ್ಲಿ ನಿಲ್ಲುವುದು ತಪ್ಪಲಿದೆ. ಪ್ರಯೋಗಾಲಯವನ್ನು ಮೇಲ್ದರ್ಜೆಗೇರಿಸುವ ಈ ಯೋಜನೆಗೆ ₹ 8 ಕೋಟಿ ಅನುದಾನ ಅಗತ್ಯವೆಂದು ಸಂಸ್ಥೆ ಅಂದಾಜಿಸಿದೆ. ಈ ಬಗ್ಗೆ ಸರ್ಕಾರದ ಅನುಮೋದನೆ ಹಾಗೂ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ನಿರೀಕ್ಷೆಯಲ್ಲಿದೆ ಎಂದು ಬಿಎಂಸಿಆರ್‌ಐ ಮೂಲಗಳು ತಿಳಿಸಿವೆ.

ಗೋದಾಮು ಕುಸಿತ: ಮೃತರ ಸಂಖ್ಯೆ 10ಕ್ಕೆ ಏರಿಕೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಕೋಲ್ಕತ್ತದ ತರಾತಲ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿದ್ದ ಮೂರು ಅಂತಸ್ತಿನ ಗೋದಾಮು ಕುಸಿತದಲ್ಲಿ ಸಾವಿನ ಸಂಖ್ಯೆ 10ಕ್ಕೆ ಏರಿಕೆಯಾಗಿದೆ. ಕಟ್ಟಡದ ಅವಶೇಷಗಳ ಅಡಿಯಲ್ಲಿ ಸಿಲುಕಿರುವವರಿಗಾಗಿ ಕಳೆದ 21 ಗಂಟೆಗಳಿಂದ ರಕ್ಷಣಾ ಸಿಬ್ಬಂದಿ ಕಾರ್ಯ ಪ್ರವೃತ್ತರಾಗಿದ್ದಾರೆ. ಇಲ್ಲಿಯವರೆಗೆ 30 ಮಂದಿಯನ್ನು ರಕ್ಷಿಸಲಾಗಿದೆ.

‘30ರಿಂದ ಪ್ರತಿಧ್ವನಿ’ ಆಂದೋಲನ

ನವದೆಹಲಿ (ಪಿಟಿಐ): ನೀಟ್ ಸೇರಿ ಹಲವು ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳ ಸೋರಿಕೆಯ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ‘ವಿದ್ಯಾರ್ಥಿಗಳ ಪ್ರತಿಧ್ವನಿ’ ಹೆಸರಿನಲ್ಲಿ ದೇಶವ್ಯಾಪಿ 40 ದಿನಗಳ ಆಂದೋಲನವನ್ನು ಜೂನ್ 30ರಿಂದ ಆರಂಭಿಸಲು ಕಾಂಗ್ರೆಸ್ ನಿರ್ಧರಿಸಿದೆ.

ಪ್ರಶ್ನೆಪತ್ರಿಕೆ ಸೋರಿಕೆ ವಿಚಾರವಾಗಿ ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆ ಪಡೆದುಕೊಳ್ಳಲಾಗುವುದು ಎಂದು ಪಕ್ಷ ಹೇಳಿದೆ. ದೆಹಲಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸಂಸದ ಗೌರವ್ ಗೊಗೊಯ್, ‘ಶಿಕ್ಷಣ ವ್ಯವಸ್ಥೆಯಲ್ಲಿ ಬಹುದೊಡ್ಡ ಸಾಂಸ್ಥಿಕವಾಗಿರುವ ವೈಫಲ್ಯ’ ಇದೆ ಎನ್ನುವುದಕ್ಕೆ ವಿವಿಧ ಪರೀಕ್ಷೆಗಳಲ್ಲಿ ಪದೇ ಪದೇ ಅಕ್ರಮಗಳು ನಡೆಯುತ್ತಿರುವುದೇ ಸಾಕ್ಷಿ. ಪ್ರಶ್ನೆಪತ್ರಿಕೆ ಸೋರಿಕೆ ಆಗುತ್ತಿರುವುದರ ಹಿಂದೆ ಯಾವುದೋ ಒಬ್ಬ ವ್ಯಕ್ತಿಯ ತಪ್ಪು ಇಲ್ಲ ಎನ್ನುವುದು ವಿದ್ಯಾರ್ಥಿಗಳಿಗೆ ಅರ್ಥವಾಗಿದೆ’ ಎಂದರು.

ಡಿಎಂಕೆ ನಾಯಕ ವೇಲು ಮೇಲೆ ಡಿವಿಎಸಿ ದಾಳಿ

ಚೆನ್ನೈ (ಪಿಟಿಐ): ಡಿಎಂಕೆಯ ಹಿರಿಯ ನಾಯಕ, ತಮಿಳುನಾಡಿನ ಮಾಜಿ ಸಚಿವ ಇ.ವಿ ವೇಲು ಅವರಿಗೆ ಸಂಬಂಧಿಸಿದ ಹಲವು ಸ್ಥಳಗಳಲ್ಲಿ ವಿಚಕ್ಷಣ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯ (ಡಿವಿಎಸಿ) ಗುರುವಾರ ಶೋಧ ಕಾರ್ಯಾಚರಣೆ ನಡೆಸಿದೆ.

ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕಾರ್ಯಾಚರಣೆ ನಡೆಸಲಾಗಿದೆ.

ಡಿಎಂಕೆ ಮುಖ್ಯಸ್ಥ ಎಂ.ಕೆ ಸ್ಟಾಲಿನ್ ಅವರು ಮುಖ್ಯಮಂತ್ರಿಯಾಗಿದ್ದ 2021–2026ರ ಅವಧಿಯಲ್ಲಿ ವೇಲು ಅವರು ಲೋಕೋಪಯೋಗಿ, ಹೆದ್ದಾರಿಗಳು ಮತ್ತು ಸಣ್ಣ ಬಂದರು ಖಾತೆ ಸಚಿವರಾಗಿದ್ದರು.

‘ತನಿಖೆಗೆ ವೇಲು ಅವರು ಸಂಪೂರ್ಣವಾಗಿ ಸಹಕರಿಸುತ್ತಿದ್ದಾರೆ. ನ್ಯಾಯಾಲಯದಲ್ಲಿ ಕಾನೂನಾತ್ಮಕವಾಗಿ ಹೋರಾಡುತ್ತಾರೆ. ಈ ಶೋಧ ಕಾರ್ಯಾಚರಣೆಯು ರಾಜಕೀಯ ಪ್ರೇರಿತವಾಗಿದೆ. ರಾಜಕೀಯ ದ್ವೇಷದಿಂದ ನಮ್ಮ ವಿರುದ್ಧ ದಾಖಲಿಸಿದ ಯಾವುದೇ ಭ್ರಷ್ಟಾಚಾರ ಪ್ರಕರಣದಲ್ಲೂ ಆರೋಪಗಳನ್ನು ಸಾಬೀತುಪಡಿಸಲು ಸಾಧ್ಯವಾಗಿಲ್ಲ’ ಎಂದು ಸ್ಟಾಲಿನ್ ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

ಮೂವರಿಗೆ ಪತ್ರಕರ್ತೆಯರ ಸಂಘದ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಪತ್ರಕರ್ತೆಯರ ಸಂಘ ನೀಡುವ 2025-2026ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ‘ಇಂಡಿಯನ್ ಎಕ್ಸ್‌ಪ್ರೆಸ್’ನ ನಿವೃತ್ತ ಸುದ್ದಿ ಸಂಪಾದಕಿ ಉತ್ತರಾಕುಮಾರಿ ಹಾಗೂ ‘ಸಂಯುಕ್ತ ಕರ್ನಾಟಕ’ ಹುಬ್ಬಳ್ಳಿ ಬ್ಯುರೊದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಉಪಸಂಪಾದಕಿ ತನುಜಾ ನಾಯಕ್ ಆಯ್ಕೆಯಾಗಿದ್ದಾರೆ.

ಪತ್ರಿಕೋದ್ಯಮ ಕ್ಷೇತ್ರದ ಹೊರತಾಗಿ ವಿಶಿಷ್ಟ ಸಾಧಕಿಯರಿಗೆ ನೀಡುವ ಪ್ರಶಸ್ತಿಗೆ ಮಹಿಳಾ ವಲಸೆ ಕಾರ್ಮಿಕರ ಹಕ್ಕು, ಸಂಘಟನೆಗಾಗಿ ದುಡಿಯುತ್ತಿರುವ ಇಂಡಿಯವರಾದ ಭುವನೇಶ್ವರಿ ಕಾಂಬಳೆ ಅವರನ್ನು ಆಯ್ಕೆ ಮಾಡಲಾಗಿದೆ. ಜುಲೈ ಎರಡನೇ ವಾರ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷೆ ಆರ್. ಪೂರ್ಣಿಮಾ ತಿಳಿಸಿದ್ದಾರೆ.

ಎಸ್‌ಐಆರ್: ಸಿ.ಎಂಗೆ ಪತ್ರ

ಬೆಂಗಳೂರು: ‘ದೇಶದ ಜನರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ರಾಜ್ಯದಲ್ಲಿ ನಡೆಯದಂತೆ ಕ್ರಮ ವಹಿಸಿ’ ಎಂದು ಲೇಖಕರು, ಕಲಾವಿದರು, ಸಾಮಾಜಿಕ ಕಾರ್ಯಕರ್ತರು ಸೇರಿ 50 ಜನರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

ಪತ್ರದ ಪ್ರತಿಯನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅವರ ಕಚೇರಿಗೂ ತಲುಪಿಸಿದ್ದಾರೆ.

‘ದೇಶದ ಬೇರೆ–ಬೇರೆ ರಾಜ್ಯಗಳಲ್ಲಿ ಎಸ್‌ಐಆರ್ ಮೂಲಕ 20 ಲಕ್ಷದಿಂದ 3 ಕೋಟಿಯವರೆಗೆ ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಕಾಗುಣಿತ ದೋಷದಂತಹ ಸಣ್ಣ ಕಾರಣಗಳನ್ನು ಮುಂದೊಡ್ಡಿ, ‘ತಾರ್ಕಿಕ ವ್ಯತ್ಯಾಸ’ ಎಂದು ಮತದಾನದ ಹಕ್ಕನ್ನು ನಿರಾಕರಿಸುವುದು ಪ್ರಜಪ್ರಭುತ್ವದ ಕಗ್ಗೊಲೆ. ಕರ್ನಾಟಕದಲ್ಲಿ ಅಂತಹ ಸ್ಥಿತಿ ಎದುರಾಗಬಾರದು’ ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

‘ಎಸ್‌ಐಆರ್ ನಡೆಯಬಾರದು. ಇಲ್ಲವೇ ಅರ್ಹ ಮತದಾರರು ಪಟ್ಟಿಯಿಂದ ಬಿಟ್ಟುಹೋಗದೇ ಇರುವ ಹಾಗೆ ಎಚ್ಚರವಹಿಸಬೇಕು. ಇದಕ್ಕಾಗಿ, ರಾಜ್ಯದಲ್ಲಿ ‘ತಾರ್ಕಿಕ ವ್ಯತ್ಯಾಸ’ ವರ್ಗೀಕರಣವನ್ನು ಕೈಬಿಡಬೇಕು. ಕರಡು ಪಟ್ಟಿ ಸಿದ್ಧವಾದ ನಂತರ ಗ್ರಾಮಸಭೆಗಳನ್ನು ನಡೆಸಿ, ಸಾರ್ವಜನಿಕರ ಪರಿಶೀಲನೆಯೊಂದಿಗೆ ಪಟ್ಟಿಯನ್ನು ಅಂತಿಮಗೊಳಿಸಬೇಕು. ಆಕ್ಷೇಪ ಮತ್ತು ದಾಖಲೆಗಳನ್ನು ಸಲ್ಲಿಸಲು ಆರು ತಿಂಗಳು ಕಾಲಾವಕಾಶ ನೀಡಬೇಕು. ಮತದಾರರ ಪಟ್ಟಿಯನ್ನು ‘ಮಷಿನ್ ರೀಡಬಲ್’ ಸ್ವರೂಪದಲ್ಲಿ ನೀಡಬೇಕು ಎಂದು ಭಾರತೀಯ ಚುನಾವಣಾ ಆಯೋಗವನ್ನು ಒತ್ತಾಯಿಸಬೇಕು’ ಎಂದು ಕೋರಿದ್ದಾರೆ.

ಓ.ಎಲ್.ನಾಗಭೂಷಣ ಸ್ವಾಮಿ, ಜ.ನಾ.ತೇಜಶ್ರೀ, ಚಂದರಶೇಖರ್ ತಾಳ್ಯ, ನಾ.ದಿವಾಕರ, ಕೆ.ಫಣಿರಾಜ್, ರಘುನಂದನ, ವಿವೇಕ ಶಾನಭಾಗ, ನಾಗೇಶ ಹೆಗಡೆ, ಎನ್.ಮನು ಚಕ್ರವರ್ತಿ, ಪಿಚ್ಚಳ್ಳಿ ಶ್ರೀನಿವಾಸ್, ಡಿ.ಎಸ್.ಚೌಗಲೆ ಸೇರಿ 50 ಮಂದಿಯ ಹೆಸರು ಪತ್ರದಲ್ಲಿದೆ.

ಆರ್‌ಎಸ್‌ಎಸ್‌ನ ಪ್ರಶ್ನಿಸಿದರೆ ಬಿಜೆಪಿ ಬುಸುಗುಡುವುದೇಕೆ?: ಪ್ರಿಯಾಂಕ್


ಪ್ರಿಯಾಂಕ್ ಪೋಸ್ಟ್ ಮಾಡಿರುವ ಪೋಸ್ಟರ್

ಬೆಂಗಳೂರು: ‘ಆರ್‌ಎಸ್‌ಎಸ್ ಬಗ್ಗೆ ಪ್ರಶ್ನೆ ಮಾಡಿದರೆ, ಬಿಜೆಪಿ ಏಕೆ ಬುಸುಗುಡುತ್ತದೆ’ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಸ್ವಾತಂತ್ರ್ಯ ಹೋರಾಟಕ್ಕೆ ಯಾವ ಕೊಡುಗೆಯನ್ನೂ ನೀಡದ ಸಂಘಟನೆಯು, ಇತರರಿಗೆ ದೇಶಭಕ್ತಿಯ ಪಾಠ ಮಾಡುವುದೇಕೆ?. ನಾಗ್ಪುರದಲ್ಲಿ ತ್ರಿವರ್ಣ ಧ್ವಜ ಹಾರಿಸಲು 52 ವರ್ಷ ಏಕೆ ಬೇಕಾಯಿತು ಎಂದು ಆರ್‌ಎಸ್‌ಎಸ್ ಅನ್ನು ಪ್ರಶ್ನಿಸಿದರೆ, ಬಿಜೆಪಿ ಬುಸುಗುಡುತ್ತದೆ’ ಎಂದಿದ್ದಾರೆ.

‘ಅವರು ಬಾಬಾಸಾಹೇಬರ ಸಂವಿಧಾನಕ್ಕೆ ನಿಷ್ಠರಾಗಿದ್ದಾರೋ ಅಥವಾ ತಾವೇ ಬರೆಯಬೇಕಿತ್ತು ಎಂದುಕೊಂಡಿದ್ದ ಸಂವಿಧಾನಕ್ಕೋ ಎಂದು ಹಾಗೂ ತಮ್ಮನ್ನು ನೋಂದಾಯಿಸಿಕೊಳ್ಳಲು ಮತ್ತು ತೆರಿಗೆ ಪಾವತಿಸಲು ಏಕೆ ನಿರಾಕರಿಸುತ್ತಾರೆ ಎಂದು ಆರ್‌ಎಸ್‌ಎಸ್ ಅನ್ನು ಪ್ರಶ್ನಿಸಿದರೆ, ಬಿಜೆಪಿ ಬುಸುಗುಡುತ್ತದೆ’ ಎಂದು ಅವರು ಕುಟುಕಿದ್ದಾರೆ.

‘ಬಿಜೆಪಿ ಎಂದಿಗೂ ಆರ್‌ಎಸ್‌ಎಸ್ ಜೊತೆಗಾರನಲ್ಲ. ಬದಲಿಗೆ ಆರ್‌ಎಸ್‌ಎಸ್‌ನ ಸಾಧನ ಅಷ್ಟೆ. ಬಿಜೆಪಿಯ ಪ್ರತಿ ಬುಸುಗುಡುವಿಕೆಯೂ ಅದರ ಬಾಲ ಯಾರ ಕೈಯಲ್ಲಿದೆ ಎಂಬುದನ್ನು ಖಚಿತಪಡಿಸುತ್ತದೆ’ ಎಂದಿದ್ದಾರೆ.

ಅಸ್ಸಾಂನಿಂದ ಸ್ಥಳಾಂತರ • ಅತ್ಯುತ್ತಮ ಚಿಕಿತ್ಸೆ, ಆರೈಕೆ ಫಲಪ್ರದ

ವಂತಾರ: ‘ಮನಿಕಿ’ಯ ನರಕಯಾತನೆಗೆ ಮುಕ್ತಿ

ಪ್ರಜಾವಾಣಿ ವಾರ್ತೆ


ಗುಜರಾತ್‌ನ ಜಾಮ್‌ನಗರದಲ್ಲಿರುವ ವಂತಾರದಲ್ಲಿ ಹೆಣ್ಣಾನೆ ‘ಮನಿಕಿ’ಗೆ ಚಿಕಿತ್ಸೆ ನೀಡಲಾಗುತ್ತಿದೆ

ಜಾಮ್‌ನಗರ: ‘ಮನಿಕಿ’ ಎಂಬ ಹೆಣ್ಣಾನೆಗೆ ಈಗ 48 ವರ್ಷ. ಎಡ ಮುಂಗಾಲಿನಲ್ಲಿನ ಗಾಯವು ವ್ರಣವಾಗಿದ್ದರಿಂದ ಆನೆಯು ನಡೆಯುವುದೇ ಕಷ್ಟವಾಗಿತ್ತು. ವಯೋಸಹಜ ಒಂದು ಕಣ್ಣಿನ ದೃಷ್ಟಿ ದೋಷ, ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವುದು ಸೇರಿದಂತೆ ಆರೋಗ್ಯಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳಿಂದ ಮನಿಕಿ ಯಾತನೆ ಮತ್ತಷ್ಟು ಹೆಚ್ಚಾಗಿತ್ತು.

ಅಸ್ಸಾಂನ ಹೆದ್ದಾರಿಯೊಂದರಲ್ಲಿ ಈ ಆನೆ ಕುಂಟುತ್ತಾ ಸಾಗುತ್ತಿದ್ದ ದೃಶ್ಯಗಳಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿತ್ತು. ‘ಮನಿಕಿ’ಯ ದುಃಸ್ಥಿತಿ ಜನರ ಮನ ಕಲಕಿತ್ತು. ಅದರ ಆರೈಕೆ ಹಾಗೂ ಚಿಕಿತ್ಸೆಗೆ ನಾಗರಿಕರು, ಪ್ರಾಣಿ ಪ್ರಿಯರು ಮೊರೆ ಇಟ್ಟರು. ಸಹಿ ಸಂಗ್ರಹದಂತಹ ಅಭಿಯಾನ ಕೈಗೊಂಡರು, ಮನವಿಪತ್ರಗಳನ್ನು ಸಹ ಸಲ್ಲಿಸಿದರು.

ಮತ್ತೊಂದೆಡೆ, ‘ಮನಿಕಿ’ಯ ಮಾಲೀಕರಾದ ರುಚಿ ಚೇತಿಯಾ ಅವರು ಸುಪ್ರೀಂ ಕೋರ್ಟ್ ನೇಮಿಸಿರುವ ವನ್ಯಜೀವಿಗಳ ರಕ್ಷಣೆ ಮತ್ತು ಆರೈಕೆ ಸಮಿತಿಗೆ ಪತ್ರ ಬರೆದು, ಈ ಆನೆಗೆ ಹೆಚ್ಚಿನ ಚಿಕಿತ್ಸೆ ಹಾಗೂ ಸುದೀರ್ಘ ಆರೈಕೆಯ ಅಗತ್ಯತೆಯನ್ನು ಮನವರಿಕೆ ಮಾಡಿಕೊಟ್ಟರು. ಅತ್ಯುತ್ತಮ ಚಿಕಿತ್ಸೆ ಹಾಗೂ ಆರೈಕೆ ದೃಷ್ಟಿಯಿಂದ ಆನೆಯನ್ನು ‘ವಂತಾರ’ಕ್ಕೆ ಸ್ಥಳಾಂತರಿಸುವಂತೆಯೂ ಕೋರಿದರು.

ಅವರ ಮನವಿ, ಪ್ರಯತ್ನಗಳು ಫಲ ನೀಡಿದರು. ಸಮಿತಿಯು ಅಸ್ಸಾಂ ಮತ್ತು ಗುಜರಾತ್ ಸರ್ಕಾರಗಳಿಂದ ಅಗತ್ಯ ಅನುಮತಿಗಳನ್ನು ಪಡೆದು, ಆನೆಯನ್ನು ‘ವಂತಾರ’ದ ಮಡಿಲಿಗೆ ಸೇರಿಸಿದೆ. ಜಾಮ್‌ನಗರದಲ್ಲಿರುವ ‘ವಂತಾರ’ದಲ್ಲಿ ಅತ್ಯಾಧುನಿಕ ಸೌಲಭ್ಯಗಳಿರುವ ಆಸ್ಪತ್ರೆಯಲ್ಲಿ ‘ಮನಿಕಿ’ಗೆ ಚಿಕಿತ್ಸೆ ನೀಡಲಾಗುತ್ತಿದೆ. ಅದರ ಯೋಗಕ್ಷೇಮಕ್ಕೆ ಅಗತ್ಯವಿರುವಂತೆ ಶಾಶ್ವತವಾದ ಆಶ್ರಯ ತಾಣವನ್ನು ಸಹ ಅಲ್ಲಿ ಅಭಿವೃದ್ಧಿಪಡಿಸಲಾಗಿದೆ.

‘ಮನಿಕಿ’ಯ ನೋವಿನ ನಡಿಗೆಯ ದಿನಗಳು ಮುಗಿದಿವೆ. ವಂತಾರದಲ್ಲಿ ಅವಳು ಗುಣಮುಖಳಾಗುತ್ತಿದ್ದಾಳೆ. ಅವಳ ಜೀವನದ ಹೊಸ ಅಧ್ಯಾಯ ಆರಂಭವಾಗಿದೆ.

‘ಮನಿಕಿ’ಗೆ ಔಷಧೋಪಚಾರ

‘ಮನಿಕಿ’ಗೆ ಅಕ್ಯುಪಂಕ್ಚರ್, ಹೈಡ್ರೊಥೆರಪಿ ಸೇರಿದಂತೆ ಅಗತ್ಯವಿರುವ ಎಲ್ಲ ಬಗೆಯ ಔಷಧೋಪಚಾರ ನೀಡಲಾಗುತ್ತಿದೆ. ಆರೈಕೆ ಜೊತೆಗೆ ಪೌಷ್ಟಿಕ ಆಹಾರವನ್ನೂ ಒದಗಿಸಲಾಗುತ್ತಿದೆ. ಸರಿಯಾದ ಸಮಯದಲ್ಲಿ ಆನೆಯನ್ನು ಇಲ್ಲಿಗೆ ಸ್ಥಳಾಂತರಿಸಿರುವ ರುಚಿ ಚೇತಿಯಾ ಹಾಗೂ ಇತರರಿಗೆ ನಾವು ಕೃತಜ್ಞರಾಗಿದ್ದೇವೆ ಎಂದು ವಂತಾರ ವಕ್ತಾರರು ತಿಳಿಸಿದ್ದಾರೆ.

ಅಪ್ರಾಪ್ತ ವಯಸ್ಸಿನ ಬಾಲಕನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಪ್ರಕರಣ

ವಚನಾನಂದ ಶ್ರೀ ನಿರೀಕ್ಷಣಾ ಜಾಮೀನು ರದ್ದು

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿಗಳು

ಬೆಂಗಳೂರು: ಅಪ್ರಾಪ್ತ ವಯಸ್ಸಿನ ಬಾಲಕನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಪ್ರಕರಣದಲ್ಲಿ, ದೂರು ದಾಖಲಾಗುವ ಮುನ್ನವೇ ಪಂಚಮಸಾಲಿ ಹರಿಹರ ಪೀಠದ ವಚನಾನಂದ ಸ್ವಾಮೀಜಿ ಪಡೆದಿದ್ದ ನಿರೀಕ್ಷಣಾ ಜಾಮೀನನ್ನು ಹೈಕೋರ್ಟ್ ರದ್ದುಪಡಿಸಿದೆ.

‘ಸ್ವಾಮೀಜಿಗೆ ನೀಡಲಾಗಿರುವ ನಿರೀಕ್ಷಣಾ ಜಾಮೀನು ರದ್ದುಪಡಿಸಬೇಕು’ ಎಂದು ಕೋರಿ ಸಂತ್ರಸ್ತ ಬಾಲಕನೊಬ್ಬನ ತಾಯಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ಅಧೀನ ನ್ಯಾಯಾಲಯ ನೀಡಿರುವ ನಿರೀಕ್ಷಣಾ ಜಾಮೀನಿನ ಆದೇಶದಲ್ಲಿರುವ ಅಂಶಗಳ ಬಗ್ಗೆ ಮತ್ತೊಮ್ಮೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ‘ಮೂರು ವಾರಗಳ ಒಳಗಾಗಿ ಅಧೀನ ನ್ಯಾಯಾಲಯದಲ್ಲಿ ನಿಯಮಿತ (ರೆಗ್ಯುಲರ್) ಜಾಮೀನು ಪಡೆಯಲು ಅರ್ಜಿದಾರರಿಗೆ ಸ್ವಾತಂತ್ರ್ಯ ಕಲ್ಪಿಸಲಾಗಿದೆ. ಅಲ್ಲಿಯವರೆಗೂ ಬಂಧನದಿಂದ ರಕ್ಷಣೆ ಮುಂದುವರಿಯಲಿದೆ’ ಎಂದು ತಿಳಿಸಿ ಅರ್ಜಿ ವಿಲೇವಾರಿ ಮಾಡಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ದೂರು ದಾಖಲಾದ ಮೇಲೆ ಸ್ವಾಮೀಜಿಯಿಂದ ಬೆದರಿಕೆ ಬಂದಿದೆ ಮತ್ತು ಈ ಕುರಿತಂತೆ ಎಫ್‌ಐಆರ್ ದಾಖಲಾಗಿದೆ’ ಎಂಬ ಅಂಶವನ್ನು ಪುನರುಚ್ಚರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ‘ಯಾಕೆ ಬೆದರಿಕೆ ಹಾಕಿದ್ದೀರಿ? ಸಕ್ಷಮ ನ್ಯಾಯಾಲಯದಿಂದ ಜಾಮೀನು ಪಡೆಯುವತನಕ ವಚನಾನಂದ ಈ ಸಂಬಂಧ ಯಾವ ಮಾತನ್ನೂ ಆಡಕೂಡದು’ ಎಂದು ಸ್ವಾಮೀಜಿ ಪರ ವಕೀಲರಿಗೆ ಖಡಕ್ ತಾಕೀತು ಮಾಡಿತು.

11.	Reported Net Profit after Tax (PAT) for the year ended March 31, 2025	6.39
12.	Adjusted (notional) Net Profit after Tax (PAT) for the year ended March 31, 2025 after considering the divergence in provisioning	6.39

* March 31, 2025 is the close of the reference period in respect of which divergences were assessed

Compromise settlement during 2025-26 (Rs in Crores)

Particulars	No of A/cs	Balance Out standing including interest & others	Settlement Advisory committee settlement amount	Amount recovered	Sacrifice Amount
Secured	01	0.34	0.16	0.16	0.18
Unsecured	8	0.16	0.06	0.06	0.10
TOTAL	9	0.50	0.22	0.22	0.28

f) ***Fraud accounts :*** Banks shall make disclose details on the number and amount of frauds as well as the provisioning thereon as per template given below.

	Current year	Previous year
Number of frauds reported	-	-
Amount involved in fraud (₹ crore)	-	-
Amount of provision made for such frauds (₹ crore)	-	-
Amount of Unamortised provision debited from 'other reserves' as at the end of the year. (₹ crore)	-	-

g) Disclosure under Resolution Framework for COVID-19-related Stress

Format for disclosures to be made half yearly starting March 31, 2023

Type of borrower	Exposure to accounts classified as Standard consequent to implementation of resolution plan – position as at the end of the previous year (A)	Of (A), aggregate debt that slipped into NPA during the year	Of (A) Amount paid by the borrowers during the year	Exposure accounts classified as Standard consequent implementation of resolution plan – Position as at the end of this year
Personal Loans	-	-	-	-
Corporate persons*	-	-	-	-
Of which MSMEs	-	-	-	-
Others	-	-	-	-
Total	-	-	-	-

*As defined in section 3(7) of the Insolvency and Bankruptcy Code, 2016

5. Exposures : a) ***Exposure to real estate sector*** **(Amount in ₹ crore)**

	Current year	Previous Year
i) Direct exposure		
a) Residential Mortgages –		
Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	111.00	107.17
b) Commercial Real Estate –		
Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.). Exposure would also include non-fund based (NFB) limits;	-	-
c) Investments in Mortgage-Backed Securities (MBS) and other securitized exposures –	-	-
i. Residential	-	-
ii. Commercial Real Estate	-	-
ii) Indirect Exposure		
Fund based and non-fund-based exposures on National Housing Bank and Housing Finance Companies.	Nil	Nil
Total Exposure to Real Estate Sector	**111.00**	**107.17**

b) **Exposure to Capital Market** : Bank has no Exposure to Capital Market

c) **Risk Category wise Country Exposure** : Bank has no Exposure to Country Risk

d) Unsecured advances (Amounts in ₹ crore)

Particulars	Current year	Previous Year
Total unsecured advances of the bank	20.55	15.81
Out of the above, amount of advances for which intangible securities such as charge over the rights, licenses, authority, etc. have been taken	Nil	Nil
Estimated value of such intangible securities	Nil	Nil

e) **Exposure to Related Parties** **(Amount in ₹ crore)**

Sl.No.	Particulars	Previous Year	Current Year
	A. Loans to Related Parties		
1	Aggregate value of loans sanctioned to related parties during the year	-	-
2	Aggregate value of outstanding loans to related parties as on 31st March	-	-
3	Aggregate value of outstanding loans to related parties as a portion of total credit exposure as on 31st March (in %)	-	-
4	Aggregate value of outstanding loans to related parties which are categorized as:	-	-
	i) Special Mention Accounts as on 31st March	-	-
	ii) Non-Performing Assets as on 31st March	-	-
5	Amount of provisions held in respect of loans to related parties as on 31st March	-	-
	B. Contracts and Arrangements involving Related Parties		
6	Aggregate value of contracts and arrangements awarded to related parties during the year	-	-
7	Aggregate value of outstanding contracts and arrangements involving related parties as on 31st March	-	-

6. Concentration of deposits, advances, exposures and NPAs: a) Concentration of deposits **(Amounts in ₹ crore)**

Particulars	Current year	Previous Year
Total deposits of the twenty largest depositors	47.81	40.28
Percentage of deposits of twenty largest depositors to total deposits of the bank	6.79	6.45

b) Concentration of advances. (Amounts in ₹ crore)

Particulars	Current year	Previous Year
Total advances to the twenty largest borrowers	50.01	46.84
Percentage of advances to twenty largest borrowers to total advances of the bank	11.08%	11.85%

*Advances shall be computed based on credit exposure i.e. funded and non-funded limits including derivative exposures where applicable. The sanctioned limits or outstanding, whichever are higher, shall be reckoned. However, in the case of fully drawn term loans, where there is no scope for re-drawl of any portion of the sanctioned limit, banks may reckon the outstanding as the credit exposure.

c) Concentration of NPAs **(Amounts in ₹ crore)**

Particulars	Current year	Previous Year
Total exposure to The top twenty NPA accounts	6.74	6.49
Percentage of exposures to the twenty largest NPA exposures to total Gross NPAs.	47.00%	44.03%

7. Derivatives: Bank has not entered into any transactions in derivatives in the current and previous years.

8. Transfers to Depositor Education and Awareness Fund (DEA Fund) **(Amounts in ₹ crore)**

Particulars	Current year	Previous Year
Opening Balance of amounts transferred to DEAF	4.89	3.79
Add: Amounts transferred to DEAF during the year	0.86	1.18
Less: Amounts reimbursed by DEAF towards claims	0.01	0.08
Closing Balance of amounts transferred to DEAF	5.74	4.89

9. Disclosure of complaints: ***a) Summary information on complaints received by the bank from customers and from the Offices of Banking Ombudsman (OBOs)***

Sl No		Particulars	Current year	Previous Year
		Complaints received by the bank from its customers	-	-
1		Number of complaints pending at beginning of the year	-	-
2		Number of complaints received during the year	-	-
3		Number of complaints disposed during the year	-	-
	3.1	Of which, number of complaints rejected by the bank	-	-
4		Number of complaints pending at the end of the year	-	-
	Maintainable complaints received by the bank from OBOs			
5		Number of maintainable complaints received by the bank from OBOs	-	-
	5.1	Of 5, number of complaints resolved in favour of the bank by BOs	-	-
	5.2	Of 5, number of complaints resolved through conciliation/mediation/advisories issued by BOs	-	-
	5.3	Of 5, number of complaints resolved after passing of Awards by BOs against the bank	-	-
6		Number of Awards unimplemented within the stipulated time (other than those appealed)	-	-
Note: Maintainable complaints refer to complaints on the grounds specifically mentioned in BO Scheme 2006 and covered within the ambit of the Scheme.				

b) Top five grounds* of complaints received by the bank from customers

Grounds of complaints, (i.e. complaints relating to)	Number of complaints pending at the beginning of the year	Number of complaints received during the year	% increase/ decrease in the number of complaints received over the previous year	Number of complaints pending at the end of the year	Of 5, number of complaints pending beyond 30 days
1	2	3	4	5	6
	Current Year				
Ground - 1					
Ground – 2					
Ground – 3			**NIL**		
Ground – 4					
Ground - 5					
Others					
	Previous Year				
Ground - 1					
Ground – 2					
Ground – 3					
Ground – 4			**NIL**		
Ground - 5					
Others					
Total					

*As per Master List for identifying grounds of complaints as provided in Appendix 1 to circular CEPD.CO.PRD.Cir.No.01/13.01.013/2020-21 dated January 27, 2021 on *'Strengthening the Grievance Redress Mechanism of Banks'*.

ಬಿಡದಿಗೆ ನಾಳೆ ಬನ್ನಿ ಸಿ.ಎಂ: ಎಚ್‌ಡಿಕೆ

ಟೌನ್‌ಶಿಪ್ ಜಟಾಪಟಿ: ಮುಖ್ಯಮಂತ್ರಿಗೆ ಕೇಂದ್ರ ಸಚಿವರಿಂದ ಮತ್ತೊಂದು ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ಚರ್ಚಿಸಲು ಇದೇ 27ರಂದು ಬಿಡದಿಯ ಬೈರಮಂಗಲಕ್ಕೆ ಬನ್ನಿ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

'ಶಿವಕುಮಾರ್ ಅವರೇ, ಇದೇ 22ರಂದು ತಾವು ನನಗೆ ಬರೆದಿರುವ ಪತ್ರ ಮತ್ತು ನಾನು ಅದೇ ದಿನ ಉತ್ತರವಾಗಿ ನಿಮಗೆ ಬರೆದಿರುವ ಪತ್ರದ ಕಡೆ ತಮ್ಮ ಗಮನ ಸೆಳೆಯ ಬಯಸುತ್ತೇನೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

'ಬಿಡದಿಯಲ್ಲಿ ನಿರ್ಮಿಸಲಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯಿಂದ ಬಾಧಿತರಾಗುವ ರೈತರು, ಕೃಷಿ ಕಾರ್ಮಿಕರು, ಹೈನುಗಾರಿಕೆಯಲ್ಲಿ ತೊಡಗಿರುವ ರೈತ ಮಹಿಳೆಯರು, ಸಣ್ಣ ಉದ್ಯಮಿಗಳು ಹಾಗೂ ಗ್ರಾಮಸ್ಥರ ಅಹವಾಲನ್ನು ಮತ್ತು ಕುಂದು ಕೊರತೆಗಳನ್ನು ಕೇಳಲು ಇದೇ 27ರಂದು ನಾನು ಬೈರಮಂಗಲ ಗ್ರಾಮಕ್ಕೆ ಭೇಟಿ ನೀಡಲಿದ್ದೇನೆ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ತಾವೂ ಸಹ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಬೈರಮಂಗಲಕ್ಕೆ ಭೇಟಿ ನೀಡಿದರೆ, ನಾವಿಬ್ಬರೂ ಖುದ್ದಾಗಿ ಬಾಧಿತ ಜನರ ಸಂಕಷ್ಟಗಳನ್ನು ಕೇಳಿಸಿಕೊಳ್ಳಬಹುದು. ಜತೆಗೆ ಸ್ಥಳದಲ್ಲಿಯೇ ಪರ್ಯಾಯ ಮಾರ್ಗಗಳನ್ನು ಪರಿಶೀಲಿಸಬಹುದು ಎಂಬುದು ನನ್ನ ನಂಬಿಕೆ' ಎಂದಿದ್ದಾರೆ.

ಕುಮಾರಸ್ವಾಮಿ ಅವರು ತಮ್ಮ ಆಪ್ತ ಸಿಬ್ಬಂದಿ ಮೂಲಕ ಪತ್ರವನ್ನು ಮುಖ್ಯಮಂತ್ರಿ ಅವರ ಕಚೇರಿಗೆ ತಲುಪಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಪತ್ರದ ಜತೆಯಲ್ಲಿ ಅವರು, 27ರ ಶನಿವಾರದ ತಮ್ಮ ಪ್ರವಾಸದ ವೇಳಾಪಟ್ಟಿಯನ್ನೂ ಲಗತ್ತಿಸಿದ್ದಾರೆ. ಚರ್ಚೆಗೆ ಬನ್ನಿ ಎಂದು ಶಿವಕುಮಾರ್ ಅವರಿಗೆ ಕುಮಾರಸ್ವಾಮಿ ಸವಾಲು ಹಾಕಿದ್ದರು. ಅದಾದ ಬೆನ್ನಲ್ಲೇ, ವಿಧಾನ ಸೌಧಕ್ಕೆ ಬನ್ನಿ ಎಂದು ಶಿವಕುಮಾರ್ ಮರು ಸವಾಲು ಎಸೆದು ಪತ್ರ ಬರೆದಿದ್ದರು. ಅದೇ ದಿನ ಮಾರುತ್ತರ ಬರೆದಿದ್ದ ಕುಮಾರಸ್ವಾಮಿ, ರೈತರು, ಬಾಧಿತರ ಜತೆಗೆ ಚರ್ಚೆ ನಡೆಸಲು ಬಿಡದಿ ಅಥವಾ ಬೈರಮಂಗಲಕ್ಕೆ ಬನ್ನಿ ಎಂದು ಆಗ್ರಹಿಸಿದ್ದರು.

ರಾಹುಲ್ ಗಾಂಧಿ ಮನೆಗೆ ಪೋಸ್ಟರ್: ಜೆಡಿಎಸ್ ಎಚ್ಚರಿಕೆ

ನವದೆಹಲಿ: 'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಕುಟುಂಬದ ವಿರುದ್ಧ ಹಸಿಸುಳ್ಳಿನ ಪೋಸ್ಟರ್ ಅಭಿಯಾನ ಮುಂದುವರಿಸಿದರೆ ರಾಹುಲ್ ಗಾಂಧಿ ಮನೆ ಮತ್ತು ಕಾಂಗ್ರೆಸ್ ಪಕ್ಷದ ಕಚೇರಿ ಮುಂದೆ ನಾವು ಪೋಸ್ಟರ್‌ಗಳನ್ನು ಅಂಟಿಸುತ್ತೇವೆ ಎಂದು ಜೆಡಿಎಸ್‌ನ ಗ್ರೇಟರ್ ಬೆಂಗಳೂರು ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ ಎಚ್ಚರಿಕೆ ನೀಡಿದರು.

ನವದೆಹಲಿಯಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಗೋಡೆಗಳ ಮೇಲೆ ಪೋಸ್ಟರ್‌ಗಳನ್ನು ಅಂಟಿಸುವುದು ಕಾಂಗ್ರೆಸ್‌ನ ನೀಚ ಸಂಸ್ಕೃತಿ ಮತ್ತು ನೈತಿಕ ಅಧಃಪತನವನ್ನು ತೋರಿಸುತ್ತದೆ. ನಮ್ಮ ಪಕ್ಷದ ಕಾರ್ಯಕರ್ತರು ಈ ಬಗ್ಗೆ ಆಕ್ರೋಶಗೊಂಡಿದ್ದಾರೆ. ರಾಜ್ಯ ಕಾಂಗ್ರೆಸ್ ನಾಯಕರ ಭ್ರಷ್ಟಾಚಾರ ಮತ್ತು ಇನ್ನಿತರೆ ಅಕ್ರಮಗಳ ಬಗ್ಗೆ ನವದೆಹಲಿಯಲ್ಲಿ ಪೋಸ್ಟರ್‌ಗಳನ್ನು ಮಾಡಿ ಅಂಟಿಸುತ್ತೇವೆ ಎಂದು ಬಂದಿದ್ದರು. ಅವರೆಲ್ಲರನ್ನೂ ಕುಮಾರಸ್ವಾಮಿ ಸಮಾಧಾನ ಮಾಡಿ ವಾಪಸ್ ಕಳಿಸಿದ್ದಾರೆ' ಎಂದರು.

'ನಾವು ಬಿಡದಿ ರೈತರ ಪರ ಹೋರಾಟ ಮಾಡುತ್ತಿದ್ದೇವೆ. ಆದರೆ, ಕಾಂಗ್ರೆಸ್ ಪಕ್ಷವು ಕುಮಾರಸ್ವಾಮಿ ಕುಟುಂಬದ ವೈಯಕ್ತಿಕ ತೇಜೋವಧೆ ಮಾಡುವ ಮೂಲಕ ರೈತರ ಹೋರಾಟದ ದಿಕ್ಕು ತಪ್ಪಿಸಲು ಸಂಚು ರೂಪಿಸಿದೆ. ಆದರೆ, ರೈತರ ಸಮಾಧಿ ಮೇಲೆ ಬಿಡದಿ ಉಪನಗರ ಯೋಜನೆ ಮಾಡಲು ಮುಖ್ಯಮಂತ್ರಿ ಹೊರಟಿದ್ದು, ಇದು ಅವರ ರಾಜಕೀಯ ಬದುಕಿಗೆ ಪೆಟ್ಟು ನೀಡಲಿದೆ. ಹೀಗಾಗಿ ಕೂಡಲೇ ಈ ಯೋಜನೆಯನ್ನು ಕೈಬಿಡಬೇಕು ಎಂದು ಅವರು ಒತ್ತಾಯಿಸಿದರು.

ಪೂರ್ವಭಾವಿ ಸಭೆಯಲ್ಲಿ ಸರ್ಕಾರದ ವಿರುದ್ಧ ಪದಾಧಿಕಾರಿಗಳು ಪೊರಕೆ ಪ್ರದರ್ಶನ ಮಾಡಿದರು

ಸರ್ಕಾರದ ವಿರುದ್ಧ ಪೊರಕೆ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಜ್ಯ ಸರ್ಕಾರ ಬಿಡದಿ ಟೌನ್ ಶಿಪ್ ಯೋಜನೆಯ ಮೂಲಕ ರೈತರ ಭೂಮಿ ಕಬಳಿಸಲು ಮುಂದಾದರೆ ಹತ್ತು ಸಾವಿರ ಪೊರಕೆ ಹಾಗೂ ಒನಕೆ ಹಿಡಿದು ಪ್ರತಿಭಟನೆ ನಡೆಸಲಾಗುವುದು' ಎಂದು ಕರ್ನಾಟಕ ರಕ್ಷಣಾ ವೇದಿಕೆ ಸಿಂಹ ಸೈನ್ಯ ರಾಜ್ಯ ಘಟಕದ ಅಧ್ಯಕ್ಷ ಜಿ.ಎನ್. ಶ್ರೀನಿವಾಸ್ ಗೌಡ ಹೇಳಿದರು.

ಸಮೀಪದ ಹೊರಮಾವುನಲ್ಲಿ ಹಮ್ಮಿಕೊಂಡಿದ್ದ ಬಿಡದಿ ಟೌನ್ ಶಿಪ್ ಹೋರಾಟದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, 'ನಮ್ಮ ಭೂಮಿ –ನಮ್ಮ ಹಕ್ಕು, ನಮ್ಮ ಭೂಮಿ ನಮ್ಮ ಮಕ್ಕಳಿಗೆ ಸೇರಬೇಕು' ಎಂದು ಪ್ರತಿಪಾದಿಸಿದರು. ಇದೇ ಸಂದರ್ಭದಲ್ಲಿ ಮುಖಂಡರೆಲ್ಲರೂ ಪೊರಕೆ ಪ್ರದರ್ಶನವನ್ನು ಮಾಡಿದರು.

ಮಹಿಳಾ ಘಟಕದ ಅಧ್ಯಕ್ಷೆ ಸ್ನೇಹಾ ಕುಮಾರ್, ರೈತ ಘಟಕದ ಅಧ್ಯಕ್ಷ ನರೇಂದ್ರರೆಡ್ಡಿ, ಬಿ.ವಿ.ಹರೀಶ್, ಪಿ.ಟಿ. ಶ್ರೀನಿವಾಸ್, ನಡುವತ್ತಿ ಶ್ರೀನಿವಾಸ್, ಎಂ.ಕೃಷ್ಣಮೂರ್ತಿ ಇದ್ದರು.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಭೂಮಿ ಕೊಡಲು ಒಪ್ಪಿಗೆ

10 ರೈತರಿಗೆ ₹19.69 ಕೋಟಿ ಪರಿಹಾರ ವಿತರಣೆ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ತಲೆ ಎತ್ತಲಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆಗೆ ಭೂಮಿ ಕೊಡಲು ಒಪ್ಪಿರುವ ಯೋಜನಾ ಪ್ರದೇಶದ ವಡೇರಹಳ್ಳಿ ಮತ್ತು ಕೆಂಪಯ್ಯನಪಾಳ್ಯದ 10 ಭೂಮಾಲೀಕರಿಗೆ ನಗರದ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಡಿಎ) ಕಚೇರಿಯಲ್ಲಿ ಗುರುವಾರ ₹19.69 ಕೋಟಿ ಪರಿಹಾರದ ಚೆಕ್ ವಿತರಿಸಲಾಯಿತು.

ಚೆಕ್ ವಿತರಿಸಿ ಮಾತನಾಡಿದ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್.ನಟರಾಜು ಗಾಣಕಲ್ಲು, 'ಯೋಜನೆಗೆ ಭೂಮಿ ಕೊಡಲು ಒಪ್ಪಿದವರಿಗೆ ಪರಿಹಾರ ವಿತರಣೆಗೆ ಶಾಸಕ ಎಚ್.ಸಿ.ಬಾಲಕೃಷ್ಣ ಜೂನ್ 19ರಂದು ಚಾಲನೆ ನೀಡಿದ್ದರು. ಜೂನ್ 24ರವರೆಗೆ 17 ಭೂ ಮಾಲೀಕರಿಗೆ ₹13.01 ಕೋಟಿ ಪರಿಹಾರ ವಿತರಿಸಲಾಗಿತ್ತು' ಎಂದರು.

'ಮುಂದುವರಿದ ಭಾಗವಾಗಿ ವಡೇರಹಳ್ಳಿ 3 ಹಾಗೂ ಕೆಂಪಯ್ಯನಪಾಳ್ಯ 7 ಮಂದಿಗೆ ಪರಿಹಾರದ ಚೆಕ್ ವಿತರಿಸಲಾಗಿದೆ. ರೈತರಿಗೆ ವಿತರಿಸಿರುವ ಪರಿಹಾರದಲ್ಲಿ ಭೂ ಪರಿಹಾರ, ಮರಮಾಲ್ಕಿ ಪರಿಹಾರ ಹಾಗೂ ಪ್ರತಿ ಭೂ ಮಾಲೀಕನಿಗೆ ಜೀವನಾಂಶಕ್ಕಾಗಿ ₹5 ಲಕ್ಷ ಇಡುಗಂಟು ಸೇರಿದೆ. ಈ ಪೈಕಿ ಕೆಂಪಯ್ಯನಪಾಳ್ಯದ ಶುಭ ಎಂಬುವರು ಗರಿಷ್ಠ ₹10.72 ಕೋಟಿ ಪರಿಹಾರ ಪಡೆದಿದ್ದಾರೆ' ಎಂದು ಹೇಳಿದರು.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರಕ್ಕೆ ಭೂಮಿ ಕೊಡಲು ಒಪ್ಪಿದ 10 ಭೂ ಮಾಲೀಕರಿಗೆ ರಾಮನಗರದಲ್ಲಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಗುರುವಾರ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್. ನಟರಾಜು ಗಾಣಕಲ್ಲು ಅವರು ಪರಿಹಾರದ ಚೆಕ್ ವಿತರಿಸಿದರು. ನಿರ್ದೇಶಕಿ ಕಲ್ಯಾಣಕುಮಾರಿ ಇದ್ದರು

ಟೌನ್‌ಶಿಪ್ ಪರವಾಗಿರುವ ರೈತರು ಬೈರಮಂಗಲದಲ್ಲಿ ಗುರುವಾರ ರಾತ್ರಿ ಸಾಂಕೇತಿಕವಾಗಿ ಧರಣಿ ನಡೆಸಿದರು

ಬೈರಮಂಗಲ: ಟೌನ್‌ಶಿಪ್ ಪರ ಧರಣಿ

ಟೌನ್‌ಶಿಪ್ ಪರವಾಗಿರುವ ರೈತರು ಬೈರಮಂಗಲದಲ್ಲಿ ಗುರುವಾರ ರಾತ್ರಿ ಸಾಂಕೇತಿಕವಾಗಿ ಧರಣಿ ನಡೆಸಿದರು. ಟೌನ್‌ಶಿಪ್ ವಿರೋಧಿಸಿ ರೈತರು ನಡೆಯುತ್ತಿರುವ ಧರಣಿ ಸ್ಥಳಕ್ಕಿಂತ 100 ಮೀಟರ್ ಮುಂಚೆ ಸಿಗಲಿರುವ ವೃಷಭಾವತಿ ಶಾಲೆ ಎದುರಿನ ಜಾಗದಲ್ಲಿ ಸಂಜೆ 7.30ರ ಸುಮಾರಿಗೆ ಯೋಜನೆ ಪರವಾಗಿರುವ ಗುಂಪು ಜಮಾಯಿಸಿತು. 'ಬೇಕೇ ಬೇಕು ಟೌನ್‌ಶಿಪ್ ಬೇಕು' ಎಂದು ಘೋಷಣೆ ಕೂಗಿ ಕೆಲ ಹೊತ್ತು ಸ್ಥಳದಲ್ಲಿ ಕುಳಿತುಕೊಂಡಿತು.

'ಯೋಜನೆಗೆ ಶೇ 80ರಷ್ಟು ರೈತರ ಒಪ್ಪಿಗೆ ಇದ್ದರೂ, ಬಹುತೇಕರು ವಿರೋಧಿಸುತ್ತಿದ್ದಾರೆ ಎಂದು ಜೆಡಿಎಸ್‌ನವರು ಅಪಪ್ರಚಾರ ಮಾಡುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹರಡುತ್ತಿದ್ದಾರೆ. ಹಾಗಾಗಿ, ಟೌನ್‌ಶಿಪ್ ಪರವಾಗಿರುವವರೆಲ್ಲರೂ ಬೈರಮಂಗಲದಲ್ಲೇ ಗುರುವಾರ ಸಾಂಕೇತಿಕ ಧರಣಿ ನಡೆಸಿದ್ದೇವೆ. ಶುಕ್ರವಾರ ಬೆಳಿಗ್ಗೆಯಿಂದ ನಾವು ಸಹ ಟೌನ್‌ಶಿಪ್‌ಗಾಗಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸುತ್ತೇವೆ. ಯೋಜನೆ ವಿಷಯದಲ್ಲಿ ವಿರೋಧ ಪಕ್ಷದವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದನ್ನು ಬಿಡಬೇಕು' ಎಂದು ಧರಣಿಯಲ್ಲಿದ್ದ ಹೊಸೂರು ರಾಜಣ್ಣ ಅವರು ತಿಳಿಸಿದರು.

ರಫೀಕ್ ಮಾಸ್ಟರ್, ಆಯಿಷಾ ಬಾನುಗೆ ಪ್ರಶಸ್ತಿ

ಆಯಿಷಾ ಬಾನು

ರಫೀಕ್ ಮಾಸ್ಟರ್

ಬೆಂಗಳೂರು: ನಗರದ ದಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಷನ್ ನೀಡುವ ಪ್ರತಿಷ್ಠಿತ 'ವರ್ಷದ ಬ್ಯಾರಿ' ಪ್ರಶಸ್ತಿಗೆ ಮಂಗಳೂರಿನ ರಫೀಕ್ ಮಾಸ್ಟರ್ ಮತ್ತು 'ವರ್ಷದ ಬ್ಯಾರ್ದಿ' ಪ್ರಶಸ್ತಿಗೆ ಕಾರ್ಕಳದ ಆಯಿಷಾ ಬಾನು ಆಯ್ಕೆಯಾಗಿದ್ದಾರೆ.

ರಫೀಕ್ ಮಾಸ್ಟರ್ ಅವರು ಶಿಕ್ಷಣ ತರಬೇತುದಾರ, ಭಾಷಣಕಾರರಾಗಿರಾಗಿದ್ದು, ಆಯಿಷಾ ಬಾನು ಅವರು ಕಾರ್ಕಳದಲ್ಲಿ ಸುರಕ್ಷಾ ಸೇವಾಶ್ರಮ ಸ್ಥಾಪಿಸಿ ನೂರಾರು ಅನಾಥ ವೃದ್ಧರಿಗೆ ನೆಲೆ ನೀಡಿದ್ದಾರೆ. ಇವರಿಗೆ ಬೆಂಗಳೂರಿನಲ್ಲಿ ಜೂನ್ 28ರಂದು ಪ್ರಶಸ್ತಿ ನೀಡಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷ ಶಂಸುದ್ದೀನ್ ಅಡೂರು ತಿಳಿಸಿದ್ದಾರೆ. ಪ್ರಶಸ್ತಿಯು ತಲಾ ₹50,000 ನಗದು ಮತ್ತು ಫಲಕವನ್ನು ಒಳಗೊಂಡಿದೆ. ಲೇಖಕಿ ಬಾನು ಮುಷ್ತಾಕ್, ಆರೋಗ್ಯ ಸಚಿವ ಯು.ಟಿ. ಖಾದರ್, ರಾಜ್ಯ ಪೊಲೀಸ್ ಮುಖ್ಯಸ್ಥ ಎಂ.ಎ.ಸಲೀಮ್ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಎಲ್.ಕೆ.ಅತೀಕ್ ಪ್ರಶಸ್ತಿ ನೀಡಲಿದ್ದಾರೆ ಎಂದು ಹೇಳಿದ್ದಾರೆ.

ಚಿತ್ರಾವಳಿ

ಬಹುಮಹಡಿ ವಸತಿ ಯೋಜನೆಯಲ್ಲಿ ಫಲಾನುಭವಿಗಳಿಗೆ ಆಗುತ್ತಿರುವ ಅನ್ಯಾಯ ಖಂಡಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಸದಸ್ಯರು, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

ವರ್ತೂರು ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಬಿದ್ದು ಮೃತಪಟ್ಟ ಇಬ್ಬರು ಕಾರ್ಮಿಕರ ಕುಟುಂಬಕ್ಕೆ ತಲಾ ₹ 50 ಲಕ್ಷ ಪರಿಹಾರಕ್ಕೆ ಆಗ್ರಹಿಸಿ ಕರ್ನಾಟಕ ಮಾಹಿತಿ ಹಕ್ಕು ಹೋರಾಟಗಾರರ ರಾಜ್ಯ ಸಮಿತಿ ಸದಸ್ಯರು, ಮೈಸೂರು ಬ್ಯಾಂಕ್ ವೃತ್ತ ಬಳಿಯ ಜಲಮಂಡಳಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು

ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ್ ಮಾಹಿತಿ

'ಅಮಾನತುಗೊಂಡವರಿಂದ ಆರೋಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಮೇಲೆ ಅವ್ಯವಹಾರದ ಆರೋಪ ಮಾಡುತ್ತಿರುವ ಕೋನಪ್ಪರೆಡ್ಡಿ ಅವರೇ ಅವ್ಯವಹಾರ ಮಾಡಿ ಅಮಾನತು ಆಗಿದ್ದರು ಎಂದು ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉಮಾಪತಿ ಶ್ರೀನಿವಾಸಗೌಡರೊಂದಿಗೆ ಸೇರಿ ಕೋನಪ್ಪ ರೆಡ್ಡಿ ಆರೋಪಗಳನ್ನು ಮಾಡಿದ್ದಾರೆ. ಆದರೆ, ಡೆಂಟಲ್ ಕಾಲೇಜಿನ ವೇತನ ಶ್ರೇಣಿ ಮತ್ತು ಅಕಾಡೆಮಿಕ್ ಗ್ರೇಡಿಂಗ್ ಪೇ (ಎಜಿಪಿ) ನಿಗದಿಪಡಿಸುವಾಗ ₹ 1.35 ಕೋಟಿ ಆರ್ಥಿಕ ನಷ್ಟ ಉಂಟಾಗಿದ್ದು, ಅದಕ್ಕೆ ಕಾರಣಕರ್ತರು ಕೋನಪ್ಪ ರೆಡ್ಡಿ ಎಂದು 2024ರ ಆ. 29ರಂದು ಅವರನ್ನು ಅಮಾನತು ಮಾಡಲಾಗಿತ್ತು. ಆಗ ಉಮಾಪತಿ ಶ್ರೀನಿವಾಸಗೌಡರು ಖಜಾಂಚಿ ಆಗಿದ್ದರು' ಎಂದು ವಿವರಿಸಿದರು.

'ಅದೇ ವಿಚಾರಕ್ಕೆ ಸಂಬಂಧಿಸಿದಂತೆ ಶಂಕರ್ ನಾರಾಯಣ್ ನೇತೃತ್ವದ ವೇತನ ತಾರತಮ್ಯ ಸಮಿತಿ ವರದಿಯಂತೆ 2017ರಿಂದ ನೀಡಬೇಕಾಗಿತ್ತು. ಅದನ್ನು ತಿದ್ದಿ 2012ರಿಂದ ಎಂದು ಮಾಡಿ ವೇತನ ಬಿಡುಗಡೆ ಮಾಡಿದ್ದರಿಂದ ₹ 5.06 ಕೋಟಿ ನಷ್ಟವಾಗಿರುವುದು ಕಂಡು ಬಂದಿದ್ದರಿಂದ ಎರಡನೇ ಬಾರಿ ಅವರನ್ನು ಅಮಾನತು ಮಾಡಲಾಗಿತ್ತು' ಎಂದರು.

ಕೋನಪ್ಪ ರೆಡ್ಡಿ ಅವರು ಸಾಮಾಜಿಕ ಜಾಲತಾಣಗಳಲ್ಲಿ , ಸಂಘದ ನಿರ್ದೇಶಕ ಗ್ರೂಪ್‌ಗಳಲ್ಲಿ ಸಂಘದ ಬಗ್ಗೆ ತಪ್ಪು ಮಾಹಿತಿ ಹಂಚಿಕೊಂಡಿರುವುದರಿಂದ ಈ ಬಗ್ಗೆ ವಿಚಾರಣೆ ಕಾಯ್ದಿರಿಸಿ ಪ್ರಾಥಮಿಕ ಸದಸ್ಯತ್ವದಿಂದಲೇ ಅಮಾನತು ಮಾಡಲಾಯಿತು ಎಂದು ಹೇಳಿದರು.

ಸಂಘದ ಕಾಮಗಾರಿಗಳಿಗೆ ಸಂಬಂಧಿಸಿ ದಂತೆ ನಕಲಿ ಬ್ಯಾಂಕ್ ಗ್ಯಾರಂಟಿ ನೀಡಿದವರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಕೋನಪ್ಪ ರೆಡ್ಡಿ ಆರೋಪಿಸಿದ್ದಾರೆ. ಆದರೆ, ಈ ಒಪ್ಪಂದವನ್ನು ಕೋನಪ್ಪ ರೆಡ್ಡಿ ಅವರೇ ಮಾಡಿದ್ದಲ್ಲದೇ ಸಹಿಯೂ ಹಾಕಿದ್ದಾರೆ ಎಂದು ದೂರಿದರು.

ಕಾಮಗಾರಿಗಳಿಗೆ ₹ 1.92 ಕೋಟಿ ಮುಂಗಡ ನೀಡಿರುವ ಬಗ್ಗೆ ಕೋನಪ್ಪ ರೆಡ್ಡಿ ಸಹಕಾರ ಇಲಾಖೆಗೆ ದೂರು ಸಲ್ಲಿಸಿದ್ದರು. ಅವರೇ ಪ್ರಧಾನ ಕಾರ್ಯದರ್ಶಿ ಆಗಿದ್ದಾಗ ಇದರ ಸಂಪೂರ್ಣ ಮಾಹಿತಿಯನ್ನು ಇಲಾಖೆಗೆ ನೀಡಿದ್ದರು. ಅದರ ಆಧಾರದಲ್ಲಿ ಸಿ.ಎನ್. ಬಾಲಕೃಷ್ಣ, ಸಿ.ದೇವರಾಜು, ಎಂ.ಎಸ್. ಉಮಾಪತಿಗೆ ಶಿಸ್ತುಕ್ರಮ ಜರುಗಿಸಲು ನೋಟಿಸ್ ನೀಡಲಾಗಿದ್ದು, ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಮುಂಗಡ ನೀಡಿರುವ ಬಗ್ಗೆ ಆರೋಪಿಸಿರುವ ಎಂ.ಎಸ್. ಉಮಾಪತಿ ಆಗ ಖಜಾಂಚಿಯಾಗಿದ್ದರು ಎಂದರು.

ನೇಮಕಾತಿಯಲ್ಲಿ ಅವ್ಯವಹಾರವಾಗಿದೆ ಎಂಬುದು ಅವರು ಮಾಡಿರುವ ಇನ್ನೊಂದು ಆರೋಪವಾಗಿದ್ದು, ನೇಮಕಾತಿ ಕೂಡ ಟಿ. ಕೋನಪ್ಪ ರೆಡ್ಡಿ ಪ್ರಧಾನ ಕಾರ್ಯದರ್ಶಿ ಆಗಿದ್ದ ಅವಧಿಯಲ್ಲೇ ನಡೆದಿದೆ. ಪ್ರತಿದಿನ ₹ 30 ಸಾವಿರ ವೆಚ್ಚದಲ್ಲಿ ಮಾಂಸದ ಊಟ ತರಿಸುತ್ತಾರೆ ಎಂಬ ಆರೋಪ ಮಾಡಿದ್ದಾರೆ. ಆದರೆ, ಊಟಕ್ಕೆ ದಿನಕ್ಕೆ ₹ 2,900 ಮಾತ್ರ ವೆಚ್ಚ ಮಾಡಲಾಗಿದೆ ಎಂದು ಸಮರ್ಥಿಸಿಕೊಂಡರು.

ಎಂ.ಎಸ್. ಉಮಾಪತಿ ಅವರು ಬೊಮ್ಮನಹಳ್ಳಿಯಲ್ಲಿ ಸಂಘಕ್ಕೆ ₹ 3 ಕೋಟಿ ಬೆಲೆ ಬಾಳುವ ಜಮೀನು ನೀಡಿರುವುದಾಗಿ ಹೇಳಿದ್ದಾರೆ. ಅವರು ಯಾವುದೇ ಜಮೀನು ನೀಡಿಲ್ಲ. ನೀಡಿದ್ದರೆ ಅದರ ದಾಖಲೆ ನೀಡಲಿ ಎಂದು ಆಗ್ರಹಿಸಿದರು.

ನೇಮಕಾತಿಯಲ್ಲಿ ಹಣ ತೆಗೆದುಕೊಂಡಿರುವ ಆರೋಪ ಮಾಡಿದವರು ಬರಲಿ ಎಲ್ಲಿ ಬೇಕಾದರೂ ಆಣೆ ಪ್ರಮಾಣ ಮಾಡುವುದಾಗಿ ಘೋಷಿಸಿದರು.

ನಗರದಲ್ಲಿ ಇಂದು

ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ: ಅತಿಥಿಗಳು: ಗೌರವ್ ಗುಪ್ತ, ರಾಮ್ ಪ್ರಸಾತ್ ಮನೋಹರ್, ಶಿವಕುಮಾರ್ ಎನ್., ಸಿ.ಎಸ್. ಷಡಾಕ್ಷರಿ, ಎಚ್.ಎಸ್. ವೆಂಕಟೇಶ್, ಸಿ. ರಮೇಶ್, ಅಧ್ಯಕ್ಷತೆ: ತೀಥಿರ್ ಎನ್. ಅಪ್ಪಚ್ಚು, ಆಯೋಜನೆ: ವಿದ್ಯುತ್ ಪರಿವೀಕ್ಷಣಾಲಯ ಇಲಾಖೆ, ಸ್ಥಳ: ಎನ್‌ಜಿಒ ಹಾಲ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಚಿತ್ರ ಭಾರತಿ' ಕಲಾ ಶಿಬಿರ: ದೇಶದ ವಿವಿಧ ರಾಜ್ಯಗಳ ಚಿತ್ರ ಪ್ರಕಾರಗಳ ಕಲಾಕೃತಿಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ಬೆಳಿಗ್ಗೆ 11ರಿಂದ 1 ಮತ್ತು ಮಧ್ಯಾಹ್ನ 3ರಿಂದ ಸಂಜೆ 6

'ಬಲಿ: ದಿ ಸ್ಯಾಕ್ರಿಫೈಸ್' ನಾಟಕ ಪ್ರದರ್ಶನ: ನಿರ್ದೇಶನ: ವಿ. ಬಾಲಕೃಷ್ಣನ್, ತಂಡ: ಥಿಯೇಟರ್ ನಿಶಾ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ. ನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

ಹಳಗನ್ನಡ ರಸಗ್ರಹಣ ತರಗತಿಗಳ ಸಮಾರೋಪ: ಅತಿಥಿಗಳು: ರಾಜಪ್ಪ ದಳವಾಯಿ, ಶ್ಯಾಮಲಾ ಪ್ರಕಾಶ್, ಚಂದ್ರಶೇಖರ್ ನಾದೂರು, ಶಾಂತರಾಜು, ಕೆ.ಆರ್. ಗಣೇಶ್, ಸುರೇಶ್ ಪಾಟೀಲ, ಎನ್. ಆರ್. ಲಲಿತಾಂಬ, ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ. ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಸಂಜೆ 4

ನೂಪುರದ ಆರಾಧನೆ: ಗೆಜ್ಜೆ ಪೂಜೆ: ಎಚ್.ಡಿ. ಜ್ಞಾನಶ್ರೀ, ದೇವಿಕ ಎನ್., ಸಾನ್ವಿ ಎ., ಅತಿಥಿಗಳು: ಮಾಧವಿ ಡಿ.ಕೆ., ನಂದಕಿಶೋರ್, ಸಿಂಧು ನಂದಕಿಶೋರ್, ಕುಮಾರಪ್ಪ ಜಿ.ಎಸ್., ವೆಂಕಟೇಶ್ ಮೂರ್ತಿ ಕೆ., ಆಯೋಜನೆ: ನಾಟ್ಯಕಲಾರ್ಪಣ ನೃತ್ಯ ಕೇಂದ್ರ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ಏಕತಾರಿ ರಾಮಯ್ಯ

ಏಕತಾರಿ ಹಬ್ಬ ಹಾಗೂ ಉಚಿತವಾಗಿ ಏಕತಾರಿ ವಾದ್ಯ ವಿತರಣೆ: ಉದ್ಘಾಟನೆ: ಸಿದ್ದರಾಜು ಸ್ವಾಮೀಜಿ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಬಿ.ಕೆ. ದಿವ್ಯ ಅಕ್ಕ, ಬಾನಂದೂರು ಕೆಂಪಯ್ಯ, ಭಾವನಾ ರವಿ ಬೆಳಗೆರೆ, ಎಸ್.ಬಾಲಾಜಿ, ನೇತ್ರಾವತಿ ಮಂಜುನಾಥ್, ಚಂದ್ರಶೇಖರ್, ರ. ನರಸಿಂಹಮೂರ್ತಿ, ಏಕತಾರಿ ರಾಮಯ್ಯ ಅವರಿಗೆ 'ಏಕತಾರಿ ಓಂಕಾರನಾದ ಬ್ರಹ್ಮ' ಬಿರುದು ಪ್ರದಾನ, ಆಯೋಜನೆ: ಮಲೈಮಹದೇಶ್ವರ ಸಾಂಸ್ಕೃತಿಕ ಜಾನಪದ ಕಲಾ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಚೈತನ್ಯ ಸಂಜೆ: ಅಧ್ಯಕ್ಷತೆ: ದಿಬ್ಬೂರು ಎಸ್. ಗಿರೀಶ್, 'ವಚನಗಳ ನೆಲೆಯಲ್ಲಿ ವ್ಯಕ್ತಿತ್ವ ವಿಕಸನ' ವಿಷಯದ ಬಗ್ಗೆ ಉಪನ್ಯಾಸ: ಎ.ಆರ್. ಶಿವಕುಮಾರ್, ಉಪಸ್ಥಿತಿ: ಗೀತಾ ಜಯಂತ್, ನಾ. ಮಲ್ಲಿಕಾರ್ಜುನ, ರಾಜಶೇಖರ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, ಜಯನಗರ 8ನೇ ವಿಭಾಗ, ಸಂಜೆ 5.30

ಸಾಂಸ್ಕೃತಿಕ ಕಾರ್ಯಕ್ರಮ: ಅನನ್ಯ ಜಯತೀರ್ಥ ದೇಸಾಯಿ ಸಾಕಿನ್ ತಂಡದಿಂದ ಸಂಗೀತ, ಹಾರ್ಮೋನಿಯಂ: ಪ್ರಭಾಕರ್ ವಸಂತರಾವ್ ಪಠವಾರಿ ಸಾಕಿನ್, ತಬಲಾ: ಮಧುಸೂದನ ಕೊಪ್ಪ ಸಾಜಿನ್, ತಾಳವಾದ್ಯ: ಗುರುರಾಜ್ ಎನ್. ಜೋಶಿ, ಆಯೋಜನೆ ಹಾಗೂ ಸ್ಥಳ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಗಾಯತ್ರಿ ಭವನ, ಬನಶಂಕರಿ 2ನೇ ಹಂತ, ಸಂಜೆ 6.30

ತುಹಿನ್ ಸಿನ್ಹ ಅವರ 'ನಕ್ಸಲ್ ಟೆರರ್ ವ್ಯಾನ್ಕ್ವಿಶ್ಡ್' ಪುಸ್ತಕ ಬಿಡುಗಡೆ ಹಾಗೂ ಲೇಖಕರ ಜತೆಗೆ ಸಂವಾದ: ಅತಿಥಿ: ಅಮರ್ ಕುಮಾರ್ ಪಾಂಡೆ, ಆಯೋಜನೆ: ಥಿಂಕರ್ಸ್ ಫೋರಂ ಕರ್ನಾಟಕ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 6.30

26ನೇ ವರ್ಷದ ಪ್ರವಚನ ವಾಹಿನಿ: 'ಭಾಗವತದಲ್ಲಿ ನಾರಾಯಣ ಪರ್ವ' ಕುರಿತು ಉಪನ್ಯಾಸ: ಪವಮಾನಾಚಾರ್ ಮಡನೂರು, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ಸ್ವಾತಂತ್ರ್ಯದ ಓಟ' ನಾಟಕದ ದೃಶ್ಯ

ಪುಸ್ತಕ ಬಹುಮಾನ ಪ್ರದಾನ ಸಮಾರಂಭ ಹಾಗೂ 'ಸ್ವಾತಂತ್ರ್ಯದ ಓಟ' ನಾಟಕ ಪ್ರದರ್ಶನ: ಉದ್ಘಾಟನೆ: ಬಿ.ಎಲ್.ಶಂಕರ್, ಪುಸ್ತಕ ಬಹುಮಾನ ಪ್ರದಾನ: ಟಿ.ಎನ್. ಸೀತಾರಾಮ್, ಬಹುಮಾನ ಪುರಸ್ಕೃತರು: ರಾಮಕೃಷ್ಣ ಮರಾಠೆ, ಅತಿಥಿಗಳು: ಎಂ.ಸಿ. ನರೇಂದ್ರ, ಜೆ. ಮಂಜುನಾಥ್, ಬಿ.ಎಸ್. ಮಂಜುನಾಥ ಸ್ವಾಮಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 4

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

1.ATM/Debit Cards	2. Credit Cards	3.Internet/Mobile/Electronic Banking	4. Account opening/ difficulty in operation of accounts	NIL
5. Mis-selling/Para-banking	6. Recovery Agents/ Direct Sales Agents	7. Pension and facilities for senior citizens/ differently abled	8. Loans and advances	
9. Levy of charges without prior notice/ excessive charges/ foreclosure charges	10. Cheques/ drafts/ bills	11. Non-observance of Fair Practices Code	12. Exchange of coins, issuance/ acceptance of small denomination notes and coins	
13. Bank Guarantees/ Letter of Credit and documentary credits	14. Staff behaviour	15. Facilities for customers visiting the branch/ adherence to prescribed working hours by the branch, etc	16. Others	

10. Disclosure of penalties imposed by the Reserve Bank of India: No Penalties have been levied by the Reserve Bank of India during the year.
11. Other Disclosures : *a) Business ratios*

Particulars	Current Year	Previous Year
i) Interest Income as a percentage to Working Funds*	8.78	9.13
ii) Non-interest income as a percentage to Working Funds*	0.40	0.48
iii) Cost of Deposits	6.96	6.70
iv) Net Interest Margin**	3.61	4.22
v) Operating Profit as a percentage to Working Funds*	0.95	1.67
vi) Return on Assets***	9.18	10.02
vii) Business (deposits plus advances) per employee**** (in ₹ crore)	9.47	7.84
viii) Profit per employee (in ₹ crore)	0.04	0.05

* Working funds to be reckoned as average of total assets (excluding accumulated losses, if any) as reported to Reserve Bank of India in Form X for Commercial Banks and Form IX for UCBs., during the 12 months of the financial year.
**Net Interest Income/ Average Earning Assets. Net Interest Income= Interest Income – Interest Expense
*** Return on Assets would be with reference to average working funds (i.e., total of assets excluding accumulated losses, if any).
****For the purpose of computation of business per employee (deposits plus advances), inter-bank deposits shall be excluded.

b) Bancassurance business (Rs. In lakhs)

Particulars	Current year	Previous year
Fees / brokerage earned in respect of insurance broking, agency	2.13	3.15
Bank assurance business undertaken	16.58	33.95

c) Disclosures regarding Priority Sector Lending Certificates (PSLCs) Purchased PSLC for Rs.75.00 Crores FY-2025-26
d) Provisions and contingencies (Amounts in ₹ crore)

Provision debited to Profit and Loss Account	Current Year	Previous Year
i) Provisions for NPI and IDR	0.00	0.00
ii) Provision towards NPA	0.60	1.10
iii) Provision made towards Income tax	1.55	2.60
iv) Other Provisions and Contingencies (with details)		
Special BDDR u/s 36 (i) vii of IT Act 1961	0.50	0.70
Provision for Standard Asset	0.16	0.00
Premium Amortization on Govt. Securities	0.36	0.01
Provision for Building Tax	0.01	0.01
Total	3.18	4.42

e) Payment of DICGC Insurance Premium (Amounts in ₹ crore)

Particulars	Current Year	Previous Year
i) Payment of DICGC Insurance Premium	0.84	0.72
ii) Arrears in payment of DICGC premium	0.00	0.00

f) Disclosure of facilities granted to directors and their relatives (Applicable for UCBs)
UCBs shall disclose any fund or non-fund (guarantees, letters of credit, etc.) facilities extended to directors, their relatives, companies or firms in which they are interested. - **NIL**

For **SREE THYAGARAJA CO-OPERATIVE BANK LIMITED**

Sd/- **S SREERAM** (CHIEF EXECUTIVE OFFICER)
Sd/- **N L CHIDANANDA** (DIRECTOR)
Sd/- **M N KAMBEGOWDA** (VICE PRESIDENT)
Sd/- **DR. M R VENKATESH** (PRESIDENT)

Subject to our report of even date
M/s. C S M R & ASSOCIATES
Chartered Accountants
Firm Regn.No.010106S
Sd/-
(Muraleedhara R)
Partner
Membership No.221482
UDIN : 26221482CYJFVH2012

"ಲೆಕ್ಕಪರಿಶೋಧನಾ ಪ್ರಮಾಣಪತ್ರ"

ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನಂ.5, 9ನೇ ಅಡ್ಡರಸ್ತೆ ಎನ್.ಆರ್.ಕಾಲೋನಿ, ಬೆಂಗಳೂರು–19. ಆಡಳಿತ ಕಛೇರಿ ಮತ್ತು 14 ಶಾಖೆಗಳ 2025–26ನೇ ಸಾಲಿನ ಲೆಕ್ಕಪರಿಶೋಧನೆಯನ್ನು ನಾವು ಪೂರೈಸಿದ್ದೇವೆ. ನಮ್ಮ ಅರಿವಿಗೆ ಮತ್ತು ನಂಬಿಕೆಗೆ ಅನುಸಾರವಾಗಿ ಲೆಕ್ಕಪರಿಶೋಧನೆಗೆ ಅಗತ್ಯವಾದ ಮಾಹಿತಿ ಮತ್ತು ವಿವರಗಳನ್ನು ಪಡೆದು ನಮ್ಮ ಅಭಿಪ್ರಾಯ ಮತ್ತು ತಿಳುವಳಿಕೆಯಂತೆ ನಮಗೆ ನೀಡಿದ ಮಾಹಿತಿ ಮತ್ತು ವಿವರಗಳ ಪ್ರಕಾರ ಈ ಪ್ರಮಾಣ ಪತ್ರಕ್ಕೆ ಲಗತ್ತಿಸಿರುವ ನಮ್ಮ ವಿವರವಾದ ಲೆಕ್ಕಪರಿಶೋಧನಾ ವರದಿಯ ಷರಾಗಳಿಗೆ ಮತ್ತು ನಿಬಂಧನೆಗಳಿಗೊಳಪಟ್ಟು ದಿನಾಂಕ: 31–03–2026 ರಲ್ಲಿದ್ದಂತೆ ಬ್ಯಾಂಕಿನ ಆಸ್ತಿ–ಜವಾಬ್ದಾರಿ ತಃಖ್ತೆ, ಲಾಭ–ನಷ್ಟ ತಃಖ್ತೆ, ಜಮಾ–ಖರ್ಚು ಮತ್ತು ನಗದು ಹರಿವಿನ ತಃಖ್ತೆಗಳು ಬ್ಯಾಂಕಿನ ನೈಜ ಮತ್ತು ನ್ಯಾಯೋಚಿತವಾದ ಆರ್ಥಿಕ ಅವಲೋಕನವನ್ನು ನೀಡುತ್ತಿದೆ.

ದಿನಾಂಕ: 23.06.2026
ಸ್ಥಳ: ಬೆಂಗಳೂರು

ಮೆ॥ ಸಿ ಎಸ್ ಎಂ ಆರ್ ಅಂಡ್ ಅಸೋಸಿಯೇಟ್ಸ್
ಸನ್ನದು ಲೆಕ್ಕಪರಿಶೋಧಕರು
ಸಂಸ್ಥೆಯ ನೋಂದಣಿ ಸಂಖ್ಯೆ: 010106S
ಸಹಿ/–
(ಮುರಳೀಧರ ಆರ್.)
ಪಾಲುದಾರರು
ಸದಸ್ಯತ್ವದ ಸಂಖ್ಯೆ : 221482
UDIN : 26221482CYJFVH2012

ನಟಿ ಕೃಷಿ ತಾಪಂಡ ಗೆಳೆಯ ಆತ್ಮಹತ್ಯೆ

ಆರ್‌.ಆರ್‌. ನಗರದ ಫ್ಲ್ಯಾಟ್‌ನಲ್ಲಿ ಘಟನೆ, ಅನುಮಾನಾಸ್ಪದ ಸಾವು ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ, ‘ಬಿಗ್‌ಬಾಸ್’ ಕನ್ನಡ ರಿಯಾಲಿಟಿ ಶೋನ ಮಾಜಿ ಸ್ಪರ್ಧಿ ಕೃಷಿ ತಾಪಂಡ ಅವರ ಆರ್‌.ಆರ್‌.ನಗರದ ಫ್ಲ್ಯಾಟ್‌ನಲ್ಲಿ ಅವರ ಆಪ್ತ ಗೆಳೆಯ ವೈಶಾಕ್ (45) ಅವರ ಮೃತದೇಹವು ಬುಧವಾರ ರಾತ್ರಿ ಪತ್ತೆಯಾಗಿದ್ದು, ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ವೈಶಾಕ್

ಕೃಷಿ ತಾಪಂಡ

ವೈಶಾಕ್ ಪತ್ನಿ ಮೇಘನಾ ನೀಡಿದ ದೂರಿನ ಮೇಲೆ ‘ಅನುಮಾನಾಸ್ಪದ ಸಾವು’ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮೇಘನಾ ನೀಡಿದ ದೂರಿನಲ್ಲಿ ಯಾರ ಮೇಲೂ ಅನುಮಾನ ವ್ಯಕ್ತಪಡಿಸಿಲ್ಲ ಎಂದು ಅಧಿಕಾರಿಯೊಬ್ಬರು ಹೇಳಿದರು.

ಗಿರಿನಗರದ ನಿವಾಸಿಯಾದ ವೈಶಾಕ್ 15 ವರ್ಷದ ಹಿಂದೆ ಮದುವೆ ಆಗಿದ್ದರು. ದಂಪತಿಗೆ ಪುತ್ರ ಇದ್ದಾನೆ. ಕಾರ್ ಗ್ಯಾರೇಜ್ ಹಾಗೂ ಆಟೊ ಮೊಬೈಲ್ ಶಾಪ್‌ನ ಮಾಲೀಕರಾಗಿದ್ದ ವೈಶಾಕ್, ಸ್ನೇಹಿತೆ ಮನೆಯಲ್ಲಿ ಬುಧವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕುಟುಂಬಸ್ಥರಿಂದ ನಟಿಗೆ ತರಾಟೆ

ಅಂತ್ಯಕ್ರಿಯೆ ನಡೆದ ಸ್ಥಳಕ್ಕೆ ಗುರುವಾರ ಸಂಜೆ ಕೃಷಿ ಕಣ್ಣೀರು ಹಾಕುತ್ತಾ ಬಂದಿದ್ದರು. ಸ್ಥಳದಲ್ಲಿದ್ದ ಕುಟುಂಬಸ್ಥರು ಕೃಷಿಯನ್ನು ತರಾಟೆಗೆ ತೆಗೆದುಕೊಂಡರು.

ಮೃತದೇಹವನ್ನು ನೋಡುವ ಅವಶ್ಯಕತೆಯೇ ಇಲ್ಲ. ಇಲ್ಲಿಂದ ಹೋಗಿ ಎಂಬುದಾಗಿ ಕುಟುಂಬಸ್ಥರು ಹೇಳಿದರು. ವಿರೋಧ ವ್ಯಕ್ತವಾದ ಬಳಿಕ ನಟಿ ಅಲ್ಲಿಂದ ತೆರಳಿದರು.

ನಟಿಯ ಜತೆಗೆ ಸ್ನೇಹ?: ‘ನಟಿಯ ಜತೆಗೆ ವೈಶಾಕ್‌ಗೆ ಸ್ನೇಹವಿತ್ತು. ಕೆಲವು ದಿನಗಳಿಂದ ಆರ್‌ಆರ್ ನಗರದ ಫ್ಲ್ಯಾಟ್‌ನಲ್ಲಿ ವಾಸ ಮಾಡುತ್ತಿದ್ದರು ಎಂದು ಹೇಳಲಾಗಿದೆ. ವೈಶಾಕ್ ಬಳಸುತ್ತಿದ್ದ ಮೊಬೈಲ್ ವಶಕ್ಕೆ ಪಡೆದುಕೊಳ್ಳಲಾಗಿದೆ. ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

‘ಬುಧವಾರ ರಾತ್ರಿ 11ರ ಸುಮಾರಿಗೆ ವೈಶಾಕ್ ಅವರ ತಂದೆಗೆ ಪೊಲೀಸರು ಕರೆ ಮಾಡಿ ಎಲಿಗೆಂಟ್ ಟೆರಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್ ಸಂಖ್ಯೆ 403ರಲ್ಲಿ ನಿಮ್ಮ ಪುತ್ರನ ಮೃತದೇಹ ಪತ್ತೆಯಾಗಿದೆ ಎಂದು ತಿಳಿಸಿದ್ದರು. ಅಲ್ಲಿಗೆ ತೆರಳಿ ನೋಡಿದಾಗ ಕೃಷಿ ಅವರ ಫ್ಲ್ಯಾಟ್‌ನ ಕೊಠಡಿಯಲ್ಲಿ ಅಂಗಾತ ಮಲಗಿದ ಸ್ಥಿತಿಯಲ್ಲಿ ಮೃತದೇಹವಿತ್ತು. ಫ್ಯಾನ್‌ಗೆ ಬಿಗಿದಿದ್ದ ಸೀರೆ ತುಂಡಾಗಿತ್ತು. ಕುತ್ತಿಗೆ ಭಾಗದಲ್ಲಿ ಗುರುತು ಇತ್ತು. ತನಿಖೆ ನಡೆಸಿ ಆತ್ಮಹತ್ಯೆಗೆ ಕಾರಣ ಪತ್ತೆ ಹಚ್ಚುವಂತೆ ಮೇಘನಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

ಪತ್ನಿ, ತಂದೆಯಿಂದ ದೂರ: ಕೌಟುಂಬಿಕ ಕಾರಣಕ್ಕೆ ವೈಶಾಕ್ ಮತ್ತು ಪತ್ನಿ ಮೇಘನಾ ನಡುವೆ ಜಗಳ ನಡೆದಿತ್ತು. ಇಬ್ಬರೂ ಮಾತನಾಡುತ್ತಿರಲಿಲ್ಲ. ಆದ್ದರಿಂದ ಒಂದು ತಿಂಗಳಿಂದ ಸ್ನೇಹಿತೆ ಕೃಷಿ ತಾಪಂಡ ಮನೆಯಲ್ಲೇ ವಾಸವಾಗಿದ್ದು, ಇಲ್ಲಿಂದಲೇ ಗ್ಯಾರೇಜ್‌ಗೆ ಹೋಗುತ್ತಿದ್ದರು. ಅಲ್ಲದೆ, ಫ್ಲ್ಯಾಟ್‌ನ ಎರಡು ಕೀಗಳ ಪೈಕಿ ಒಂದು ಕೀ ವೈಶಾಕ್ ಬಳಿ ಇತ್ತು. ಹೀಗಾಗಿ, ಬುಧವಾರ ರಾತ್ರಿ ಯಾರೂ ಇಲ್ಲದ ವೇಳೆ ಫ್ಲ್ಯಾಟ್‌ಗೆ ಬಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

‘ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಿಲ್ಲ. ಯಾವುದೇ ವಿಚಾರಗಳ ಬಗ್ಗೆ ಹೇಳಿಕೊಂಡಿರಲಿಲ್ಲ. ಕೆಲವು ದಿನಗಳಿಂದ ಮಾನಸಿಕವಾಗಿ ನೊಂದಿದ್ದರು’ ಎಂದು ಸ್ನೇಹಿತರೊಬ್ಬರು ಹೇಳಿದರು.

ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸಂದೇಶ

‘ಆತ್ಮಹತ್ಯೆಗೂ ಮುನ್ನ ವೈಶಾಕ್, ನಟಿಗೆ ವಾಟ್ಸ್‌ಆ್ಯಪ್ ಮೂಲಕ ಸಂದೇಶ ಕಳುಹಿಸಿದ್ದರು. ‘ನನಗೆ ಜೀವನವೇ ಸಾಕಾಗಿದೆ. ಬದುಕಲು ಇಷ್ಟವಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಸಂದೇಶದಲ್ಲಿ ಉಲ್ಲೇಖಿಸಿದ್ದಾರೆ ಎಂಬುದು ಗೊತ್ತಾಗಿದೆ. ಆ ರೀತಿಯ ನಿರ್ಧಾರ ತೆಗೆದುಕೊಳ್ಳಬೇಡ. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೋಗೋಣ ಎಂದು ಕೃಷಿ ತಾಪಂಡ ಧೈರ್ಯ ಹೇಳಿದ್ದರು. ಅಲ್ಲದೇ ಈ ವಿಷಯವನ್ನು ವೈಶಾಕ್ ಕುಟುಂಬಸ್ಥರಿಗೂ ತಿಳಿಸಿದ್ದರು. ರಾತ್ರಿ 8.30ರ ಸುಮಾರಿಗೆ ನಟಿ ಫ್ಲ್ಯಾಟ್‌ಗೆ ಬಂದು ನೋಡುವಷ್ಟರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಬಳಿಕ, ಆರ್‌ಆರ್ ನಗರದ ಪೊಲೀಸರಿಗೆ ಮಾಹಿತಿ ನೀಡಿದ್ದರು’ ಎಂದು ಮೂಲಗಳು ಹೇಳಿವೆ.

ಬೆದರಿಕೆ: ಬಂಧನಕ್ಕೆ ಒಳಗಾಗಿದ್ದ ವೈಶಾಕ್

ಉದ್ಯಮಿ ಅರವಿಂದ್ ವೆಂಕಟೇಶ್ ರೆಡ್ಡಿಗೆ ಬೆದರಿಕೆ ಹಾಕಿದ ಪ್ರಕರಣದಲ್ಲಿ ವೈಶಾಕ್ ಅವರನ್ನು ಎಚ್‌ಎಎಲ್ ಠಾಣೆ ಪೊಲೀಸರು ಕಳೆದ ಫೆಬ್ರುವರಿ 6ರಂದು ಬಂಧಿಸಿದ್ದರು. ಬಳಿಕ ಜಾಮೀನು ಪಡೆದು ಜೈಲಿನಿಂದ ಬಿಡುಗಡೆ ಆಗಿದ್ದರು.

‘ಅರವಿಂದ ರೆಡ್ಡಿಗೆ ಜನವರಿಯಲ್ಲಿ ವೈಶಾಕ್ ಕೊರಿಯರ್ ಮೂಲಕ ಬೆದರಿಕೆ ಪತ್ರ ಕಳುಹಿಸಿದ್ದರು. ವಿಳಾಸ ಹಾಗೂ ಸಹಿ ಇಲ್ಲದ ಅನಾಮಧೇಯ ಬೆದರಿಕೆ ಪತ್ರವಾಗಿತ್ತು. ‘ನಟಿಯ ಜತೆಗೆ ಇರುವ ಜಗಳವನ್ನು ಬಗೆಹರಿಸಿಕೊಳ್ಳಬೇಕು. ಇಲ್ಲದಿದ್ದರೆ ನನ್ನ ಗ್ಯಾರೇಜ್‌ಗೆ ₹6ಕೋಟಿಯಿಂದ ₹7 ಕೋಟಿ ಕಳುಹಿಸಬೇಕು. ಬೇಡಿಕೆ ಈಡೇರಿಸದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ’ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿತ್ತು. ಈ ಬೆದರಿಕೆ ಪತ್ರದ ವಿರುದ್ಧ ಅರವಿಂದ ದೂರು ನೀಡಿದ್ದರು.

‘ಕಾರ್ಯಾಚರಣೆ ಆರಂಭಿಸಿದ್ದ ಬನಶಂಕರಿ ಬಳಿಯ ಬ್ಲೂ–ಡಾರ್ಟ್ ಕೊರಿಯರ್ ಮೂಲಕ ಪತ್ರ ಬಂದಿರುವುದು ಪತ್ತೆಯಾಗಿತ್ತು. ಗ್ಯಾರೇಜ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ‘ಮಾಲೀಕರು ಹೇಳಿದಂತೆ ನಾನು ಪತ್ರ ಕೊರಿಯರ್ ಮಾಡಿದ್ದೇನೆ. ಇದನ್ನು ಹೊರತುಪಡಿಸಿ ಹೆಚ್ಚಿನ ಮಾಹಿತಿ ತಿಳಿದಿಲ್ಲ’ ಎಂದು ಯುವಕ ಹೇಳಿದ್ದ. ಈ ಮಾಹಿತಿ ಆಧರಿಸಿ ತನಿಖೆ ನಡೆಸಿದಾಗ ವೈಶಾಕ್ ಪತ್ರ ಬರೆದಿರುವುದು ಪತ್ತೆಯಾಗಿತ್ತು. ಬಳಿಕ ಆರೋಪಿಯನ್ನು ಎಚ್.ಎ.ಎಲ್ ಠಾಣೆಯ ಪೊಲೀಸರು ಬಂಧಿಸಿದ್ದರು.

ಅರವಿಂದ ರೆಡ್ಡಿ ಜತೆಗೂ ಗಲಾಟೆ: ಉದ್ಯಮಿ ಅರವಿಂದ ರೆಡ್ಡಿ ಹಾಗೂ ಕೃಷಿ ನಡುವೆ ಈ ಹಿಂದೆ ಗಲಾಟೆ ಆಗಿತ್ತು. ಅರವಿಂದ್ ರೆಡ್ಡಿ ವಿರುದ್ಧ ನಟಿ ದೂರು ನೀಡಿದ್ದರು. ಅರವಿಂದ್ ರೆಡ್ಡಿ ಅವರ ಬಂಧನವಾಗಿತ್ತು. ಜಾಮೀನಿನ ಮೇಲೆ ಬಿಡುಗಡೆ ಆಗಿದ್ದರು.

ತ್ರಿವಳಿ ಕೊಲೆ: ಸಿಗದ ಪ್ರಿಯಕರ ಕೆನತ್ ಸುಳಿವು, ಶೋಧ

ಪೊಲೀಸ್ ಕಸ್ಟಡಿಗೆ ಶ್ವೇತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂದೆ, ತಾಯಿ ಹಾಗೂ ಸಹೋದರಿಯನ್ನು ಕೊಲೆ ಮಾಡಿದ್ದ ಆರೋಪಿ ಶ್ವೇತಾಳನ್ನು ಕೆ.ಆರ್. ಪುರ ಠಾಣೆ ಪೊಲೀಸರು ಹೆಚ್ಚಿನ ವಿಚಾರಣೆಗೆ 14 ದಿನಗಳ ಕಾಲ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಶ್ವೇತಾ

ಕೆನತ್

ಜೂನ್ 22 ರಂದು ರಾತ್ರಿ ತಂದೆ ಸೋಮಸುಂದರ್, ತಾಯಿ ಮುತ್ತುಲಕ್ಷ್ಮಿ, ಸಹೋದರಿ ಸುಪ್ರಿಯಾ ಅವರನ್ನು ಪ್ರಿಯಕರ ಕೆನತ್ ಜತೆಗೆ ಸೇರಿಕೊಂಡು ಕೊಲೆ ಮಾಡಿ ಪುದುಚೇರಿಗೆ ಪರಾರಿಯಾಗಿದ್ದ ಶ್ವೇತಾಳನ್ನು ಜೂನ್ 24ರಂದು ಬಂಧಿಸಿ ನಗರಕ್ಕೆ ಕರೆ ತರಲಾಗಿತ್ತು.

‘ಹಣಕಾಸು ವಿಚಾರಕ್ಕೆ ತಾನೇ ಕುಟುಂಬದ ಮೂವರು ಸದಸ್ಯರನ್ನು ಕೊಲೆ ಮಾಡಿದ್ದೇನೆ. ಪ್ರಿಯಕರ ಕೆನತ್‌ಗೂ ಕೃತ್ಯಕ್ಕೂ ಯಾವುದೇ ಸಂಬಂಧವಿಲ್ಲ’ ಎಂದು ಶ್ವೇತಾ ಹೇಳಿಕೆ ನೀಡಿದ್ದಾಳೆ. ಕೊಲೆಗೆ ನಿಖರವಾದ ಕಾರಣ ಪತ್ತೆ ಹಾಗೂ ಕೃತ್ಯದಲ್ಲಿ ಕೆನತ್ ಪಾತ್ರದ ಕುರಿತು ಮಾಹಿತಿ ಪಡೆಯಲು ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶ್ವೇತಾ ವಿಚಾರಣೆ ವೇಳೆ ಪದೇ ಪದೇ ಹೇಳಿಕೆ ಬದಲಿಸಿ, ತನಿಖೆಯ ದಿಕ್ಕು ತಪ್ಪಿಸುತ್ತಿದ್ದಾಳೆ. ಕಾನೂನು ಸಂಕಷ್ಟದಿಂದ ಕೆನತ್‌ನನ್ನು ಪಾರು ಮಾಡುವ ಉದ್ದೇಶಕ್ಕೆ ಸುಳ್ಳು ಹೇಳುತ್ತಿದ್ದಾಳೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಕೆನತ್‌ನನ್ನು ಬಂಧಿಸಿ ವಿಚಾರಣೆ ನಡೆಸಿದ ಬಳಿಕ ಸ್ಪಷ್ಟ ಮಾಹಿತಿ ಸಿಗಲಿದೆ’ ಎಂದು ಮೂಲಗಳು ಹೇಳಿವೆ.

ತಾಯಿಯೇ ಗುರಿ: ತಾಯಿಯನ್ನು ಕೊಲೆ ಮಾಡುವುದು ಉದ್ದೇಶವಾಗಿತ್ತು. ತಂದೆ ಮತ್ತು ತಂಗಿಯನ್ನು ಕೊಲೆ ಮಾಡುವ ಉದ್ದೇಶ ಇರಲಿಲ್ಲ. ಆದರೆ, ತಾಯಿಯ ಕೊಲೆ ರಹಸ್ಯ ತಂದೆ ಮತ್ತು ತಂಗಿಗೆ ಗೊತ್ತಾಗಿತ್ತು. ಕೃತ್ಯವನ್ನು ಹೊರಗೆ ಬಹಿರಂಗ ಪಡಿಸಬಹುದು ಎಂಬ ಆತಂಕದಲ್ಲಿ ಅವರನ್ನೂ ಕೊಲೆ ಮಾಡಿದೆ. ತಾಯಿ ನನ್ನ ಜೀವನವನ್ನು ಸಂಪೂರ್ಣವಾಗಿ ನಿಯಂತ್ರಣ ಮಾಡುತ್ತಿದ್ದರು. ನಾನು ಸ್ವತಂತ್ರ್ಯವಾಗಿ ಯಾವುದೇ ಕೆಲಸ ಮಾಡುವುದಕ್ಕೂ ಬಿಡುತ್ತಿರಲಿಲ್ಲ. ಯಾವುದಕ್ಕೂ ಅವಕಾಶ ಕೊಡುತ್ತಿರಲಿಲ್ಲ. ಅವರು ನನ್ನ ಜೀವನವನ್ನು ಹಾಳು ಮಾಡಿದ್ದಾರೆ. ತಾಯಿಯ ಮೇಲೆ ಹೆಚ್ಚು ಕೋಪವಿತ್ತು ಎಂಬುದಾಗಿ ಶ್ವೇತಾ ಹೇಳಿಕೆ ನೀಡಿದ್ದಾಳೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಜೂನ್ 22ರ ರಾತ್ರಿ ಕೊಲೆ ಬಳಿಕ ಶ್ವೇತಾ ಮತ್ತು ಕೆನತ್, ತಮ್ಮ ಫ್ಲಾಟ್‌ನ ಬಾಗಿಲನ್ನು ಒಳ ಭಾಗದಿಂದ ಲಾಕ್ ಮಾಡಿ ಬಾಲ್ಕನಿಯ ಮೂಲಕ ಪಕ್ಕದ ಅಪಾರ್ಟ್‌ಮೆಂಟ್‌ಗೆ ಜಿಗಿದಿದ್ದರು. ನಂತರ, ಆ ಅಪಾರ್ಟ್‌ಮೆಂಟ್‌ನ ಕಾಂಪೌಂಡ್ ಹಾರಿ ಸ್ವಲ್ಪ ದೂರ ನಡೆದು ಹೋಗಿದ್ದರು. ಬಳಿಕ ಇಬ್ಬರೂ ಬೈಕ್‌ನಲ್ಲಿ ಹೊಸೂರು, ಕೃಷ್ಣಗಿರಿ ಮಾರ್ಗವಾಗಿ ಮಂಗಳವಾರ ಸಂಜೆ ವೇಳೆಗೆ ತಿರುವಣ್ಣಾಮಲೈ ತಲುಪಿದ್ದರು. ಅಲ್ಲಿಂದ ಪ್ರತ್ಯೇಕವಾಗಿ ಶ್ವೇತಾ, ಬಸ್‌ನಲ್ಲಿ ಪುದುಚೇರಿಗೆ ಹೋಗಿದ್ದಳು. ಆಕೆಯಿಂದ ಬೇರ್ಪಟ್ಟ ಕೆನತ್, ಬೇರೆಡೆಗೆ ಹೋಗಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಿಯಕರನ ಪಾತ್ರವೂ ಸ್ಪಷ್ಟ: ತನಿಖಾಧಿಕಾರಿ

‘ಮೃತದೇಹಗಳ ಮೇಲಿರುವ ಚಾಕು ಇರಿತದ ಗಾಯಗಳು, ಘಟನಾ ಸ್ಥಳದ ಸಾಂದರ್ಭಿಕ ಸಾಕ್ಷ್ಯಾಧಾರಗಳು ಹಾಗೂ ವೈದ್ಯಕೀಯ ವರದಿಯನ್ನು ವಿಶ್ಲೇಷಿಸಿದಾಗ ಒಬ್ಬರೇ ಈ ತ್ರಿವಳಿ ಕೊಲೆ ಮಾಡಿರಲು ಸಾಧ್ಯವಿಲ್ಲ ಎಂದು ಮೇಲ್ನೋಟಕ್ಕೆ ದೃಢಪಟ್ಟಿದೆ. ಶ್ವೇತಾಳ ತಂದೆ ಸೋಮಸುಂದರ್, ತನಗೆ ಚಾಕು ಇರಿದದ್ದು ಕೆನತ್ ಎಂದು ಸಾಯುವುದಕ್ಕೂ ಮುನ್ನ ಹೇಳಿಕೆ ಕೊಟ್ಟಿದ್ದಾರೆ. ಹೀಗಾಗಿ, ಕೊಲೆಯಲ್ಲಿ ಕೆನತ್‌ನ ಪಾತ್ರವಿರುವುದು ಸ್ಪಷ್ಟವಾಗಿದೆ’ ಎಂದು ತನಿಖಾ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಜೂನ್ 22ರಂದು ನಡೆದಿದ್ದ ಹತ್ಯೆ ಪ್ರಕರಣ
- ಪುದುಚೇರಿಗೆ ಪರಾರಿ ಆಗಿದ್ದ ಆರೋಪಿ ಶ್ವೇತಾ
- ‘ಹಣಕಾಸು ವಿಚಾರಕ್ಕೆ ಕೊಲೆ ಮಾಡಿದ್ದೆ– ಪ್ರಿಯಕರನ ಪಾತ್ರವಿಲ್ಲ’

---

10 ಕೆ.ಜಿ ಬೆಳ್ಳಿ ಕದ್ದ ಆರೋಪಿ ಸೆರೆ

ಬೆಂಗಳೂರು: ಗೋಡೆ ಕೊರೆದು 10 ಕೆ.ಜಿ ಬೆಳ್ಳಿ ಆಭರಣಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

ತಮಿಳುನಾಡಿನ ತೇಜು(25) ಬಂಧಿತ. ಆರೋಪಿಯಿಂದ ₹12.50 ಲಕ್ಷ ಮೌಲ್ಯದ 5 ಕೆ.ಜಿ ಬೆಳ್ಳಿಯ ಆಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಹಲಸೂರು ಗೇಟ್ ಪೊಲೀಸ್ ಠಾಣಾ ವ್ಯಾಪ್ತಿಯ ಕಾರ್ ಸ್ಟ್ರೀಟ್‌ನ ಬೆಳ್ಳಿ ಅಂಗಡಿಯೊಂದರ ಮಾಲೀಕ ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಏಪ್ರಿಲ್ 29ರಂದು ಅಂಗಡಿಗೆ ಬೀಗ ಹಾಕಿಕೊಂಡು ಮಾಲೀಕ ಮನೆಗೆ ತೆರಳಿದ್ದರು. ಆ ಸಂದರ್ಭದಲ್ಲಿ ಗೋಡೆ ಕೊರೆದು ಆರೋಪಿ ಅಂಗಡಿಗೆ ನುಗ್ಗಿದ್ದ. ಅಂದಾಜು 10 ಕೆ.ಜಿ ಬೆಳ್ಳಿ ಸಾಮಗ್ರಿ ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದ. ಮಾಲೀಕರು ಬೆಳಿಗ್ಗೆ ಅಂಗಡಿ ಬಾಗಿಲು ತೆರೆಯಲು ಬಂದಾಗ ಕಳ್ಳತನ ನಡೆದಿರುವುದು ಪತ್ತೆಯಾಗಿದೆ ಎಂದು ಹೇಳಿದರು.

‘ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಹಾಗೂ ಕೆಲವು ತಾಂತ್ರಿಕ ಸಾಕ್ಷ್ಯಾಧಾರ ಆಧರಿಸಿ, ತಮಿಳುನಾಡಿಗೆ ತೆರಳಿದ್ದ ಪೊಲೀಸ್ ತಂಡವು ಅಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಿದೆ. ಆರೋಪಿಯನ್ನು ಬಂಧಿಸಿ, ನಗರಕ್ಕೆ ಕರೆ ತಂದಿದೆ. ಆರೋಪಿ ರೈಲು ಮೂಲಕ ನಗರಕ್ಕೆ ಬಂದು ಆಭರಣಗಳನ್ನು ಕಳ್ಳತನ ಮಾಡಿ ಹೋಗುತ್ತಿದ್ದ ಎಂಬುದು ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ. ‘ಆರೋಪಿ ನೀಡಿದ ಮಾಹಿತಿ ಮೇರೆಗೆ ತಮಿಳುನಾಡಿನ ಮದನೂರಿನ ಚಿನ್ನಾಭರಣ ಅಂಗಡಿಗೆ ಮಾರಿದ್ದ ಬೆಳ್ಳಿ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಕ್ರಿಪ್ಟೊಗೆ ಹಣ ಬದಲಾಯಿಸುವ ನೆಪದಲ್ಲಿ ದರೋಡೆ

12 ಮಂದಿ ಬಂಧನ • ಸಂಜಯನಗರ ಠಾಣೆ ಪೊಲೀಸರ ಕಾರ್ಯಾಚರಣೆ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಪ್ಟೊ ಕರೆನ್ಸಿಗೆ ಹಣ ಬದಲಾವಣೆ ಮಾಡಿಕೊಡುವುದಾಗಿ ನಂಬಿಸಿ, ₹17.64 ಲಕ್ಷವನ್ನು ದರೋಡೆ ಮಾಡಿ ಪರಾರಿಯಾಗಿದ್ದ ಪ್ರಕರಣ ವೊಂದನ್ನು ಭೇದಿಸುವಲ್ಲಿ ಸಂಜಯನಗರ ಠಾಣೆಯ ಪೊಲೀಸರು ಯಶಸ್ವಿ ಆಗಿದ್ದಾರೆ.

ದೇವಸಂದ್ರದ ಕರೀಂ ಖಾನ್(31), ವಸೀಂ ಖಾನ್(41), ಮೊಹಮ್ಮದ್ ಇಸ್ಮಾಯಿಲ್(29), ರೆಹಮಾನ್(27), ಸುಹೇಬ್ ಜಾವೀದ್(20), ಅಯ್ಯನ್ ಮುಖರ್ಜಿ(21), ಅಕಿಲ್ ಅಹಮ್ಮದ್(26), ತೌಸಿಫ್(32), ಲಿಯಾಖತ್ ಷರೀಫ್(33), ಅಫ್ಜಲ್ ಖಾನ್(27), ಮುಜಾಮಿಲ್(23), ಇಮ್ರಾನ್ ಪಾಷಾ(40) ಸೇರಿದಂತೆ 12 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೊಡಿಗೆಹಳ್ಳಿಯ ದೇವಿನಗರದ ನಿವಾಸಿಯೊಬ್ಬರು ಜೂನ್ 10ರಂದು ದೂರು ನೀಡಿದ್ದರು. ಇದನ್ನು ಆಧರಿಸಿ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬಂಧಿತ ಆರೋಪಿಗಳು

ದೂರುದಾರರು ಶಿರಾ ಬಳಿ ಕೆಫೆ ತೆರೆಯಲು ಮುಂದಾಗಿದ್ದರು. ಮಳಿಗೆ ನಿರ್ಮಾಣಕ್ಕೆ ಟೈಲ್ಸ್ ಸೇರಿದಂತೆ ಅಗತ್ಯವಾದ ಪರಿಕರಗಳನ್ನು ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸುತ್ತಿದ್ದರು. ಜಪಾನ್ – ಚೀನಾ ದೇಶದಲ್ಲಿ ಕಡಿಮೆ ಬೆಲೆಗೆ ಕೆಫೆ ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳು ದೊರೆಯುತ್ತವೆ ಎಂದು ದೂರುದಾರರ ಸ್ನೇಹಿತರೊಬ್ಬರು ತಿಳಿಸಿದ್ದರು. ಅದಕ್ಕಾಗಿ ಹಣವನ್ನು ಕ್ರಿಪ್ಟೊ ಕರೆನ್ಸಿಗೆ ಬದಲಾವಣೆ ಮಾಡಬೇಕಾಗಿರುತ್ತದೆ ಎಂದೂ ಸಲಹೆ ನೀಡಿದ್ದರು. ಅಲ್ಲದೇ, ಸ್ನೇಹಿತರ ನೆರವು ಪಡೆದು, ಕ್ರಿಪ್ಟೊಇಂಡಿಯಾ ಎಫ್2ಎಫ್‌ಗೆ ಸೇರ್ಪಡೆ ಆಗಿದ್ದರೆಂದು ಮೂಲಗಳ ಹೇಳಿವೆ.

ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿದ್ದ ಸದಸ್ಯರೊಬ್ಬರು ದೂರುದಾರರನ್ನು ಸಂಪರ್ಕಿಸಿ, ₹2.50 ಲಕ್ಷವನ್ನು ಕ್ರಿಪ್ಟೊ ಕರೆನ್ಸಿಗೆ ಬದಲಾವಣೆ ಮಾಡಿ ಕೊಟ್ಟಿದ್ದರು. ಇದರಿಂದ ದೂರುದಾರರಿಗೆ ನಂಬಿಕೆ ಬಂದಿತ್ತು. ಇನ್ನೂ ಹೆಚ್ಚಿನ ಕ್ರಿಪ್ಟೊ ಕರೆನ್ಸಿ ಅಗತ್ಯವಿದೆ ಎಂದು ದೂರು ನೀಡಿದ್ದ ವ್ಯಕ್ತಿ ತಿಳಿಸಿದ್ದರು. ಜೂನ್ 19ರ ಮಧ್ಯರಾತ್ರಿ ಸಂಜಯನಗರದ ಕಲ್ಪನಾ ಚಾವ್ಲಾ ರಸ್ತೆಗೆ ದೂರುದಾರರನ್ನು ಕರೆಸಿಕೊಂಡಿದ್ದ ಆರೋಪಿಗಳು ₹17.64 ಲಕ್ಷ ಪಡೆದುಕೊಂಡಿದ್ದರು. ಕ್ರಿಪ್ಟೊ ಕರೆನ್ಸಿಗೆ ಹಣ ಬದಲಾವಣೆ ಮಾಡಿಕೊಡುವುದಾಗಿ ನಂಬಿಸಿ ಆ ಹಣವನ್ನು ಪಡೆದುಕೊಂಡು ಪರಾರಿ ಆಗಿದ್ದರು ಎಂದು ಮೂಲಗಳು ತಿಳಿಸಿವೆ.

ದೂರುದಾರರ ಮೇಲೆ ಹಲ್ಲೆ: ಹಣ ಪಡೆಯುವುದಕ್ಕೂ ಮುನ್ನ ದೂರುದಾರರ ಹಾಗೂ ಅವರ ಸ್ನೇಹಿತನ ಮೇಲೆ, ಆರೋಪಿಗಳು ಹಲ್ಲೆ ನಡೆಸಿದ್ದರು. ದೂರುದಾರ ಗಂಭೀರವಾಗಿ ಗಾಯಗೊಂಡಿದ್ದರು ಎನ್ನಲಾಗಿದೆ. ಖಚಿತ ಮಾಹಿತಿ ಆಧರಿಸಿ ದೇವಸಂದ್ರದ ಬಳಿ ನಾಲ್ವರು ಆರೋಪಿ ಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ 12 ಮಂದಿ ಭಾಗಿಯಾಗಿರುವುದು ಪತ್ತೆ ಆಯಿತು. ಬಂಧಿತರು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇಂದಿನಿಂದ ಅಂತರರಾಷ್ಟ್ರೀಯ ಕಾವ್ಯ ಸಮ್ಮಿಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುಮುಖಿಯು ಇದೇ 26ರಿಂದ 28ರವರೆಗೆ ಅರಮನೆ ರಸ್ತೆಯಲ್ಲಿರುವ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಕಾವ್ಯ ಸಮ್ಮಿಲನ ಹಮ್ಮಿಕೊಂಡಿದೆ.

26ರ ಬೆಳಿಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಕವಯತ್ರಿ ರತಿ ಸಕ್ಸೇನಾ ಉದ್ಘಾಟಿಸಲಿದ್ದಾರೆ. ಕವಿ ಎಚ್‌. ಎಸ್‌. ಶಿವಪ್ರಕಾಶ್ ಅವರು ಆಶಯ ನುಡಿಗಳನ್ನಾಡಲಿದ್ದಾರೆ. ದಿತಿ ರೋನೆನ್ ಅವರು ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಎಲ್‌. ಹನುಮಂತಯ್ಯ ಅಧ್ಯಕ್ಷತೆ ವಹಿಸುತ್ತಾರೆ. ಮಧ್ಯಾಹ್ನ 11.30ರಿಂದ ನಡೆಯುವ ಮೊದಲ ಅವಧಿಯಲ್ಲಿ ದಿತಿ ರೋನೆನ್ (ಹೀಬ್ರು), ಮನ್ಸೂರ್ ಬಾನಿಹಾಲಿ, ಮೂಡ್ನಾಕೂಡು ಚಿನ್ನಸ್ವಾಮಿ, ಕೆ.ವೈ. ನಾರಾಯಣಸ್ವಾಮಿ ಭಾಗವಹಿಸುತ್ತಾರೆ. ಕಂನಾಡಿಗಾ ನಾರಾಯಣ ಅವರು ಸಂವಾದ ನಡೆಸುತ್ತಾರೆ.

ಮಧ್ಯಾಹ್ನ 2ರಿಂದ ನಡೆಯಲಿರುವ ದ್ವಿತೀಯ ಅವಧಿಯಲ್ಲಿ ಸೆರಿಕ್ ಕಲಿಯೇವ, ಗೊರಟಿ ವೆಂಕಣ್ಣ, ಪ್ರತಿಭಾ ನಂದಕುಮಾರ, ಅಗ್ರಹಾರ ಕೃಷ್ಣಮೂರ್ತಿ ಭಾಗವಹಿಸಲಿದ್ದು, ಕಿರಣ್ ಗಾಜನೂರು ಅವರು ಸಂವಾದ ನಡೆಸಲಿದ್ದಾರೆ. ಸಂಜೆ 5.30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. 27ರಂದು ಬೆಳಿಗ್ಗೆ 10 ಗಂಟೆಯಿಂದ ಕಾವ್ಯ ಗೋಷ್ಠಿಗಳು ಪ್ರಾರಂಭವಾಗಲಿದ್ದು, ಐದು ಗೋಷ್ಠಿಗಳು ನಡೆಯಲಿವೆ. ಸಂಜೆ 6.30ರಿಂದ ಎಚ್‌. ಎಸ್‌. ಶಿವಪ್ರಕಾಶ್ ಅವರು ರಚಿಸಿರುವ ‘ಮಂಟೇಸ್ವಾಮಿ ಕಥಾ ಪ್ರಸಂಗ’ ನಾಟಕ ಪ್ರದರ್ಶನ ಕಾಣಲಿದೆ.

28ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3.30ರವರೆಗೆ ಮೂರು ಗೋಷ್ಠಿಗಳು ನಡೆಯಲಿವೆ. ಬಳಿಕ ಸಮಾರೋಪ ಸಮಾರಂಭ ನಡೆಯಲಿದ್ದು, ಓ.ಎಲ್. ನಾಗಭೂಷಣಸ್ವಾಮಿ ಅವರು ಸಮಾರೋಪ ನುಡಿಗಳನ್ನಾಡಲಿದ್ದಾರೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಅಧ್ಯಕ್ಷತೆ ವಹಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 948068 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು ‘ಪ್ರಜಾವಾಣಿ’ಗೂ ಕಳುಹಿಸಿಕೊಡಿ. ನಿಮ್ಮ ಹೆಸರು ಹಾಗೂ ವಿಳಾಸವನ್ನು ಕಳಿಸಿ. ಅದನ್ನು ಪ್ರಕಟಿಸಲಾಗುತ್ತದೆ.

ಐಡಿಯಲ್ ಹೋಮ್‌ನಲ್ಲಿರುವ ಖಾಲಿ ನಿವೇಶನಗಳಲ್ಲಿ ಕಸ ಎಸೆದಿರುವುದು

ಬನಶಂಕರಿ 3ನೇ ಹಂತದ ಕತ್ರಿಗುಪ್ಪೆಯ ಪೂರ್ಣಪ್ರಜ್ಞ ಲೇಔಟ್ 2ನೇ ಮುಖ್ಯರಸ್ತೆಯಲ್ಲಿ ತುಂಬಿರುವ ತ್ಯಾಜ್ಯ – ಎಸ್. ಗೋಪಿನಾಥ್

ವೆಂಕಟೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಕಸ

ಖಾಲಿ ನಿವೇಶನದಲ್ಲಿ ಕಸ

ರಾಜರಾಜೇಶ್ವರಿ ನಗರದ ಐಡಿಯಲ್ ಹೋಮ್‌ನಲ್ಲಿರುವ ಖಾಲಿ ನಿವೇಶನಗಳಲ್ಲಿ ಕಸ ಎಸೆಯಲಾಗುತ್ತಿದೆ. ಬೆಳಿಗ್ಗೆ ವೇಳೆಯಲ್ಲಿ ಕಸ ಸಂಗ್ರಹಿಸುವವರು ಬರುವ ಮೊದಲೇ ಕೆಲಸಗಳಿಗೆ ಹೋಗುವವರು ತ್ಯಾಜ್ಯವನ್ನು ನಿವೇಶನಗಳಲ್ಲಿ ಬಿಸಾಡುತ್ತಿದ್ದಾರೆ. ಸಂಜೆ ವೇಳೆಯಲ್ಲೂ ತ್ಯಾಜ್ಯ ಸಂಗ್ರಹಿಸಿದರೆ ಈ ಸಮಸ್ಯೆ ಬಗೆಹರಿಯಬಹುದು. ರಸ್ತೆಯ ಬದಿಗಳಲ್ಲೂ ಕಸವನ್ನು ಪ್ಲಾಸ್ಟಿಕ್ ಅಥವಾ ಚೀಲಗಳಲ್ಲಿ ತುಂಬಿ ಎಸೆಯಲಾಗುತ್ತಿದೆ.

ಪ್ರಮೀಳಾ ಆರ್. ಬಾಳಿಗ

ದೇವಸ್ಥಾನದ ರಸ್ತೆಯಲ್ಲಿ ತ್ಯಾಜ್ಯ

ಬಿಇಎಲ್ ಲೇಔಟ್ 5ನೇ ಬ್ಲಾಕ್ ವಿದ್ಯಾರಣ್ಯಪುರದ ವೆಂಕಟೇಶ್ವರ ದೇವಸ್ಥಾನ ರಸ್ತೆಯಲ್ಲಿ ನಿತ್ಯವೂ ಕಸ ತುಂಬಿರುತ್ತದೆ. ನರಸಿಪುರ ಕೆರೆಯ ಅಂಚಿನಲ್ಲಿರುವ ಈ ರಸ್ತೆ ವಾಯುವಿಹಾರಿಗಳಿಗೆ ನೆಚ್ಚಿನ ತಾಣವೂ ಹೌದು. ಆದರೆ, ಈ ರಸ್ತೆಯ ಎರಡೂ ಕಡೆ ರಾತ್ರಿಯ ವೇಳೆಯಲ್ಲಿ ಕಸವನ್ನು ಎಸೆಯಲಾಗುತ್ತಿದೆ. ಪಾಲಿಕೆಯವರು ನಿತ್ಯವೂ ಇಲ್ಲಿ ಕಸ ತೆರವು ಮಾಡುವುದಿಲ್ಲ, ವಾರಕ್ಕೆ ಒಂದು ಬಾರಿ ತೆರವು ಮಾಡಿದರೆ ದೊಡ್ಡದು ಎಂಬಂತಾಗಿದೆ. ಸ್ಥಳೀಯ ನಿವಾಸಿಗಳ ಆರೋಗ್ಯದ ಜೊತೆಗೆ ಪರಿಸರವನ್ನು ಕಾಪಾಡಲು ಕ್ರಮ ಕೈಗೊಳ್ಳಬೇಕು. ಹಲವು ಬಾರಿ ಅಧಿಕಾರಿಗಳಿಗೆ ದೂರು ನೀಡಿದ್ದರೂ ಪ್ರಯೋಜವಾಗಿಲ್ಲ.

ಕೆ.ಎನ್. ಸಂತೋಷ್

ಪದ್ಮನಾಭನಗರದಲ್ಲಿ ತ್ಯಾಜ್ಯ ರಾಶಿ

ಸದಾ ಕಾಲ ವಾಹನ ದಟ್ಟಣೆ ಇರುವ ಪದ್ಮನಾಭನಗರ ರಸ್ತೆ ಸೇರಿದಂತೆ ಶನಿಮಹಾತ್ಮ ದೇವಸ್ಥಾನ ಮತ್ತು ರಾಯಲ್ ಮಾರ್ಟ್ ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳಲ್ಲಿ ತ್ಯಾಜ್ಯ ರಾಶಿ ಬಿದ್ದಿರುತ್ತದೆ. ವಾಹನ ಸವಾರರು, ಪಾದಚಾರಿಗಳು ದಟ್ಟಣೆ ಮಧ್ಯೆ ದುರ್ನಾತದ ನಡುವೆಯೇ ಸಾಗಬೇಕಾದ ಪರಿಸ್ಥಿತಿ ಇದೆ. ಅಧಿಕಾರಿಗಳು ಇತ್ತ ಗಮನಹರಿಸಿ, ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಿ.

ಎನ್.ಕೆ. ಶ್ರೀಧರ್

ತಿಂಗಳುಗಟ್ಟಲೆ ಕೊಳೆಯುವ ಕಸ

ಹೆಣ್ಣೂರು ಮೇಲ್ಸೇತುವೆಯಲ್ಲಿ ತಿಂಗಳುಗಟ್ಟಲೆ ಕಸ ಕೊಳೆಯುತ್ತಿರುತ್ತದೆ. ಎಚ್‌ಬಿಆರ್ ವಾರ್ಡ್ ಹಾಗೂ ಕಾಚರಕನಹಳ್ಳಿ ವಾರ್ಡ್‌ಗಳೆರಡಕ್ಕೂ ಈ ಮೇಲ್ಸೇತುವೆ ವ್ಯಾಪ್ತಿ ಬರುತ್ತದೆ. ಆದ್ದರಿಂದ ಏನೋ, ಸರಿಯಾಗಿ ಯಾರೂ ಕಸವನ್ನು ತೆರವು ಮಾಡುತ್ತಿಲ್ಲ. ಹಲವು ಬಾರಿ ದೂರು ನೀಡಿದ ಮೇಲೆ ಒಂದು ಬಾರಿ ಸ್ವಚ್ಛಗೊಳಿಸುತ್ತಾರೆ. ನಂತರ ಅದೇ ಕಥೆ. ವಾರದ ಹಲವು ದಿನಗಳು ಮೇಲ್ಸೇತುವೆಯಲ್ಲೇ ಕಸ ಕೊಳೆಯುತ್ತಿರುತ್ತದೆ.

ಮುನಿರಾಜು



ಪದ್ಮನಾಭನಗರದ ರಸ್ತೆಯಲ್ಲಿ ತ್ಯಾಜ್ಯ ತುಂಬಿದ ಕೆಸರು

ಹೆಣ್ಣೂರು ಮೇಲ್ಸೇತುವೆಯಲ್ಲಿರುವ ಕಸ

ಅಪಘಾತ: ಕ್ಯಾಂಟರ್ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ಅರಳಿಮರ ಜಂಕ್ಷನ್‌ನಲ್ಲಿ ಗುರುವಾರ ಮುಂಜಾನೆ ಮಿಲ್ಲಿಂಗ್ ಯಂತ್ರದ ವಾಹನ ಮತ್ತು ಕ್ಯಾಂಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಕ್ಯಾಂಟರ್ ಚಾಲಕ ಮೃತಪಟ್ಟಿದ್ದಾರೆ.

ಸುಹೇಬ್ ಮಲ್ಲಿಕ್ (25) ಮೃತಪಟ್ಟವರು.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ಸುಹೇಬ್ ಮಲ್ಲಿಕ್ ಕ್ಯಾಂಟರ್‌ನಲ್ಲಿ ಕಬ್ಬಿಣ ತುಂಬಿಕೊಂಡು ಮೈಸೂರಿಗೆ ಹೋಗುತ್ತಿದ್ದರು. ಆಗ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಮಿಲ್ಲಿಂಗ್ ಯಂತ್ರದ ವಾಹನವು ಮೈಸೂರು ರಸ್ತೆಯ ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯಿಂದ ಕೆಳಗಿಳಿಯುವಾಗ ರಸ್ತೆ ಉಬ್ಬಿನ ಬಳಿ ಚಾಲಕ ಏಕಾಏಕಿ ಬ್ರೇಕ್ ಹಾಕಿದ್ದಾರೆ. ಆಗ ಹಿಂದಿನಿಂದ ವೇಗವಾಗಿ ಬಂದ ಕ್ಯಾಂಟರ್, ಮಿಲ್ಲಿಂಗ್ ಯಂತ್ರದ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕ್ಯಾಂಟರ್‌ನ ಮುಂಭಾಗ ನಜ್ಜುಗುಜ್ಜಾಗಿ ಒಳಗೆ ಸಿಲುಕಿ ಸುಹೇಬ್ ಮಲ್ಲಿಕ್ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಮಿಲ್ಲಿಂಗ್ ಯಂತ್ರದ ವಾಹನ ಚಾಲಕನ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ. ಹೀಗಾಗಿ, ಚಾಲಕನನ್ನು ಬಂಧಿಸಿ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು. ಚಾಮರಾಜಪೇಟೆ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಐದು ನಗರ ಪಾಲಿಕೆಗಳಲ್ಲಿ ಬೂತ್‌ಗಳ ಸ್ಥಳಗಳ ಮ್ಯಾಪಿಂಗ್’

28ರಿಂದ ಪಲ್ಸ್ ಪೋಲಿಯೊ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಜೂನ್ 28ರಿಂದ ಜುಲೈ 1ರವರೆಗೆ ಹಮ್ಮಿಕೊಂಡಿದ್ದು, ಎಲ್ಲಾ ರೀತಿಯ ಸಿದ್ಧತೆಗಳನ್ನು ಪೂರ್ಣಗೊಳಿಸಿಕೊಳ್ಳಬೇಕು ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ವೆಂಕಟಾಚಲಪತಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಬಿಎ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡಲು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಮ್ಮ ಕ್ಲಿನಿಕ್‌ಗಳು, ಹೆರಿಗೆ ಆಸ್ಪತ್ರೆಗಳು, ನಗರ ಕುಟುಂಬ ಕಲ್ಯಾಣ ಕೇಂದ್ರಗಳು, ಔಷಧಾಲಯಗಳು, ಅಂಗನವಾಡಿ ಕೇಂದ್ರಗಳು ಹಾಗೂ ಶಾಲೆಗಳಲ್ಲಿ ಪೋಲಿಯೊ ಬೂತ್‌ಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳು, ಸ್ವಯಂಸೇವಾ ಸಂಸ್ಥೆಗಳ ಆಸ್ಪತ್ರೆಗಳು, ಮಾಲ್‌ಗಳು, ಖಾಸಗಿ ನರ್ಸಿಂಗ್ ಹೋಮ್‌ಗಳು, ವೈದ್ಯಕೀಯ ಮಹಾವಿದ್ಯಾಲಯಗಳು, ಪ್ರಮುಖ ಉದ್ಯಾನಗಳು, ಮೆಟ್ರೊ ನಿಲ್ದಾಣಗಳು ಹಾಗೂ ಕೊಳಚೆ ಪ್ರದೇಶಗಳಂತಹ ಜನನಿಬಿಡ ಸ್ಥಳಗಳಲ್ಲಿ ಸ್ಥಿರ ಹಾಗೂ ಸಂಚಾರಿ ತಂಡಗಳನ್ನು ನಿಯೋಜಿಸಲಾಗಿದೆ ಎಂದರು.

ಈ ಬೂತ್‌ಗಳ ಮೇಲ್ವಿಚಾರಣೆಗಾಗಿ ಪ್ರಾಧಿಕಾರದ ಆರೋಗ್ಯಾಧಿಕಾರಿಗಳು, ಉಪ ಆರೋಗ್ಯಾಧಿಕಾರಿಗಳು ಹಾಗೂ ಆರೋಗ್ಯ ವೈದ್ಯಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ. ಐದು ನಗರ ಪಾಲಿಕೆಗಳಲ್ಲಿ ಪೋಷಕರು ತಮ್ಮ ಮಕ್ಕಳನ್ನು ಹತ್ತಿರದ ಪೋಲಿಯೊ ಬೂತ್‌ಗಳಿಗೆ ಸುಲಭವಾಗಿ ಕರೆತರಲು ಅನುಕೂಲವಾಗುವಂತೆ ಬೂತ್‌ಗಳ ಸ್ಥಳಗಳನ್ನು https://gba.karnataka.gov.in/polio/ ಮ್ಯಾಪಿಂಗ್ ಮಾಡಲಾಗಿದೆ. ಸಾರ್ವಜನಿಕರು ತಮ್ಮ ಸಮೀಪದ ಬೂತ್‌ಗೆ ಭೇಟಿ ನೀಡಿ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಿಸಬೇಕು ಎಂದು ಮನವಿ ಮಾಡಿದರು.

ಸಾರ್ವಜನಿಕರು ತಮ್ಮ ಮಕ್ಕಳಿಗೆ ಈ ಹಿಂದೆ ಎಷ್ಟೇ ಬಾರಿ ಪೋಲಿಯೊ ಹನಿ ಹಾಕಿಸಿದ್ದರೂ, ಕಾರ್ಯಕ್ರಮದ ದಿನದಂದು ಐದು ವರ್ಷದೊಳಗಿನ ಎಲ್ಲಾ ಮಕ್ಕಳನ್ನು ಸಮೀಪದ ಬೂತ್‌ಗೆ ಕರೆತಂದು ಎರಡು ಹನಿ ಪೋಲಿಯೊ ಲಸಿಕೆ ಹಾಕಿಸಬೇಕು. ಪೋಲಿಯೊ ಮುಕ್ತ ನಗರ ಹಾಗೂ ಪೋಲಿಯೊ ಮುಕ್ತ ವಿಶ್ವ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದರು.

ಪಲ್ಸ್ ಪೋಲಿಯೊ ಕಾರ್ಯಕ್ರಮದ ಭಿತ್ತಿಪತ್ರವನ್ನು ವೆಂಕಟಾಚಲಪತಿ ಅವರು ಬಿಡುಗಡೆ ಮಾಡಿದರು. ಮುಖ್ಯ ಆರೋಗ್ಯಾಧಿಕಾರಿ ಡಾ. ಎಸ್‌.ಎಸ್‌. ಮದನಿ, ನಗರ ಪಾಲಿಕೆಗಳ ಆರೋಗ್ಯಾಧಿಕಾರಿಗಳು ಉಪಸ್ಥಿತರಿದ್ದರು

ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮದ ವಿವರ

ಒಟ್ಟು ಜನಸಂಖ್ಯೆ	1,23,13,207
ಒಟ್ಟು ಮನೆಗಳು	29,30,605
0-5 ವರ್ಷದ ಮಕ್ಕಳು	11,47,872
ಕೊಳಚೆ ಪ್ರದೇಶಗಳು	1,417
ವಲಸೆ ಜನಾಂಗದ ಪ್ರದೇಶಗಳು	4,382
ವಲಸೆ ಜನಸಂಖ್ಯೆ	1,57,372
ವಲಸೆ ಜನಾಂಗದ 0-5 ವರ್ಷದ ಮಕ್ಕಳು	10,747
ಬೂತ್‌ಗಳ ಸಂಖ್ಯೆ	3,444
ಸ್ಥಿರ ತಂಡಗಳು	660
ಸಂಚಾರಿ ತಂಡಗಳು	435
ಒಟ್ಟು ಲಸಿಕಾ ಕಾರ್ಯಕರ್ತರು	15,964
ಒಟ್ಟು ಮೇಲ್ವಿಚಾರಕರು	817

ಸಿಬಿಐ ಜಂಕ್ಷನ್: ದಟ್ಟಣೆ ನರಕ

ಆರ್.ಟಿ ನಗರ, ಗಂಗಾನಗರ, ಸಂಜಯ್ ನಗರ ಸುತ್ತಮುತ್ತಲ ಬಡಾವಣೆಯ ನಿವಾಸಿಗಳಿಗೆ ಸಂಕಷ್ಟ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

• ಆದಿತ್ಯ ಕೆ.ಎ.

ಹೆಬ್ಬಾಳದ ಸಿಬಿಐ ಜಂಕ್ಷನ್ ಬಳಿ ನಿತ್ಯವೂ ಬೆಳಿಗ್ಗೆ ಹಾಗೂ ಸಂಜೆ ವೇಳೆ ಉಂಟಾಗುವ ಸಂಚಾರ ದಟ್ಟಣೆಯ ದೃಶ್ಯ
– ಪ್ರಜಾವಾಣಿ ಚಿತ್ರ / ಕೃಷ್ಣ ಕುಮಾರ್ ಪಿ.ಎಸ್.

ಬೆಂಗಳೂರು: ದಟ್ಟಣೆ ರಸ್ತೆಗಳಲ್ಲಿ ಒಂದಾಗಿರುವ ಹೆಬ್ಬಾಳ ರಸ್ತೆಯ ಸಿಬಿಐ ಜಂಕ್ಷನ್ ಬಳಿ, ಬೆಳಿಗ್ಗೆ ಹಾಗೂ ಸಂಜೆ ನಿತ್ಯವೂ ಉಂಟಾಗುತ್ತಿರುವ ದಟ್ಟಣೆಯಿಂದ ಸಾವಿರಾರು ಮಂದಿ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ.

ಸಿಬಿಐ ಕಚೇರಿಯ ಆಸುಪಾಸಿನಲ್ಲಿ ಬೆಳಿಗ್ಗೆ 8.30ರ ಸುಮಾರಿಗೆ ಸಣ್ಣ ಪ್ರಮಾಣದಲ್ಲಿ ವಾಹನಗಳ ಸಾಲು ಆರಂಭ ಆಗುತ್ತದೆ. ಬೆಳಿಗ್ಗೆ 9ರಿಂದ 11ರ ನಡುವೆ ವಾಹನಗಳು ಸಾಲುಗಟ್ಟಿ ನಿಲುತ್ತವೆ. ಇನ್ನು ಸಂಜೆ 4.30ರಿಂದ ರಾತ್ರಿ 9ರ ವರೆಗೂ ಇದೇ ಗೋಳು. ಈ ದಟ್ಟಣೆಯ ನಡುವೆ ಸಾವಿರಾರು ಚಾಲಕರು ಹೈರಾಣಾಗುತ್ತಿದ್ದಾರೆ.

ಗಂಗಾನಗರ, ಆರ್.ಟಿ ನಗರ, ಸಂಜಯ್‌ನಗರ, ಸುಲ್ತಾನ್‌ಪಾಳ್ಯ, ಕಾವಲ್ ಬೈರಸಂದ್ರ, ಅಶ್ವತ್ಥ್ ನಗರದ ನಿವಾಸಿಗಳು ಮೇಖ್ರಿ ವೃತ್ತ ತಲುಪುವುದಕ್ಕೆ ಸಾಹಸವನ್ನೇ ಪಡಬೇಕಿದೆ. ಹೇಗಾದರೂ ಮಾಡಿ ಮೇಖ್ರಿ ವೃತ್ತ ದಾಟಿದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ಕಚೇರಿ ಬಳಿ ಉಂಟಾಗುವ ದಟ್ಟಣೆಯಲ್ಲಿ ಸಿಲುಕಿಕೊಳ್ಳ ಬೇಕಾದ ಪರಿಸ್ಥಿತಿ ಉದ್ಭವಿಸುತ್ತಿದೆ.

ಬಳ್ಳಾರಿ ರಸ್ತೆಯ ಸಿಬಿಐ ಜಂಕ್ಷನ್ ಹಲವು ಬಡಾವಣೆಗಳಿಗೆ ಸಂಪರ್ಕ ಕೊಂಡಿ. ಈ ಜಂಕ್ಷನ್‌ಲ್ಲಿ ಪ್ರತಿನಿತ್ಯ ತಲೆದೋರುತ್ತಿರುವ ದಟ್ಟಣೆಯಿಂದ ವಿದ್ಯಾರ್ಥಿಗಳು, ಉದ್ಯೋಗಸ್ಥರು, ವ್ಯಾಪಾರಸ್ಥರು ಸರಿಯಾದ ಸಮಯಕ್ಕೆ ನಿಗದಿ ಸ್ಥಳವನ್ನು ತಲುಪುಲು ಸಾಧ್ಯವಾಗದೇ ಪಡಿಪಾಟಲು ಪಡುತ್ತಿದ್ದಾರೆ. ಆಸ್ಪತ್ರೆಗೆ ತೆರಳುವ ರೋಗಿಗಳಪಾಡನ್ನುಕೇಳುವವರೇಇಲ್ಲವಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಬಳ್ಳಾರಿ, ಆಂಧ್ರಪ್ರದೇಶಕ್ಕೆ ತೆರಳುವುದಕ್ಕೆ ಹೆಬ್ಬಾಳ ರಸ್ತೆಯೇ ಪ್ರಮುಖ ಮಾರ್ಗ. ಹೆದ್ದಾರಿಯಲ್ಲಿ ಸಾವಿರಾರು ವಾಹನಗಳು ದಿನದ 24 ಗಂಟೆಯೂ ವೇಗವಾಗಿ ಸಾಗುತ್ತಲೇ ಇರುತ್ತವೆ. ದೇವನಹಳ್ಳಿ ಕಡೆಯಿಂದ ಬರುವ ವಾಹನಗಳು, ಸಿಬಿಐ ಕಚೇರಿ ಬಳಿ ಬಂದು ದಟ್ಟಣೆಯಲ್ಲಿ ಸಿಲುಕಿಕೊಳ್ಳುತ್ತವೆ. ಇನ್ನು ಸಂಜೆ ವೇಳೆ ಯಶವಂತಪುರ, ಮೆಜೆಸ್ಟಿಕ್, ಶಿವಾಜಿನಗರ ಕಡೆಯಿಂದ ಬರುವ ವಾಹನಗಳು ಇದೇ ಜಂಕ್ಷನ್‌ನಲ್ಲಿ ಸಾಲುಗಟ್ಟಿ ನಿಲ್ಲುತ್ತಿವೆ. ಹೀಗಾಗಿ, ಆರ್.ಟಿ ನಗರ, ಗಂಗಾನಗರ, ಕಾವಲ್ ಬೈರಸಂದ್ರದ ನಿವಾಸಿಗಳ ಕೆಲಸ ಕಾರ್ಯಕ್ಕೆಅಡಚಣೆಉಂಟಾಗುತ್ತಿದೆ.

ಸಮಾವೇಶ ಇದ್ದರೆ ಸಂಕಷ್ಟ ಖಚಿತ: ಮೇಖ್ರಿ ವೃತ್ತದ ಬಳಿ ಅರಮನೆ ಮೈದಾನವಿದೆ. ಈ ಮೈದಾನವು ವಾರಾಂತ್ಯದಲ್ಲಿ ರಾಜಕೀಯ ಸಮಾವೇಶಗಳು, ಸಂಘ–ಸಂಸ್ಥೆಗಳ ಕಾರ್ಯಕ್ರಮಕ್ಕೆ ವೇದಿಕೆ ಆಗುತ್ತದೆ. ಸಮಾವೇಶಕ್ಕೆಂದು ನೂರಾರು ಬಸ್, ಕಾರು, ಜೀಪುಗಳಲ್ಲಿ ದೂರದ ಊರುಗಳಿಂದ ಜನರು ಬರುತ್ತಾರೆ. ಸಂಚಾರ ಪೊಲೀಸರು ಮುನ್ನೆಚ್ಚರಿಕೆ ಕ್ರಮವಾಗಿ ಸಂಚಾರ ಮಾರ್ಗ ಬದಲಾವಣೆ ಮಾಡಿದ್ದರೂ, ಅರಮನೆ ಮೈದಾನದ ಆಸುಪಾಸಿನಲ್ಲಿ ದಟ್ಟಣೆ ಎದುರಾಗುತ್ತಲೇ ಇದೆ ಎಂದು ಸ್ಥಳೀಯರು ನೋವು ತೋಡಿಕೊಳ್ಳುತ್ತಾರೆ.

ಅವೈಜ್ಞಾನಿಕ ಕೆಳಸೇತುವೆ: ಸಿಬಿಐ ಕಚೇರಿಯ ಬಳಿ ಎರಡೂ ಬದಿಯಲ್ಲೂ ಸರ್ವೀಸ್ ರಸ್ತೆ ಇದೆ. ಜತೆಗೆ, ನಾಲ್ಕು ಕಡೆ ಕಿರಿದಾದ ಕೆಳಸೇತುವೆ ಇದೆ. ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲ ಬ್ಯೂರೊ, ಭಾರತೀಯ ಪಶು ಸಂಶೋಧನಾ ಚಿಕಿತ್ಸಾ ಸಂಸ್ಥೆಯ ಬಳಿಯ ಕೆಳಸೇತುವೆಯನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಗಿದೆ. ಈ ಸೇತುವೆಯ ಬಳಿ ಚಾಲಕರು, ಆರ್.ಟಿ. ನಗರ ಹಾಗೂ ಗಂಗಾನಗರದ ಕಡೆಗೆ ಬಿಎಂಟಿಸಿ ಬಸ್‌ಗಳನ್ನು ತಿರುಗಿಸಲು ನಿತ್ಯವೂ ಸಾಹಸ ಪಡುವ ದೃಶ್ಯವು ಕಾಣಿಸುತ್ತದೆ.

ಸಾರ್ವಜನಿಕರ ಅಭಿಪ್ರಾಯ...

ಬುಕಿಂಗ್ ರದ್ದು



ಬೆಳಿಗ್ಗೆ 11.30ರ ವರೆಗೂ ವಾಹನಗಳು ಮುಂದಕ್ಕೆ ಸಾಗುವುದೇ ಕಷ್ಟ. ಮಧ್ಯಾಹ್ನ 12ರ ಬಳಿಕ ತೊಂದರೆ ಇಲ್ಲ. ಜತೆಗೆ, ಸಂಜಯ್‌ನಗರ ಮುಖ್ಯರಸ್ತೆಯೂ ಹದಗೆಟ್ಟಿದೆ. ಇಂತಹ ಸ್ಥಿತಿಯಲ್ಲಿ ಬಾಡಿಗೆಯೂ ಸಿಗುವುದಿಲ್ಲ. ಪ್ರಯಾಣಿಕರು ಬುಕ್ ಮಾಡಿದ್ದ ಸ್ಥಳ ತಲುಪುವುದಕ್ಕೆ ಒಂದು ತಾಸು ಬೇಕಿದೆ. ಅಷ್ಟರಲ್ಲಿ ಪ್ರಯಾಣಿಕರು ಬುಕಿಂಗ್ ರದ್ದು ಪಡಿಸಿರುತ್ತಾರೆ. ಇದರಿಂದ ನಮಗೆ ನಷ್ಟವಾಗುತ್ತಿದೆ.

–ಆದಿಲ್, ಆಟೊ ಚಾಲಕ, ಆರ್.ಟಿ ನಗರ

ಬಾರ್ ಎದುರು ವಾಹನ, ಸಂಕಷ್ಟಕ್ಕೆ ಆಹ್ವಾನ

ಹೆಬ್ಬಾಳ ಮಾರ್ಗದಲ್ಲಿ ಪ್ರತಿನಿತ್ಯ ವಿಐಪಿ ವಾಹನಗಳ ಸಂಚಾರ ಇರುತ್ತದೆ. ಆಗ ಸಾಮಾನ್ಯರು ಅರ್ಧ ತಾಸು ದಟ್ಟಣೆಯಲ್ಲೇ ನಿಂತಿರಬೇಕಿದೆ. ಜತೆಗೆ, ಕೆಳಸೇತುವೆಯನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಗಿದೆ. ಮದ್ಯ ಖರೀದಿಸಲೆಂದು ಸರ್ವೀಸ್ ರಸ್ತೆಯಲ್ಲಿರುವ ಬಾರ್ ಎದುರು ವಾಹನ ನಿಲುಗಡೆ ಮಾಡಿ ಹೋಗುತ್ತಾರೆ. ವಾಹನ ಮಾಲೀಕರು ವಾಪಸ್ ಬರುವವರೆಗೂ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ಕೆಳಸೇತುವೆಯಲ್ಲೇ ನಿಂತಿರುತ್ತವೆ.

–ಮಂಜುನಾಥ್, ರಾಜಾಜಿನಗರ

ಪರ್ಯಾಯ ವ್ಯವಸ್ಥೆ ಮಾಡಲಿ

ಸರ್ವೀಸ್ ರಸ್ತೆಯಲ್ಲಿ ಖಾಸಗಿ ಬಸ್ ನಿಲುಗಡೆ ಮಾಡಿದರೆ ₹50 ಸಾವಿರ ದಂಡ ಹಾಕಲಾಗುವುದು ಎಂದು ಸಂಚಾರ ಪೊಲೀಸರು ಎಚ್ಚರಿಕೆ ನೀಡಿದ್ದರು. ಆದರೂ, ರಾತ್ರಿ ವೇಳೆ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಎಸ್ಟೀಮ್ ಮಾಲ್ ವರೆಗೂ ಖಾಸಗಿ ಬಸ್‌ಗಳು ನಿಂತಿರುತ್ತವೆ. ಸಂಚಾರ ಪೊಲೀಸರು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಪರ್ಯಾಯ ವ್ಯವಸ್ಥೆ ಮಾಡಬೇಕಿದೆ.

– ಇಮ್ರಾನ್, ಯಲಹಂಕ

ಮೆಟ್ರೊ ಕಾಮಗಾರಿ ವಿಳಂಬದಿಂದ ಸಮಸ್ಯೆ

ಈ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭವಾದರೆ ದಟ್ಟಣೆ ತುಸು ತಗ್ಗಬಹುದು. ಆದರೆ, ಕಾಮಗಾರಿ ನಿಧಾನವಾಗಿ ಸಾಗುತ್ತಿದ್ದು, ಹೆಬ್ಬಾಳ ರಸ್ತೆಯ ಅಕ್ಕಪಕ್ಕದ ಬಡಾವಣೆಯ ನಿವಾಸಿಗಳು ನಿತ್ಯವೂ ತೊಂದರೆಗೆ ಸಿಲುಕಿದ್ದಾರೆ.

–ರಾಜಾರೆಡ್ಡಿ, ಆರ್.ಟಿ ನಗರ

ಕೆಳಸೇತುವೆ ಜಲಾವೃತ



ಜೋರು ಮಳೆ ಬಂದ ಸಂದರ್ಭದಲ್ಲಿ ಪಶು ವೈದ್ಯಕೀಯ ಮಹಾವಿದ್ಯಾಲಯದ ಎದುರಿನ ಕೆಳಸೇತುವೆ ಜಲಾವೃತವಾಗುತ್ತದೆ. ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್ ಹೊರತು ಪಡಿಸಿ ದ್ವಿಚಕ್ರ ವಾಹನ, ಕಾರು ಹಾಗೂ ಆಟೊ ಸಂಚಾರಕ್ಕೆ ತೊಂದರೆ ಎದುರಾಗುತ್ತಿದೆ.

–ಪ್ರಶಾಂತ್, ಆರ್‌ಬಿಐ ಕಾಲೊನಿ

‘ಫಾಸ್ಟ್ ಫುಡ್’ ಗಾಡಿಗಳ ಹಾವಳಿ



ಇಂದಿರಾ ಕ್ಯಾಂಟೀನ್ ಬಳಿಯಿಂದ ಪಶು ವೈದ್ಯಕೀಯ ಕಾಲೇಜು ವರೆಗೂ ಸಂಜೆಯ ವೇಳೆ ಸರ್ವೀಸ್ ರಸ್ತೆಯ ಬದಿಯಲ್ಲೇ 10 ‘ಫಾಸ್ಟ್ ಫುಡ್’ ಗಾಡಿಗಳು ನಿಂತಿರುತ್ತವೆ. ಆಗ ವಾಹನಗಳು ಮುಂದಕ್ಕೆ ಸಾಗಲು ಸಾಧ್ಯವಾಗದೇ ಮೂರು ಪಥದಲ್ಲಿ ನಿಂತಿರುತ್ತವೆ. ಬಾರ್ ಎದುರು ಸಂಜೆಯ ವೇಳೆ ವಾಹನಗಳು ನಿಂತರೆ, ಸಿಬಿಐ ಜಂಕ್ಷನ್‌ವರೆಗೂ ಟ್ರಾಫಿಕ್ ಸಮಸ್ಯೆ ಆಗುತ್ತಿದೆ.

– ಪುರುಷೋತ್ತಮ, ಹೆಬ್ಬಾಳ

ಖಾಸಗಿ ಬಸ್: ಕಾರ್ಯಾಚರಣೆಗೆ ಆಗ್ರಹ

ಈ ಮಾರ್ಗದಲ್ಲಿ ಹಲವು ಟ್ರಾವೆಲ್ ಕಂಪನಿಗಳ ಬಸ್‌ಗಳು ಪ್ರಮುಖ ರಸ್ತೆಯನ್ನೇ ಪ್ಲಾಟ್‌ಫಾರ್ಮ್‌ನಂತೆ ಬಳಸುತ್ತಿವೆ. ಇದರಿಂದಲೂ ಸಮಸ್ಯೆ ಆಗುತ್ತಿದೆ. ಇದರಿಂದ ಮೇಖ್ರಿ ವೃತ್ತ, ಹೆಬ್ಬಾಳದ ವರೆಗೆ ಸಂಚಾರ ದಟ್ಟಣೆ ಆಗುತ್ತಿದೆ.

ಮೇಖ್ರಿ ವೃತ್ತದಿಂದ ತುಸು ದೂರದಲ್ಲೇ ಹೊರ ರಾಜ್ಯಕ್ಕೆ ತೆರಳುವ ಖಾಸಗಿ ಬಸ್‌ಗಳನ್ನು ಪಾರ್ಕ್ ಮಾಡಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲಾಗುತ್ತಿದೆ. ಇದರಿಂದ ಮತ್ತಷ್ಟು ದಟ್ಟಣೆಯಾಗಿ ನಾಗರಿಕರು ಬಸವಳಿಯುವ ಸ್ಥಿತಿ ಇದೆ. ಈ ಹಿಂದೆ ಸಂಚಾರ ಪೊಲೀಸರು ಕಾರ್ಯಾಚರಣೆ ನಡೆಸಿ, ರಸ್ತೆ ಬದಿಯಲ್ಲಿ ಪಾರ್ಕ್ ಮಾಡುವ ಬಸ್‌ಗಳ ಮಾಲೀಕರಿಗೆ ದಂಡ ವಿಧಿಸಿದ್ದರು. ಇದೇ ಮಾದರಿಯ ಕಾರ್ಯಾಚರಣೆಯನ್ನು ಮತ್ತೆ ನಡೆಸಿದರೆ ಈ ಭಾಗದ ವಾಹನ ಸವಾರರಿಗೆ ಅನುಕೂಲ ಆಗಲಿದೆ ಎಂದು ನಾಗರಿಕರು ಆಗ್ರಹಿಸಿದ್ದಾರೆ.

ನಗರದ ಸಿಬಿಐ ಬಳಿ ನಿತ್ಯವೂ ಬೆಳಿಗ್ಗೆ ಹಾಗೂ ಸಾಯಂಕಾಲ ಸಂಚಾರ ದಟ್ಟಣೆಯಿಂದ ವಾಹನ ಸವಾರರ ಪರದಾಟ

ರೇಣುಕಸ್ವಾಮಿ ಕೊಲೆ ಪ್ರಕರಣ • ಪ್ರಾಸಿಕ್ಯೂಷನ್ ಮನವಿ ಪರಿಗಣಿಸಿದ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶೆ

‘ಕಣ್ಣು ಮುಚ್ಚಿಕೊಂಡು ತಕ್ಕಡಿ ತೂಗಬೇಕಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ನ್ಯಾಯದೇವತೆಯ ಕಣ್ಣುಗಳಿಗೆ ಕಟ್ಟಿದ್ದ ಪಟ್ಟಿಯನ್ನು ಈಗ ತೆಗೆದು ಹಾಕಲಾಗಿದೆ. ಕಣ್ಣು ಮುಚ್ಚಿಕೊಂಡು ತಕ್ಕಡಿ ತೂಗುವ ದಿನಗಳು ಮುಗಿದುಹೋಗಿವೆ. ಬೆಳೆದು ನಿಂತಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ನೆರವಿನಿಂದ ಸಾಕ್ಷಿಗಳ ಹೇಳಿಕೆಯನ್ನು ನ್ಯಾಯದಾನದಲ್ಲಿ ಗಂಭೀರವಾಗಿ ಪರಿಗಣಿಸುವ ಅಗತ್ಯ ಇದೆ’ ಎಂದು ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪ್ರತಿಪಾದಿಸಿದೆ.

‘ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ಸಾಕ್ಷಿ 16ರ (ಆರ್.ಮಂಜುನಾಥ್) ಪಾಟಿ ಸವಾಲು ಮುಂದೂಡಬೇಕು’ ಎಂಬ ಆರೋಪಿಗಳ ಪರ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿರುವ ನಗರದ 58ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್‌ನ ನ್ಯಾಯಾಧೀಶೆ ಸುಜಾತಾ ಎಂ.ಸಾಂಬ್ರಾಣಿ ಅವರು ಪ್ರಾಸಿಕ್ಯೂಷನ್ ಮನವಿಯನ್ನು ಪರಿಗಣಿಸಿ ಆದೇಶಿಸಿದ್ದಾರೆ.

ಆರೋಪಿಗಳು ರೇಣುಕಸ್ವಾಮಿ ಅವರನ್ನು 2024ರ ಜೂನ್ 8ರಂದು ಅಪಹರಣ ಮಾಡಿ ಬೆಂಗಳೂರಿಗೆ ಕರೆತರುವ ಮಾರ್ಗ ಮಧ್ಯೆ ತುಮಕೂರಿನ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ದುರ್ಗಾ ಬಾರ್‌ನಲ್ಲಿ ಕಾರು ನಿಲ್ಲಿಸಿ ಮದ್ಯ ಮತ್ತು ತಿನಿಸನ್ನು ಖರೀದಿಸಿದ್ದರು. 4ನೇ ಆರೋಪಿ ರಾಘವೇಂದ್ರ, 6ನೇ ಆರೋಪಿ ಜಗದೀಶ್ ಮತ್ತು 7ನೇ ಆರೋಪಿ ಅನುಕುಮಾರ್ ಮದ್ಯ ಮತ್ತು ತಿನಿಸಿನ ಬಿಲ್ ಅನ್ನು ರೇಣುಕ ಸ್ವಾಮಿ ಫೋನ್‌ನಿಂದಲೇ ಪಾವತಿ ಮಾಡಿಸಿದ್ದರು.

ಇವರೆಲ್ಲಾ ರೇಣುಕಸ್ವಾಮಿಯನ್ನು ದುರ್ಗಾ ಬಾರ್‌ನಿಂದ ಹೊರಗೆ ಕರೆದುಕೊಂಡು ಹೋಗುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯದ ತುಣುಕುಗಳನ್ನು ಪ್ರಾಸಿಕ್ಯೂಷನ್ ನ್ಯಾಯಾಲಯಕ್ಕೆ ಹಾಜರುಪಡಿಸಿತ್ತು. ಅಂತೆಯೇ, ಮಹಜರು ಸಾಕ್ಷಿಯ ಮುಖ್ಯ ವಿಚಾರಣೆ ನಂತರ ಪಾಟಿ ಸವಾಲಿಗೆ ಒಳಪಡಿಸುವುದನ್ನು 1ನೇ ಆರೋಪಿ ಪವಿತ್ರಾಗೌಡ ಪರ ವಕೀಲರಾದ ಬಾಲನ್ ಮತ್ತು 2ನೇ ಆರೋಪಿ ದರ್ಶನ್ ಪರ ಪದಾಂಕಿತ ಹಿರಿಯ ವಕೀಲರಾದ ಹಸ್ಮತ್ ಪಾಷ ತೀವ್ರವಾಗಿ ಆಕ್ಷೇಪಿಸಿದ್ದರು.

ಈ ವೇಳೆ ಆರೋಪಿ ಪರ ವಕೀಲರ ನಿಲುವನ್ನು ಬಲವಾಗಿ ಆಕ್ಷೇಪಿಸಿದ್ದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, ‘ಸಾಕ್ಷಿಯ ಹೇಳಿಕೆಗೆ ಅಡ್ಡಿಪಡಿಸುವಂತಿಲ್ಲ. ಇದು ಸತ್ಯ ನುಡಿಯುವ ಸಾಕ್ಷಿಯ ಬಾಯಿ ಮುಚ್ಚಿಸಿದಂತೆ ಆಗುತ್ತದೆ. ಅಂತೆಯೇ, ನ್ಯಾಯಾಲಯ ಕೂಡಾ ಇದನ್ನು ಮುಕ್ತವಾಗಿ ದಿಟ್ಟಿಸಿ ತೀರ್ಮಾನಿಸಬೇಕು’ ಎಂದು ಮನವಿ ಮಾಡಿದ್ದರು. ಇದನ್ನು ಪರಿಗಣಿಸಿರುವ ನ್ಯಾಯಾಧೀಶರು ಮಹಜರು ಸಾಕ್ಷಿಯ ಪಾಟಿ ಸವಾಲು ನಡೆಸಲು ಪ್ರಾಸಿಕ್ಯೂಷನ್ ಕೋರಿಕೆಗೆ ಅನುವು ಮಾಡಿಕೊಟ್ಟಿದ್ದಾರೆ.

ಪೊಲೀಸರಿಗೆ ಹೈಕೋರ್ಟ್ ತರಾಟೆ

ಬೆಂಗಳೂರು: ಮದುವೆಯಾಗುವುದಾಗಿ ನಂಬಿಸಿ ವಂಚಿಸಿದ ಪ್ರಕರಣದಲ್ಲಿ ಆರೋಪಿ ಪ್ರೊಬೇಷನರಿ ಎಸ್‌ಐ ಬದಲಿಗೆ ಅವರ ತಮ್ಮನನ್ನು ಬಂಧಿಸಿದ ಪೊಲೀಸರ ನಡೆಯನ್ನು ಮತ್ತೊಮ್ಮೆ ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, ‘ಯೂನಿಫಾರಂ ಇದೆ ಎಂದು ಏನು ಬೇಕಾದರೂ ಮಾಡುತ್ತೀರಾ?’ ಎಂದು ಕಿಡಿ ಕಾರಿದೆ.

ಪೊಲೀಸರು ತನ್ನನ್ನು ಬಂಧಿಸಿರುವ ಕ್ರಮವನ್ನು ಪ್ರಶ್ನಿಸಿ ದಾವಣಗೆರೆಯ ಎನ್.ದರ್ಶನ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠ, ‘ಪ್ರಕರಣದಲ್ಲಿ ಆರೋಪಿಯ ತಮ್ಮನ ತಪ್ಪಿಲ್ಲದಿದ್ದರೂ ಏಕೆ ಬಂಧಿಸಿದ್ದೀರಿ’ ಎಂದು ಪೊಲೀಸರನ್ನು ಖಾರವಾಗಿ ಪ್ರಶ್ನಿಸಿತು. ‘ವಿನಾಕಾರಣ ಬಂಧಿಸುವುದು ಪೊಲೀಸರಿಗೆ ಆಟವಾಗಿದೆ. ಇದರಿಂದ ಬಂಧಿತರ ಜೀವನದ ಮೇಲಾಗುವ ಪರಿಣಾಮದ ಅರಿವು ಪೊಲೀಸರಿಗಿದೆಯೇ? ಬಂಧನ ಅವಶ್ಯವಿರುವ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸುವುದಿಲ್ಲ, ಬೇಡವಾದ ಪ್ರಕರಣಗಳಲ್ಲಿ ಬಂಧಿಸಿ ಅನಗತ್ಯ ಕಿರುಕುಳ ನೀಡುತ್ತಾರೆ. ಅವರಿಗೆ ಇದೊಂದು ರೀತಿ ಚಾಳಿಯಾಗಿ ಪರಿಣಮಿಸಿದೆ’ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

‘ಮ್ಯಾಜಿಸ್ಟ್ರೇಟ್ ಕೂಡ ಇಂತಹ ಬಂಧನಕ್ಕೆ ಅವಕಾಶ ನೀಡಬಾರದು’ ಎಂದ ನ್ಯಾಯಪೀಠ, ‘ಪ್ರಕರಣದಲ್ಲಿ ಎಸ್‌ಐ ಅವರ ತಮ್ಮ ದರ್ಶನ್ ಅವರನ್ನು ಬಂಧಿಸಿದ್ದ ಚಿತ್ರದುರ್ಗ ಮಹಿಳಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ವಿರುದ್ಧ ಇಲಾಖಾ ವಿಚಾರಣೆ ನಡೆಸಬೇಕು’ ಎಂದು ಆದೇಶಿಸಿ ವಿಚಾರಣೆ ಮುಂದೂಡಿತು.

ಪ್ರಕರಣವೇನು?: ಪ್ರೊಬೇಷನರಿ ಸಬ್ ಇನ್‌ಸ್ಪೆಕ್ಟರ್ ವರುಣ್ ಕುಮಾರ್ ಇನ್‌ಸ್ಟಾಗ್ರಾಂನಲ್ಲಿ ಮಹಿಳೆಯೊಂದಿಗೆ ಸ್ನೇಹ ಬೆಳೆಸಿದ್ದರು. ನಂತರ ಮಹಿಳೆ ಹಾಗೂ ವರುಣ್ ಕುಮಾರ್ ಅವರ ಗಾಢ ಸ್ನೇಹ, ದೈಹಿಕ ಸಂಪರ್ಕಕ್ಕೆ ಒಳಗಾಗುವಷ್ಟು ಮುಂದುವರಿದಿತ್ತು.

ಏತನ್ಮಧ್ಯೆ, ಮಹಿಳೆಗೆ ವಿವಾಹವಾಗಿದೆ ಎಂಬುದು ತಿಳಿದುಬಂದ ಕಾರಣ ವರುಣ್ ಕುಮಾರ್ ಮಹಿಳೆಯೊಂದಿಗಿನ ಸಂಬಂಧವನ್ನು ತೊರೆದಿದ್ದರು. ಈ ಹಿನ್ನೆಲೆಯಲ್ಲಿ ಮಹಿಳೆ ವರುಣ್ ಕುಮಾರ್ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ದೂರು ನೀಡಿದ್ದರು.

ಎಫ್‌ಐಆರ್ ದಾಖಲಿಸಿದ ಪೊಲೀಸರು, ಆರೋಪಿ ವರುಣ್ ಕುಮಾರ್ ಅವರ ತಮ್ಮ ದರ್ಶನ್‌ನನ್ನು ಬಂಧಿಸಿದ್ದರು. ದರ್ಶನ್ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದು, ಈ ಬಂಧನವನ್ನು ಪ್ರಶ್ನಿಸಿ ದರ್ಶನ್ ಹಾಗೂ ಕುಟುಂಬಸ್ಥರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ವರುಣ್ ಕುಮಾರ್ ತಲೆ ಮರೆಸಿಕೊಂಡಿದ್ದಾರೆ.

ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಹೈಕೋರ್ಟ್ ಕಿವಿಮಾತು

ಬೆಂಗಳೂರು: ನಗರದ ಅಪಾರ್ಟ್‌ಮೆಂಟ್‌ವೊಂದರ ಆವರಣದಲ್ಲಿದ್ದ ಅಶ್ವತ್ಥ ವೃಕ್ಷವನ್ನು ಬಲವಂತವಾಗಿ ಕಿತ್ತುಹಾಕಿದ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ, ‘ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದಡಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕು’ ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಬೇಗೂರು ಮುಖ್ಯ ರಸ್ತೆಯ ಎಲೇನಹಳ್ಳಿಯಲ್ಲಿರುವ ‘ಎಸ್‌ಎನ್‌ಎನ್ ರಾಜ್ ಸೆರೆನಿಟಿ ಅಪಾರ್ಟ್‌ಮೆಂಟ್ ಮಾಲೀಕರ ಸಂಘ’ದ ಅಧ್ಯಕ್ಷ ವಿವೇಕ್ ಪಾಂಡೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿ ವಜಾಗೊಳಿಸಿರುವ ನ್ಯಾಯಪೀಠ, ‘ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವವರು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವುದಕ್ಕೆ ಮುಂದಾಗದೆ ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳಬೇಕು. ಸಹಬಾಳ್ವೆಯಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕು’ ಎಂದು ಕಿವಿಮಾತು ಹೇಳಿದೆ.

ಪ್ರಕರಣವೇನು?: ಸಂಘದ ವತಿಯಿಂದ ಅಪಾರ್ಟ್‌ಮೆಂಟ್‌ನ ಉದ್ಯಾನವನದಲ್ಲಿ ಅಶ್ವತ್ಥ ಗಿಡವೊಂದನ್ನು ನೆಡಲಾಗಿತ್ತು. ಈ ಗಿಡವನ್ನು ಅಪಾರ್ಟ್‌ಮೆಂಟ್‌ನ ಕೆಲವರು 2025ರ ಡಿಸೆಂಬರ್ 14ರಂದು ಮಧ್ಯಾಹ್ನ ಬಲವಂತವಾಗಿ ಕಿತ್ತುಹಾಕಿದ್ದರು.

ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು. ‘ಅಶ್ವತ್ಥ ವೃಕ್ಷ ಹಿಂದೂಗಳು ಪೂಜಿಸುವ ಪವಿತ್ರ ವೃಕ್ಷವಾಗಿದೆ. ಹಿಂದೂ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಏಕೈಕ ಉದ್ದೇಶದಿಂದಲೇ ಆರೋಪಿಗಳು ಈ ಕೃತ್ಯ ಎಸಗಿದ್ದಾರೆ. ನಮ್ಮನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ ಎಂದು ಕಾನೂನು ಕೈಗೆತ್ತಿಕೊಂಡು ಸಂಘದ ಸದಸ್ಯರಿಗೆ ಬೆದರಿಕೆ ಹಾಕಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

‘ದೂರು ನೀಡಿದರೂ ಪೊಲೀಸರು ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಆದ್ದರಿಂದ, ಪ್ರಕರಣ ದಾಖಲಿಸಿ ತನಿಖೆ ನಡೆಸಲು ಆದೇಶಿಸಬೇಕು’ ಎಂದು ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಬಿಡಿಎಗೆ ‘ಪಿಆರ್‌ಸಿಐ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾ (ಪಿಆರ್‌ಸಿಐ) ‘ನೆಕ್ಸ್ಟ್ ಜೆನ್ ಗವರ್ನೆನ್ಸ್ ಅವಾರ್ಡ್ಸ್’ ಘೋಷಣೆ ಮಾಡಿದ್ದು, ಸಾರ್ವಜನಿಕ ಕುಂದುಕೊರತೆ ನಿವಾರಣೆಯ ಸಾಧನೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ನಾಗರಿಕ ಸ್ನೇಹಿ ನಗರಾಡಳಿತದ ವಿಭಾಗದಲ್ಲಿ ಪಿಆರ್‌ಸಿಐ ಪ್ರಶಸ್ತಿಗೆ ಆಯ್ಕೆಯಾಗಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ಆ.1 ರಂದು ಬೆಳಿಗ್ಗೆ 11ಕ್ಕೆ ನವದೆಹಲಿಯ ಕಾನ್ಸ್ಟಿಟ್ಯೂಷನ್ ಕ್ಲಬ್ ಆಫ್ ಇಂಡಿಯಾದಲ್ಲಿ ನಡೆಯಲಿದೆ. ಇದೇ ವೇಳೆ ಹಿರಿಯ ಅಧಿಕಾರಿಗಳು, ಮಾಧ್ಯಮ ಪ್ರತಿನಿಧಿಗಳು ಹಾಗೂ ಕೈಗಾರಿಕಾ ನಾಯಕರನ್ನು ಒಳಗೊಂಡ ಪಿಆರ್‌ಸಿಐ ಟ್ರಾನ್ಸ್‌ಫಾರ್ಮೇಟಿವ್ ಗವರ್ನೆನ್ಸ್ ಸಿಂಪೋಸಿಯಂ ಕೂಡ ಆಯೋಜಿಸಲಾಗಿದೆ ಎಂದು ಪಿಆರ್‌ಸಿಐ ಚೇರ್‌ಮನ್ ಎಂ.ಬಿ. ಜಯರಾಮ್, ರಾಷ್ಟ್ರೀಯ ಅಧ್ಯಕ್ಷೆ ಗೀತಾ ಶಂಕರ್, ಗವರ್ನಿಂಗ್ ಕೌನ್ಸಿಲ್ ನಿರ್ದೇಶಕಿ ಟಿ.ಎಸ್.ಲತಾ ತಿಳಿಸಿದ್ದಾರೆ.

ಬಿಡಿಎ ಆಡಳಿತದಲ್ಲಿ ತಂದಿರುವ ವಿನೂತನ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ ಈ ಪ್ರಶಸ್ತಿಗೆ ಪ್ರಮುಖ ಕಾರಣವಾಗಿದೆ. ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಅವರ ನೇತೃತ್ವದಲ್ಲಿ 2025ರ ಆಗಸ್ಟ್‌ನಲ್ಲಿ ಆರಂಭವಾದ ಈ ವ್ಯವಸ್ಥೆಯು ಪಾರದರ್ಶಕತೆ, ತಂತ್ರಜ್ಞಾನ, ಉತ್ತಮ ಆಡಳಿತ ಮತ್ತು ನಾಗರಿಕ ದೃಷ್ಟಿಕೋನದ ಮೇಲೆ ಸಂಪೂರ್ಣವಾಗಿ ರೂಪುಗೊಂಡಿದೆ. ಇದು ದೂರವಾಣಿ, ವಾಟ್ಸ್‌ಆ್ಯಪ್, ‘ಎಕ್ಸ್’ ಖಾತೆ, ಜನಸ್ಪಂದನ ಸೇರಿದಂತೆ ಬಹು ವೇದಿಕೆಗಳ ಮೂಲಕ ದಿನದ 24 ಗಂಟೆಯೂ ದೂರುಗಳನ್ನು ಸ್ವೀಕರಿಸುತ್ತಿದೆ. ಸ್ವೀಕರಿಸಿದ ಪ್ರತಿಯೊಂದು ದೂರಿಗೂ ಒಂದು ಪ್ರತ್ಯೇಕ ಐಡಿ ನೀಡಲಾಗುತ್ತಿದೆ. ನಿಗದಿತ ಸಮಯದೊಳಗೆ ಅಂದರೆ 30 ಅಥವಾ 60 ದಿನಗಳಲ್ಲಿ ದೂರುಗಳನ್ನು ಪರಿಹರಿಸುವುದು ಕಡ್ಡಾಯವಾಗಿದೆ.

ಬಿಡಿಎ ಜೊತೆಗೆ ನಾಲ್ವರು ಅಧಿಕಾರಿಗಳಿಗೆ ಪ್ರಶಸ್ತಿಗಳನ್ನು ಘೋಷಿಸಲಾಗಿದೆ.

ಶಂಕಿತ ಉಗ್ರ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಪಾಕಿಸ್ತಾನದ ಜೊತೆಗೆ ನಂಟು ಹೊಂದಿದ ಆರೋಪದಡಿ ಜಿಲ್ಲೆಯ ಬನ್ನಿಕೋಡ ಗ್ರಾಮದ ಹೊರವಲಯದ ಮನೆಯೊಂ ದರಲ್ಲಿ ಬಂಧಿತನಾಗಿರುವ ಶಂಕಿತ ಉಗ್ರ, ಉತ್ತರ ಪ್ರದೇಶ ಮೂಲದ ಸೊಹೇಲ್‌ನನ್ನು (20) ಹರಿಹರ ಗ್ರಾಮಾಂತರ ಠಾಣೆಯ ಪೊಲೀಸರು 10 ದಿನ ಪೊಲೀಸ್ ವಶಕ್ಕೆ ಪಡೆದಿದ್ದಾರೆ.

ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಯನ್ನು ಹೆಚ್ಚಿನ ವಿಚಾರಣೆ ನಡೆಸಲು ವಶಕ್ಕೆ ನೀಡುವಂತೆ ಹರಿಹರದ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಪೊಲೀಸರು ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ ಪೊಲೀಸ್ ವಶಕ್ಕೆ ನೀಡಿ ಆದೇಶಿಸಿದೆ. ಜಿಲ್ಲಾ ಕಾರಾಗೃಹದಿಂದ ಆರೋಪಿಯನ್ನು ತಮ್ಮ ವಶಕ್ಕೆ ಪಡೆದ ಪೊಲೀಸರು ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವಿಚಾರಣೆ ನಡೆಸುತ್ತಿದ್ದಾರೆ. ಶಂಕಿತ ಉಗ್ರನ ಮೊಬೈಲ್ ಫೋನ್ ಅನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪೆಟಾ ಸುಪರ್ದಿಯಲ್ಲೇ ಮುಂದುವರಿಸಿ ಹೈಕೋರ್ಟ್ ಆದೇಶ

‘ನಾಯಿಗಳಿಗೂ ರಕ್ಷಣೆಯ ಹಕ್ಕಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂಸೆಯಿಂದ ರಕ್ಷಣೆ ಪಡೆದುಕೊಳ್ಳುವ ಹಕ್ಕು ನಾಯಿಗಳಿಗೂ ಇದೆ. ಮೂಕ ಪ್ರಾಣಿಗಳೆಂದು ನಾವು ಅವುಗಳ ಹಕ್ಕುಗಳನ್ನು ಕಸಿದುಕೊಳ್ಳಲಾಗದು’ ಎಂಬ ಸೂಕ್ಷ್ಮ ಸಂವೇದನೆಯನ್ನು ವ್ಯಕ್ತಪಡಿಸಿರುವ ಹೈಕೋರ್ಟ್, ಒಂಬತ್ತು ನಾಯಿಗಳಿಗೆ ಹಿಂಸೆ ನೀಡಿದ ಆರೋಪ ಎದುರಿಸುತ್ತಿರುವ ಮಾಲೀಕನ ವಶಕ್ಕೆ ಪುನಃ ಅವುಗಳನ್ನು ಒಪ್ಪಿಸಲು ನಿರಾಕರಿಸಿದೆ.

ಈ ಸಂಬಂಧ ‘ನಗರದ 31ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್ ನೀಡಿರುವ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ‘ಪೆಟಾ’ (ಪೀಪಲ್ ಫಾರ್ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್) ಅಧಿಕೃತ ಪ್ರತಿನಿಧಿ ಸಿಂಚನಾ ಸುಬ್ರಹ್ಮಣ್ಯ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ಅಂತೆಯೇ, ‘9 ನಾಯಿಗಳು ಪೆಟಾ ವಶದಲ್ಲೇ ಇರಬೇಕು’ ಎಂಬ ಈ ಮೊದಲಿನ ಮಧ್ಯಂತರ ಆದೇಶವನ್ನು ವಿಸ್ತರಿಸಿತು.

ವಿಚಾರಣೆ ವೇಳೆ ‘ಪೆಟಾ’ ಪರ ವಕೀಲರು, ‘ಮಾಲೀಕರಿಂದ ದೌರ್ಜನ್ಯ ಅನುಭವಿಸುತ್ತಿದ್ದ ನಾಯಿಗಳನ್ನು ರಕ್ಷಿಸಲಾಗಿದೆ. ಆದರೆ, ಮ್ಯಾಜಿಸ್ಟ್ರೇಟ್ ಕೋರ್ಟ್ ಅವುಗಳನ್ನು ಮತ್ತೆ ಮಾಲೀಕರಿಗೆ ಹಸ್ತಾಂತರ ಮಾಡುವಂತೆ ಆದೇಶಿಸಿದೆ. ಇದರಿಂದ ನಾಯಿಗಳ ಪ್ರಾಣಕ್ಕೆ ಆಪತ್ತು ಎದುರಾಗಿದೆ. ಹಾಗಾಗಿ, ನಾಯಿಗಳನ್ನು ರಕ್ಷಿಸುವ ಉದ್ದೇಶದಿಂದ ಪೆಟಾ ಸಂಸ್ಥೆಯ ವಶಕ್ಕೆ ನೀಡಬೇಕು’ ಎಂದು ಮನವಿ ಮಾಡಿದರು.

ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ‘ವಿಡಿಯೋಗಳಲ್ಲಿ ನಾಯಿಗಳಿಗೆ ಕ್ರೂರವಾಗಿ ಹೊಡೆಯುವ ದೃಶ್ಯಗಳಿವೆ. ಮೂಕ ನಾಯಿಗಳ ಮೇಲೆ ಕ್ರೌರ್ಯ ಎಸಗಿರುವ ವ್ಯಕ್ತಿಯ ಬಳಿಗೇ ಪುನಃ ಒಪ್ಪಿಸಬೇಕೆಂಬ ಮ್ಯಾಜಿಸ್ಟ್ರೇಟ್ ಆದೇಶ ಸರಿಯಲ್ಲ’ ಎಂದು ತೀವ್ರ ಅಸಮಾಧಾನ ಹೊರಹಾಕಿತು.

‘ಮಾಲೀಕನು ನಾಯಿಗಳನ್ನು ಕ್ರೂರವಾಗಿ ನಡೆಸಿಕೊಂಡಿರುವುದು ದೃಢಪಟ್ಟಿದೆ. ಆದರೂ, ಮ್ಯಾಜಿಸ್ಟ್ರೇಟ್ ಇಂತಹ ಮಾಲೀಕನಿಗೆ ನಾಯಿಗಳನ್ನು ಪುನಃ ನೀಡಬೇಕೆಂಬ ಆದೇಶವನ್ನು ಹೇಗೆ ನೀಡಿದರು’ ಎಂದು ಆಘಾತ ವ್ಯಕ್ತಪಡಿಸಿತು.

ಮುಖ್ಯಾಂಶಗಳು

- ಮ್ಯಾಜಿಸ್ಟ್ರೇಟ್ ಕೋರ್ಟ್ ಆದೇಶಕ್ಕೆ ಅತೃಪ್ತಿ
- ದುಬಾರಿ ತಳಿಯ 9 ನಾಯಿಗಳು ಪೆಟಾ ವಶಕ್ಕೆ

ಮಾತು ಬಾರದ ಪ್ರಾಣಿಗಳು ನೋವನ್ನು ಮೌನವಾಗಿ ಅನುಭವಿಸುತ್ತವೆ. ಅವು ಎಷ್ಟು ದಿನ ಅಂತಾ ಹಿಂಸೆ ಅನುಭವಿಸಲು ಸಾಧ್ಯ? ಹಿಂಸೆಯಿಲ್ಲದೇ ಬದುಕುವ ಹಕ್ಕು ಪ್ರಾಣಿಗಳಿಗೂ ಇದೆ
ನ್ಯಾ.ಎಂ.ನಾಗಪ್ರಸನ್ನ

ನಾಯಿಗಳ ಲೈಂಗಿಕ ದುರ್ಬಳಕೆ: ಆರೋಪ

ನಾಗಸಂದ್ರ ನಿವಾಸಿ ಕೆ.ಇ.ರಮೇಶ್ (44) ಬಳಿ 6 ಗೋಲ್ಡನ್ ರಿಟ್ರೀವರ್ (ಸ್ಕಾಟಿಷ್) ಮತ್ತು 3 ಷಿ ತ್ಸು (ಟಿಬೆಟ್) ತಳಿಯ ಒಟ್ಟು 9 ನಾಯಿಗಳಿದ್ದವು. ‘ರಮೇಶ್ ನಾಯಿಗಳಿಗೆ ಪದೇ ಪದೇ ವೈರ್ ಹಾಗೂ ಪೈಪ್‌ಗಳಿಂದ ಹಲ್ಲೆ ನಡೆಸುತ್ತಿದ್ದಾರೆ ಮತ್ತು ನಾಯಿಗಳನ್ನು ತಮ್ಮ ಲೈಂಗಿಕ ತೃಷೆಗೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ’ ಎಂದು ಆರೋಪಿಸಿ ನೆರೆಹೊರೆಯವರು ‘ಪೆಟಾ’ಗೆ ದೂರು ನೀಡಿದ್ದರು. ರಮೇಶ್ ನಾಯಿಗಳಿಗೆ ಹಿಂಸೆ ನೀಡುತ್ತಿರುವ ಕೆಲ ವಿಡಿಯೋಗಳನ್ನೂ ಸಾಕ್ಷಿಯಾಗಿ ಒದಗಿಸಿದ್ದರು.

ದೂರಿನ ಮೇರೆಗೆ ‘ಪೆಟಾ’ 9 ನಾಯಿಗಳನ್ನು ರಕ್ಷಿಸಿ ತನ್ನ ಸುಪರ್ದಿಗೆ ಪಡೆದಿತ್ತು. ಅಂತೆಯೇ ರಮೇಶ್ ವಿರುದ್ಧ; ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 325, 62 ಹಾಗೂ ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1960ರ ಕಲಂ 11(1) ಅಡಿಯಲ್ಲಿ ಎಫ್‌ಐಆರ್ ದಾಖಲಿಸಿತ್ತು. ಇದನ್ನು ಪ್ರಶ್ನಿಸಿ ರಮೇಶ್ ನ್ಯಾಯಾಲಯದ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ 31ನೇ ಎಸಿಜೆಎಂ ಕೋರ್ಟ್ ನಾಯಿಗಳನ್ನು ಮಾಲೀಕನಿಗೆ ಹಿಂತಿರುಗಿಸಲು ಅನುಮತಿ ನೀಡಿ 2026ರ ಏಪ್ರಿಲ್ 25ರಂದು ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಪೆಟಾ ಹೈಕೋರ್ಟ್ ಮೆಟ್ಟಿಲೇರಿದೆ.



ಬಸವನಗುಡಿಯ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ. ಕೋರ್ಟ್‌ನಲ್ಲಿ ನಡೆದ 16 ವರ್ಷದೊಳಗಿನ ರಾಜ್ಯ ಯುವ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ವಿಭಾಗದ ಪ್ರಶಸ್ತಿ ಗೆದ್ದ ಎಂಎನ್‌ಕೆ ತಂಡಕ್ಕೆ ಸಚಿವ ರಾಮಲಿಂಗಾ ರೆಡ್ಡಿ ಮತ್ತು ಫಿಬಾ ಏಷ್ಯಾ ಅಧ್ಯಕ್ಷ ಕೆ.ಗೋವಿಂದರಾಜ್ ಅವರು ಟ್ರೋಫಿ ಹಸ್ತಾಂತರಿಸಿದರು

ಎಂಎನ್‌ಕೆ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವು 16 ವರ್ಷದೊಳಗಿನ ರಾಜ್ಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ವಿಭಾಗದ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಮೈಸೂರು ಜಿಲ್ಲಾ ಎ ತಂಡವು ಮಹಿಳೆಯರ ವಿಭಾಗದ ಕಿರೀಟವನ್ನು ಮುಡಿಗೇರಿಸಿಕೊಂಡಿತು.

ಬಸವನಗುಡಿಯ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ. ಕೋರ್ಟ್‌ನಲ್ಲಿ ಗುರುವಾರ ನಡೆದ ಬಾಲಕರ ಫೈನಲ್‌ನಲ್ಲಿ ಎಂಎನ್‌ಕೆ ತಂಡವು 50–18ರಿಂದ ಸದರ್ನ್ ಬ್ಲೂಸ್ ತಂಡವನ್ನು ಸುಲಭವಾಗಿ ಮಣಿಸಿತು. ಉಜ್ವಲ್ (15) ಮತ್ತು ದೇವ್ ನಾಯ್ಡು (14) ಅವರು ಎಂಎನ್‌ಕೆ ಗೆಲುವಿನಲ್ಲಿ ಮಿಂಚಿದರು.

ಬಾಲಕಿಯರ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಮೈಸೂರು ತಂಡವು 45–29ರಿಂದ ಬೀಗಲ್ಸ್ ಬಿ.ಸಿ ತಂಡವನ್ನು ಸೋಲಿಸಿತು. ಮೈಸೂರು ತಂಡದ ಆಂಚಲ್ 16 ಅಂಕ ಗಳಿಸಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಬಾಲಕರ ಪಂದ್ಯದಲ್ಲಿ ಎವಿ ಬಿ.ಸಿ ತಂಡವು 75–33ರಿಂದ ವಿಮಾನಪುರ ಎಸ್.ಸಿ ತಂಡವನ್ನು ಮಣಿಸಿತು. ಬಾಲಕಿಯರ ವಿಭಾಗದಲ್ಲಿ ವಿವೇಕ್ಸ್ ಎಸ್.ಸಿ 44–36ರಿಂದ ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡವನ್ನು ಸೋಲಿಸಿತು.

ವಿಜೇತ ತಂಡಗಳಿಗೆ ₹30 ಸಾವಿರ, ರನ್ನರ್ಸ್ ಅಪ್ ತಂಡಗಳಿಗೆ ₹20 ಸಾವಿರ ಮತ್ತು ಮೂರನೇ ಸ್ಥಾನ ಪಡೆದ ತಂಡಗಳಿಗೆ ₹10 ಸಾವಿರ ಬಹುಮಾನ ವಿತರಿಸಲಾಯಿತು.

ನಿಧನ ವಾರ್ತೆ

ಎನ್. ರಾಜೀವ ಶೆಟ್ಟಿ

ಬೆಂಗಳೂರು: ದಂತ ವೈದ್ಯಕೀಯ ಶಿಕ್ಷಣ ತಜ್ಞ ಡಾ.ಎನ್. ರಾಜೀವ ಶೆಟ್ಟಿ (93) ಅವರು ಬನಶಂಕರಿಯಲ್ಲಿ ಇರುವ ತಮ್ಮ ನಿವಾಸದಲ್ಲಿ ಬುಧವಾರ ರಾತ್ರಿ ನಿಧನರಾಗಿದ್ದಾರೆ.

ಇದೇ 27ರಂದು ಬನಶಂಕರಿಯ ಚಿತಾಗಾರದಲ್ಲಿ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ವರ್ಗದವರು ತಿಳಿಸಿದ್ದಾರೆ.

ಡಾ.ರಾಜೀವ ಶೆಟ್ಟಿ ಅವರು ಕರ್ನಾಟಕದ ಪ್ರಥಮ ‘ಎಂಡೋಡಾಂಟಿಸ್ಟ್’ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದ ಅವರು, ಬೆಂಗಳೂರಿನ ಸರ್ಕಾರಿ ದಂತ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪ್ರಾಂಶುಪಾಲರಾಗಿಯೂ ಕಾರ್ಯ ನಿರ್ವಹಿಸಿದ್ದರು.

ದಂತ ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಪರಿಗಣಿಸಿ ರಾಜ್ಯ ಸರ್ಕಾರದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ‘ಡಾಕ್ಟರ್ ಆಫ್ ಸೈನ್ಸ್’ ಗೌರವ ಪದವಿ, ಇಂಡಿಯನ್ ಎಂಡೋಡಾಂಟಿಕ್ ಸೊಸೈಟಿಯ ಅತ್ಯುನ್ನತ ಗೌರವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಅವರಿಗೆ ಲಭಿಸಿವೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ

ಸುಭಾಷಿತ
ಸಮಯ ವ್ಯರ್ಥ ಮಾಡುವವರಿಗೆ ಜೀವನದ ಮೌಲ್ಯ ಅರಿವಾಗುವುದಿಲ್ಲ.
–ಚಾರ್ಲ್ಸ್ ಡಾರ್ವಿನ್

ಸಂಪಾದಕೀಯ

ಅಯೋಧ್ಯೆ: ಕಾಣಿಕೆ ಕಳವು ಆರೋಪ ಮುಕ್ತ–ಪಾರದರ್ಶಕ ತನಿಖೆ ನಡೆಯಲಿ

ಅಯೋಧ್ಯೆಯ ರಾಮಮಂದಿರಕ್ಕೆ ನಗದು ಮತ್ತು ವಸ್ತು ರೂಪದಲ್ಲಿ ಬಂದಿರುವ ದೇಣಿಗೆಗಳ ವ್ಯಾಪಕ ದುರುಪಯೋಗ ನಡೆದಿದೆ ಎನ್ನುವ ಗಂಭೀರ ಆರೋಪಗಳು ಕೇಳಿಬಂದಿವೆ. ಈ ಆರೋಪಗಳ ಬಗ್ಗೆ ತನಿಖೆ ನಡೆಸಲು ಉತ್ತರ ಪ್ರದೇಶ ಸರ್ಕಾರ 'ವಿಶೇಷ ಕಾರ್ಯಪಡೆ' (ಎಸ್‌ಐಟಿ) ರಚಿಸಿದ್ದು, ತನಿಖೆ ಮುಂದುವರಿದಿದೆ. ಎಸ್‌ಐಟಿ ಸಲ್ಲಿಸಿರುವ ಪ್ರಾಥಮಿಕ ವರದಿಯು, ದೇಣಿಗೆ ಸಂಗ್ರಹ, ಎಣಿಕೆ ಹಾಗೂ ಹಣಕಾಸು ನಿರ್ವಹಣೆಯಲ್ಲಿ ಅಕ್ರಮಗಳು ನಡೆದಿರುವುದನ್ನು ದೃಢಪಡಿಸಿದೆ ಎಂದು ವರದಿಯಾಗಿದೆ. ಮಂದಿರದಲ್ಲಿ ನಡೆದಿವೆ ಎನ್ನಲಾದ ಅಕ್ರಮಗಳ ಕುರಿತಾದ ಆರೋಪವು ಗಂಭೀರವಾಗಿದ್ದು, ದೇವಾಲಯದ ನಿರ್ವಹಣೆಯ ಹೊಣೆ ಹೊತ್ತಿರುವ ಶ್ರೀರಾಮ ಜನ್ಮಭೂಮಿ ಟ್ರಸ್ಟ್ ಅನ್ನು ಅನುಮಾನದಿಂದ ನೋಡುವಂತಾಗಿದೆ. ಕೋಟ್ಯಂತರ ರೂಪಾಯಿ ದೇಣಿಗೆ ಹಣದ ವಂಚನೆ ನಡೆದಿದೆ ಹಾಗೂ ಅಮೂಲ್ಯ ಆಭರಣಗಳ ಜಾಗದಲ್ಲಿ ನಕಲಿ ಒಡವೆಗಳನ್ನು ಇರಿಸಲಾಗಿದೆ ಎಂದು ಹೇಳಲಾಗುತ್ತಿದೆ. ಬೆಲೆಬಾಳುವ ಅನೇಕ ವಸ್ತುಗಳು ಕಣ್ಮರೆಯಾಗಿವೆ; ಅಕ್ರಮದ ಆರೋಪಗಳು ಬಹಿರಂಗವಾದ ನಂತರ ಸುಮಾರು ₹2 ಕೋಟಿ ಮೌಲ್ಯದ ನಗದು ಮತ್ತು ಚಿನ್ನ ವಶಪಡಿಸಿಕೊಳ್ಳಲಾಗಿದೆ ಎಂದೂ ಹೇಳಲಾಗುತ್ತಿದೆ.

ಅಯೋಧ್ಯೆಯ ರಾಮಮಂದಿರದಲ್ಲಿನ ವಿದ್ಯಮಾನಗಳಿಗೆ ರಾಜಕೀಯ ಮಹತ್ವವಿದೆ. ಏಕೆಂದರೆ, ಕೇಂದ್ರ ಹಾಗೂ ಉತ್ತರ ಪ್ರದೇಶದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಪಕ್ಷದೊಂದಿಗೆ ಅಯೋಧ್ಯೆಯ ರಾಮಮಂದಿರ ರಾಜಕೀಯವಾಗಿ ತಳಕು ಹಾಕಿಕೊಂಡಿದೆ. ದಶಕಗಳಿಂದ ಬಿಜೆಪಿಯ ರಾಜಕೀಯ ಕೇಂದ್ರಬಿಂದುವಾಗಿ ಮಂದಿರವನ್ನು ಗುರ್ತಿಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿಯ ನಾಯಕರು ದೇವಾಲಯದ ನಿರ್ಮಾಣವನ್ನು ರಾಷ್ಟ್ರ ನಿರ್ಮಾಣದೊಂದಿಗೆ ಸಮೀಕರಿಸಿದ್ದರು. ರಾಷ್ಟ್ರೀಯ ಸಂಕೇತದ ರೂಪದಲ್ಲಿ ಮಂದಿರವನ್ನು ಬಿಂಬಿಸಲಾಗಿದೆ. ಹಾಗಾಗಿಯೇ, ಮಂದಿರದಲ್ಲಿ ನಡೆದಿದೆ ಎನ್ನಲಾದ ನಿಧಿಗಳ ದುರುಪಯೋಗ ಮತ್ತು ದೇವಾಲಯದ ಆಡಳಿತ ಮಂಡಳಿಯ ವೈಫಲ್ಯವನ್ನು ಮಂದಿರದೊಂದಿಗೆ ಗುರ್ತಿಸಿಕೊಂಡ ಎಲ್ಲರ ವಿಶ್ವಾಸಾರ್ಹತೆಗೆ ಸಂಬಂಧಿಸಿದ ಪ್ರಶ್ನೆಯ ರೂಪದಲ್ಲಿ ನೋಡಬೇಕಾಗಿದೆ. ಈ ಬೆಳವಣಿಗೆ ಮುಂದಿನ ವರ್ಷ ಉತ್ತರ ಪ್ರದೇಶದಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅನನುಕೂಲವಾಗಿ ಪರಿಣಮಿಸಲೂಬಹುದು. ಆಡಳಿತಾರೂಢ ಪಕ್ಷವು ತಪ್ಪಿತಸ್ಥರನ್ನು ರಕ್ಷಿಸುತ್ತಿದೆ ಎಂದು ವಿರೋಧ ಪಕ್ಷಗಳ ನಾಯಕರು ಆಪಾದಿಸಿದ್ದಾರೆ. ಈ ಆರೋಪಗಳು, ರಾಮಮಂದಿರದ ವರ್ಚಸ್ಸನ್ನು ಹಾಳು ಮಾಡುವ ಹಾಗೂ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುವ ಪ್ರಯತ್ನಗಳಾಗಿವೆ ಎಂದು ಬಿಜೆಪಿ ಪ್ರತಿಕ್ರಿಯಿಸಿದೆ. ಎಸ್‌ಐಟಿ ತನಿಖೆ ಪೂರ್ಣಗೊಳ್ಳುವವರೆಗೂ ಭಕ್ತರು ಸಂಯಮದಿಂದ ಇರಬೇಕೆಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ.

ಅಯೋಧ್ಯೆಯ ರಾಮಮಂದಿರದಲ್ಲಿ ಅಕ್ರಮಗಳು ನಡೆದಿವೆ ಎನ್ನುವ ಆರೋಪಗಳ ಬಗ್ಗೆ ಮುಕ್ತ ಹಾಗೂ ಪಾರದರ್ಶಕ ತನಿಖೆ ನಡೆಯಲಿ, ಲೆಕ್ಕಪತ್ರಗಳು ಸಾರ್ವಜನಿಕವಾಗಿ ಬಹಿರಂಗಗೊಳ್ಳಲಿ.

ಅಕ್ರಮಗಳ ಆರೋಪಕ್ಕೆ ಸಂಬಂಧಿಸಿದಂತೆ ಇದುವರೆಗೆ ಯಾವುದೇ ಎಫ್‌ಐಆರ್ ದಾಖಲಾಗದಿರುವುದರಿಂದ, ಎಸ್‌ಐಟಿ ತನಿಖೆ ನಡೆಸುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅಭಿಪ್ರಾಯಪಟ್ಟಿದ್ದಾರೆ. ಅಪರಾಧ ಘಟಿಸಿರುವ ಸೂಚನೆಗಳಿದ್ದರೂ, ಎಸ್‌ಐಟಿ ವಿಚಾರಣೆಯನ್ನು ಪೊಲೀಸ್ ತನಿಖೆ ಎಂದು ಪರಿಗಣಿಸಲಾಗುವುದಿಲ್ಲ ಎಂದೂ ಅವರು ಹೇಳಿದ್ದಾರೆ. ಮೂವರು ಸದಸ್ಯರ ಎಸ್‌ಐಟಿ ನೇತೃತ್ವವನ್ನು ಲಖನೌ ವಲಯ ಆಯುಕ್ತ ವಿಜಯ್ ವಿಶ್ವಾಸ್ ವಹಿಸಿಕೊಂಡಿದ್ದು, ತನಿಖೆಯ ಪ್ರಾಥಮಿಕ ವರದಿಯನ್ನು ರಾಜ್ಯ ಸರ್ಕಾರದ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಂಜಯ್ ಪ್ರಸಾದ್ ಅವರಿಗೆ ಸಲ್ಲಿಸಿದ್ದಾರೆ. ಸಂಜಯ್ ಪ್ರಸಾದ್ ಅವರು ಈ ಮೊದಲು ಸರ್ಕಾರದ ಪ್ರತಿನಿಧಿಯಾಗಿ ಟ್ರಸ್ಟ್‌ನೊಂದಿಗೆ ಗುರ್ತಿಸಿಕೊಂಡವರು. ಹಳೆಯ ಸಂಬಂಧವು ಹಿತಾಸಕ್ತಿ ಸಂಘರ್ಷಕ್ಕೆ ಅವಕಾಶ ಕಲ್ಪಿಸಬಹುದೆಂದು ಭಾವಿಸಲಿಕ್ಕೆ ಸಾಧ್ಯವಿದೆ. ಆರೋಪಗಳ ಕುರಿತು ವಿಶ್ವಾಸಾರ್ಹ ಹಾಗೂ ಸ್ವತಂತ್ರ ತನಿಖೆ ನಡೆಯುವುದು ಅಗತ್ಯ. ಭಕ್ತರ ನಂಬಿಕೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ, ಸಾರ್ವಜನಿಕರ ಕೊಡುಗೆಗಳಿಂದ ನಿರ್ಮಾಣಗೊಂಡ ಮಂದಿರದ ಎಲ್ಲ ಲೆಕ್ಕಪತ್ರಗಳನ್ನು ಬಹಿರಂಗಪಡಿಸುವುದೂ ಅಗತ್ಯ. ಈ ಪ್ರಕರಣವು ಹಣ ಮತ್ತು ವಸ್ತುಗಳ ಕಳವು ಹಾಗೂ ಆಡಳಿತ ಲೋಪಕ್ಕೆ ಸೀಮಿತವಾದ ವಿಷಯವಲ್ಲ. ಇದು ದೇಶದ ಅತ್ಯಂತ ಮುಖ್ಯವಾದ ಧಾರ್ಮಿಕ ಕ್ಷೇತ್ರದ ಪಾವಿತ್ರ್ಯವನ್ನು ಸಂರಕ್ಷಿಸುವ ವಿಷಯವೂ ಆಗಿದೆ.

ಜಾಲಡಿ

ಕನ್ನಡ ಕೋಟಾ ವಿಸ್ತರಿಸಿ

ಕನ್ನಡ ಮಾಧ್ಯಮದಲ್ಲಿ ಮಕ್ಕಳನ್ನು ಓದಿಸುವವರನ್ನು ಉತ್ತೇಜಿಸಲು, ಕನ್ನಡ ಮಾಧ್ಯಮದ ಮೀಸಲಾತಿ ಪಡೆಯಲು 1ರಿಂದ 10ನೇ ತರಗತಿವರೆಗೂ ಕನ್ನಡ ಮಾಧ್ಯಮದಲ್ಲಿ ಓದಿರಬೇಕೆಂಬ ನಿಯಮ ಸಡಿಲಿಸಬೇಕಿದೆ. 5ನೇ ತರಗತಿವರೆಗೆ ಅಥವಾ 7ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಿಗೂ ಈ ಕೋಟಾ ವಿಸ್ತರಿಸಬೇಕು.

ಗಿರೀಶ್ ಕಾರ್ಗದ್ದೆ, 'ಎಕ್ಸ್'ನಿಂದ

ಕಿಡಿನುಡಿ

ಭಾರತದ ವಿದೇಶಾಂಗ ಸಚಿವಾಲಯದ ಅದ್ಭುತ ನಡೆ: ಮೊದಲು ಭಾರತೀಯ ಪಾಸ್‌ಪೋರ್ಟ್‌ನ ಜಾಗತಿಕ ಶ್ರೇಯಾಂಕವನ್ನು 80ನೇ ಸ್ಥಾನಕ್ಕೆ ಜಾರಲು ಬಿಡುವುದು, ನಂತರ ಅದನ್ನು ಭಾರತೀಯ ನಾಗರಿಕರಲ್ಲದವರಿಗೂ ನೀಡುವುದು, ಅದು ಪೌರತ್ವದ ಪುರಾವೆ ಅಲ್ಲ ಎಂದು ಒಪ್ಪಿಕೊಳ್ಳುವುದು! ವಾಹ್, ನರೇಂದ್ರ ಮೋದಿ ಅವರ ಆಡಳಿತ... ವಾಹ್!

ಸಾಗರಿಕಾ ಘೋಷ್, ರಾಜ್ಯಸಭಾ ಸದಸ್ಯೆ

25 ವರ್ಷಗಳ ಹಿಂದೆ
ಮಂಗಳವಾರ, 26-6-2001

● **ದಳ ಏಕತೆಗೆ ಹೆಗಡೆ ಷರತ್ತು**

ಶಿವಮೊಗ್ಗ, ಜೂನ್ 25– 'ಜನತಾದಳಗಳು ವಿಲೀನಗೊಂಡ ಬಳಿಕ ರಾಜ್ಯ ಮಟ್ಟದಲ್ಲಾಗಲೀ, ರಾಷ್ಟ್ರ ಮಟ್ಟದಲ್ಲಾಗಲೀ ಪಕ್ಷದ ಅಧ್ಯಕ್ಷನಾಗುವ ಆಸೆ ನನಗಿಲ್ಲ' ಎಂದು ಸಂಯುಕ್ತ ಜನತಾದಳದ ರಾಷ್ಟ್ರೀಯ ಮುಖಂಡ ರಾಮಕೃಷ್ಣ ಹೆಗಡೆ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2ನೇ ಸಲ ಒಂದಾದ ಬಳಿಕ ಪಕ್ಷ ಮತ್ತೆ ಒಡೆಯಬಾರದು. ಆ ಮುಂಜಾಗ್ರತೆ ವಹಿಸಬೇಕು ಎಂದರು.

ವಿಲೀನದ ಬಳಿಕ ರಾಜ್ಯಮಟ್ಟದಲ್ಲಿ ಯಾರು ಅಧ್ಯಕ್ಷರಾಗಬೇಕು. ರಾಷ್ಟ್ರ ಮಟ್ಟದಲ್ಲಿ ಯಾರು ಅಧ್ಯಕ್ಷರಾಗಬೇಕು. ಇನ್ನಿತರ ಪದಾಧಿಕಾರಿಗಳು ಯಾರಾಗಬೇಕು. ಪಕ್ಷದ ರೀತಿನೀತಿ, ಕಾರ್ಯಕ್ರಮಗಳು ಹೇಗಿರಬೇಕು ಇತ್ಯಾದಿ ವಿಷಯಗಳು ವಿಲೀನಕ್ಕೆ ಮೊದಲೇ ನಿರ್ಧಾರವಾಗಬೇಕು. ಆದ್ದರಿಂದಲೇ ನಾನು ಮತ್ತು ದೇವೇಗೌಡ ನೇರವಾಗಿ ಮಾತುಕತೆ ನಡೆಸುವ ಮೊದಲು ಎರಡೂ ಬಣಗಳ ಮುಖಂಡರು ಕುಳಿತು ಸುದೀರ್ಘವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕೆಂದು ಹೇಳಿದ್ದೇನೆ ಎಂದರು.

● **ರಿಯಾಯಿತಿ ಇಲ್ಲದ ಹೊಸ ಕೈಗಾರಿಕಾ ನೀತಿ**

ಬೆಂಗಳೂರು, ಜೂನ್ 25– ಯಾವುದೇ ಆರ್ಥಿಕ ಪ್ರೋತ್ಸಾಹಧನ, ಮಾರಾಟ ತೆರಿಗೆ ರಿಯಾಯಿತಿ ಇಲ್ಲದೆ ತಂತ್ರಜ್ಞಾನ ಉನ್ನತೀಕರಣ ಮತ್ತು ಮೂಲ ಸೌಲಭ್ಯಕ್ಕೆ ಒತ್ತು ಕೊಡುವ ಹೊಸ ಕೈಗಾರಿಕಾ ನೀತಿಗೆ ಸಚಿವ ಸಂಪುಟ ಒಪ್ಪಿಗೆ ನೀಡಿತು ಎಂದು ಸಭೆಯ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಸಣ್ಣ ಕೈಗಾರಿಕೆ ಸಚಿವ ಎಸ್.ಆರ್. ಕಾಶಪ್ಪನವರ್ ತಿಳಿಸಿದರು.

75 ವರ್ಷಗಳ ಹಿಂದೆ
ಮಂಗಳವಾರ, 26-6-1951

● **ದಾವಣಗೆರೆಯಲ್ಲಿ ಇಂಜಿನಿಯರಿಂಗ್ ಕಾಲೇಜು**

ಬೆಂಗಳೂರು, ಜೂನ್ 25– ದಾವಣಗೆರೆಯಲ್ಲಿ ಪ್ರಸ್ತುತ ಸಾಲಿನಿಂದಲೇ ಇಂಜಿನಿಯರಿಂಗ್ ಕಾಲೇಜನ್ನು ಆರಂಭಿಸಲು ಸರ್ಕಾರ ನಿರ್ಧರಿಸಿದೆಯೆಂದು ತಿಳಿದುಬಂದಿದೆ.

ಇನ್ನು ಹತ್ತರಿಂದ ಹದಿನೈದು ದಿನಗಳಲ್ಲೇ ಕಾಲೇಜು ಆರಂಭ ಆಗುವುದೆಂದು ನಿರೀಕ್ಷಿಸಲಾಗಿದೆ.

ಇಂಜಿನಿಯರಿಂಗ್ ಕಾಲೇಜಿಗಾಗಿ ಬ್ರಹ್ಮಪ್ಪ ತವನಪ್ಪನವರ್ ಅವರು 1 ಲಕ್ಷ ರೂ. ದಾನ ಮಾಡಿದ್ದಾರೆ. ಕಾಲೇಜಿನ ಸಲಕರಣೆಗಾಗಿ ವಿಶ್ವವಿದ್ಯಾನಿಲಯ ತನ್ನ ಬಡ್ಜೆಟ್ಟಿನಲ್ಲಿ 50 ಸಾವಿರ ರೂ. ಒದಗಿಸಿದೆ. ಕಾಲೇಜಿಗಾಗಿ ದಾವಣಗೆರೆ ಪೌರಸಭೆ 20 ಎಕರೆ ನಿವೇಶನ ದಾನ ಮಾಡಿದೆ.

ಗಣತಂತ್ರ ರಕ್ಷಣೆಗೆ ಪ್ರತಿರೋಧ

ವಿಶ್ಲೇಷಣೆ
ಯೋಗೇಂದ್ರ ಯಾದವ್

ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ತಿರುಚುವ ಮೂಲಕ ಅಧಿಕಾರವನ್ನು ಭದ್ರಪಡಿಸಿಕೊಳ್ಳುವ ರಾಜಕೀಯ ಚುರುಕಾಗಿರುವಾಗ, ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ಕಾಳಜಿಯುಳ್ಳವರು ಮಾಡಬೇಕಾದ ರಾಜಕಾರಣ ಯಾವ ಬಗೆಯದು? ಪ್ರತಿರೋಧ ಮಾದರಿಯ ಜನಪರ ರಾಜಕಾರಣವನ್ನು ಜನರೊಂದಿಗೆ ಮರು ಜೋಡಿಸುವುದು ಹೇಗೆ?

ಪ್ರತಿರೋಧ... ರಾಹುಲ್ ಗಾಂಧಿ ಅವರು 'ಇಂಡಿಯಾ' ಕೂಟದ ನಾಯಕರನ್ನು ಉದ್ದೇಶಿಸಿ ಜೂನ್ 8ರಂದು ಮಾಡಿದ ಭಾಷಣದ ಸಾರವನ್ನು ಹೀಗೆ ಹೇಳಬಹುದು ಮತ್ತು ವಿರೋಧ ಪಕ್ಷದ ನಾಯಕರೊಬ್ಬರು ಇತ್ತೀಚಿನ ವರ್ಷಗಳಲ್ಲಿ ಮಾಡಿದ ಅತ್ಯಂತ ಪರಿಣಾಮಕಾರಿ ಭಾಷಣ ಇದು ಎಂಬುದರಲ್ಲಿ ಸಂದೇಹ ಇಲ್ಲ.

ಈತನಕ ಹೇಗೆ ಜನರ ಗಮನ ಸೆಳೆಯಿತು ಎಂಬುದಕ್ಕಷ್ಟೇ ಇದು ಪರಿಣಾಮಕಾರಿ ಅಲ್ಲ. ಸಿಪಿಎಂ ಮತ್ತು ಡಿಎಂಕೆಯಂತಹ ಪಕ್ಷಗಳ ಉಲ್ಲೇಖಗಳಿಗೆ ಪ್ರತಿಕ್ರಿಯೆ ನೀಡಲೇಬೇಕು. ಒಂದು ಕಾಲದಲ್ಲಿ ನಾಲ್ಕು ಗೋಡೆಗಳೊಳಗಿನ ವಿಚಾರಗಳು ಬಹಿರಂಗವಾಗಿರುವುದನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯ. ಒಟ್ಟಾರೆಯಾಗಿ ವಿರೋಧ ಪಕ್ಷಗಳ ಗುರಿಯೇ ಮೂಲಭೂತವಾದ ಒಗ್ಗಟ್ಟು ಎಂಬುದನ್ನು ಭಿನ್ನಾಭಿಪ್ರಾಯಗಳ ಈ ಅಭಿವ್ಯಕ್ತಿಯು ಸ್ಪಷ್ಟಪಡಿಸಿದೆ. ಸಿಪಿಐ (ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಅವರು ಬಳಿಕ ಬರೆದ ಲೇಖನದಲ್ಲಿ ಈ ಚಿಂತನೆಯು ಹೆಚ್ಚು ಒಳಗೊಳ್ಳುವಿಕೆ ಮತ್ತು ವಿಸ್ತಾರ ದೃಷ್ಟಿಕೋನದಲ್ಲಿ ಪ್ರತಿಪಾದಿತವಾಗಿದೆ. ಹಾಗೆಯೇ, 'ಕಾಂಗ್ರೆಸ್ ಪಕ್ಷವು ಒಂದು ಪ್ರತಿರೋಧ ಚಳವಳಿ' ಎಂಬ ಹೇಳಿಕೆಯನ್ನು ಚಿಂತನೆಯೊಂದರ ಪುನರುಚ್ಚಾರ ಎಂದು ನೋಡಬೇಕೇ ವಿನಾ ಪ್ರಸ್ತುತ ತಳಮಟ್ಟದ ವಾಸ್ತವ ಎಂಬುದಾಗಿ ಅಲ್ಲ.

ಸಮಸ್ಯೆಯ ಗುರ್ತಿಸುವಿಕೆ ಮತ್ತು ಅದಕ್ಕೆ ಪರಿಹಾರ ಸೂಚನೆಯಲ್ಲಿ ಈ ಭಾಷಣದ ನೈಜ ಮಹತ್ವ ಅಡಗಿದೆ. ನಮ್ಮ ರಾಜಕೀಯ ಜೀವನದಲ್ಲಿ ಈಗಿನದ್ದು ಅತ್ಯಂತ ನಿರ್ಣಾಯಕ ಘಟ್ಟ: ಸ್ಪರ್ಧಾತ್ಮಕ ನಿರಂಕುಶಾಧಿಪತ್ಯದಿಂದ ಚುನಾಯಿತ ಸರ್ವಾಧಿಕಾರದತ್ತ ಪಲ್ಲಟ ನಡೆದಿದೆ ಎಂಬುದನ್ನು ಇದೇ ಮೊದಲ ಬಾರಿಗೆ ವಿರೋಧ ಪಕ್ಷವು ಸ್ಪಷ್ಟವಾಗಿ ಗುರ್ತಿಸಿದೆ. ವಿರೋಧ ಪಕ್ಷವು ಚುನಾವಣಾ ಸ್ಪರ್ಧಾತ್ಮಕತೆಯಿಂದ ಪ್ರತಿರೋಧ ರಾಜಕಾರಣಕ್ಕೆ ಹೊರಳಬೇಕಿದೆ ಎಂಬ ಕಾರ್ಯತಂತ್ರವನ್ನು ಸುಸಂಬದ್ಧವಾಗಿ ಪ್ರತಿಪಾದಿಸಿರುವುದು ಕೂಡ ಇದೇ ಮೊದಲು. ಈ ಎರಡು ಮಹತ್ವಪೂರ್ಣವಾದ ಯೋಚನೆಗಳನ್ನು ಇನ್ನಷ್ಟು ಸ್ಪಷ್ಟಗೊಳಿಸಿ, ಎಲ್ಲರಲ್ಲೂ ಪಸರಿಸುವಂತೆ ಮಾಡಿ, ಚರ್ಚಿಸಿ ಪರಿಷ್ಕರಿಸುವುದರ ಅಗತ್ಯ ಇದೆ.

ರಾಹುಲ್ ಗಾಂಧಿ ಅವರ ಗುರ್ತಿಸುವಿಕೆಯು ಹಲಬುವಿಕೆಯನ್ನು ಮೀರಿ ಸಾಗುತ್ತದೆ. ನಿಜವಾದ ಸಮಸ್ಯೆಯ ಮೇಲೆಯೇ ಅವರು ಬೆರಳಿಟ್ಟಿದ್ದಾರೆ: 'ಭಾರತ ಸರ್ಕಾರದ ಸಂಸ್ಥೆಗಳನ್ನು ಆರ್‌ಎಸ್‌ಎಸ್ ಆಕ್ರಮಿಸಿಕೊಂಡಿರುವುದು ನಿಜವಾದ ಸಮಸ್ಯೆ... ಇಡೀ ವ್ಯವಸ್ಥೆ– ಮಾಧ್ಯಮ, ಸಾಮಾಜಿಕ ಮಾಧ್ಯಮ, ನ್ಯಾಯಾಂಗ, ಅಧಿಕಾರಶಾಹಿ, ಗುಪ್ತಚರ– ಈ ಎಲ್ಲವೂ ಈಗ ಅಧಿಕಾರದಲ್ಲಿರುವ ಸರ್ಕಾರದ ರಕ್ಷಣೆಯಲ್ಲಿ ಶಾಮೀಲಾಗಿವೆ. ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಲಿದೆ ಎಂಬುದನ್ನೂ ಅವರು ಸ್ಪಷ್ಟವಾಗಿ ಗುರ್ತಿಸಿದ್ದಾರೆ:'ಕೆಲವೇ ಸಮಯದಲ್ಲಿ, ಈಗ ಕೆಲಸ ಮಾಡುತ್ತಿರುವ ಕೆಲವು ಸಂಸ್ಥೆಗಳು ಕೂಡ ತಮ್ಮ ಕೆಲಸವನ್ನು ನಿಲ್ಲಿಸಲಿವೆ. ಏಕೆಂದರೆ, ಭಾರತದ ಪ್ರಭುತ್ವದ ಮೇಲೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಹಿಡಿತ ಬಿಗಿಯಾಗುತ್ತಲೇ ಇದೆ'. ಅವರ ಭಾಷಣದ ಎರಡು ವಾರಗಳ ಬಳಿಕ ಆಕ್ರಮಿಸುವಿಕೆಯು ಇನ್ನಷ್ಟು ವ್ಯಾಪಕಗೊಂಡಿದೆ. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ಹೇಳಿರುವ ಸಾಂಸ್ಥಿಕ ಆಕ್ರಮಿಸುವಿಕೆಗೆ ರಾಜ್ಯಸಭೆ ಚುನಾವಣೆಯ ಅಭ್ಯರ್ಥಿಯಾಗಿದ್ದ ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕರಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರಾಕರಣೆ ಮತ್ತು ಟಿಎಂಸಿ ಮತ್ತು ಶಿವಸೇನಾವನ್ನು ಒಡೆಯಲು ಸರ್ಕಾರ ಮತ್ತು ಹಣಬಲದ ಬಹಿರಂಗ ಬಳಕೆಯು ಸ್ಪಷ್ಟವಾದ ಪುರಾವೆಗಳಾಗಿವೆ.

ಈ ಅವಲೋಕನಗಳು, ರಾಜಕೀಯ ವಿಜ್ಞಾನಿಗಳ ಭಾರತದ ಕುರಿತ ಜಾಗತಿಕ ಮಟ್ಟದ ಅವಲೋಕನಗಳನ್ನು ಪ್ರತಿಧ್ವನಿಸುತ್ತವೆ. ಜುವಾನ್ ಲಿನ್ಸ್ ಅವರ 'ದಿ ಬ್ರೇಕ್‌ಡೌನ್ ಆಫ್ ಡೆಮಾಕ್ರಟಿಕ್ ರಿಜೀಮ್ಸ್'ನಿಂದ (1978) ಹಿಡಿದು ಈವರೆಗೆ ನಾವು ಪ್ರಜಾಪ್ರಭುತ್ವದಿಂದ ನಿರಂಕುಶಾಧಿಕಾರದತ್ತ ನಡೆದ ಪಲ್ಲಟದ ಕುರಿತು ಬಹಳಷ್ಟು ಸಾಹಿತ್ಯವನ್ನು ಪಡೆದುಕೊಂಡಿದ್ದೇವೆ. ಇದು ರಾತ್ರೋರಾತ್ರಿ ಆಗಿರುವ ಪಲ್ಲಟ ಅಲ್ಲ ಎಂಬುದರ ಅರಿವು ನಮಗೆ ಇದೆ. ಆ್ಯಡಂ ಜಿವೋರೆಸ್ಕಿಯ ಪ್ರಸಿದ್ಧ ಹೇಳಿಕೆ: 'ಆಡಳಿತಗಾರರು ಅಧಿಕಾರ ಕಳೆದುಕೊಳ್ಳುವ ಅಪಾಯವನ್ನು ಒಪ್ಪಿಕೊಳ್ಳುವ ಅನಿಶ್ಚಿತ ಸ್ಥಿತಿಯ ಸಾಂಸ್ಥೀಕರಣವೇ ಪ್ರಜಾಪ್ರಭುತ್ವ'. ಈ ಅಪಾಯವನ್ನು ಕಡಿಮೆಗೊಳಿಸಲು ಮತ್ತು ಅಂತಿಮವಾಗಿ ನಿವಾರಿಸಿಕೊಳ್ಳಲು ಆಡಳಿತಗಾರರು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ತಿರುಚುವುದೇ ಪ್ರಜಾಪ್ರಭುತ್ವದ ಹಿನ್ನಡೆ ಎಂದು ಹೇಳಬಹುದು.

ಪ್ರಜಾಪ್ರಭುತ್ವದ ಈ ಅವನತಿಯಲ್ಲಿ ಎರಡು ಹಂತಗಳಿವೆ. 'ಸ್ಪರ್ಧಾತ್ಮಕ ನಿರಂಕುಶಾಧಿಪತ್ಯ ಎಂಬ ವ್ಯವಸ್ಥೆ ಇದೆ. ಇಲ್ಲಿ ರಾಜಕೀಯ ಸ್ಪರ್ಧಾತ್ಮಕತೆ ಇದ್ದರೂ ಅದು ಚುನಾವಣೆ ನಡೆಯುವ ಅಲ್ಪಾವಧಿಗಷ್ಟೇ ಸೀಮಿತ ಮತ್ತು ಸ್ಪರ್ಧೆಯು ನ್ಯಾಯಯುತವಲ್ಲದೇ ಇದ್ದರೂ ಆಡಳಿತ ಪಕ್ಷವು ಅಧಿಕಾರ ಕಳೆದುಕೊಳ್ಳುವ ಅಪಾಯವನ್ನು ಎದುರಿಸುತ್ತದೆ'. ಮುಂದಿನ ಹಂತವು 'ಚುನಾಯಿತ ಸರ್ವಾಧಿಕಾರ'. ಇಲ್ಲಿ, ಅಗತ್ಯ ಬಿದ್ದರೆ ಚುನಾವಣಾ ಅಕ್ರಮವೂ ಸೇರಿ ಎಲ್ಲ ಸಂಸ್ಥೆಗಳು ಮತ್ತು ಪ್ರಕ್ರಿಯೆಗಳನ್ನು ತನ್ನ ಅಧೀನದಲ್ಲಿ ಇರಿಸಿಕೊಂಡ ಆಡಳಿತಗಾರರು ಅಧಿಕಾರ ಕಳೆದುಕೊಳ್ಳುವ ಅಪಾಯವನ್ನು ಅತ್ಯಂತ ಕನಿಷ್ಠ ಮಟ್ಟಕ್ಕೆ ಇಳಿಸಿಕೊಳ್ಳುತ್ತಾರೆ.

ಭಾರತವು ಈಗ ಈ ಎರಡು ಹಂತಗಳ ಮಧ್ಯದಲ್ಲಿದೆ. 2019ರ ಬಳಿಕ ಭಾರತವು ಸ್ಪರ್ಧಾತ್ಮಕ ನಿರಂಕುಶಾಧಿಪತ್ಯವಾಗಿತ್ತು. ಬಳಿಕ, ಚುನಾವಣಾ ಸರ್ವಾಧಿಕಾರದತ್ತ ಭಾರತದ ಅವನತಿಯನ್ನು 2024ರ ಲೋಕಸಭಾ ಚುನಾವಣೆಯ ಫಲಿತಾಂಶವು ತಡೆಯಿತು. ಆಗಿನಿಂದಲೇ, ಯಾವುದೇ ಚುನಾವಣೆಯನ್ನು ಕಳೆದುಕೊಳ್ಳುವ ರಾಜಕೀಯ ಅಪಾಯವನ್ನು ಕಡಿಮೆಗೊಳಿಸಲು ಆಡಳಿತ ಪಕ್ಷವು ತನಗೆ ಸಾಧ್ಯವಾದುದನ್ನೆಲ್ಲ ಮಾಡುತ್ತಿದೆ. ಇದರಲ್ಲಿ ಮೂರು ಆಯಾಮಗಳ ಏಕಸ್ವಾಮ್ಯಗಳು ಇವೆ: ಅವುಗಳೆಂದರೆ, ಮಾಧ್ಯಮದ ಮೂಲಕ ಸುದ್ದಿ ಮತ್ತು ಮಾಹಿತಿಯ ನಿಯಂತ್ರಣ, ಹಣಕಾಸಿನ ಸಂಪನ್ಮೂಲಗಳ ಬಳಕೆ ಮತ್ತು ಸಂಸ್ಥೆಗಳ ಮೇಲೆ ಅತಿಕ್ರಮಣ. ಚುನಾವಣೆಯ ದೇಶ–ಕಾಲ–ಪಾತ್ರವನ್ನು ಮರುವಿನ್ಯಾಸಗೊಳಿಸುವ ಮೂಲಕ ಅದಕ್ಕೆ ಪೂರಕವಾಗಿ ವರ್ತಿಸುವಂತೆ ನೋಡಿಕೊಳ್ಳಬಹುದು: ಪ್ರಸ್ತಾವಿತ ಕ್ಷೇತ್ರ ಮರುವಿಂಗಡಣೆ ಮೂಲಕ ಕ್ಷೇತ್ರಗಳ ಸ್ವರೂಪವನ್ನು ಬದಲಾಯಿಸಿ, ಮರುರೂಪಿಸಬಹುದು; 'ಒಂದು ದೇಶ, ಒಂದು ಚುನಾವಣೆ' ಮೂಲಕ ಚುನಾವಣೆಯ ವೇಳಾಪಟ್ಟಿಯನ್ನು ಮರುರೂಪಿಸಬಹುದು; ಮತ್ತು ಎಸ್‌ಐಆರ್ ಮೂಲಕ ಮತದಾರರ ಪಟ್ಟಿಯನ್ನು ಪರಿಷ್ಕರಿಸಬಹುದು. ಇವೆಲ್ಲವೂ ಒಮ್ಮೆ ಪೂರ್ಣಗೊಂಡರೆ, ನಮ್ಮ ವ್ಯವಸ್ಥೆಯು ಚುನಾವಣಾ ಸರ್ವಾಧಿಕಾರವಾಗಿ ಪರಿವರ್ತನೆಗೊಳ್ಳುತ್ತದೆ– ಚುನಾವಣೆಗಳ ಮೂಲಕ ಸಹಜ ಮತ್ತು ಪ್ರಜಾಸತ್ತಾತ್ಮಕ ಅಧಿಕಾರ ಹಸ್ತಾಂತರದ ಸಾಧ್ಯತೆ ನಗಣ್ಯ ಎನಿಸಿಬಿಡುತ್ತದೆ. ವಿರೋಧ ಪಕ್ಷಗಳು ಕೊನೆಗೂ ಈ ಕಹಿಸತ್ಯವನ್ನು ಎದುರುಗೊಳ್ಳಲು ಸಜ್ಜಾಗಿವೆ.

ರಾಹುಲ್ ಗಾಂಧಿ ಅವರ ಭಾಷಣವು ಒಂದು ವಿಶ್ಲೇಷಣೆಗೆ ಸೀಮಿತವಲ್ಲ. ರಾಜಕೀಯ ಚಟುವಟಿಕೆಗಳ ಮೇಲೆ ಅದರ ಪರಿಣಾಮಗಳ ಸ್ಪಷ್ಟ ನಿರೂಪಣೆಯಿಂದಾಗಿಯೇ ಈ ಭಾಷಣವು ನಿರ್ಣಾಯಕ ಎನಿಸಿಕೊಳ್ಳುತ್ತದೆ. 'ಭಾರತದ ಪ್ರಭುತ್ವವು ನ್ಯಾಯಯುತವಾದ ಕ್ಷೇತ್ರವನ್ನು ಒದಗಿಸಿದ್ದಾಗ ಮಾತ್ರ ವಿರೋಧ ಪಕ್ಷಗಳು ಬಳಸಿಕೊಂಡ ರಾಜಕೀಯ ಸಾಧನಗಳು ಪರಿಣಾಮಕಾರಿಯಾಗಿದ್ದವು. ಆದರೆ, ಈಗ ಅಂತಹ ಕ್ಷೇತ್ರವು ಅಸ್ತಿತ್ವದಲ್ಲಿಯೇ ಇಲ್ಲ... ರಾಜಕೀಯ ಪಕ್ಷಗಳು ಸಕ್ರಿಯವಲ್ಲ ಎಂದಾದರೆ, ಸಕ್ರಿಯವಾಗಿರುವುದು ಯಾವುದು? ಪ್ರತಿರೋಧವು ಸಕ್ರಿಯವಾಗುತ್ತದೆ'. ಚುನಾವಣಾ ರಾಜಕಾರಣದ ಮೇಲಿನ ಅತಿ ಅವಲಂಬನೆಯಿಂದ ದೂರ ಸಾಗಬೇಕು ಎಂದು ಅವರು ಕರೆ ಕೊಡುತ್ತಾರೆ: 'ಸಮಸ್ಯೆ ಏನೆಂದರೆ, ಗೆಲ್ಲುವುದಕ್ಕಾಗಿ (ವಿರೋಧ ಪಕ್ಷಗಳಿಗೆ) ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯೇ ಇಲ್ಲ. ಹಾಗಾಗಿಯೇ ನಾವು ಪ್ರತಿರೋಧದ ಮಾರ್ಗವನ್ನು ಆಯ್ದುಕೊಳ್ಳಬೇಕಾಗುತ್ತದೆ'. ಪ್ರತಿರೋಧ ಎಂಬುದು ಒಂದು ಸ್ಫೂರ್ತಿ, ಮನಃಸ್ಥಿತಿಯೇ ಹೊರತು ಸಂಘಟನೆ ಅಲ್ಲ.

ಸಂಸತ್‌ನಿಂದ ಜಂತರ್ ಮಂತರ್‌ವರೆಗೆ, ಚುನಾವಣಾ ಸ್ಪರ್ಧೆಯಿಂದ ಜನಸಂಘಟನೆಯವರೆಗೆ, ಅಧಿಕಾರವನ್ನು ಮರಳಿ ಪಡೆಯುವ ರಾಜಕಾರಣದಿಂದ ಗಣರಾಜ್ಯವನ್ನು ಮರಳಿ ಪಡೆಯುವ ರಾಜಕಾರಣದವರೆಗೆ ವಿರೋಧ ಪಕ್ಷಗಳ ರಾಜಕಾರಣದಲ್ಲಿ ಮೂಲಭೂತ ಪಲ್ಲಟಕ್ಕೆ ಇದು ಕಾರಣವಾಗುತ್ತದೆ. ಇಂತಹ ಪ್ರತಿರೋಧವು ಪ್ರಜಾಸತ್ತಾತ್ಮಕವೂ ಅಹಿಂಸಾತ್ಮಕವೂ ಆಗಿರಬೇಕು. ಹಿಂಸೆಯಿಂದ ಯಾವುದೇ ಪರಿಣಾಮವಿಲ್ಲ ಎಂಬುದಷ್ಟೇ ಅಲ್ಲ, ಅದು ಪ್ರತಿಕೂಲವೂ ಆಗಬಹುದು ಎಂಬುದನ್ನು ಇತಿಹಾಸವು ನಮಗೆ ಹೇಳುತ್ತದೆ. ಬಾಂಗ್ಲಾದೇಶ ಅಥವಾ ನೇಪಾಳದಲ್ಲಿ ಏನು ನಡೆಯಿತು ಎಂಬುದು ಭಾರತದಲ್ಲಿ ಪುನರಾವರ್ತಿಸಬೇಕಾದ ಮಾದರಿ ಅಲ್ಲ. ಪ್ರಜಾಪ್ರಭುತ್ವವನ್ನು ಮರಳಿ ಪಡೆಯಲು ನಾವು ಪ್ರಜಾಸತ್ತಾತ್ಮಕವಾದ ಮಾರ್ಗವನ್ನೇ ಹುಡುಕಿಕೊಳ್ಳಬೇಕು. ಈ ಐತಿಹಾಸಿಕ ಹೊಣೆಗಾರಿಕೆಯು 'ಇಂಡಿಯಾ' ಕೂಟ ಅಥವಾ ರಾಜಕೀಯ ಪಕ್ಷಗಳದ್ದಷ್ಟೇ ಅಲ್ಲ. ಎಲ್ಲ ರೀತಿಯ ಶಕ್ತಿಗಳ ಸಮ್ಮಿಳನವನ್ನು ಇದು ಒಳಗೊಂಡಿರಬೇಕು: ಅವುಗಳೆಂದರೆ, 'ಇಂಡಿಯಾ' ಕೂಟದ ಒಳಗೆ ಮತ್ತು ಹೊರಗೆ ಇರುವ ವಿರೋಧ ಪಕ್ಷಗಳು, ಪಕ್ಷವಲ್ಲದ ರಾಜಕೀಯ ಸಂಘಟನೆಗಳು ಮತ್ತು ಚಳವಳಿಗಳು, ಕಾರ್ಮಿಕರು ಮತ್ತು ರೈತರ ಸಂಘಟನೆಗಳು, ಸ್ವಯಂಪ್ರೇರಿತ ಮತ್ತು ಅಸಂಘಟಿತ ಪ್ರತಿಭಟನೆಗಳು, ಸಾಮಾಜಿಕ ಸಂಘಟನೆಗಳು ಮತ್ತು ಪೌರರು ಇಲ್ಲಿ ಭಾಗಿಯಾಗಬೇಕು. 'ನಾವು ಭಾರತೀಯರು' ಎಂಬ ವೈವಿಧ್ಯಮಯ ಮತ್ತು ಸಾಮಾನ್ಯವಾಗಿ ವಿರೋಧಾಭಾಸಕರವಾಗಿ ಇರಬಹುದಾದ ಗುಂಪುಗಳನ್ನು ಒಗ್ಗೂಡಿಸುವುದು ಅಷ್ಟೇ ಸವಾಲಿನ ಕೆಲಸ.

ಪ್ರತಿರೋಧದ ಮೇಲೆ ಗಮನ ಕೇಂದ್ರೀಕರಿಸಿ ಎಂಬ ಕರೆಯು ಸಾಂವಿಧಾನಿಕ ಮತ್ತು ಸಂಸದೀಯ ಪ್ರಜಾಸತ್ತೆಯನ್ನು ತ್ಯಜಿಸಬೇಕೆಂಬ ನಿರ್ಲಕ್ಷ್ಯದ ಕರೆ ಅಲ್ಲವೇ ಅಲ್ಲ. ಬದಲಿಗೆ, ರಾಜಕಾರಣವನ್ನು ಜನರೊಂದಿಗೆ ಮರು ಜೋಡಿಸಿ ಎಂಬ ಕಳಕಳಿ. ರಾಮಮನೋಹರ ಲೋಹಿಯಾ ಅವರ, 'ಬೀದಿಗಳು ನಿರ್ಜನವಾದರೆ ಸಂಸತ್ ಧೂರ್ತವಾಗಿ ಪರಿವರ್ತನೆ ಆಗುತ್ತದೆ' ಎಂಬುದು ನಮಗೆ ನೆನಪಿರಬೇಕು.



ವಾಚಕರ ವಾಣಿ

ಸಾಧನೆ ಮಾನದಂಡಕ್ಕೆ ಅಳತೆಗೋಲೇನು?

ಯಾವುದೇ ಕಂಪನಿಯ ಸಿಇಒ ಅವರ ಸಾಧನೆ ಅಳೆಯುವಾಗ ಇಂಟರ್ನ್‌ನ ಕಾರ್ಯಸೂಚಿ ತೋರಿಸಿ 'ಹನ್ನೆರಡು ವರ್ಷಗಳು ಘಟನಾಪೂರ್ಣವಾಗಿದ್ದವು' ಎಂದು ಹೇಳುವುದಿಲ್ಲ. ಕೇಂದ್ರದ ಎನ್‌ಡಿಎ ಸರ್ಕಾರದ ಸಾಧನೆಗೂ ಇದೇ ಮಾನದಂಡ ಅನ್ವಯವಾಗಬೇಕು. ಉದ್ಯೋಗ ಸೃಷ್ಟಿ, ಆರ್ಥಿಕತೆ ಬೆಳವಣಿಗೆ, ಬೆಲೆ ಏರಿಕೆ ನಿಯಂತ್ರಣ, ರೂಪಾಯಿಯ ಸ್ಥಿರತೆ, ಕೈಗಾರಿಕಾ ವಿಸ್ತರಣೆಯು ಸರ್ಕಾರದ ಮೂಲಭೂತ ಜವಾಬ್ದಾರಿಗಳಾಗಿವೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಲಾಗಿದ್ದರೂ ನಿರುದ್ಯೋಗದ ಸಮಸ್ಯೆಯು ಇಂದಿಗೂ ಚರ್ಚಾ ವಿಷಯವಾಗಿದೆ. ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿದೆ. ಉತ್ಪಾದನಾ ಕ್ಷೇತ್ರದ ಪಾಲನ್ನು ಜಿಡಿಪಿಯ 25ರ ಪ್ರತಿಶತಕ್ಕೆ ಏರಿಸುವ ಕನಸು ಸಾಕಾರವಾಗಿಲ್ಲ. ಯಶಸ್ಸುಗಳನ್ನು ರಾಷ್ಟ್ರೀಕರಿಸಿ ವೈಫಲ್ಯಗಳನ್ನು ಖಾಸಗೀಕರಿಸುವ ಪ್ರವೃತ್ತಿ ಪ್ರಜಾಪ್ರಭುತ್ವಕ್ಕೆ ಆರೋಗ್ಯಕರವಲ್ಲ. ಸರ್ಕಾರದ ಸಾಧನೆಯನ್ನು ಅದರ ಮೂಲಭೂತ ಜವಾಬ್ದಾರಿಗಳ ಮಾನದಂಡಗಳಲ್ಲಿಯೇ ಅಳೆಯಬೇಕಲ್ಲವೆ?

ರವಿ ಚೊಟ್ಟನಹಳ್ಳಿ, ಬೆಂಗಳೂರು

ಯುವಜನರ ವೇಗಕ್ಕೆ ನಿಯಂತ್ರಕ ಬೇಡವೆ?

ಈಗಿನ ಯುವಪೀಳಿಗೆಯದ್ದು ಬಹಳ ವೇಗ. ಎಲ್ಲದರಲ್ಲಿಯೂ ವೇಗ; ತಿಂದು ಮಲಗುವವರೆಗೂ ವೇಗ. ಹಿಂದಿಕ್ಕಿ ಓಡುವ ಧಾವಂತದಲ್ಲಿರುವ ಇವರು ಸಮಾಧಾನದಿಂದ ಊಟ, ನಿದ್ದೆ ಮಾಡಲೂ ಆಗದ ಆವೇಗದಲ್ಲಿದ್ದಾರೆ. ಗರಿಗೆದರಿದ ಪ್ರೀತಿ, ಬೈತಿಟ್ಟ ಬಯಕೆ, ಆಕರ್ಷಣೆಯ ರೂಪದ ಪ್ರಣಯದಲ್ಲಿ ಲೀನವಾಗಿ ಪ್ರಪಂಚವನ್ನೇ ಮರೆಯುತ್ತಿದ್ದಾರೆ. ಪೋಷಕರಿಗೆ ಸುಳ್ಳು ಹೇಳುವುದರಲ್ಲಿಯೂ ವೇಗವಿದೆ. ಸುಳ್ಳು ಹೇಳಿ ತಪ್ಪಿಸಿಕೊಂಡೆವು ಅಂದುಕೊಂಡಿದ್ದರೆ ಅದು ತಪ್ಪು. ಹೆತ್ತವರಿಗೆ ತಮ್ಮ ಮಕ್ಕಳ ಚಟುವಟಿಕೆಗಳ ಸುಳಿವು ಇದ್ದೇಇರುತ್ತದೆ. ಅತಿ ಸುಲಭವಾಗಿ ನಡವಳಿಕೆಯಲ್ಲಿನ ವ್ಯತ್ಯಾಸವನ್ನು ಶೋಧಿಸುತ್ತಾರೆ. ಆದರೆ, ಯುವಪೀಳಿಗೆ ಮಾತ್ರ ಸುಲಭವಾಗಿ ನಂಬಿಸಿದೆವು ಎಂಬ ಭ್ರಮೆಯಲ್ಲಿ ಇರುತ್ತದೆ. ಈ ಸುಳ್ಳಿಗೆ ನಾಳೆ ತಮ್ಮ ಮಕ್ಕಳಿಗೆ ಸರಿ ಉತ್ತರ ಕೊಡಲೇಬೇಕಾಗುತ್ತದೆ. ತಪ್ಪಿಸಿಕೊಂಡು ಎಲ್ಲಿಯೂ ಅಡಗಲು ಸಾಧ್ಯವಿಲ್ಲ. ಸತ್ಯಕ್ಕೆ ಒಂದೇ ಮುಖ; ಸುಳ್ಳಿಗೆ ನಾನಾ ಮುಖ ಅಲ್ಲವೆ?

ಎಚ್.ಎಸ್. ಸನತ್ ಕುಮಾರ್, ಚಂದಾಪುರ

ದೇಣಿಗೆ ನೀತಿ: 'ಸಂಘ'ಕ್ಕೂ ಅನ್ವಯಿಸಲಿ

ಕೇಂದ್ರ ಸರ್ಕಾರವು ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ನಿಯಮಗಳು–2026 ಅನ್ನು ಪ್ರಕಟಿಸಿದೆ. ನಿಯಮಗಳ ಅನ್ವಯ ದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎನ್‌ಜಿಒಗಳು ಸರ್ಕಾರದಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯ. ವಿದೇಶಿ ದೇಣಿಗೆ ಸ್ವೀಕರಿಸುವ ವಿವರವನ್ನು ಸರ್ಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸಬೇಕಿದೆ. ಈ ನಿಯಮವು ಆರ್‌ಎಸ್‌ಎಸ್ ಮತ್ತು ಅದರ ಅಂಗಸಂಸ್ಥೆಗಳಿಗೂ ಅನ್ವಯಿಸುತ್ತದೆಯೇ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕಿದೆ. ಇಲ್ಲಿಯವರೆಗೂ 'ಸಂಘ'ವು ನೋಂದಣಿ ಮಾಡಿಸಿಲ್ಲ ಮತ್ತು ಎಫ್‌ಸಿಆರ್‌ಎ ಕಾಯ್ದೆಯಡಿ ಪರವಾನಗಿ ಪಡೆದಿಲ್ಲ. ಈಗಲಾದರೂ ಈ ಸಂಘಟನೆಯು ಸ್ವೀಕರಿಸುವ ವಿದೇಶಿ ದೇಣಿಗೆಯ ವಿವರವನ್ನು ಪ್ರಕಟಿಸುತ್ತದೆಯೆ? ತನ್ನ ಪಾರದರ್ಶಕತೆ ಪ್ರಶ್ನಿಸುವ ಜನರಿಗೆ ಸೂಕ್ತ ದಾಖಲೆ ನೀಡುವುದೆ?

ಆರ್. ಕುಮಾರ್, ಬೆಂಗಳೂರು

ಖಾತೆ ಪರಿವರ್ತನೆ: ಹಣ ಪಾವತಿಗೆ ಕಗ್ಗಂಟು

ರಾಜ್ಯ ಸರ್ಕಾರ ಜನರ ಒತ್ತಾಯದ ಮೇರೆಗೆ 'ಬಿ' ಖಾತಾ ನಿವೇಶನಗಳನ್ನು 'ಎ' ಖಾತಾಗೆ ಪರಿವರ್ತಿಸಿಕೊಳ್ಳಲು ಅನುಮತಿ ನೀಡಿದೆ. ಆದರೆ, 'ಎ' ಖಾತಾ ಪಡೆಯಲು ಪಾವತಿಸಬೇಕಾದ ಹಣವನ್ನು ಗೂಗಲ್ ಪೇ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ಪಾವತಿಸಬೇಕು. ₹1 ಲಕ್ಷಕ್ಕೂ ಹೆಚ್ಚಿನ ಮೊತ್ತವನ್ನು ಈ ವಿಧಾನದಲ್ಲಿ ಪಾವತಿಸಲು ಸಾಧ್ಯವಿಲ್ಲ. ಇದರಿಂದ ಮಧ್ಯಮ ವರ್ಗದ ಜನರು ತೊಂದರೆ ಅನುಭವಿಸುವಂತಾಗಿದೆ. ಈ ಗೊಂದಲದ ಬಗ್ಗೆ ವಿಚಾರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕರೆ ಮಾಡಿದರೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಡಿ.ಡಿ. ಮೂಲಕ ಪಾವತಿಸಲು ಅವಕಾಶ ನೀಡಿದರೆ ಅನುಕೂಲವಾಗಲಿದೆ. ಈ ಸಮಸ್ಯೆಗೆ ಸರ್ಕಾರ ತ್ವರಿತವಾಗಿ ಪರಿಹಾರ ಸೂಚಿಸಬೇಕಿದೆ.

ಪುಷ್ಪಾ ಶ್ರೀರಾಮರಾಜು, ಬೆಂಗಳೂರು

ನೇಮಕಾತಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪೊಲೀಸ್ ನೇಮಕಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದೆ. ಆದರೆ, ವೆಬ್‌ಸೈಟ್‌ನಲ್ಲಿ ಪದೇ ಪದೇ ತಾಂತ್ರಿಕ ದೋಷ ಕಾಣಿಸಿಕೊಳ್ಳುತ್ತಿದೆ. ಇದರಿಂದ ಅಭ್ಯರ್ಥಿಗಳು ಸೂಕ್ತ ದಾಖಲೆ ಸಲ್ಲಿಸಿ ಅರ್ಜಿ ಸಲ್ಲಿಸಲು ವಿಳಂಬವಾಗುತ್ತಿದೆ. ಇತ್ತೀಚೆಗೆ ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾಗಿ ಮೀಸಲಾತಿಯ ವರ್ಗೀಕರಣವಾಗಿದೆ. ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಹೊಸದಾಗಿ ಜಾತಿ ಮತ್ತು ಆದಾಯ ಪ್ರಮಾಣಪತ್ರ ಪಡೆದುಕೊಂಡು ಅರ್ಜಿ ಸಲ್ಲಿಸಬೇಕಿದೆ. ಇದಕ್ಕೆ ಸಮಯಾವಕಾಶ ಬೇಕಿದೆ. ಹಾಗಾಗಿ, ಅರ್ಜಿ ಸಲ್ಲಿಕೆಗೆ ನೀಡಿರುವ ಕೊನೆಯ ದಿನವನ್ನು ಕನಿಷ್ಠ ಹತ್ತು ದಿನಗಳವರೆಗೆ ವಿಸ್ತರಿಸಿದರೆ ಹೆಚ್ಚಿನ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗಲಿದೆ.

ಪವನ್ ಜಯರಾಂ, ಚಾಮರಾಜನಗರ

ವೃತ್ತಿಬದುಕಿಗೆ ಕನ್ನಡ ಅಧ್ಯಯನ ಕೊಂಡಿ

ಕನ್ನಡವನ್ನು ವೃತ್ತಿಬದುಕಿನೊಂದಿಗೆ ಬೆಸೆಯುವ ನಿಟ್ಟಿನಲ್ಲಿ ಕನ್ನಡ ಸ್ನಾತಕೋತ್ತರ ಪದವಿಯನ್ನು 'ಪ್ರೊಫೆಷನಲ್ ಕೋರ್ಸ್' ಆಗಿ ರೂಪಿಸುವ ಪ್ರಯತ್ನಗಳು ಈಚೆಗೆ ನಡೆಯುತ್ತಿವೆ. ಇಂಥದೊಂದು ಕೋರ್ಸ್ ಅನ್ನು ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿ.ವಿ. ರೂಪಿಸಿದೆ. ಇದು ಶ್ಲಾಘನೀಯ ಪ್ರಯತ್ನ. ಈಗಿನ ವ್ಯಾವಹಾರಿಕ ಪ್ರಪಂಚದಲ್ಲಿ ಸಾಹಿತ್ಯ ಹಾಗೂ ಮಾತೃಭಾಷೆಯ ಪ್ರಸ್ತುತತೆ ಉಳಿಸಿಕೊಂಡು ಅದನ್ನು ಬೆಳೆಸಲು ಇಂಥ ಕೋರ್ಸ್‌ಗಳು ಸಹಕಾರಿ. ಇದು ನಿಜವಾದ ಕನ್ನಡ ಸೇವೆಯ ಮಾದರಿ. ಸರ್ಕಾರವು ಇಂತಹ ಪ್ರಯತ್ನಗಳನ್ನು ಪ್ರೋತ್ಸಾಹಿಸಬೇಕು.

ಎ.ಜೆ. ಜಾವೀದ್, ಹಾಸನ

ಚುರುಮುರಿ

'ಹಸ್ತ' ಪಾದಾಸನ!

● ಬಿ.ಎನ್. ಮಲ್ಲೇಶ್

'ಯಾಕೋ ಮೈ ಕೈ ನೋವು ಮಂಜಮ್ಮ, ಒಂದು ಸ್ಟ್ರಾಂಗ್ ಚಾ ಹಾಕು' ಎಂದ ತೆಪರೇಸಿ.

'ಮೈ ಕೈ ನೋವಾ? ಏನ್ ಕಿತ್ ಗುಡ್ಡೆ ಹಾಕಿದ್ಯಪ?' ದುಬ್ಬೀರ ನಕ್ಕ.

'ಅದೂ ಮೊನ್ನೆ ಯೋಗ ದಿನ ಇತ್ತಲ್ಲ, ಅರ್ಧಗಂಟೆ ಎಂತೆಂಥವೋ ಆಸನ ಹಾಕಿದ್ದೆ, ಅದರ ನೋವು ಇನ್ನೂ ಕಮ್ಮಿ ಆಗಿಲ್ಲ...'

'ಹೌದಾ? ರಾಜಕಾರಣಿಗಳ ತರ ಯಾವತ್ತೋ ಒಂದಿನ ಯೋಗ ಮಾಡಾಕೋದ್ರೆ ಹಂಗೇ ಆಗೋದು... ಅದಿರ್ಲಿ, ಅವತ್ತು ರಾಜಕಾರಣಿಗಳು ಯಾವ್ಯಾವ ಆಸನ ಹಾಕಿದ್ರು?' ಗುಡ್ಡೆ ಕೇಳಿದ.

'ನಾನು ನೋಡಿದ ಪ್ರಕಾರ ನಮೋ ಸಾಹೇಬ್ರು ಕುರ್ಚಿ ಭದ್ರಾಸನ ಹಾಕಿದ್ರು. ಸಿಎಂ ಡಿಕೆಶಿ ಕಂಡ ಕಂಡ ದೇವರಿಗೆಲ್ಲ ದೀರ್ಘ ದಂಡ ನಮಸ್ಕಾರಾಸನ, ನಮ್ ಕುಮಾರಣ್ಣ ಬಿಡದಿ ಬಬ್ರುವಾಹನಾಸನ ಹಾಕಿದ್ರಪ...'

'ಅಷ್ಟೇನಾ?'

'ಇನ್ನೂ ಅದಾವು ತಡಿ... ಆರೆಸ್ಸೆಸ್ ಮೇಲೆ ಸಣ್ಣ ಖರ್ಗೆ ದೊಡ್ಡ ಉಗ್ರಾಸನ, ಅಡ್ಡ ಮತದಾನಕ್ಕೆ ಬಿಜೆಪಿ ಹೈಕಮಾಂಡ್ ವ್ಯಗ್ರಾಸನ, ನಮ್ಮನ್ನ ಮಂತ್ರಿ ಮಾಡಿ ಅಂತ ಹೈಕಮಾಂಡ್ ಮುಂದೆ ಕೈ ಶಾಸಕರು ಹಸ್ತ ಪಾದಾಸನ... ಎಲ್ಲ ಮಾಡಿದ್ರು...'

'ಹೌದಾ? ಯತ್ನಾಳ್ ಸಾಹೇಬ್ರು ಕಮಲ ಸಾಷ್ಟಾಂಗಾಸನ, ಸಿದ್ರಾಮಣ್ಣ ಕೇರಳದಲ್ಲಿ ತಂತ್ರ–ಮಂತ್ರಾಸನ ಮಾಡ್ಲಿಲ್ವ? ಇದ್ದವು, ಇಲ್ಲದವು ಎಲ್ಲ ಆಸನ ಹೇಳಿದೆ ಬಿಡು, ನಮ್ ಧರ್ಮಸ್ಥಳದ ಆಣೆ, ಪ್ರಮಾಣದ ಕತೆ ಏನಾತು?'

'ಬಿಜೆಪಿ ಹೈಕಮಾಂಡು ಆಣೆ, ಪ್ರಮಾಣ ಎಲ್ಲ ಬ್ಯಾಡ ಅಂತಂತೆ. ಶಾಸಕರು ದೇವರ ಮುಂದೂ ಸುಳ್ಳು ಹೇಳಲ್ಲ ಅಂತ ಏನ್ ಗ್ಯಾರಂಟಿ? ಅಲ್ವ?'

'ಕರೆಕ್ಟ್... ಮತ್ತೆ, ಇನ್ನೇನ್ ಸಮಾಚಾರ?'

'ಏನಿಲ್ಲ, ಮೊನ್ನೆ ಏನಾತು ಗೊತ್ತಾ? ರಸ್ತೇಲಿ ಒಬ್ಬ ಅಡ್ಡಡ್ಡ, ಅಡ್ಡಾದಿಡ್ಡಿ ನಡೀತಿದ್ದ. ನಾನು, ಯಾರಪ್ಪ ನೀನು? ಏನು ನಿನ್ನೆಸರು ಅಂತ ಕೇಳಿದೆ...'

'ಅದಕ್ಕೆ ಅವನೇನಂದ?'

'ನನ್ನೆಸರಾ? 'ಆತ್ಮಸಾಕ್ಷಿ' ಅಂದ!'

ಗುಡ್ಡೆ ಜೋಕಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ನೂತನ 'ಪ್ರಜಾಸೇವಾ ಇಲಾಖೆ'ಗೆ ಐದು ಸಲಹೆ

ವಿವಿಧ ಇಲಾಖೆಗಳ ನಡುವೆ ಸಮನ್ವಯಕಾರನ ಪಾತ್ರ ನಿರ್ವಹಿಸಬಹುದಾದ 'ಪ್ರಜಾಸೇವಾ ಇಲಾಖೆ'ಯು, ಇ–ಆಡಳಿತಕ್ಕೆ ಸಂಬಂಧಿಸಿದಂತೆ ಸಮಗ್ರತೆ ಸಾಧಿಸಲಿ.

● ಬೇಲೂರು ಸುದರ್ಶನ

'ಪ್ರಜಾಸೇವಾ ಇಲಾಖೆ' ಎಂಬ ಹೊಸ ಇಲಾಖೆಯನ್ನೇ ಸೃಷ್ಟಿ ಮಾಡಿದ ಆದೇಶ ಹೊರಡಿಸಿರುವುದಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅಭಿನಂದನೆಗಳು. ವಾಸ್ತವದಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳೂ ಪ್ರಜಾಸೇವೆಯ ಕಾಯಕವನ್ನೇ ಮಾಡಬೇಕು, ಮಾಡುತ್ತಿವೆ. ಆದರೆ, ಎಲ್ಲಾ ಇಲಾಖೆಗಳಲ್ಲೂ ಆಡಳಿತಶಾಹಿ ವಿಳಂಬ, ಕರ್ತವ್ಯಲೋಪ ಇತ್ಯಾದಿ ಕೊರತೆಗಳಿದ್ದೇ ಇವೆ. ಈ ಹಿನ್ನೆಲೆಯಲ್ಲಿಯೇ ಸರ್ಕಾರವು ಸಾರ್ವಜನಿಕ ಕುಂದುಕೊರತೆಗಳ ನಿರ್ವಹಣೆಗಾಗಿಯೇ ಇ–ಆಡಳಿತ (ಸಿಆಸುಇ) ಇಲಾಖೆಯಲ್ಲಿ 'ಪಿಜಿಆರ್‌ಎಸ್' ಪೋರ್ಟಲ್ ಅನ್ನೂ ಆರಂಭಿಸಿದೆ. ಮುಖ್ಯಮಂತ್ರಿಗಳು ಹೊಸ ಇಲಾಖೆಗೆ ಈ ಪೋರ್ಟಲ್ ಸೇರಿಸಿಕೊಂಡಿರುವುದು ಉತ್ತಮ ನಡೆ. ಹಾಗೆಯೇ 'ಸಕಾಲ' ಯೋಜನೆಯನ್ನೂ ಈ ಹೊಸ ಇಲಾಖೆಯಲ್ಲಿ ಸೇರಿಸಿರುವುದು ಕೂಡ ಒಳ್ಳೆಯ ಕ್ರಮ.

ಹೀಗಿದ್ದೂ, ಆಡಳಿತದಲ್ಲಿ ಪ್ರಜಾಸೇವೆಯ ಅಂಶವನ್ನು ವಸ್ತುಶಃ ಜಾರಿಗೆ ತರಲು ಈ ಕೆಳಕಂಡ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಅವರನ್ನು ಆಗ್ರಹಿಸುತ್ತೇನೆ. ಈ ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಗಳ ಇ–ಆಡಳಿತ ಸಲಹೆಗಾರನಾಗಿ ಪಡೆದ ಅನುಭವದ ಹಿನ್ನೆಲೆಯಲ್ಲಿ ಈ ಸಲಹೆಗಳನ್ನು ಮಂಡಿಸುತ್ತಿದ್ದೇನೆ.

ಮೊದಲನೆಯದಾಗಿ, ಪಿಜಿಆರ್‌ಎಸ್ ಪೋರ್ಟಲ್, ಮಾಹಿತಿ ಪಡೆಯುವ ಹಕ್ಕು ಪೋರ್ಟಲ್ – ಈ ಎರಡೂ ಆನ್‌ಲೈನ್ ಸೇವೆಗಳಲ್ಲಿ ಎಲ್ಲಾ ಇಲಾಖೆಗಳೂ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವಂತೆ ಒಂದು ಆದೇಶವನ್ನು ಹೊರಡಿಸಬೇಕು. ಪ್ರಸ್ತುತ, ನೋಂದಾವಣೆಯನ್ನು ಆಯಾ ಇಲಾಖೆಗಳೇ ಮಾಡಿಕೊಳ್ಳುವ ಆಯ್ಕೆ ಇದೆ. ಈ ಎರಡೂ ಪೋರ್ಟಲ್‌ಗಳ ನಿರ್ವಾಹಕರು ಮತ್ತು ಇ–ಆಡಳಿತ ಇಲಾಖೆಯ ಅಧಿಕಾರಿಗಳು ಈ ಪೋರ್ಟಲ್‌ಗಳಿಗೆ ಸೇರಿಕೊಳ್ಳಲು ಇಲಾಖೆಗಳಿಗೆ ಏನೇ ಹೇಳಿದರೂ ಪರಿಣಾಮ ಮಾತ್ರ ಸೊನ್ನೆ. ಒಬ್ಬ ನಾಗರಿಕನಿಗೆ ಅವನ/ಅವಳ ಆಯ್ಕೆಯ ಯಾವುದೇ ಇಲಾಖೆ/ಕಚೇರಿಯ ಬಗ್ಗೆ ದೂರು ನೋಂದಣಿ ಮಾಡುವ ಅವಕಾಶ ಇರುವುದು ಅತ್ಯಗತ್ಯ. ಆದರೆ, ಈಗಿನ ವ್ಯವಸ್ಥೆಯಲ್ಲಿ ಇಲಾಖೆ/ಕಚೇರಿಗಳು ಸ್ವತಃ ಪಟ್ಟಿಗೆ ಸೇರಿಕೊಳ್ಳದೇ ಇದ್ದರೆ, ಆ ಇಲಾಖೆಗಳ ಬಗ್ಗೆ ದೂರು ಕೊಡುವುದಕ್ಕೇ ಆಗುವುದಿಲ್ಲ. ಆದ್ದರಿಂದ ಈ ಮೊದಲ ಸಲಹೆಯನ್ನು ಮುಖ್ಯಮಂತ್ರಿಗಳು ಜಾರಿಗೊಳಿಸದೇ ಇದ್ದರೆ, ಪ್ರಜಾಸೇವಾ ಇಲಾಖೆಯು ಹೆಸರಿಗಷ್ಟೇ ಇರುತ್ತದೆಯೇ ಹೊರತು, ಯಾವುದೇ ನೈಜ ಸೇವೆ ನೀಡಲು ಸಾಧ್ಯವಾಗುವುದಿಲ್ಲ.

ಎರಡನೆಯದಾಗಿ, 'ಮಾಹಿತಿ ಕಣಜ' ಎಂಬ ಪೋರ್ಟಲ್ ಇದೆ. ಅದನ್ನು ಸಶಕ್ತಗೊಳಿಸಿ, ಅಲ್ಲಿಯೂ ಎಲ್ಲಾ ಇಲಾಖೆಗಳೂ ತಮ್ಮ ಎಲ್ಲಾ ಮಾಹಿತಿಗಳನ್ನೂ ಸ್ವಯಂಚಾಲಿತವಾಗಿ ತುಂಬುವ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿದೆ. ಅಂದರೆ, ಎಲ್ಲಾ ಇಲಾಖೆಗಳೂ ತಮ್ಮ ಅಂಕಿ–ಅಂಶ, ಮಾಹಿತಿಗಳನ್ನು ಸದಾ ಅಪ್‌ಡೇಟ್ ಮಾಡುತ್ತಲೇ ಇರಬೇಕು; ಅದು ಮಾಹಿತಿ ಕಣಜ ಪೋರ್ಟಲ್‌ನಲ್ಲಿ ಸದಾ ಹೊಸ ಮಾಹಿತಿಯಾಗಿ ಸಾರ್ವಜನಿಕರಿಗೆ ಸಿಗುತ್ತಲೇ ಇರಬೇಕು.

ಮೂರನೆಯದಾಗಿ, ಸ್ಥಳೀಯಾಡಳಿತ ಸಂಸ್ಥೆಗಳ ಸುಮಾರು ನಾಲ್ಕುನೂರಕ್ಕೂ ಹೆಚ್ಚು ಜಾಲತಾಣಗಳು ಕರ್ನಾಟಕ ಸರ್ಕಾರದ ಅಧಿಕೃತ ಏಕರೂಪದ ಜಾಲತಾಣ ವಿನ್ಯಾಸಕ್ಕೆ ಒಳಪಟ್ಟಿಲ್ಲ. ಅವುಗಳನ್ನೂ ರಾಜ್ಯ ಸರ್ಕಾರದ ಏಕರೂಪದ, ಕನ್ನಡ ಆದ್ಯತೆಯ ಜಾಲತಾಣ ವಿನ್ಯಾಸಕ್ಕೆ ಒಳಪಡಿಸಿದರೆ, ಸ್ಥಳೀಯಾಡಳಿತದ ಪ್ರಜಾಸೇವೆಯು ಸುಧಾರಿಸುತ್ತದೆ.

ನಾಲ್ಕನೆಯದಾಗಿ, 'ಕುಟುಂಬ' ಎಂಬ ಪೋರ್ಟಲ್ ಇದೆ. ಅದನ್ನು ಸಬಲಗೊಳಿಸಿ. ಸಾರ್ವಜನಿಕರಿಗೆ ಒದಗಿಸಬಹುದಾದ ಸರ್ಕಾರದ ಸೇವೆಗಳನ್ನು ಆ ಪೋರ್ಟಲ್ ಮೂಲಕ ಸರ್ಕಾರವೇ ಮುಂದಾಗಿ ನೀಡಬಹುದಾದ ವ್ಯವಸ್ಥೆಯಿಂದ (ಸೇವೆಗಳ ಸ್ವಯಂಪ್ರೇರಿತ ವಿತರಣೆ), ಅಧಿಕೃತ ದಾಖಲೆಗಳಿದ್ದೂ ಸೇವೆಗಳಿಂದ ವಂಚನೆಗೆ ಒಳಗಾದವರನ್ನು ಗುರ್ತಿಸಬಹುದು.

ಐದನೆಯದಾಗಿ, ಸರ್ಕಾರದ ಎಲ್ಲ ಇಲಾಖೆಗಳೂ ತಮ್ಮ ಎಲ್ಲ ತಂತ್ರಜ್ಞಾನ, ತಂತ್ರಾಂಶದ ಕೆಲಸಗಳನ್ನು ಬರೀ ಇ–ಆಡಳಿತ ಇಲಾಖೆ ಮತ್ತು ಸರ್ಕಾರದ್ದೇ ಸಂಸ್ಥೆಯಾದ 'ಸಿಇಸ್‌ಜಿ' ಮೂಲಕವೇ ಮಾಡಿಸಿಕೊಳ್ಳಬೇಕು ಎಂಬ ಆದೇಶವನ್ನು ಸರ್ಕಾರ ತಡ ಮಾಡದೆ ಹೊರಡಿಸಬೇಕು. ಈಗಲೂ ಹಲವು ಇಲಾಖೆಗಳು ಮನಸ್ಸಿಗೆ ಬಂದ ಹಾಗೆ ಖಾಸಗಿ ವೆಂಡರ್‌ಗಳಿಂದ ಯಾವುದೇ ಪಾರದರ್ಶಕತೆ, ಸುರಕ್ಷತೆ ಇಲ್ಲದ ದುಬಾರಿ ತಂತ್ರಾಂಶಗಳನ್ನು ಮಾಡಿಸಿಕೊಳ್ಳುತ್ತಿವೆ. ಇದರಿಂದಾಗಿ ಪ್ರಜಾಸೇವೆಯ ಅಂಶವೇ ಕುಂಠಿತವಾಗುತ್ತಿದೆ.

ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಗಳ ಇ–ಆಡಳಿತ ಸಲಹೆಗಾರನಾಗಿ ಪಡೆದ ಅನುಭವದ ಹಿನ್ನೆಲೆಯಲ್ಲಿ ಸದ್ಯಕ್ಕೆ ಹೊಳೆದ ಐದು ಸಲಹೆಗಳಿವು. ಒಬ್ಬ ನಾಗರಿಕನಾಗಿಯೂ ಈ ಒತ್ತಾಯಗಳನ್ನು ಮುಂದಿಟ್ಟಿದ್ದೇನೆ.

ಯಾವುದೇ ಸರ್ಕಾರ ಬಂದರೂ ಇಂತಹ ನಾಗರಿಕ ಸೇವಾ ಕೇಂದ್ರಿತ ವ್ಯವಸ್ಥೆಯು ದುರ್ಬಲವಾಗದೆ ಇರುವ ರೀತಿಯಲ್ಲಿ ಸೂಕ್ತವಾದ ಸರ್ಕಾರಿ ಆದೇಶಗಳನ್ನು ಮುಖ್ಯಮಂತ್ರಿ ಶಿವಕುಮಾರ್ ಅವರು ಜಾರಿ ಮಾಡಬೇಕು. ಇಲ್ಲವಾದರೆ, ಈ ಇಲಾಖೆಯೂ ರಾಜಕೀಯಕ್ಕೆ ಸಿಲುಕಿ ದುರ್ಬಲವಾಗುತ್ತದೆ.

'ಪ್ರಜಾಸೇವಾ ಇಲಾಖೆ'ಯು ಸರ್ಕಾರದ ಎಲ್ಲಾ ಇಲಾಖೆಗಳ ಮೇಲೂ ಒಂದು ಪ್ರಮಾಣದ ನಿಯಂತ್ರಣ ಹೊಂದುವುದರಿಂದ, ಆಯಾ ಇಲಾಖೆಯ ಸಚಿವರು ಮತ್ತು ಅಧಿಕಾರಿಗಳು ಈ ಹೊಸ ಇಲಾಖೆಯ ಕೆಲಸಗಳಿಗೆ ಸಂಪೂರ್ಣ ಬೆಂಬಲ ನೀಡಬೇಕಾಗುತ್ತದೆ. ಇಲ್ಲವಾದರೆ ಇಲಾಖೆ ನೆಲಕಚ್ಚುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭದ್ರಾ ಮೇಲ್ದಂಡೆ ಯೋಜನೆ ಹೆಗಲು ಕೊಡದ ಕೇಂದ್ರ

ಭದ್ರಾ ನೀರು ಹರಿಸಲು ಸಜ್ಜುಗೊಂಡಿರುವ ಪಂಪ್‌ಹೌಸ್

• ಎಂ.ಎನ್‌.ಯೋಗೇಶ್

ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ 2023ರ ಬಜೆಟ್‌ನಲ್ಲಿ ಘೋಷಿಸಿದ್ದ ₹5,300 ಕೋಟಿ ಅನುದಾನದಲ್ಲಿ ಇಲ್ಲಿಯವರೆಗೆ ಒಂದು ರೂಪಾಯಿಯೂ ಬಿಡುಗಡೆಯಾಗಿಲ್ಲ. ಕೇಂದ್ರ ಜಲಶಕ್ತಿ ಸಚಿವಾಲಯದ ಉನ್ನತ ಸಮಿತಿಯು ಯೋಜನೆಗೆ ಅನುಮೋದನೆ ನೀಡಿ 5 ವರ್ಷವಾಗುತ್ತಿದ್ದರೂ ಕೇಂದ್ರ ಸರ್ಕಾರ ಇದನ್ನು 'ರಾಷ್ಟ್ರೀಯ ಯೋಜನೆ' ಎಂದು ಘೋಷಿಸಿಲ್ಲ. 2008ರಲ್ಲಿ ಆರಂಭವಾದ ಕಾಮಗಾರಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರದ ರಾಜಕೀಯ ಮೇಲಾಟದಿಂದ ವೇಗ ಪಡೆದುಕೊಳ್ಳಲೇ ಇಲ್ಲ. ಇದರಿಂದಾಗಿ ಬಯಲುಸೀಮೆಯ ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ, ತುಮಕೂರು ಜಿಲ್ಲೆಗಳ ಜನರ ದಶಕಗಳ ನೀರಾವರಿ ಕನಸು ಇನ್ನೂ ಸಾಕಾರಗೊಂಡಿಲ್ಲ.

ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಭದ್ರಾ ಮೇಲ್ದಂಡೆ ಯೋಜನೆ ಕರ್ನಾಟಕದ ಮೊದಲ 'ರಾಷ್ಟ್ರೀಯ ಯೋಜನೆ' ಎಂಬ ಖ್ಯಾತಿ ಗಳಿಸುತ್ತಿತ್ತು. ಇದರಿಂದ ಕೇಂದ್ರದ ಮತ್ತಷ್ಟು ಅನುದಾನ ಸಿಕ್ಕಿ ಯೋಜನಾ ಕಾಮಗಾರಿ ಚುರುಕು ಪಡೆದುಕೊಳ್ಳುತ್ತಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಚಿತ್ರದುರ್ಗಕ್ಕೆ ಬಂದಿದ್ದಾಗ ಘೋಷಿಸಿದ್ದ ಅನುದಾನ ಬಾರದ ಕಾರಣ ಯೋಜನಾ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಸಾಗಿದೆ. ಕೇಂದ್ರ ಸರ್ಕಾರದ ಕಡೆಗೆ ಬೊಟ್ಟು ತೋರಿಸುತ್ತಲೇ ಬಂದ ರಾಜ್ಯ ಸರ್ಕಾರ ತನ್ನ ಪಾಲಿನ ಹಣ ಕೊಡುವುದಕ್ಕೂ ತಡ ಮಾಡಿದ ಕಾರಣ ಕಾಮಗಾರಿ 18 ವರ್ಷಗಳಿಂದ ಕುಂಟುತ್ತಲೇ ಇದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಗ್ಗಜಗ್ಗಾಟದ ನಡುವೆಯೂ ಕಾಮಗಾರಿ ಈಗ ಒಂದು ಹಂತಕ್ಕೆ ಬಂದಿದೆ. ಚಿತ್ರದುರ್ಗ ಶಾಖಾ ಕಾಲುವೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳು ಪರೀಕ್ಷಾರ್ಥವಾಗಿ ನೀರು ಹರಿಸಲು ಸಿದ್ಧತೆ ನಡೆಸಿದ್ದಾರೆ. ಹೊಳಲ್ಕೆರೆ ತಾಲ್ಲೂಕಿನ ಮೂಲಕ ಭದ್ರಾ ನೀರು ಚಿತ್ರದುರ್ಗ ಜಿಲ್ಲೆ ಪ್ರವೇಶಿಸಲಿದ್ದು, ಕೋಟೆನಾಡಿನಲ್ಲಿ ಒಂದು ರೀತಿಯ ಸಂಭ್ರಮದ ವಾತಾವರಣ ಮನೆಮಾಡಿದೆ. ಹೊಳಲ್ಕೆರೆ ತಾಲ್ಲೂಕಿನ ರೈತರು ಸ್ವಯಂಪ್ರೇರಿತವಾಗಿ ಕೆರೆಗಳನ್ನು ಸ್ವಚ್ಛಗೊಳಿಸಿದ್ದು, ಭದ್ರೆಯ ಸ್ವಾಗತಕ್ಕೆ ಸಜ್ಜಾಗಿದ್ದಾರೆ.

ಯೋಜನೆಯ ಸದ್ಯದ ಚಿತ್ರಣ

ಚಿತ್ರದುರ್ಗ ಶಾಖಾ ಕಾಲುವೆ (ಸಿಬಿಸಿ)

134.6 ಕಿ.ಮೀ. ಕಾಲುವೆಯ ಒಟ್ಟು ಉದ್ದ

126.26 ಕಿ.ಮೀ. ಕಾಮಗಾರಿ ಪೂರ್ಣಗೊಂಡಿರುವುದು

8.34 ಕಿ.ಮೀ. ಕಾಮಗಾರಿ ಪ್ರಗತಿಯಲ್ಲಿರುವುದು

ತುಮಕೂರು ಶಾಖಾ ಕಾಲುವೆ (ಟಿಬಿಸಿ)

159.68 ಕಿ.ಮೀ. ಕಾಲುವೆಯ ಒಟ್ಟು ಉದ್ದ

44.52 ಕಿ.ಮೀ. ಕಾಮಗಾರಿ ಪೂರ್ಣಗೊಂಡಿರುವುದು

35.95 ಕಿ.ಮೀ ಕಾಮಗಾರಿ ಪ್ರಗತಿಯಲ್ಲಿರುವುದು

79.21 ಕಿ.ಮೀ. ಕಾಮಗಾರಿ ಬಾಕಿ ಇರುವುದು

ಅಜ್ಜಂಪುರ ಸುರಂಗದ ಪ್ರವೇಶ ದ್ವಾರ

ಕೇಂದ್ರದ ಹೊಸ ವರಸೆ

ತಾನು ಘೋಷಿಸಿರುವ ₹5,300 ಕೋಟಿ ಮಂಜೂರಾತಿಯ ಸಂಬಂಧ ಈಗ ಕೇಂದ್ರ ಸರ್ಕಾರ ಹೊಸ ವರಸೆ ಎತ್ತಿದೆ. ಪೂರ್ಣಗೊಂಡ ಕಾಮಗಾರಿ ಹೊರತುಪಡಿಸಿ ಉಳಿಕೆ ಕಾಮಗಾರಿಗೆ ಕೇಂದ್ರ ಜಲಶಕ್ತಿ ಸಚಿವಾಲಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಕೇಳಿದೆ. ಇದರಿಂದ ಘೋಷಿತ ಅನುದಾನದ ಬಹುತೇಕ ಪಾಲಿನಲ್ಲಿ ಖೋತಾ ಆಗುವ ಸಾಧ್ಯತೆ ಇದೆ.

ಏನಿದು ಯೋಜನೆ?

ಶಿವಮೊಗ್ಗ ಜಿಲ್ಲೆ ಗಾಜನೂರಿನ ಬಳಿಯ ತುಂಗಾ ಜಲಾಶಯದಿಂದ ಲಕ್ಕವಳ್ಳಿಯಲ್ಲಿರುವ ಭದ್ರಾ ಜಲಾಶಯಕ್ಕೆ **17.40** ಟಿಎಂಸಿ ಅಡಿ ನೀರು ತರುವುದು, ಮುಂದೆ ಭದ್ರಾ ಜಲಾಶಯದಿಂದ ಬಯಲುಸೀಮೆಯ ಬರಪೀಡಿತ 4 ಜಿಲ್ಲೆಗಳಿಗೆ **29.90** ಟಿಎಂಸಿ ಅಡಿ ನೀರು ಹರಿಸುವುದೇ ಭದ್ರಾ ಮೇಲ್ದಂಡೆ ಯೋಜನೆಯ ಒಟ್ಟಾರೆ ತಿರುಳು. **29.90** ಟಿಎಂಸಿ ಅಡಿ ನೀರಿನಲ್ಲಿ **5.57** ಲಕ್ಷ ಎಕರೆ ಭೂಮಿಗೆ ಹನಿ ನೀರಾವರಿ ಒದಗಿಸಲು **21.90** ಟಿಎಂಸಿ ಅಡಿ ನೀರು ಹಂಚಿಕೆ ಮಾಡಲಾಗಿದೆ. ಉಳಿದ ನೀರಿನಲ್ಲಿ 367 ಕೆರೆ ತುಂಬಿಸಲು **6** ಟಿಎಂಸಿ ಅಡಿ, ಹಿರಿಯೂರು ಸಮೀಪದ ವಾಣಿವಿಲಾಸ ಸಾಗರ ಜಲಾಶಯಕ್ಕೆ **2** ಟಿಎಂಸಿ ಅಡಿ ನೀರು ಮೀಸಲಿಡಲಾಗಿದೆ.

ಏಪ್ರಿಲ್ ಆರಂಭದಲ್ಲೇ ಅಧಿಕಾರಿಗಳು ನೀರು ಹರಿಸುವ ಉದ್ದೇಶ ಹೊಂದಿದ್ದರು. ಆದರೆ, ತರೀಕೆರೆ ತಾಲ್ಲೂಕಿನ ಹೆಗಡೇಹಳ್ಳಿ ಬಳಿಯ ನಾಲೆಯಲ್ಲಿ ಬೃಹತ್ ಬಂಡೆ ಸಿಕ್ಕಿದ ಕಾರಣ ನೀರು ಹರಿಸುವುದು ತಡವಾಯಿತು. ನಾಲೆ ಪಕ್ಕದಲ್ಲೇ ಮನೆಗಳಿರುವ ಕಾರಣ ನಿಯಂತ್ರಿತ ಸ್ಫೋಟದ ಮೂಲಕ ಬಂಡೆ ತೆರವುಗೊಳಿಸಲಾಗುತ್ತಿದೆ. ಕೆಲಸ ಮುಗಿದ ಕೂಡಲೇ ನೀರು ಹರಿಸಬಹುದಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಆದರೆ, ಮಳೆ ಕಡಿಮೆಯಾಗಿರುವುದರಿಂದ ಭದ್ರಾ ಜಲಾಶಯದಲ್ಲಿ ನೀರಿನ ಮಟ್ಟ ಕುಸಿದಿದೆ. ಹೀಗಾಗಿ ಈಗ ನೀರು ಹರಿಸಲು ಸಾಧ್ಯವೇ ಎಂಬ ಪ್ರಶ್ನೆ ಎದುರಾಗಿದೆ. ಮುಂಗಾರು ಚುರುಕು ಪಡೆದು ಜಲಾಶಯ ಭರ್ತಿಯಾದರೆ, ಹಂಚಿಕೆಯ ಸೂತ್ರದಂತೆ ಸೆಪ್ಟೆಂಬರ್‌ವರೆಗೂ ನೀರು ಹರಿಸಲು ಅವಕಾಶವಿದೆ ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ ನಿಗಮದ ಎಂಜಿನಿಯರ್‌ಗಳು.

ಈಗ ಕೋಟೆನಾಡು ಚಿತ್ರದುರ್ಗದಲ್ಲಿ ರೈತರು ಮುಂಗಾರು ಹಂಗಾಮಿನ ಮಳೆಗಾಗಿ ವಿವಿಧ ರೀತಿಯ ಪೂಜೆ, ಪುನಸ್ಕಾರ ಮಾಡುತ್ತಿದ್ದಾರೆ. ಭದ್ರೆ ತುಂಬುವಂತೆ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಮಳೆ ಬಂದು ಜಲಾಶಯ ತುಂಬಿದರೆ ಬಯಲು ಸೀಮೆಗೆ ಭದ್ರೆ ಹರಿದು ಬರುವ ದಿನ ತುಂಬಾ ದೂರ ಇರದು.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಕಡೂರು, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಮೊಳಕಾಲ್ಮುರು, ದಾವಣಗೆರೆ ಜಿಲ್ಲೆಯ ಜಗಳೂರು, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಸಿರಾ, ಪಾವಗಡ ತಾಲ್ಲೂಕಿಗೆ ನೀರು ಪೂರೈಸುವ ಶಾಖಾ ನಾಲೆಗಳ ನಿರ್ಮಾಣ ಕಾಮಗಾರಿ ವೇಗ ಪಡೆದುಕೊಂಡಿಲ್ಲ. ಜೊತೆಗೆ ಏತ ನೀರಾವರಿ ಯೋಜನೆಯಡಿ ಹನಿ ನೀರಾವರಿ ಮೂಲಕ ನೀರೊದಗಿಸುವ ಕೆಲಸಗಳೂ ಅಪೂರ್ಣವಾಗಿವೆ. ಈ ಕಾರಣಗಳಿಂದ ಕೇಂದ್ರ ಸರ್ಕಾರದ ಅನುದಾನವು ಯೋಜನೆ ಅನುಷ್ಠಾನಕ್ಕೆ ಅತ್ಯವಶ್ಯಕ ಎಂದು ತಜ್ಞರು ಹೇಳುತ್ತಾರೆ.

ದಶಕಗಳ ಕನಸು: ಭದ್ರಾ ನೀರೆಂಬುದು 1950ರ ದಶಕದಿಂದಲೂ ಬಯಲುಸೀಮೆ ಜನರ ಕನಸು. ಸ್ಥಳೀಯರಾದ ಎಸ್‌.ನಿಜಲಿಂಗಪ್ಪ ಮುಖ್ಯಮಂತ್ರಿಯಾಗಿದ್ದಾಗ ವಿಧಾನಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ್ದರು. ಆದರೆ ಯೋಜನೆ ಕಾರ್ಯಸಾಧ್ಯತೆ ಬಗ್ಗೆ ಅನುಮಾನ ಬಂದಾಗ ಕೈಚೆಲ್ಲಿದರು.

'ಬಯಲುಸೀಮೆಗೆ ಭದ್ರೆ' ಎಂಬುದು ಕಾಲ್ಪನಿಕ ವಿಷಯ ಎಂದೂ ಕೆಲವರು ಟೀಕಿಸಿದ್ದರು. ತಾಂತ್ರಿಕವಾಗಿ ಕಾರ್ಯಸಾಧುವಲ್ಲ ಎಂಬ ಅಭಿಪ್ರಾಯಗಳೂ ಇದ್ದವು. 2004ರಲ್ಲಿ ನೀರಾವರಿ ತಜ್ಞ ಕೆ.ಸಿ.ರೆಡ್ಡಿ ಅಧ್ಯಕ್ಷತೆಯ ಸಮಿತಿ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಕೊಟ್ಟಾಗ ಕೆಲವರು ಇದನ್ನು ದುಸ್ಸಾಹಸದ ಯೋಜನೆ ಎಂದೇ ಕರೆದರು. ಆದರೆ, ಭದ್ರಾ ಹೋರಾಟ, ಇಚ್ಛಾಶಕ್ತಿಯುಳ್ಳ ಕೆಲ ಎಂಜಿನಿಯರ್‌ಗಳ ಪ್ರಯತ್ನದ ಪರಿಣಾಮ ಕ್ರಮೇಣ ಯೋಜನೆ ಸಾಕಾರದತ್ತ ಸಾಗಿತು.

ತೊಂಬತ್ತರ ದಶಕದ ವೇಳೆಗೆ ಯೋಜನೆಯ ಸಾಕಾರ ಕುರಿತಂತೆ ತಂಡವೊಂದು ಅಧ್ಯಯನ ನಡೆಸಿತ್ತು. ಆ ತಂಡದಲ್ಲಿ ಪತ್ರಕರ್ತರು ಪ್ರಮುಖ ಪಾತ್ರ ವಹಿಸಿದ್ದರು. ನಂತರ ರೂಪುಗೊಂಡ ಹೋರಾಟಕ್ಕೆ ರೈತರು, ವಿವಿಧ ಸಂಘಟನೆಗಳ ಸದಸ್ಯರು ಸೇರ್ಪಡೆಗೊಂಡರು. ಸಂಘಟಿತ ಹೋರಾಟದ ಪ್ರಯತ್ನವಾಗಿ ಯೋಜನೆ ಕಾರ್ಯರೂಪಕ್ಕೆ ಬಂದಿತು.

ಇಷ್ಟೆಲ್ಲಾ ಕನಸು, ಕನವರಿಕೆ, ಪ್ರಯತ್ನಗಳ ಫಲವಾಗಿ ಜಾರಿಗೊಂಡಿರುವ ಯೋಜನೆಗೆ ರಾಜ್ಯ ಸರ್ಕಾರವಷ್ಟೇ ಹೆಗಲು ಕೊಟ್ಟಿದೆ. ಕೇಂದ್ರ ಸರ್ಕಾರದ ಬೆಂಬಲ ಸಿಕ್ಕಿಲ್ಲ.

₹21,167 ಕೋಟಿಗೆ ಹೆಚ್ಚಿದ ವೆಚ್ಚ

ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ಇಲ್ಲಿಯವರೆಗೆ ₹**11,375** ಕೋಟಿ ಖರ್ಚು ಮಾಡಿದೆ. ಕೇಂದ್ರ–ರಾಜ್ಯ ಸರ್ಕಾರಗಳು ಸ್ಪಂದಿಸಿದ್ದರೆ ಯೋಜನೆಯ ಮೂಲ ಡಿಪಿಆರ್‌ನಲ್ಲಿ ಉಲ್ಲೇಖಿಸಿದ್ದಂತೆ ₹**5,400** ಕೋಟಿಯಲ್ಲಿ ಇಡೀ ಯೋಜನೆ ಪೂರ್ಣಗೊಳ್ಳುತ್ತಿತ್ತು. ಎರಡು ದಶಕಗಳಷ್ಟು ವಿಳಂಬದ ಕಾರಣ ಯೋಜನಾ ವೆಚ್ಚ ಈಗ ₹**21,167** ಕೋಟಿಗೆ ತಲುಪಿದೆ. ಚಿತ್ರದುರ್ಗ ಶಾಖಾ ನಾಲೆ ಮಾತ್ರ ಬಹುತೇಕ ಪೂರ್ಣಗೊಂಡಿದ್ದು, ಅನುದಾನದ ಕೊರತೆಯಿಂದಾಗಿ ತುಮಕೂರು ಶಾಖಾ ನಾಲೆ ಆರಂಭಿಕ ಹಂತದಲ್ಲೇ ಕುಂಟುತ್ತಿದೆ.

ಭದ್ರಾ ಕಾಲುವೆಯ ಸಾಹಸಗಾಥೆ...

'ವೈ' ಜಂಕ್ಷನ್

ತುಂಗಾ ಜಲಾಶಯದ ಹಿನ್ನೀರಿನಿಂದ ಭದ್ರಾ ಜಲಾಶಯಕ್ಕೆ ನೀರು ಹರಿಸುವ 11.27 ಕಿ.ಮೀ ಮುಖ್ಯ ಕಾಲುವೆ ಕಾಮಗಾರಿ ಪೂರ್ಣಗೊಂಡಿದೆ. ಗುರುತ್ವಾಕರ್ಷಣೆ ಶಕ್ತಿಯಿಂದ ನೀರು ಹರಿಸುವ ಪ್ರಕ್ರಿಯೆ ಎಂಜಿನಿಯರಿಂಗ್ ಸಾಹಸಗಾಥೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕೆ.ಕಣಬೂರು, ಸಾತ್ಕೊಳ್ಳಿ ಬಳಿಯ 2 ಪಂಪ್‌ಹೌಸ್‌ಗಳಿಗೆ ವಿದ್ಯುತ್ ಪೂರೈಸುವ ಘಟಕಗಳ ನಿರ್ಮಾಣ ಕಾರ್ಯ ಅಂತಿಮ ಹಂತಕ್ಕೆ ಬಂದಿದೆ. ಮುಖ್ಯ ವಿದ್ಯುತ್ ಪರಿವೀಕ್ಷಣಾಲಯದಿಂದ (ಸಿಇಐಜಿ) ಅಂತಿಮ ಅನುಮೋದನೆಗೆ ಕಾಯಲಾಗುತ್ತಿದೆ.

ನೆಲಗದ್ದೆ, ಆರಂಬಳ್ಳಿ ಅರಣ್ಯ ಪ್ರದೇಶದ ಸೂಕ್ಷ್ಮ ಪರಿಸರ ವಲಯದಲ್ಲಿ ಕಾಮಗಾರಿ ನಡೆಸಲಾಗಿದೆ. ಮರಗಳನ್ನು ರಕ್ಷಿಸಲು ಆರಂಬಳ್ಳಿ ಬಳಿ 500 ಮೀಟರ್ ಸುರಂಗ ಕೊರೆಯಲಾಗಿದೆ. ಈ ಭಾಗದಲ್ಲಿ ಪ್ರಾಣಿಗಳ ಓಡಾಟಕ್ಕೆ ಸೇತುವೆ, ನೀರು ಕುಡಿಯಲು ರ‍್ಯಾಂಪ್, ಕೊಳಗಳನ್ನೂ ನಿರ್ಮಿಸಲಾಗಿದೆ.

ಭದ್ರಾ ಜಲಾಶಯದ ಇಂಟೆಕ್ ಕಾಲುವೆ ಮೂಲಕ ಅಜ್ಜಂಪುರ ಸುರಂಗ ಮಾರ್ಗದವರೆಗೆ 2 ಪಂಪ್‌ಹೌಸ್ ನಿರ್ಮಿಸಲಾಗಿದೆ. ನರಸೀಪುರದಿಂದ ಅಜ್ಜಂಪುರದವರೆಗೆ 6.9 ಕಿ.ಮೀ ಕೊರೆದಿರುವ ಸುರಂಗ ರಾಜ್ಯದ ಅತೀ ಉದ್ದದ್ದು ಎಂದು ಕರೆಸಿಕೊಂಡಿದೆ. ಮುಂದೆ ಅಜ್ಜಂಪುರ 'ವೈ' ಜಂಕ್ಷನ್‌ನಲ್ಲಿ ನೀರು ಒಂದು ಕಡೆ ಚಿತ್ರದುರ್ಗ ಶಾಖಾ ನಾಲೆಯಾಗಿ (ಸಿಬಿಸಿ), ಇನ್ನೊಂದು ಕಡೆ ತುಮಕೂರು ಶಾಖಾ ನಾಲೆಯಾಗಿ (ಟಿಬಿಸಿ) ಕವಲೊಡೆಯುತ್ತದೆ.

ಭದ್ರಾ ಜಲಾಶಯದಿಂದ 'ವೈ' ಜಂಕ್ಷನ್‌ವರೆಗೆ ಶಾಂತಿಪುರ, ಬೆಟ್ಟತಾವರೆಕೆರೆ ಬಳಿ ಪಂಪ್‌ಹೌಸ್‌ಗಳಿದ್ದು ತಲಾ 5 ಪಂಪ್‌ಗಳನ್ನು ಅಳವಡಿಸಲಾಗಿದೆ. ಇವು ರಾಜ್ಯದಲ್ಲೇ ಅತೀ ಹೆಚ್ಚು ಸಾಮರ್ಥ್ಯ (ತಲಾ 18,400 ಎಚ್‌ಪಿ) ಹೊಂದಿರುವ ಪಂಪ್‌ಗಳು.

ಕಾನೂನಾತ್ಮಕ ಸಮಸ್ಯೆಗಳಿಗೂ ಪರಿಹಾರ

ಭದ್ರಾ ಜಲಾಶಯದಿಂದ ಬಯಲುಸೀಮೆಗೆ ನೀರು ಹರಿಸುವ ಯೋಜನೆ ಹಲವು ಕಾನೂನು ಸಮರಗಳನ್ನು ಕಂಡಿದೆ. ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ಜನರ ವಿರೋಧ ಒಂದೆಡೆಯಾದರೆ, ಜಮೀನು ಸ್ವಾಧೀನ ಪ್ರಕ್ರಿಯೆಯಲ್ಲಿ ಉಂಟಾದ ಹೋರಾಟಗಳು ಇನ್ನೊಂದೆಡೆ. ಎಲ್ಲಾ ಕಾನೂನು ಸಮಸ್ಯೆಗಳನ್ನು ಸೌಹಾರ್ದದಿಂದ ಬಗೆಹರಿಸಲಾಗಿದೆ.

ತರೀಕೆರೆ ತಾಲ್ಲೂಕಿನ ಅಬ್ಬಿನಹೊಳಲು ಬಳಿ ರೈತರು ನಿರಂತರ ಹೋರಾಟ ಕೈಗೊಂಡಾಗ ಆಗ (2024) ಉಪಮುಖ್ಯಮಂತ್ರಿಯಾಗಿದ್ದ ಡಿ.ಕೆ.ಶಿವಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಜನರ ಮನವೊಲಿಸಲು ಯಶಸ್ವಿಯಾಗಿದ್ದರು. ಪರಿಹಾರ ತಾರತಮ್ಯ ಸಂಬಂಧ ನ್ಯಾಯಾಲಯದಲ್ಲಿ ಹೂಡಲಾದ ಹಲವು ದಾವೆಗಳನ್ನು ರಾಷ್ಟ್ರೀಯ ಅದಾಲತ್‌ಗೆ ವರ್ಗಾಯಿಸಿ ಬಗೆಹರಿಸಲಾಯಿತು.

ಪ್ರಜಾವಾಣಿ DH — ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	₹ಗಳಲ್ಲಿ
1	**ಬಿ.ಜಗದೀಶ್**, ಉಲ್ಲಾಳ,ಬೆಂಗಳೂರು	6,000
2	**ಗೀತಾ ಬಾಯಿ ಆರ್.**, ಎನ್.ಜಿ.ಇ.ಎಫ್ ಲೇಔಟ್,ಬೆಂಗಳೂರು	5,500
3	**ಅಜಯ್ ಕುಮಾರ್ ಅಗಡಿ**, ಮೇಲಗಿರಿ ಕಾಲೊನಿ,ಬೆಂಗಳೂರು	5,101
4	**ಶಾಂತಾ ಡಿ.ಗೌಡ**, ಎಚ್.ಎಸ್.ಆರ್ ಲೇಔಟ್,ಬೆಂಗಳೂರು	5,100
5	**ಮಧುಸೂದನ ಎಸ್.ಎಲ್.**, ಜ್ಯೋತಿ ನಗರ,ಬೆಂಗಳೂರು	5,100
6	**ಹೇಮರೆಡ್ಡಿ**, ಕದಿರಾಯನಪಾಳ್ಯ,ಬೆಂಗಳೂರು	5,011
7	**ಅಶೋಕ ಸುಂಕದ್**, ಜಕ್ಕೂರು ಲೇಔಟ್,ಬೆಂಗಳೂರು	5,005
8	**ಡಾ. ಶಶಿಧರ್ ಶಿರಹಟ್ಟಿ**, ಶಾಸ್ತ್ರಿ ನಗರ, ವಿಜಯಪುರ	5,001
9	**ಸಿ.ಚಿದಂಬರ ಶೆಟ್ಟಿ**, ಬಸವೇಶ್ವರ ಬಡಾವಣೆ,ಬೆಂಗಳೂರು	5,001
10	**ರಾಮಲಿಂಗಯ್ಯ**, ವಿಗ್ನೋಽ ನಗರ ಪೋಸ್ಟ್,ಬೆಂಗಳೂರು	5,001
11	**ಎನ್.ಸಿ.ಮಂಜುನಾಥ್ ನೇರಳಹಳ್ಳಿ**, ಬಸವೇಶ್ವರ ನಗರ, ಬೆಂಗಳೂರು	5,001
12	**ಸುಕನ್ಯಾ ಪ್ರಕಾಶ್**, ದೊಡ್ಡಕಲ್ಲಸಂದ್ರ, ಬೆಂಗಳೂರು	5,001
13	**ಉಮೇಶ್ ಬಿ.ವಿ.**, ಬೆಂಗಳೂರು	5,001
14	**ಶ್ರೀನಿವಾಸ ಮೂರ್ತಿ ಜಿ.ವಿ.**, ಮಾಗಡಿ ರಸ್ತೆ, ಬೆಂಗಳೂರು	5,001
15	**ಎಚ್.ವೈ.ಅಂಡೇಲಿ**, ವಿರೂಪಾಕ್ಷಪುರ, ಬೆಂಗಳೂರು	5,001
16	**ಶೈಲಜಾ ಮುರಳಿ**, ಹಲಸೂರು, ಬೆಂಗಳೂರು	5,001
17	**ಭುವನೇಶ್ವರಿ ಹುಲ್ಲತ್ತಿ**, ಬಸವೇಶ್ವರ ನಗರ,ಬೆಂಗಳೂರು	5,001
18	**ಪದ್ಮಾ ಎನ್.ರಾವ್**, ಮಲ್ಲೇಶ್ವರ, ಬೆಂಗಳೂರು	5,001
19	**ಭಾಸ್ಕರ ಭಟ್**, ಸಂಜಯ ನಗರ,ಬೆಂಗಳೂರು	5,001
20	**ದಿವಾಕರ ಬಾಗೇಪಲ್ಲಿ**, ಬೆಂಗಳೂರು	5,000
21	**ಎಂ.ಶಶಿಕಾಂತ**, ನಾಗರಬಾವಿ,ಬೆಂಗಳೂರು	5,000
22	**ವಾಸುದೇವ ಸಾಲೊಂಕರ್**, ಜಯನಗರ, ಬೆಂಗಳೂರು	5,000
23	**ವಲೇರಿಯನ್ ಮೆನೆಜಸ್**, ಕದ್ರಿ ಕಂಬಳ ರಸ್ತೆ,ಮಂಗಳೂರು	5,000
24	**ಬಿ.ಆರ್.ಗುರುರಾಜ್**, ಹೆಸರಘಟ್ಟ ರಸ್ತೆ,ಬೆಂಗಳೂರು	5,000
25	**ಎನ್.ನಾಗರಾಜ**, ಜಯನಗರ,ಬೆಂಗಳೂರು	5,000
26	**ಡಾ.ಎಂ.ಆರ್.ಗುರುರಾಜ ರಾವ್**, ಆರ್.ಎಂ.ವಿ. 2ನೇ ಹಂತ, ಬೆಂಗಳೂರು	5,000
27	**ಎಂ.ನಿಂಗಯ್ಯ**, ಮಲ್ಲತ್ತಹಳ್ಳಿ,ಬೆಂಗಳೂರು	5,000
28	**ಭೋಜರಾಜು**, ಕೆ.ಆರ್. ಪುರ,ಬೆಂಗಳೂರು	5,000
29	**ಶಿವರಾಮ್ ಗೌಡ ಕೆ.ವಿ.**, ಇಸ್ರೋ ಲೇಔಟ್, ಬೆಂಗಳೂರು	5,000
30	**ಲಕ್ಷ್ಮೀಕಾಂತ ಆರ್.ಕೆ.**, ಎಸ್.ಬಿ.ಎಂ. ಲೇಔಟ್,ಬೆಂಗಳೂರು	5,000
31	**ಪ್ರಕಾಶ್ ಶೆಟ್ಟಿ**, ನಿಕೂ ಹೋಮ್ಸ್, ಬೆಂಗಳೂರು	5,000
32	**ಉಮೇಶ್ ಅಡಿಗ**, ವಿಠ್ಠಲ ನಗರ ಹೌಸಿಂಗ್ ಕಾಲೊನಿ,ಬೆಂಗಳೂರು	5,000
33	**ಶ್ರೀರಾಮ್ ಎಂ.ಎಸ್.**, ಜೆ.ಪಿ. ನಗರ,ಬೆಂಗಳೂರು	5,000

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತದ ಗುಪ್ತಚರ ಸಂಸ್ಥೆ 'ರಾ'ದ (ರಿಸರ್ಚ್ ಆ್ಯಂಡ್ ಅನಾಲಿಸಿಸ್ ವಿಂಗ್) ಮಾಜಿ ಮುಖ್ಯಸ್ಥ ವಿಕ್ರಂ ಸೂದ್ ಅವರು ನೀಡಿದ್ದಾರೆ ಎನ್ನಲಾದ ಹೇಳಿಕೆಯ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸೂದ್ ಅವರು ಇರಾನ್–ಇಸ್ರೇಲ್ ಬಿಕ್ಕಟ್ಟನ್ನು ನಿರ್ವಹಿಸಿದ ರೀತಿಗೆ ಪಾಕಿಸ್ತಾನವನ್ನು ಶ್ಲಾಘಿಸುತ್ತಿರುವ ದೃಶ್ಯ ವಿಡಿಯೊದಲ್ಲಿದೆ. ಆದರೆ, ಇದು ಸುಳ್ಳು.

ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಡಿದಾಗ, ಸೂದ್ ಅವರು 2026ರ ಮಾರ್ಚ್ 6ರಂದು ಸುದ್ದಿ ಸಂಸ್ಥೆ ಎಎನ್‌ಐಗೆ ನೀಡಿದ ಸಂದರ್ಶನದ ವಿಡಿಯೊ ಸಿಕ್ಕಿತು. ಅದರಲ್ಲಿ ಅವರು ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಬಗ್ಗೆ ಮಾತನಾಡಿದ್ದರೂ, ಎಲ್ಲೂ ಪಾಕಿಸ್ತಾನದ ಹೆಸರನ್ನು ಉಲ್ಲೇಖಿಸಿಲ್ಲ. ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅದರಲ್ಲಿ ಅವರ ಕಣ್ಣಿನ ಚಲನೆ ಮತ್ತು ಮಾತಿನ ಶೈಲಿ ಭಿನ್ನವಿರುವುದು ಕಂಡು ಬಂತು. ಅಲ್ಲದೇ ಈ ವಿಡಿಯೊ ತುಣುಕನ್ನು ವಿಕ್ರಂ ಸೂದ್ ಅವರು ಸ್ವತಃ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿ, ಇದು ನಕಲಿ ವಿಡಿಯೊ ಎಂದು ಸ್ಪಷ್ಟಪಡಿಸಿದ್ದಾರೆ. ಅದು ಡೀಪ್‌ಫೇಕ್ ವಿಡಿಯೊವಾಗಿದ್ದು, ಅದು ಅಸಲಿ ಎಂಬಂತೆ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನಾಲ್ಕು ಆಣೆಗಳ ಲೆಕ್ಕ

ನುಡಿ ಬೆಳಗು — ರೇಣುಕಾ ನಿಡಗುಂದಿ

ಬಹಳ ವರ್ಷಗಳ ಹಿಂದೆ ಚಂದನಪುರದ ರಾಜ ಬಹಳ ಶ್ರೀಮಂತನೂ ಶಕ್ತಿಶಾಲಿಯೂ ಆಗಿದ್ದ. ಮಹಲಿನಲ್ಲಿ ಎಲ್ಲ ಸೌಲಭ್ಯಗಳಿದ್ದರೂ ರಾಜನ ಮನಸ್ಸು ಯಾವತ್ತೂ ಸಂತೋಷವಾಗಿರಲಿಲ್ಲ. ಹಲವು ಜ್ಯೋತಿಷಿಗಳು, ಪಂಡಿತರಿಂದ ಸಲಹೆ ಪಡೆದರೂ ಯಜ್ಞಗಳನ್ನು ಮಾಡಿಸಿದರೂ ಸುಖವಿದ್ದಿರಲಿಲ್ಲ.

ಒಂದು ದಿನ ರಾಜನು ವೇಷ ಬದಲಿಸಿಕೊಂಡು ತನ್ನ ರಾಜ್ಯ ಸುತ್ತಲು ಹೊರಟನು. ಹಳ್ಳಿಯೊಂದರಲ್ಲಿ ಹೊಲದ ಬಳಿ ಮಾಸಲು ಬಟ್ಟೆ ಧರಿಸಿದ ಬಡರೈತನು ಮರದ ನೆರಳಲ್ಲಿ ಊಟ ಮಾಡುತ್ತಿದ್ದನು. ರಾಜನ ಮನಸ್ಸಲ್ಲಿ ರೈತನಿಗೆ ಸಹಾಯ ಮಾಡಬೇಕೆಂದು ಆಸೆಯಾಯಿತು. ರಾಜನು ಆತನನ್ನು ನೋಡಿ, 'ನಿನ್ನ ಹೊಲದಲ್ಲಿ ಕೆಲವು ಬಂಗಾರದ ನಾಣ್ಯಗಳು ಸಿಕ್ಕವು, ನಿನ್ನ ಹೊಲದ್ದು ನೀನು ತೆಗೆದುಕೊ' ಎಂದು ಹೇಳಿದನು.

ಆದರೆ ರೈತನು, 'ಅವಶ್ಯಕತೆ ಇಲ್ಲ, ಅವು ನನ್ನವಲ್ಲ. ನೀವು ಬೇಕಿದ್ದರೆ ಯಾರಿಗಾದರೂ ದಾನ ಮಾಡಬಹುದು. ಇದ್ದುದರಲ್ಲಿಯೇ ನಾನು ಸಂತೋಷವಾಗಿದ್ದೇನೆ' ಎಂದನು.

ರಾಜನು ಆಶ್ಚರ್ಯದಿಂದ ಕೇಳಿದನು: 'ಹಣದ ಅಗತ್ಯ ಯಾರಿಗಿರುವುದಿಲ್ಲ? ಕೈಗೆ ಬಂದ ಲಕ್ಷ್ಮಿಯನ್ನು ಬೇಡವೆನ್ನುತ್ತಾರೆಯೇ?'

ರೈತ ಹೇಳಿದ: 'ನಾನು ನಿತ್ಯವೂ ನಾಲ್ಕು ಆಣೆಗಳನ್ನು ಗಳಿಸುತ್ತೇನೆ. ಅಷ್ಟು ಸಾಕು'.

ರಾಜ, 'ನೀನು ಪ್ರತಿದಿನ ನಾಲ್ಕು ಆಣೆಗಳಷ್ಟು ಮಾತ್ರ ಗಳಿಸುತ್ತೀಯಾ, ಅದರಲ್ಲಿ ಸಂತೋಷವಾಗಿರುತ್ತೀಯಾ? ಹೇಗೆ ಸಾಧ್ಯ?' ಎಂದು ಕೇಳುತ್ತಾನೆ.

ರೈತನು ಹೇಳಿದನು: 'ಸಂತೋಷ ಸಂಪತ್ತಿನ ಪ್ರಮಾಣದಿಂದ ನಿರ್ಧಾರವಾಗುವುದಿಲ್ಲ, ಅದು ನಾವು ನಮ್ಮ ಸಂಪತ್ತನ್ನು ಹೇಗೆ ಬಳಸುತ್ತೇವೆ ಎಂಬುದರ ಮೇಲೆ ಆಧಾರಿತವಾಗಿದೆ'.

ಆಗ ರಾಜನು ಕೇಳಿದನು: 'ಆ ನಾಲ್ಕು ಆಣೆಗಳನ್ನು ನೀನು ಹೇಗೆ ಬಳಸುತ್ತೀಯಾ?'

ರೈತನು ಉತ್ತರಿಸಿದನು: 'ಒಂದು ಆಣೆ ಬಾವಿಗೆ ಹಾಕುತ್ತೇನೆ, ಎರಡನೇ ಆಣೆ ಸಾಲ ತೀರಿಸುತ್ತೇನೆ. ಮೂರನೇ ಆಣೆ ಸಾಲ ಕೊಡುತ್ತೇನೆ. ನಾಲ್ಕನೇ ಆಣೆ ಮಣ್ಣಲ್ಲಿ ಹುಗಿದಿಡುತ್ತೇನೆ'.

ರಾಜನಿಗೆ ಅವನ ಮಾತಿನ ತಲೆಬುಡ ಅರ್ಥವಾಗುವುದಿಲ್ಲ. ಮರುದಿನ ದರ್ಬಾರಿನಲ್ಲಿ ಈ ಮಾತಿನ ಅರ್ಥವೇನು ಎಂದು ವಿದ್ವಾಂಸರನ್ನು ಕೇಳುತ್ತಾನೆ. ಒಬ್ಬೊಬ್ಬರೂ ಒಂದೊಂದು ರೀತಿ ವಿಶ್ಲೇಷಿಸುತ್ತಾರೆ. ಅವರ ಉತ್ತರಕ್ಕೆ ತೃಪ್ತಿಯಾಗದ ರಾಜ ಆ ರೈತನನ್ನೇ ತನ್ನ ದರಬಾರಿಗೆ ಆಹ್ವಾನಿಸಿ, 'ಮಾರುವೇಷದಿಂದ ನಿನ್ನ ಹೊಲಕ್ಕೆ ಭೇಟಿಯಿತ್ತವ ನಾನೇ, ನಾನು ನಿನ್ನ ಉತ್ತರದಿಂದ ಪ್ರಭಾವಿತನಾಗಿದ್ದೇನೆ. ನೀನು ಹೇಳಿದ ಮಾತಿನ ಅರ್ಥವೇನು' ಎಂದು ಕೇಳುತ್ತಾನೆ.

ಆಗ ರೈತ ನಕ್ಕು: 'ಹುಜೂರ್, ಒಂದಾಣೆಯನ್ನು ಬಾವಿಗೆ ಹಾಕುತ್ತೇನೆ ಅಂದರೆ ಕುಟುಂಬದ ಅಗತ್ಯಗಳಿಗೆ ಖರ್ಚು ಮಾಡುತ್ತೇನೆ. ಎರಡನೇ ಆಣೆ ಸಾಲ ತೀರಿಸಲು– ಅಂದರೆ ವೃದ್ಧ ತಂದೆ ತಾಯಿಗಳ ಸೇವೆಗೆ, ಮೂರನೇ ಆಣೆ ಸಾಲ ಕೊಡುವುದು, ಅಂದರೆ ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ನಾಲ್ಕನೇ ಆಣೆ ಮಣ್ಣಲ್ಲಿ ಹುಗಿದಿಡುವುದು ಅಂದರೆ ತುರ್ತು ಸಮಯಕ್ಕೆ ಇರಲಿ ಎಂದು ಉಳಿತಾಯ ಮಾಡುತ್ತೇನೆ' ಎಂದು ಉತ್ತರಿಸುತ್ತಾನೆ. ಈಗ ರಾಜನಿಗೆ ಅವನ ಮಾತು ಅರ್ಥವಾಗುತ್ತದೆ.

ನಮ್ಮ ಆದಾಯ ಹೆಚ್ಚಾದರೂ ಅದನ್ನು ಬುದ್ಧಿವಂತಿಕೆಯಿಂದ ಬಳಸದೇ ಇದ್ದರೆ ನಾವು ಸಂತೋಷದಿಂದಿರಲು ಸಾಧ್ಯವಿಲ್ಲ. ಕಂಡ-ಕಂಡದ್ದನ್ನೆಲ್ಲ ಕೊಳ್ಳುತ್ತ ಮೈತುಂಬ ಸಾಲದ ಹೊರೆಯನ್ನು ಹೊರುವ ಬದಲು ಸಣ್ಣ ಆದಾಯದಲ್ಲಿಯೂ, ಬುದ್ಧಿವಂತಿಕೆಯಿಂದ ವೆಚ್ಚ ಮಾಡಿದರೆ ನೆಮ್ಮದಿಯ ಬದುಕು, ಸಂತೋಷ ತಾನಾಗಿ ದೊರಕುತ್ತವೆ. ❖

ಪದಬಂಧ 6445

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಅಡಗಿಕೊಳ್ಳಲು ಪ್ರಶಸ್ತವಾದ ಕಾಡು (3)
3.ವಿಧೇಯತೆಯಿಂದ ಜಾರಿಗೆ ತಂದಿರುವ ಮಸೂದೆ (4)
5.ಬರವಿದ್ದಾಗ ಖರೀದಿಸಿರುವ ಸಿರಿಧಾನ್ಯ (3)
6.ಕಗ್ಗೊಲೆಯ ಪ್ರಸಂಗವಿದು (4)
7.ಕನ್ನಡಿಗನು ನೀಡಿರುವ ಇನ್‌ಕಮ್ ಟ್ಯಾಕ್ಸ್! (7)
11.ನಿಧಾನಿಯಾಗಿದ್ದರೂ ಸಮಾಧಾನದಿಂದ ಇರುವವನು (4)
12.ಪ್ರತಿಯಲ್ಲಿಯೇ ಹೆರಿಗೆ! (3)
15.ಅರಗಿನ ಮನೆಯಿದು (4)
16.ಗಾಡಿಯ ಚಕ್ರಗಳು ಬೀಳದಂತೆ ತಡೆಯುವ ಕೀಲು (3)

ಮೇಲಿಂದ ಕೆಳಕ್ಕೆ

1.ಅಕ್ಕರೆಯನ್ನು ತೋರುತ್ತಿರುವ ಹಿರಿಯ ಸಹೋದರಿ (2)
2.ವರ ನೀಡಿದ್ದು ವಿಸ್ತಾರವಾದ ಹೇಳಿಕೆ (3)
4.ಕರದಲ್ಲಿ ಹಿಡಿದಿರುವ ಭರಣಿ (4)
5.ಈತ ದುಡ್ಡಿಲ್ಲದವನು (3)
6.ಹಣ ನೀಡಿ ಬೆಳಗಿಸಿದ ದೀಪ (3)
8.ಮಾವನಿಗೆದುರಾಗಿ ನಿಂತಿರುವ ಸ್ತ್ರೀ! (3)
9.ತಿಳಿವಳಿಕೆ ಹೊಂದಿರುವ ಸ್ನೇಹಿತೆ (3)
10.ಸಹಜವಲ್ಲದುದು ಇದು (4)
13.ಜನನ ಮರಣಗಳಿಂದಾಗಿರುವ ಮೈಲಿಗೆ (3)
14.ಗುಣಿಸುತ್ತಾ ತೋಡಿದ ತಗ್ಗು (2)

6444ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಮುಚಿತ 3.ಬಾತ್ಮಿದಾರ 5.ಮಸುಕು 7.ರವಿ 9.ಜನ 10.ವರ್ಣನೆ 11.ಆಮದು 13.ಸಂತ 14.ರಿಪು 16.ಆಸನ 18.ಕಟ್ಟಪ್ಪಣೆ 19.ಗುಪ್ತದ್ವಾರ

ಮೇಲಿಂದ ಕೆಳಕ್ಕೆ: 1.ಸವಾರ 2.ತಮ 3.ಬಾಕು 4.ರಸನ 6.ಸುವರ್ಣ 8.ವಿಶ್ವಾಸಘಾತ 9.ಜವಾಬುದಾರಿ 12.ಮಟ್ಟಸ 13.ಸಂದೂಕ 15.ಪುಷ್ಕರ 16.ಆಣೆ 17.ನಗು

ಸುಡೊಕು 6828

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4				7		8	
8			1					7
	1	3		8	4		5	
3		6						
	8			1				5
1		4	3		8		6	
	7			6				
2		8	4		3			1
				2			9	

6827 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

26 ಜೂನ್ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ದ್ವಾದಶಿ ಗಂ. 22-23 ನಕ್ಷತ್ರ: ವಿಶಾಖ ಗಂ. 19-16 ಯೋಗ: ಸಿದ್ಧ ಗಂ. 11-39 ಕರಣ: ಬವ 9-15, ಮಿಥುನ ಮಾಸದ 11 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-10 ಸೂರ್ಯಾಸ್ತ : 06-57, ಮುಸ್ಲಿಂ ದಿನಾಂಕ : 10 ಮೊಹರಂ, **ದಿನ ವಿಶೇಷ :** ಮೊಹರಂ, ಅದೃಷ್ಟ ಸಂಖ್ಯೆ : 5, 10

ಮೇಷ: ಕ್ರೀಡಾಪಟುಗಳಿಗೆ, ಉಪನ್ಯಾಸಕರಿಗೆ ಮತ್ತು ಕಲಾವಿದರಿಗೆ ಅವಕಾಶ ಲಭಿಸಲಿದೆ. ಆರೋಗ್ಯದಲ್ಲಿ ಸ್ವಲ್ಪ ಏರುಪೇರಾದರೆ ಆತಂಕ ಬೇಡ. ಆದಾಯ ಸ್ಥಿರವಾಗಿ ಇರುವುದು.

ವೃಷಭ: ದೇಹದಲ್ಲಿ ಪಿತ್ತ ಅಧಿಕವಾಗುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ರಾಜಕೀಯ ವರ್ಗದವರಿಗೆ ದೇವತಾನುಗ್ರಹದಿಂದ ಅದೃಷ್ಟ ಖುಲಾಯಿಸಲಿದೆ. ಸಂಸಾರದಲ್ಲಿ ಅಂತಃಕಲಹಗಳು ನಡೆಯಲಿವೆ.

ಮಿಥುನ: ಗುರಿಯನ್ನು ಮುಟ್ಟಲು ಹಾದಿ ಪರಿಶೀಲಿಸಿ. ನಿಮ್ಮ ಯೋಜನೆಗಳು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರಲಿದೆ. ಸ್ನೇಹಿತರೊಂದಿಗೆ ಪ್ರಯಾಣ ಬೆಳೆಸುವಿರಿ.

ಕರ್ಕಾಟಕ: ವೃತ್ತಿ ಮತ್ತು ಮುಂದಿನ ಬದುಕಿನ ಬಗ್ಗೆ ಗಂಭೀರವಾಗಿ ಚಿಂತಿಸುವ ಅಗತ್ಯವಿದೆ. ಲೋಹ, ಪ್ಲಾಸ್ಟಿಕ್ ವಸ್ತುಗಳ ವ್ಯಾಪಾರ ನಡೆಸುವವರಿಗೆ ವ್ಯವಹಾರದಲ್ಲಿ ಲಾಭ ಇರಲಿದೆ.

ಸಿಂಹ: ಮಾತೃವರ್ಗದವರಿಂದ ಅಯಾಚಿತವಾಗಿ ನೆರವು ಸಿಕ್ಕಿ ಅನ್ಯರಲ್ಲಿನ ಋಣ ಪರಿಹಾರವಾಗಲಿದೆ. ಜಟಿಲ ಸಮಸ್ಯೆಗಳು ಬಗೆಹರಿದು ಮನೆಯವರಿಗೆ ನೆಮ್ಮದಿ ಸಿಗಲಿದೆ. ವಾಹನ ಸಂಚಾರದಲ್ಲಿ ಮಿತ ವೇಗ ಮುಖ್ಯವಾಗಿರಲಿ.

ಕನ್ಯಾ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ಸಿಗಲಿದೆ. ಹೂಡಿಕೆಯ ವಿಚಾರದಲ್ಲಿ ಎಚ್ಚರಿಕೆಯಿಂದ ತೀರ್ಮಾನ ಕೈಗೊಳ್ಳಿ.

ತುಲಾ: ರಾತ್ರಿಯ ಸಮಯದಲ್ಲಿ ಆರೋಗ್ಯದಲ್ಲಿ ಏರುಪೇರು ಉಂಟಾಗಲಿದೆ. ಹಾಗಾಗಿ ಜಾಗರೂಕರಾಗಿರಿ. ಆಗೊಂದು ಈಗೊಂದು ಸಲ ಅನವಶ್ಯಕವಾಗಿ ನೆರೆಹೊರೆಯವರ ಕಿರಿಕಿರಿ ತಪ್ಪದು.

ವೃಶ್ಚಿಕ: ಪಶುಸಂಗೋಪನೆ ಮಾಡುವವರಿಗೆ ಮನೆಯಲ್ಲಿ ಶಾಂತ ವಾತಾವರಣವಿದ್ದು, ಮನಸ್ಸಿಗೆ ತುಸು ನೆಮ್ಮದಿ ಬರಲಿದೆ. ಮಗನ ಕ್ಷೇಮಕ್ಕಾಗಿ ಧಾರ್ಮಿಕ ಕಾರ್ಯ ಮಾಡಿ. ನೆಂಟಸ್ತಿಕೆಯಲ್ಲಿ ವಿವಾಹಕ್ಕೆ ಸಂಬಂಧಗಳು ಕೂಡಿ ಬರಲಿವೆ.

ಧನು: ಮಾಡುವ ಕೆಲಸದಲ್ಲಿ ಸಮಾನ ಮನಸ್ಕರರು ಸಿಗುವುದರಿಂದ ವ್ಯವಸ್ಥಿತವಾಗಿ ಮಾತುಕತೆ ನಡೆಯಲಿದೆ. ಹಣಕಾಸಿನ ವಹಿವಾಟು ಉತ್ತಮವಾಗಿದ್ದು ಮಾರಾಟ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳಬಹುದು.

ಮಕರ: ಉತ್ತಮ ಹಾದಿಯಲ್ಲಿ ಸಾಗುತ್ತಿದ್ದ ಮಗ ದಾರಿ ತಪ್ಪುತ್ತಿರುವುದು ಗಮನಕ್ಕೆ ಬರಲಿದೆ. ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನ ನೀಡಿ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆಯಾಗುತ್ತದೆ.

ಕುಂಭ: ಆಜ್ಞೆಯ ನಂತರದಲ್ಲಿ ಗೃಹ ನಿರ್ಮಾಣದ ಕೆಲಸದಲ್ಲಿ ಉಂಟಾದ ಪ್ರಮುಖ ಬದಲಾವಣೆ ಗಮನಕ್ಕೆ ಬರಲಿದೆ. ಕೋರ್ಟ್ ವ್ಯವಹಾರದಲ್ಲಿ ದೇವರ ಕೃಪೆಯಿಂದ ನಿರೀಕ್ಷಿತ ಜಯ ಸಿಗಲಿದೆ.

ಮೀನ: ಕೆಲಸಗಳ ಬಗ್ಗೆ ಅಧಿಕಾರಿ ವರ್ಗದವರಲ್ಲಿ ಚರ್ಚೆಗಳು, ವಾದ ವಿವಾದಗಳು ನಡೆದರೂ ಕಾರ್ಯ ಸಾಧನೆಗೆ ಅಡ್ಡಿಯಾಗದು. ಸಮಾಜದಲ್ಲಿ ಹೆಸರು ಸಂಪಾದಿಸಲು ಪೂರಕ ವಾತಾವರಣ ಮೂಡಿಬರಲಿದೆ.

ಗುಂಡಣ್ಣ

‘ಶುರುವಾಗಿದೆ ಹೊಸ ಅಧ್ಯಾಯ’

ಕೆ.ಎಂ.ಚೈತನ್ಯ ನಿರ್ದೇಶನದ, ವಿನೋದ್ ಪ್ರಭಾಕರ್ ಮುಖ್ಯಭೂಮಿಕೆಯಲ್ಲಿರುವ ‘ಬಲರಾಮನ ದಿನಗಳು’ ಇಂದು (ಜೂನ್ 26) ತೆರೆಕಂಡಿದೆ.‘ಮಾದೇವ’ ಸಿನಿಮಾ ಬಳಿಕ ತಮಗೆ ಬರುತ್ತಿರುವ ಕಥೆಗಳಲ್ಲಿನ ಹೊಸತನವನ್ನು ವಿನೋದ್ ಪ್ರಭಾಕರ್ ಅವರು ಕಂಡಿದ್ದಾರೆ.

ವಿನೋದ್ ಪ್ರಭಾಕರ್

• ಅಭಿಲಾಷ್ ಪಿ.ಎಸ್.

• ನಿಮ್ಮ ಹಿಂದಿನ ‘ಮಾದೇವ’ ಸಿನಿಮಾದಿಂದ ಆದ ಪರಿಣಾಮ ಹಾಗೂ ಅದು ತಂದ ಬದಲಾವಣೆ ಏನು?

ಒಬ್ಬ ನಟನಾಗಿ ನಾನು ಗುರುತಿಸಿಕೊಳ್ಳಲು ಅವಕಾಶ ನೀಡಿದ ಸಿನಿಮಾ ‘ಮಾದೇವ’. ನನ್ನಲ್ಲಿ ಒಬ್ಬ ಒಳ್ಳೆಯ ನಟನಿದ್ದಾನೆ ಎನ್ನುವುದು ನನಗೆ ಗೊತ್ತಿತ್ತು. ಆದರೆ ನಾನು ಆ್ಯಕ್ಷನ್ ಚೆನ್ನಾಗಿ ಮಾಡುತ್ತೇನೆ ಎಂದು ಬಹುತೇಕರು ನನ್ನನ್ನು ಆ ಜಾನರ್‌ಗೆ ಸೀಮಿತ ಮಾಡಿದ್ದರು. ಜೊತೆಗೆ ನನ್ನ ಸಿನಿಮಾಗಳಿಗೆ ಒಳ್ಳೆಯ ಹಿಂದಿ ಹಕ್ಕು ದೊರೆಯುತ್ತಿತ್ತು. ಹೀಗಾಗಿ ಒಂದು ಸಾಮಾನ್ಯ ಕಥೆ ಇಟ್ಟುಕೊಂಡು ಈತನ ಕೈಯಲ್ಲಿ ಆ್ಯಕ್ಷನ್ ಮಾಡಿಸಿದರೆ ಸಾಕು ಎನ್ನುವಂತಿತ್ತು. ಅದರಿಂದ ಹೊರಬರಲು ಹಲವು ವರ್ಷಗಳಿಂದ ಪ್ರಯತ್ನಿಸುತ್ತಿದ್ದೆ. ಕಾರಣಗಳಿಲ್ಲದೆ ಕೇವಲ ವಹಿವಾಟಿನ ದೃಷ್ಟಿಯಿಂದ ಫೈಟ್ಸ್ ಮಾಡುವ ನಟ ನಾನಲ್ಲ. ಇದು ಬಹಳ ಕಾಡುತ್ತಿತ್ತು. ಒಳ್ಳೆಯ ಕಥೆಯ ಹುಡುಕಾಟದಲ್ಲಿರುವಾಗ ‘ಮಾದೇವ’ ದೊರಕಿತ್ತು.

ನಾನೊಬ್ಬ ಒಳ್ಳೆಯ ಸಂಕಲನಕಾರ. ತಂದೆ ನೀಡಿದ ಮೊದಲ ಪಾಠವಿದು. ‘ಮಾದೇವ’ದಲ್ಲೂ ನಾನು ಕ್ರಿಯೇಟಿವ್ ಹೆಡ್ ಆಗಿ ಕೆಲಸ ಮಾಡಿದೆ. ‘ಮಾದೇವ’ ಸಿನಿಮಾದಲ್ಲಿ ನನಗೆ ಇದ್ದಿದ್ದು ಕೇವಲ ಮೂರ್ನಾಲ್ಕು ನಿಮಿಷಗಳ ಸಂಭಾಷಣೆಯಷ್ಟೇ. ಕಣ್ಣಿನಲ್ಲೇ ನಟಿಸುವ ಸವಾಲು ಆ ಸಿನಿಮಾದಲ್ಲಿತ್ತು. ‘ಮಾದೇವ’ ಸಿನಿಮಾ ಬಂದ ಬಳಿಕ ಕಥೆ ತರುವವರಲ್ಲಿ ಬದಲಾವಣೆ ಕಂಡೆ. ಹಿಂದೆ ತಂದವರೂ ಮತ್ತೆ ಕರೆ ಮಾಡಲಿಲ್ಲ. ಕೇವಲ ಆ್ಯಕ್ಷನ್‌ಗೆ ಸೀಮಿತವಾದ ಕಥೆ ತಂದರೆ ಒಪ್ಪಿಕೊಳ್ಳುವುದಿಲ್ಲ ಎನ್ನುವುದೂ ಅವರಿಗೆ ಅರಿವಾಗಿದೆ. ಸದ್ಯ ಭಾವನಾತ್ಮಕವಾಗಿ ಕಾಡುವ ಭಿನ್ನ ಜಾನರ್‌ನ ಸಿನಿಮಾಗಳ ನಿರೀಕ್ಷೆಯಲ್ಲಿದ್ದೇನೆ. ಜೊತೆಗೆ ‘ಮಾದೇವ’ ಬಳಿಕ ನನ್ನನ್ನು ಜನ ‘ಫ್ಯಾಮಿಲಿ ಸ್ಟಾರ್’ ಆಗಿ ಕಾಣುತ್ತಿದ್ದಾರೆ. ಇದು ಜವಾಬ್ದಾರಿಯನ್ನೂ ಹೆಚ್ಚಿಸಿದೆ.

• ‘ಬಲರಾಮನ ದಿನಗಳು’ ಸಿನಿಮಾ ಬಗ್ಗೆ...

ಸಿನಿಮಾದ ಶೀರ್ಷಿಕೆಯಲ್ಲಿ ಮಚ್ಚಿನ ವಿನ್ಯಾಸವಿದೆ. ಹೀಗಾಗಿ ಇದೊಂದು ಭೂಗತಲೋಕದ ಕಥೆ, ರಕ್ತಪಾತ, ಫೈಟ್ಸ್ ಇದೆ ಎಂದುಕೊಳ್ಳಬಹುದು. ಆದರೆ ಕಥೆ ಹೀಗಿಲ್ಲ. ಚೈತನ್ಯ ಅವರು ಈ ಹಿಂದೆ ‘ಆ ದಿನಗಳು’ ಮಾಡಿದ ಸಂದರ್ಭದಲ್ಲಿ ಭೂಗತಲೋಕವನ್ನು ಹೇಗೆ ಕ್ಲಾಸ್–ಕಲ್ಟ್ ಆಗಿ ತೆರೆ ಮೇಲೆ ತರಬಹುದು ಎನ್ನುವುದನ್ನು ತೋರಿಸಿದ್ದರು. ಬಲರಾಮನ ಕಥೆ–ಭೂಗತಲೋಕದ ಚಟುವಟಿಕೆಗಳು ಇದ್ದರೂ, ನನ್ನ ಪಾತ್ರ ಎಲ್ಲಿಯೂ ಕೆಟ್ಟ ಮಾತು ಆಡುವುದಿಲ್ಲ, ಕುಡಿಯುವುದಿಲ್ಲ, ಸಿಗರೇಟ್ ಸೇದುವುದಿಲ್ಲ. ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದವನೊಬ್ಬ, ಆಕಸ್ಮಿಕವಾಗಿ ಈ ಭೂಗತಜಗತ್ತಿಗೆ ಪ್ರವೇಶಿಸಿದರೆ ಏನಾಗುತ್ತದೆ ಎನ್ನುವುದೇ ಕಥೆ. ‘ಆ ದಿನಗಳು’ ಸಿನಿಮಾದಲ್ಲಿರುವ ಒಂದಿಷ್ಟು ಪಾತ್ರಗಳು ಬರುತ್ತವೆ. ‘ಬಲರಾಮ’ನ ಕಾಲ್ಪನಿಕ ಕಥೆ ಇದು. ಇದರಲ್ಲೂ ಭಾವನಾತ್ಮಕ ಅಂಶಗಳು ಇವೆ. ಇಲ್ಲಿ ಪ್ರಿಯಾ ಆನಂದ್ ಅವರು ನಿಭಾಯಿಸಿರುವ ‘ರೇವತಿ’ ಎನ್ನುವ ಪಾತ್ರಕ್ಕೂ ಒಂದು ಆಳವಾದ ಕಥೆ ಇದೆ.

‘ಆ ದಿನಗಳು’ ಸಿನಿಮಾ ನೋಡದವರೂ ‘ಬಲರಾಮನ ದಿನಗಳು’ ಸಿನಿಮಾವನ್ನು ನೋಡಬಹುದು. ಇದರಲ್ಲಿ ‘ಆ ದಿನಗಳು’ ಸಿನಿಮಾದ ಒಂದು ಸಣ್ಣ ಛಾಯೆ ಇರಬಹುದು. ಈ ಸಿನಿಮಾ ನೋಡಿದ ಬಳಿಕ ಖಂಡಿತವಾಗಿಯೂ ‘ಆ ದಿನಗಳು’ ಸಿನಿಮಾವನ್ನು ಜನ ನೋಡುತ್ತಾರೆ.

ಸಿನಿಮಾದೊಳಗಿನ ಸನ್ನಿವೇಶಕ್ಕೆ ತಕ್ಕಂತೆ ಭಿನ್ನ ಭಿನ್ನ ಜಾನರ್‌ನ ಹಾಡುಗಳಿವೆ. ‘ಶುರು ಶುರು..’ ಎನ್ನುವ ಮೆಲೊಡಿ ಹಾಡೂ ಇದೆ. ‘ಟಾಟಾ ಟಾಟಾ’ ಎನ್ನುವ ಟಪ್ಪಾಂಗುಚ್ಚಿ ಹಾಡಿದೆ. ಸಿನಿಮಾದ ಕಥೆ ನಡೆಯುವುದು 80–90ರ ದಶಕದಲ್ಲಿ. ಬೆಂಗಳೂರಿನಲ್ಲಿ ಪಬ್, ಬಾರ್, ಡಿಸ್ಕೋಗಳು ಚಿಗುರೊಡೆಯುತ್ತಿದ್ದ ಕಾಲವದು. ಹೀಗಾಗಿ ಒಂದು ಐಟಂ ಹಾಡೂ ಇದೆ. ಹಲವು ಮೀಟಿಂಗ್‌ಗಳೂ ಈ ಸ್ಥಳಗಳಲ್ಲೇ ಆಗುತ್ತಿದ್ದವು. ನಿರ್ದೇಶಕರು ಬಹಳ ಸೂಕ್ಷ್ಮವಾಗಿ ಕಥೆ ಹೆಣೆದಿದ್ದಾರೆ. ಜೊತೆಗೆ ಆ ಕಥೆಯನ್ನು ಬಿಟ್ಟು ಆಚೆ ಹೋಗಿಲ್ಲ.

• ನಿಮ್ಮ ಸಿನಿ ಪಯಣದ ಹೊಸ ಅಧ್ಯಾಯ ಆರಂಭವಾಗಿದೆಯೇ?

ಖಂಡಿತವಾಗಿ. ನನ್ನನ್ನು ಓರ್ವ ನಟನನ್ನಾಗಿ ಗುರುತಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನಪಟ್ಟಿದ್ದೆ. ಸದ್ಯ ನನ್ನನ್ನು ‘ಮಾದೇವ’ ಎಂದೇ ಹಲವರು ಗುರುತಿಸುತ್ತಿದ್ದಾರೆ. ಇದು ಹೆಮ್ಮೆ ಉಂಟು ಮಾಡಿದೆ. ‘ಮರಿ ಟೈಗರ್’ ಎನ್ನುವ ಬದಲು ಪ್ರತಿ ಸಿನಿಮಾದ ಪಾತ್ರದ ಮುಖಾಂತರವೇ ಜನರು ನನ್ನನ್ನು ಗುರುತಿಸಬೇಕು. ‘ಟೈಗರ್’ ಏನಿದ್ದರೂ ಅಪ್ಪ ಒಬ್ಬರೇ. ನಾನು ‘ಪ್ರಭಾಕರ್’ ಆಗಲು ಸಾಧ್ಯವೇ ಇಲ್ಲ. ಅವರು ಆ್ಯಕ್ಷನ್ ಸ್ಟಾರ್ ಆಗಿದ್ದರೂ ‘ಕರುಳಿನ ಕೂಗು’ ಎನ್ನುವ ಭಾವನಾತ್ಮಕ ಸಿನಿಮಾ ಮಾಡಿದರು. ಈತನೊಬ್ಬ ಭರವಸೆಯ ನಾಯಕ, ಈತನ ಸಿನಿಮಾಗೆ ಹೋದರೆ ಯಾವುದೇ ಮುಜುಗರ ತರದೆ ಒಳ್ಳೆಯ ಮನರಂಜನೆ ನೀಡುತ್ತಾನೆ ಎಂದೆನಿಸಿಕೊಳ್ಳಬೇಕು. ‘ಮಾದೇವ’ ಸಿನಿಮಾವನ್ನು ತಮಿಳಿನಲ್ಲಿ ರಿಮೇಕ್ ಮಾಡಲು ಹಕ್ಕು ಪಡೆದಿದ್ದಾರೆ. ನಾನು ಮಾಡಿದ ಸಿನಿಮಾಗಳೆಲ್ಲವೂ ಹೀಗೆ ರಿಮೇಕ್ ಆಗಬೇಕು ಎನ್ನುವ ನಿರೀಕ್ಷೆಯಲ್ಲಿದ್ದೇನೆ. ❖

• ನಿಮ್ಮ ಮುಂದಿನ ಸಿನಿಮಾಗಳು...

‘ನೆಲ್ಸನ್’ ಎನ್ನುವ ಸಿನಿಮಾ ಕೆಲ ವರ್ಷಗಳ ಹಿಂದೆ ಸೆಟ್ಟೇರಿತ್ತು. ಇದರಲ್ಲಿ ದ್ವಿಪಾತ್ರದಲ್ಲಿ ನಟಿಸಿದ್ದೇನೆ. 55 ವರ್ಷದ ವ್ಯಕ್ತಿಯ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಚಾಮರಾಜನಗರ ಪ್ರದೇಶದಲ್ಲಿ ನಡೆಯುವ ಕಥೆ ಇದಾಗಿದೆ. ಜೊತೆಗೆ ‘ಲಂಕಾಸುರ’ ಎನ್ನುವ ಸಿನಿಮಾದ ಶೀರ್ಷಿಕೆಯನ್ನು ‘ರಾಘವ’ ಎಂದು ಬದಲಾಯಿಸಿದ್ದೇವೆ. ಇದು ಈ ವರ್ಷವೇ ತೆರೆಕಾಣಲಿದೆ. ಇನ್ನೆರಡು ಸಿನಿಮಾಗಳನ್ನು ‘ಮಾದೇವ’ ಆದ ಬಳಿಕ ಒಪ್ಪಿಕೊಂಡಿದ್ದೇನೆ. ಇದು ಸದ್ಯ ಬರವಣಿಗೆ ಹಂತದಲ್ಲಿದೆ.

ಹಿಟ್ ನಿರೀಕ್ಷೆಯಲ್ಲಿ ಸಾತ್ವಿಕ

ಸಾತ್ವಿಕ

• ಎಪಿಎಸ್

‘ಸಾತ್ವಿಕ’ ಆಗಿ ಬದಲಾಗಿರುವ ‘ಶ್ರಾವ್ಯಾ ರಾವ್’ ಸಿನಿಪಯಣದಲ್ಲಿ ಹಲವು ಭಿನ್ನ ಸಿನಿಮಾಗಳಿವೆ. ಮೂರೂವರೆ ವರ್ಷದಿಂದ ತೆರೆಯಲ್ಲಿ ಕಾಣಿಸಿಕೊಳ್ಳದ ‘ಸಾತ್ವಿಕ’ ಇದೀಗ ಶುಕ್ರವಾರ ತೆರೆ ಕಾಣುತ್ತಿರುವ ಸುನಿ ನಿರ್ದೇಶನದ ‘ಮೋಡ ಕವಿದ ವಾತಾವರಣ’ದ ಮೂಲಕ ಮರಳಿದ್ದಾರೆ. ಹೆಸರು ಬದಲಾಯಿಸಿಕೊಂಡ ಬಳಿಕ ಆಗುತ್ತಿರುವ ಬದಲಾವಣೆಗಳನ್ನು ಅನುಭವಿಸಿರುವ ಅವರು ‘ಸಿನಿಮಾ ರಂಜನೆ’ ಜೊತೆ ಮಾತಿಗೆ ಸಿಕ್ಕಾಗ...

‘ನನ್ನ ಹಿಂದಿನ ಸಿನಿಮಾ ‘ಬ್ಯಾಂಗ್’ ತೆರೆಕಂಡು ನಾಲ್ಕು ವರ್ಷಗಳೇ ಉರುಳಿವೆ. ಕೋವಿಡ್ ಸಂದರ್ಭದಲ್ಲಿ ನಾನು ಒಪ್ಪಿಕೊಂಡ ಹಲವು ಸಿನಿಮಾಗಳು ಹಣಕಾಸಿನ ಸಮಸ್ಯೆಯಿಂದಾಗಿ ಅರ್ಧದಲ್ಲೇ ನಿಂತವು. ಇನ್ನೂ ಕೆಲವು ಮುಂದೂಡಿಕೆಯಾಗುತ್ತಲೇ ಇದ್ದವು. ‘ಮೋಡ ಕವಿದ ವಾತಾವರಣ’ವೂ ಹಿಂದೆಯೇ ಬಿಡುಗಡೆಯಾಗಬೇಕಿತ್ತು. ನಾನಾ ಕಾರಣಗಳಿಂದ ಇದೂ ವಿಳಂಬವಾಯಿತು. ಸೋಲು ಅಥವಾ ಗೆಲುವು ನಂತರದ ವಿಚಾರ. ಸಿನಿಮಾ ಪಯಣದಲ್ಲಾಗುತ್ತಿದ್ದ ವಿಳಂಬವು ನನ್ನ ಮೇಲೆ ಪರಿಣಾಮ ಬೀರಿತ್ತು. ಆದರೆ ನಾನು ತೆರೆ ಮೇಲೆ ಕಾಣಿಸಿಕೊಳ್ಳದೇ ಇದ್ದರೂ ಒಂದಲ್ಲಾ ಒಂದು ಸಿನಿಮಾದಲ್ಲಿ ಸಕ್ರಿಯವಾಗಿದ್ದೆ’ ಎನ್ನುತ್ತಾರೆ ಸಾತ್ವಿಕ.

‘ನನ್ನ ಹೆಸರನ್ನು ‘ಸಾತ್ವಿಕ’ ಎಂದು ಬದಲಾವಣೆ ಮಾಡಿಕೊಂಡ ಬಳಿಕ ಬಹಳ ವ್ಯತ್ಯಾಸ ಅನುಭವಕ್ಕೆ ಬಂದಿದೆ. ವೈಯಕ್ತಿಕವಾಗಿಯೂ ಹಾಗೂ ಸಿನಿಮಾ ಕೆಲಸದಲ್ಲೂ ಬದಲಾವಣೆಯನ್ನು ಕಂಡಿದ್ದೇನೆ. ಕೆಲ ಮೆಟ್ಟಿಲುಗಳನ್ನು ಏರಿದ್ದೇನೆ. ‘ಲಕ್’ ಬಗ್ಗೆ ಖಂಡಿತವಾಗಿ ನಿರೀಕ್ಷೆ ಇದೆ. ಹಿಟ್‌ಗಾಗಿ ಕಾಯುತ್ತಿದ್ದೇನೆ’ ಎಂದರು.

‘ನನ್ನ ಇಲ್ಲಿಯವರೆಗಿನ ಸಿನಿ ಪಯಣದಲ್ಲಿ ಮಾಡಿದ ಅತ್ಯುತ್ತಮ ಸಿನಿಮಾ ‘ಮೋಡ ಕವಿದ ವಾತಾವರಣ’. ನನಗೆ ಇದೊಂದು ತಂಗಾಳಿಯಂತೆ. ಸುನಿ ಅವರ ಸಿನಿಮಾಗಳ ಕಥೆಯಲ್ಲಿ ನಾಯಕಿಗೆ ಆದ್ಯತೆ ಹೆಚ್ಚು. ಚಿತ್ರೀಕರಣದ ಸಂದರ್ಭದಲ್ಲಿ ಸುನಿ ಅವರಿಂದ ಕಲಿತಿದ್ದು ಬಹಳಷ್ಟಿದೆ. ಸಿನಿಮಾದೊಳಗೂ ‘ಸಾತ್ವಿಕ’ ಎನ್ನುವ ಪಾತ್ರ ಮಾಡಿದ್ದೇನೆ. ಇದು ಇವತ್ತಿನ ‘ಜೆನ್–ಜಿ’ ಪೀಳಿಗೆಗೆ ಬಹಳ ಹತ್ತಿರವಾಗಲಿದೆ. ಪಾತ್ರಕ್ಕೆ ಹಲವು ಶೇಡ್‌ಗಳಿದ್ದು, ಹೈಸ್ಕೂಲ್, ಕಾಲೇಜು ವಿದ್ಯಾರ್ಥಿನಿಯಾಗಿ ಕಾಣಿಸಿಕೊಂಡಿದ್ದೇನೆ’ ಎಂದರು ಸಾತ್ವಿಕ.

ಶೂಟಿಂಗ್ ಅನುಭವಗಳನ್ನು ಹಂಚಿಕೊಳ್ಳುತ್ತಾ, ‘ಸಿನಿಮಾದಲ್ಲಿ ಸಿಂಗಲ್ ಶಾಟ್ ಹಾಡೊಂದಿದ್ದು, ಇದಕ್ಕಾಗಿ ಸಂಜೆ 6 ರಿಂದ ಬೆಳಿಗ್ಗೆ 7ರವರೆಗೆ ನಿರಂತರವಾಗಿ ಶೂಟಿಂಗ್ ಮಾಡಿದ್ದು ಭಿನ್ನ ಅನುಭವ. ಸಿನಿಮಾದ ನಾಯಕರಾಗಿ ನಟಿಸಿರುವ ಶೀಲಂ ಅವರು ಸುನಿ ಅವರೊಂದಿಗೆ ಬಹಳ ವರ್ಷಗಳಿಂದ ಇದ್ದು ಪಳಗಿದ್ದಾರೆ. ಅವರಿಗೆ ತಾಂತ್ರಿಕ ಜ್ಞಾನ ಹೆಚ್ಚು ಕಲಾವಿದರಾಗಿಯೂ ಉತ್ತಮ ಭವಿಷ್ಯ ಹೊಂದಿದ್ದಾರೆ’ ಎಂದರು.

ಸದ್ಯ ಹೊಸ ಸಿನಿಮಾಗಳನ್ನು ಒಪ್ಪಿಕೊಂಡಿಲ್ಲ, ಕಥೆಗಳು ಬರುತ್ತಿವೆ. ‘ಮೋಡ ಕವಿದ ವಾತಾವರಣ’ ಬಿಡುಗಡೆಯಾದ ಬಳಿಕ ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳಲಿದ್ದೇನೆ’ ಎನ್ನುತ್ತಾ ಮಾತಿಗೆ ವಿರಾಮವಿತ್ತರು. ❖

7 ಸಿನಿಮಾಗಳು ಇಂದು ತೆರೆಗೆ

ಕಳೆದ ಮೂರು–ನಾಲ್ಕು ವರ್ಷಗಳಿಂದ ವರ್ಷದ ದ್ವಿತೀಯಾರ್ಧದಲ್ಲಿ ಸ್ಯಾಂಡಲ್‌ವುಡ್‌ನಲ್ಲಿ ಕಾಣಿಸುತ್ತಿರುವ ಚಿತ್ರಗಳ ಬಿಡುಗಡೆಯ ಉತ್ಸಾಹ ಈ ವರ್ಷವೂ ಮುಂದುವರಿದಿದೆ. ಅದಕ್ಕೆ ಸಾಕ್ಷಿ ಎನ್ನುವಂತೆ ಇಂದು (ಜೂನ್ 26) ಏಳು ಸಿನಿಮಾಗಳು ಬಿಡುಗಡೆಗೊಳ್ಳುತ್ತಿವೆ.

ಪಂಚಮುಖಿ

ಎಸ್.ಪಿ.ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ, ಚಂದ್ರು ಆಚಾರ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನದ ಜೊತೆಗೆ ನಾಯಕರಾಗಿ ನಟಿಸಿರುವ ಸಿನಿಮಾ. ಇದು ಚಂದ್ರು ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ಸ್ಫೂರ್ತಿ ಮನೋಹರ್ ನಾಯಕಿಯಾಗಿ ನಟಿಸಿದ್ದಾರೆ. ಚಿತ್ರದಲ್ಲಿ ಅರೋನ್ ಕಾರ್ತಿಕ್ ವೆಂಕಟೇಶ್ ಸಂಗೀತ ಸಂಯೋಜಿಸಿರುವ ನಾಲ್ಕು ಹಾಡುಗಳಿವೆ. ಪ್ರವೀಣ್ ಪೂಜಾರಿ ನಾಡ ಛಾಯಾಚಿತ್ರಗ್ರಹಣ ಹಾಗೂ ಅರವಿಂದ್ ಮಲ್ಲು ಸಂಕಲನ ಚಿತ್ರಕ್ಕಿದೆ.

ರೈತರ ಮಕ್ಕಳಿಗೆ ಹೆಣ್ಣುಕೊಡಿ

ಕೆಂಪರಾಮ್ ಹೆಡಿಯಾಲ ಕಥೆ, ಚಿತ್ರಕಥೆ, ಸಂಭಾಷಣೆ, ಬರೆದು ನಿರ್ದೇಶಿಸಿರುವ ಸಿನಿಮಾವಿದು. ರೈತರ ಮಕ್ಕಳಿಗೆ ಹೆಣ್ಣು ಸಿಗುವುದಿಲ್ಲ ಎನ್ನುವ ಮಾತನ್ನೇ ಆಧಾರವಾಗಿಟ್ಟುಕೊಂಡು ಕಥೆ ಹೆಣೆಯಲಾಗಿದೆ. ಜಗದೀಶ್ ಮುಕಿ ನಾಯಕರಾಗಿದ್ದು, ದಿವ್ಯಾಶ್ರೀ ನಾಯಕಿ. ಜೈ ಅಮೋಘದಾಸ್, ಅಗಸ್ತ್ಯ, ಪ್ರೇಮ್, ಸಂಗನಗೌಡ, ಸಂತೋಷ್ ಜೋಗುಳ್, ಅಶ್ವಿನಿ ಮುಂತಾದವರು ನಟಿಸಿದ್ದಾರೆ.

ರಕ್ಷಕ–2

‘ರಕ್ಷಕ’, ‘ದೊಡ್ಡಣ್ಣ ಪುಟ್ಟಣ್ಣ’ ಚಿತ್ರಗಳ ನಿರ್ದೇಶಕ ಆರ್.ವಿಜಯ್ ಕುಮಾರ್ ನಿರ್ದೇಶನದ ಸಿನಿಮಾ. ಪ್ರೀತಿ, ಆ್ಯಕ್ಷನ್, ಸಸ್ಪೆನ್ಸ್ ಥ್ರಿಲ್ಲರ್, ಹಾಸ್ಯ ಹೀಗೆ ಮನರಂಜನಾತ್ಮಕ ಅಂಶಗಳು ಸಿನಿಮಾದಲ್ಲಿದೆ ಎಂದಿದೆ ಚಿತ್ರತಂಡ. ಬೆಂಗಳೂರು ನಗರದ ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆದಿದೆ. ಸರ್ವೆ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಶಿವು ಸರ್ವೇಶ್ ಚಿತ್ರ ನಿರ್ಮಿಸಿದ್ದಾರೆ. ವೈಲೆಂಟ್ ವೇಲು ಸಾಹಸ ನಿರ್ದೇಶನ, ವಿಜಯ್ ಮಧಾಳೇ ಛಾಯಾಚಿತ್ರಗ್ರಹಣ ಹಾಗೂ ಸಂಕಲನ ಚಿತ್ರಕ್ಕಿದೆ. ವಿಜಯ್ ಕುಮಾರ್ ಪೊಲೀಸ್ ಅಧಿಕಾರಿ ಪಾತ್ರದಲ್ಲಿದ್ದಾರೆ. ರಾಜವಂಶಿ, ರಾಧಿಕಾ ಚಿತ್ರದ ನಾಯಕ, ನಾಯಕಿಯಾಗಿ ನಟಿಸಿದ್ದಾರೆ.

ಅಂಬರ ಗುಡ್ಡ

ಇದು ಮಕ್ಕಳ ಸಿನಿಮಾ. ಅಂಬರ ಗುಡ್ಡ ಎಂಬಲ್ಲಿ ಮಕ್ಕಳು ಎದುರಿಸಿದ ಕಷ್ಟಗಳು ಹಾಗೂ ಅವರ ಸಾಹಸದ ಕಥೆಯನ್ನು ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ. ವಿಷ್ಣುತೇಜ ನಿರ್ದೇಶನದ ಜೊತೆಗೆ ಪ್ರಮುಖ ಪಾತ್ರದಲ್ಲಿ ನಟಿಸಿ ನಿರ್ಮಾಣ ಮಾಡಿದ್ದಾರೆ. ಚಿತ್ರದಲ್ಲಿ ತನಿಷಾ ಗೌಡ, ಖುಷಿ ಗೌಡ, ಗೀತಾ, ಚಂದ್ರು, ಗಣೇಶ ಸೇರಿದಂತೆ ಅನೇಕ ಮಕ್ಕಳು ನಟಿಸಿದ್ದಾರೆ. ಸಿನಿಮಾವನ್ನು ಕೊಲ್ಲೂರು, ಕುಂದಾಪುರ, ಶಿವಮೊಗ್ಗ, ಕೊಡಚಾದ್ರಿ, ಗೋಕರ್ಣದಲ್ಲಿ ಚಿತ್ರೀಕರಣ ಮಾಡಲಾಗಿದೆ. ಸಿನಿಮಾಗೆ ಆಕಾಶ್ ಪರ್ವ ಸಂಗೀತ, ದೀಪಕ್ ಕುಮಾರ್ ಛಾಯಾಚಿತ್ರಗ್ರಹಣವಿದೆ.

‘ಬಲರಾಮನ ದಿನಗಳು’, ‘ಮೋಡ ಕವಿದ ವಾತಾವರಣ’ ಹಾಗೂ ಕಿರಣ್ ಸುರೇಶ್ ನಿರ್ದೇಶನದ ‘ಗರುಡ’ ಇಂದು ತೆರೆಕಾಣುತ್ತಿರುವ ಇತರ ಚಿತ್ರಗಳು. ❖



ಜೂನ್ 26ರಿಂದ 28ರವರೆಗೆ ಅಕ್ಷರ ಹಬ್ಬ

‘ವೀರಲೋಕ ಪುಸ್ತಕ ಸಂತೆ’ಗೆ ತುಮಕೂರು ನಗರ ಸಜ್ಜು



ತುಮಕೂರು: ನಗರದ ಅಮಾನಿಕೆರೆ ಗಾಜಿನ ಮನೆಯಲ್ಲಿ ಜೂನ್ 26ರಿಂದ ಮೂರು ದಿನ ‘ವೀರಲೋಕ ಪುಸ್ತಕ ಸಂತೆ’ ನಡೆಯಲಿದೆ. ನಾಡಿನ ವಿವಿಧೆಡೆಯಿಂದ 150ಕ್ಕೂ ಹೆಚ್ಚು ಲೇಖಕರು ಪುಸ್ತಕ ಸಂತೆಯಲ್ಲಿ ಪಾಲ್ಗೊಳ್ಳಲಿದ್ದಾರೆ. 30 ಕೃತಿಗಳು ಜನಾರ್ಪಣೆಗೊಳ್ಳಲಿವೆ. ಪುಸ್ತಕ ಪ್ರದರ್ಶನ ಮತ್ತು ಮಾರಾಟಕ್ಕಾಗಿ 60ಕ್ಕೂ ಹೆಚ್ಚು ಪುಸ್ತಕ ಮಳಿಗೆಗಳ ವ್ಯವಸ್ಥೆ ಮಾಡಲಾಗಿದೆ.

ಶುಕ್ರವಾರ ಬೆಳಿಗ್ಗೆ 10ಕ್ಕೆ ಹಿರಿಯ ಸಾಹಿತಿ ಹಂಪ ನಾಗರಾಜಯ್ಯ ಪುಸ್ತಕ ಸಂತೆ ಉದ್ಘಾಟಿಸಲಿದ್ದಾರೆ. ಚಿಂತಕ ಪ್ರೊ.ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಸಿದ್ಧಗಂಗಾ ಮಠದ ಅಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಉಪಮುಖ್ಯಮಂತ್ರಿ ಜಿ.ಪರಮೇಶ್ವರ ಉಪಸ್ಥಿತರಿರುವರು.

ಪುಸ್ತಕ ಸಂತೆ ಭಾಗವಾಗಿ 15 ಮಹತ್ವದ ವೈಚಾರಿಕ ವಿಚಾರಗೋಷ್ಠಿಗಳು ನಡೆಯಲಿವೆ. ‘ಕನ್ನಡ ಪುಸ್ತಕೋದ್ಯಮ’, ‘ಕನ್ನಡ ನೆಲದಲ್ಲಿ ಭಾಷಾ ಅಸ್ಮಿತೆ’, ‘ಕೃತಕ ಬುದ್ಧಿಮತ್ತೆ ಮತ್ತು ಕನ್ನಡದ ಅಸ್ತಿತ್ವ’, ‘ಸಂವಿಧಾನದ ಭಾಷಾ ಆಶಯ’, ‘ಐತಿಹಾಸಿಕ ಕಾದಂಬರಿಗಳ ಓದಿನ ಮಹತ್ವ’, ‘ಪುಸ್ತಕ ಸಂಸ್ಕೃತಿ: ಇಂದು-ಮುಂದು’ ಹಾಗೂ ‘ಮಹಿಳೆಯರು ಮತ್ತು ಸಮಾಜ’ ಪ್ರಮುಖವಾದವು. ಗೋಷ್ಠಿ ಬಳಿಕ ಸಂವಾದಕ್ಕೂ ಅವಕಾಶ ಇದೆ.

ಮೊದಲ ದಿನ ಲೇಖಕ ಹಿ.ಚಿ.ಬೋರಲಿಂಗಯ್ಯ, ಎಲ್.ಎನ್.ಮುಕುಂದರಾಜ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರ ಅಧ್ಯಕ್ಷತೆಯಲ್ಲಿ ಗೋಷ್ಠಿಗಳು ನಡೆಯಲಿವೆ. ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ.

‘ಜಿಲ್ಲಾಡಳಿತ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ನಡೆಯುವ 5ನೇ ಆವೃತ್ತಿಯ ‘ವೀರಲೋಕ ಪುಸ್ತಕ ಸಂತೆ’ಗೆ ಕನಿಷ್ಠ ಒಂದು ಲಕ್ಷ ಜನರು ಸೇರುವ ನಿರೀಕ್ಷೆ ಇದೆ’ ಎಂದು ಸಂಯೋಜಕ ಆರ್.ಕೆ.ಶ್ರೀನಿವಾಸ್ ತಿಳಿಸಿದ್ದಾರೆ.

ಹುದ್ದೆ ಭರ್ತಿಗೆ ಕಾಲಮಿತಿ

ಒಂದನೇ ಪುಟದಿಂದ...

ಸರ್ಕಾರದ ಈ ನಿರ್ಧಾರವು ರಾಜ್ಯದ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವುದರ ಜೊತೆಗೆ ಸಾರ್ವಜನಿಕ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಲಿದೆ. ವಿಶೇಷವಾಗಿ ಶಿಕ್ಷಣ, ಆರೋಗ್ಯ ಮತ್ತು ಪೊಲೀಸ್ ಇಲಾಖೆಗಳಲ್ಲಿನ ಹುದ್ದೆಗಳ ಭರ್ತಿಯಿಂದ ಜನ ಸಾಮಾನ್ಯರಿಗೆ ಉತ್ತಮ ಸೇವೆ ದೊರೆಯಲಿದೆ. ನೇಮಕಾತಿ ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕವಾಗಿ ನಡೆಯಲಿದ್ದು, ಯಾವುದೇ ರೀತಿಯ ಗೊಂದಲ ಅಥವಾ ಅಕ್ರಮ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ವಿಜಯ್ ಪ್ರಶ್ನಿಸುವ ಧೈರ್ಯ ಸಿ.ಎಂ.ಗೆ ಇಲ್ಲ: ಅಶೋಕ

ಬೆಂಗಳೂರು: ‘ಮೇಕೆದಾಟು ಯೋಜನೆಗೆ ತಡೆ ತರುತ್ತೇವೆ ಎಂದು ತಮಿಳುನಾಡು ಮುಖ್ಯಮಂತ್ರಿ ವಿಜಯ್ ಹೇಳಿದ್ದಾರೆ. ಅವರೊಂದಿಗೆ ಮಾತನಾಡುತ್ತೇನೆ ಎಂದಷ್ಟೇ ನಮ್ಮ ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ ಈವರೆಗೂ ಮಾತನಾಡಿಲ್ಲ. ನೀರು ಬಿಡುವುದಿಲ್ಲ ಎಂದು ಹೇಳುವ ಧೈರ್ಯ ನಮ್ಮ ಮುಖ್ಯಮಂತ್ರಿಗೆ ಇಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

ಆರ್. ಅಶೋಕ

ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ‘ರಾಜ್ಯದ ರೈತರಿಗೆ ಕಾವೇರಿ ನೀರನ್ನು ಬಿಡದೆ, ರಾಜ್ಯ ಸರ್ಕಾರವು ತಮಿಳುನಾಡಿಗೆ ನೀರು ಹರಿಸುತ್ತಿದೆ. ರಾಜ್ಯದಲ್ಲಿ ಮುಂಗಾರು ಮಳೆ ಕೊರತೆಯಾಗಿದೆ. ಕೆಆರ್‌ಎಸ್ ಖಾಲಿಯಾಗುತ್ತಿದೆ. ಹೀಗಿದ್ದೂ, ತಮಿಳುನಾಡಿಗೆ ನೀರು ಹರಿಸುವ ಅಗತ್ಯ ಏನು ಇತ್ತು’ ಎಂದು ಪ್ರಶ್ನಿಸಿದರು.

‘ವಿಜಯ್ ಅವರ ಟಿವಿಕೆ ಪಕ್ಷದ ಜತೆಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದೆ. ಹೀಗಾಗಿ ಮುಖ್ಯಮಂತ್ರಿ ಶಿವಕುಮಾರ್ ಅವರು ತಮಿಳುನಾಡು ಮುಖ್ಯಮಂತ್ರಿ ವಿರುದ್ಧ ಮಾತನಾಡುತ್ತಿಲ್ಲ. ಆ ಧೈರ್ಯವನ್ನೂ ಅವರು ತೋರುವುದಿಲ್ಲ. ಇವರ ಮೈತ್ರಿ ಕಾರಣಕ್ಕೆ ರಾಜ್ಯದ ರೈತರು ನೀರಿನ ಸಮಸ್ಯೆ ಎದುರಿಸಬೇಕಾಗಿದೆ’ ಎಂದು ದೂರಿದರು.

‘ಶಿವಕುಮಾರ್ ಅವರು ತಾವು ಹಿಂದೂ ಎಂದು ತೋರಿಸಿಕೊಳ್ಳುವ ಸಲುವಾಗಿ ದೇವಾಲಯಗಳಿಗೆ ಹೋಗುತ್ತಾರೆ. ಹಣೆಗೆ ವಿಭೂತಿ ಮತ್ತು ನಾಮ ಹಾಕಿಸಿಕೊಳ್ಳುತ್ತಾರೆ. ಆದರೆ ಸಹಾಯ ಮಾಡುವುದು ಮಾತ್ರ ಮುಸ್ಲಿಮರಿಗೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ನಾಯಕರ ವೈಮನಸ್ಸು ಅಡ್ಡ ಮತಕ್ಕೆ ಕಾರಣ’

ಪ್ರಜಾವಾಣಿ ವಾರ್ತೆ

ಎಸ್‌ಟಿ. ಸೋಮಶೇಖರ್

ಬೆಂಗಳೂರು: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ನಡುವಣ ಜಿದ್ದಾಜಿದ್ದಿ ಹಾಗೂ ವೈಮನಸ್ಸಿನ ಕಾರಣಕ್ಕೆ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿದ್ದಾರೆ’ ಎಂದು ಬಿಜೆಪಿಯ ಉಚ್ಚಾಟಿತ ಶಾಸಕ ಎಸ್.ಟಿ.ಸೋಮಶೇಖರ್ ಆರೋಪಿಸಿದರು.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬಿ.ವೈ.ವಿಜಯೇಂದ್ರ ಕಡೆಯ ಅಭ್ಯರ್ಥಿಯನ್ನು ಸೋಲಿಸಬೇಕು ಎಂದು ಆರ್.ಅಶೋಕ ಅವರ ಬೆಂಬಲಿಗ ಶಾಸಕರು ಅಡ್ಡಮತದಾನ ಮಾಡಿದ್ದಾರೆ. ಅಶೋಕ ಅವರ ಕಡೆಯ ಅಭ್ಯರ್ಥಿಯನ್ನು ಸೋಲಿಸಬೇಕು ಎಂದು ವಿಜಯೇಂದ್ರ ಬೆಂಬಲಿಗ ಶಾಸಕರು ಅಡ್ಡಮತದಾನ ಮಾಡಿದ್ದಾರೆ’ ಎಂದು ದೂರಿದರು.

‘ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲಿ’

ಬೆಂಗಳೂರು: ‘ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಿಂದ ವಿದ್ಯಾರ್ಥಿಗಳ ಸಾವಿಗೆ ಕಾರಣರಾಗಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು’ ಎಂದು ಕಾಂಗ್ರೆಸ್ ಸಂಸದೆ ವರ್ಷಾ ಗಾಯಕ್ವಾಡ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಕೇಂದ್ರ ಶಿಕ್ಷಣ ಸಚಿವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಎನ್‌ಟಿಎ ಲೋಪಗಳ ಕುರಿತು ಸಮಗ್ರ ತನಿಖೆ ಮತ್ತು ಸುಧಾರಣೆ ಆಗಬೇಕು. ಪರೀಕ್ಷೆಗಳು, ಫಲಿತಾಂಶಗಳು ಮತ್ತು ಉದ್ಯೋಗಾವಕಾಶಗಳಿಗಾಗಿ ವಾರ್ಷಿಕ ಶೈಕ್ಷಣಿಕ ವೇಳಾಪಟ್ಟಿ ಸಿದ್ಧಪಡಿಸಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಗುರುವಾರದಿಂದ (ಜೂನ್ 25) ಆ. 9ರವರೆಗೆ 40 ದಿನ ದೇಶದಾದ್ಯಂತ ‘ಛಾತ್ರೋಂ ಕೀ ಗೂಂಜ್’ ಅಭಿಯಾನ ನಡೆಯಲಿದೆ’ ಎಂದರು.

ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಎಸ್. ಮಂಜುನಾಥ್ ಮಾತನಾಡಿ, ‘ಅಭಿಯಾನವು ಪಕ್ಷಾತೀತವಾಗಿ ದೇಶದಾದ್ಯಂತ 28 ನಗರಗಳಲ್ಲಿ ನಡೆಯಲಿದ್ದು, 28 ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಅದರಂತೆ, ಬೆಂಗಳೂರಿನಲ್ಲಿ ಅಭಿಯಾನದ ಜವಾಬ್ದಾರಿ ಯುವ ಕಾಂಗ್ರೆಸ್‌ಗೆ ಲಭಿಸಿದೆ. ಅಭಿಯಾನದ ಭಾಗವಾಗಿ ರಾಹುಲ್ ಗಾಂಧಿ ಅವರು ಶೀಘ್ರದಲ್ಲಿ ಬೆಂಗಳೂರಿಗೆ ಬರಲಿದ್ದಾರೆ’ ಎಂದರು.

‘ಅಭಿಯಾನದ ಪ್ರತಿ ವಾರಾಂತ್ಯದಲ್ಲಿ ಪಂಜಿನ ಮೆರವಣಿಗೆ ಸಂವಾದ ಕಾರ್ಯಕ್ರಮ, ನೀಟ್ ವಿರೋಧಿ ಸಂಗೀತ ಕಛೇರಿ, ವಾಕಥಾನ್ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಈ ಕುರಿತು ಶಾಸಕರ ಭವನದಲ್ಲಿ ಎಲ್ಲಾ ವಿದ್ಯಾರ್ಥಿಗಳ ಸಂಘಟನೆಗಳ ಜೊತೆ ಶನಿವಾರ ಸಭೆ ನಡೆಯಲಿದೆ. ಎಲ್ಲಾ ವಿಶ್ವವಿದ್ಯಾಲಯ, ಕಾಲೇಜುಗಳ ಪ್ರತಿ ತರಗತಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ನೋಂದಣಿ ಮಾಡಿಸಲಾಗುವುದು. ಆ ಮೂಲಕ ರಾಹುಲ್ ಗಾಂಧಿಯವರು ವಿದ್ಯಾರ್ಥಿಗಳ ಪರ ಇದ್ದಾರೆ ಎಂಬ ಸಂದೇಶ ರವಾನಿಸಲಾಗುವುದು’ ಎಂದರು.

ಕರ್ನಾಟಕ ಗೃಹ ಮಂಡಳಿ
Karnataka Housing Board, Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಚಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.
ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ “ಪ್ರಜಾಸೌಧ” – ಕಡೂರು ತಾಲ್ಲೂಕು ಆಡಳಿತ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ. **Work Indent No. :** KHB/2026-27/BD/WORK_INDENT 764 & IFT No.31/2026-27 Date: 25.06.2026. **ಟೆಂಡರ್‌ಗಿಟ್ಟ ಮೊತ್ತ** ರೂ.11,91,50,937/-.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 24.07.2026 ಸಂಜೆ 4.00 ಗಂಟೆಗೆ.
ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511 website: https://kppp.karnataka.gov.in
ಸಹಿ/- ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ./1353/ಆಕಾರ್/2026-27

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯಿತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ, ಬೆಂಗಳೂರು-560070

ಕೆಪಿಪಿಪಿ ಪೋರ್ಟಲ್ ಟೆಂಡರ್ ಪ್ರಕಟಣೆ ನೋಟೀಸ್
ದ್ವಿ – ಲಕೋಟೆ
ಕೆಪಿಪಿಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ-2/ಟೆಂಡರ್/20/2026-27 ದಿನಾಂಕ: 25.06.2026
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ 5054 Rain Effected Program Grants ಅನುಮೋದನೆಯಾಗಿರುವ ಕಾಮಗಾರಿಗಾಗಿ ದ್ವಿ–ಲಕೋಟೆಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **09.07.2026**ರ ಸಂಜೆ **4:00** ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **https://kppp.karnataka.gov.in**ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/-, ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ, ಬೆಂಗಳೂರು
ವಾಸಾಸಂಇ/ವಾಪ್ರ/ಎಲ್‌ಸಿ/1365/2026-27

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009.
ಸಂಖ್ಯೆ: ಕೆಆರ್‌ಐಡಿಎಲ್/ಎಸಿಟಿ/ಟಿಎನ್‌ಡಿ/ಎಫ್‌ಡಿ/2026-27 ದಿನಾಂಕ: 25.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ಕೆಆರ್‌ಐಡಿಎಲ್ ಸುಮಾರು **ರೂ. 133.00 ಕೋಟಿ** ಮೊತ್ತವನ್ನು ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲು ಸಾರ್ವಜನಿಕ ವಲಯದ ಬ್ಯಾಂಕುಗಳು/ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು/ ಖಾಸಗಿ ವಲಯದ ಬ್ಯಾಂಕುಗಳಿಂದ ಇ-ಬಿಡ್ಡಿಂಗ್ ಮೂಲಕ ಟೆಂಡರುಗಳನ್ನು ಆಹ್ವಾನಿಸಿದೆ. ಇತರೆ ನಿಯಮಗಳು ಮತ್ತು ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.kppp.karnataka.gov.in** ನಲ್ಲಿ ನೋಡಬಹುದು ಅಥವಾ ಸಹಾಯವಾಣಿ ಸಂಪರ್ಕ ಸಂ: 9240214000, 9240214001 ಸಂಪರ್ಕಿಸಬಹುದು.
• ಇ-ಹರಾಜು ಪ್ರಕಟಣೆ ಪ್ರಕಟಿಸಿದ ದಿನಾಂಕ: **25.06.2026** • ಬಿಡ್ ಸಲ್ಲಿಸುವ ಕಡೆಯ ದಿನಾಂಕ: **06.07.2026 ರಂದು ಮಧ್ಯಾಹ್ನ 2.00 ಗಂಟೆಗೆ** • ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **08.07.2026 ರಂದು ಮಧ್ಯಾಹ್ನ 2.00 ಗಂಟೆಗೆ** • ಇ-ಹರಾಜು ನಡೆಸುವ ದಿನಾಂಕ: **13.07.2026 ರಂದು ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 03.00 ಗಂಟೆ ವರೆಗೆ.**
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಮುಖ್ಯ ಹಣಕಾಸು ಅಧಿಕಾರಿ,
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು-09.
ದೂ.ಸಂಖ್ಯೆ: 080-28015609 ಇ-ಮೇಲ್: cfo-1@kridl.net
ಸಹಿ/- ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್, ಬೆಂಗಳೂರು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: ಕವಿನಿಆ/ಎಫ್-34/ವಾ-38/2026-27/2200 ದಿನಾಂಕ: 25.06.2026

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ
ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ (ಗ್ರಿಡ್ ಸಂಪರ್ಕಿತ ವಿತರಿಸಿದ ಸೌರ ಫೋಟೋವೋಲ್ಟಾಯಿಕ್ (DSPV) ಘಟಕಗಳು) ವಿನಿಯಮಗಳು, 2026 – ಸಾರ್ವಜನಿಕ ವಿಚಾರಣೆ ಬಗ್ಗೆ.
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಕರಡು ವಿನಿಯಮಗಳನ್ನು ಹೊರಡಿಸಿದ್ದು, ಅದು ರಾಜ್ಯ ಪತ್ರಿಕೆಯಲ್ಲಿ ದಿನಾಂಕ: 04.06.2026 ರಂದು ಪ್ರಕಟವಾಗಿದ್ದು, ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿಯೂ ಲಭ್ಯವಿರುತ್ತದೆ.
ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಮಂಗಳವಾರ ದಿನಾಂಕ: 07.07.2026 ರಂದು ಮಧ್ಯಾಹ್ನ 3:00 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052 ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.**
ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.
ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/YC1346/2026-27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಆರ್ಚಿಡ್ ಮಾಲ್ ಹಿಂಭಾಗ ಕಲಬುರಗಿ-585102 (ಕರ್ನಾಟಕ ರಾಜ್ಯ)
Website: https://kkrtc.karnataka.gov.in
ಸಂಖ್ಯೆ: ಕಕಸಾ/ಕೇಕ/ಸಿಬ್ಬಂದಿ/ನೇಮಕ/ನೇ-1/ಕ-461/ 626 /2026-27 ದಿನಾಂಕ: 25.06.2026

:: ಪ್ರಕಟಣೆ ::
ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ: 08.10.2025 ರಂದು ಸಂಖ್ಯೆ: ಇಡಿ/ಕೆಇಎ/ ಆಡಳಿತ/ ಸಿ.ಆರ್.05/2025 (ಕಲ್ಯಾಣ-ಕರ್ನಾಟಕ) ಮತ್ತು ಇಡಿ/ಕೆಇಎ/ಆಡಳಿತ/ಸಿ.ಆರ್.04/2025 (ಆರ್‌ಪಿಸಿ) ಗಳನ್ವಯ ಅಧಿಸೂಚಿಸಿದ **ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನಿರ್ವಾಹಕ ಮತ್ತು ಸಹಾಯಕ ಲೆಕ್ಕಿಗ** ಹುದ್ದೆಗಳ ನೇಮಕಾತಿಗಾಗಿ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಮತ್ತೊಂದು ಅವಕಾಶವನ್ನು ಕಲ್ಪಿಸುತ್ತಿದೆ. ಅದೇ ರೀತಿ ಕೆಲವು ಹೆಚ್ಚುವರಿ ಅಭ್ಯರ್ಥಿಗಳನ್ನು ಸಹ ಅವರ ಮೂಲ ದಾಖಲಾತಿ ಪರಿಶೀಲನೆಗೆ ಕರೆಯಲಾಗಿದೆ. ಹೆಚ್ಚುವರಿ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ಒದಗಿಸಲಾಗುವುದಿಲ್ಲ.
ಆದ್ದರಿಂದ, 2026ರ ಜೂನ್ 16 ರಿಂದ 19 ರವರೆಗೆ ನಡೆದ ದಾಖಲಾತಿ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳು ಹಾಗೂ ಹೊಸದಾಗಿ ಹಾಜರಾಗಬೇಕಾದ ಹೆಚ್ಚುವರಿ ಅಭ್ಯರ್ಥಿಗಳು ದಿನಾಂಕ: **02.07.2026 ರಂದು** ಕಲಬುರಗಿಯ **“ಕಕರಸಾ ನಿಗಮದ ಕೇಂದ್ರ ಕಛೇರಿಯಲ್ಲಿ”** ತಮ್ಮ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಸೂಚಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ನಿಗಮದ ವೆಬ್ ವಿಳಾಸ **kkrtc.karnataka.gov.in** ಗೆ ಭೇಟಿ ನೀಡುವುದು. ಸಹಾಯವಾಣಿ ಸಂಖ್ಯೆ 6366374977 (ಕಛೇರಿ ವೇಳೆಯಲ್ಲಿ ಮಾತ್ರ).
ಸಹಿ/-
ಅಧ್ಯಕ್ಷರು – ಆಯ್ಕೆ ಸಮಿತಿ
ವಾ.ಸಾ.ಸಂ.ಇ/ಕಲಬುರಗಿ/254/ಕೆ.ಎಸ್.ಎಂ.ಸಿ.&ಎ/2026-27

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ನೋಂದಣಿ ಕಚೇರಿ: 30/1, 3ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ್ ನಗರ, ಬೆಂಗಳೂರು- 560051. ಇಮೇಲ್ : dgm4bswml25@gmail.com
No. DGM-4/ BSWML/EOI/ 01/ 2025-26 Date:25.06.2026

ಆಸಕ್ತಿ ಅಭಿವ್ಯಕ್ತಪಡಿಸುವಿಕೆ (ಇಓಐ)
ಕರ್ನಾಟಕ ಮುನಿಸಿಪಲ್ ನಿಗಮಗಳ ಕಾಯ್ದೆ 1976ರ ಅಡಿಯಲ್ಲಿ, ಮುನಿಸಿಪಲ್ ಘನ ತ್ಯಾಜ್ಯ ನಿರ್ವಹಣೆಯು ಜಿಬಿಎ/ಬಿಸಿಸಿಸಿ /ಬಿಇಸಿಸಿ /ಬಿಡಬ್ಲ್ಯೂಸಿಸಿ/ಬಿಎಸ್‌ಸಿಸಿ/ಬಿಎನ್‌ಸಿಸಿ/ಬಿಎಸ್‌ಡಬ್ಲ್ಯೂಎಂಎಲ್ ರ ಅಡಿಯಲ್ಲಿ ನಿಕಟವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ನಗರದಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸಂಗ್ರಹಿಸುವುದು, ಸಾಗಿಸುವುದು ಮತ್ತು ವಿಲೇವಾರಿ ಮಾಡುವುದು ಸೇರಿದಂತೆ ನಗರ ಪಾಲಿಕೆ ಮತ್ತು ನಾಗರಿಕ ಸೇವೆಗಳನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು 2026 ರ ಘನತ್ಯಾಜ್ಯ ನಿರ್ವಹಣಾ ನಿಯಮಗಳನ್ನು ರೂಪಿಸಿದೆ, ಇದು ಕಡ್ಡಾಯವಾಗಿ ಮೂಲ ವಿಂಗಡಣೆಯನ್ನು ಮೂರು ರೀತಿಯಲ್ಲಿ ತ್ಯಾಜ್ಯ ಹರಿವಿನ ವರ್ಗವಾಗಿ ಅಂದರೆ ಹಸಿ , ಒಣ, ಗೃಹಬಳಕೆಯ ಅಪಾಯಕಾರಿ ತ್ಯಾಜ್ಯ ಮತ್ತು ವಿಶೇಷ ವರ್ಗದ ತ್ಯಾಜ್ಯಗಳಾಗಿ ವಿಂಗಡಿಸಲಾಗಿದೆ. ಜೈವಿಕ ವೈದ್ಯಕೀಯ ತ್ಯಾಜ್ಯ/ಅಪಾಯಕಾರಿ ತ್ಯಾಜ್ಯಗಳ ವೈಜ್ಞಾನಿಕ ವಿಲೇವಾರಿಯಲ್ಲಿ ಅನುಭವಹೊಂದಿರುವ ಮತ್ತು ರಾಜ್ಯ/ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧಿಕೃತ ಮಾನ್ಯತೆ ಪಡೆದಿರುವ ಆಸಕ್ತ ಸಂಸ್ಥೆಗಳು ಈ ಆಸಕ್ತಿ ಅಭಿವ್ಯಕ್ತ ಪಡಿಸುವಿಕೆಯಲ್ಲಿ ಭಾಗವಹಿಸಬಹುದು.

ಕ್ರ. ಸಂ.	ವಿವರಗಳು
1	ಜಿ ಬಿ ಎ ಮಿತಿಯಲ್ಲಿ ಗೃಹಬಳಕೆಯ /ಅಪಾಯಕಾರಿ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ದರಪಟ್ಟಿ ಸಲ್ಲಿಸಲು ಆಸಕ್ತಿ ಅಭಿವ್ಯಕ್ತ ಪಡಿಸುವಿಕೆ
	ಎ) ಸಾಗಣೆ ವೆಚ್ಚಗಳು ಪ್ರತಿ ಕೆ ಜಿ ಗೆ (ಕನಿಷ್ಠ 2 ಟನ್ ಸಾಗಿಸುವ ಸಾಮರ್ಥ್ಯದ ವಾಹನ – ಪ್ರತಿ ವಾಹನದ ಸರಾಸರಿ ಪ್ರಯಾಣ ದಿನಕ್ಕೆ 150 ಕಿ ಮೀ)
	ಬಿ) ವೈಜ್ಞಾನಿಕ ವಿಲೇವಾರಿ ವೆಚ್ಚ ಪ್ರತಿ ಕೆ ಜಿ ಗೆ (ದಹನ ಮತ್ತು ವೈಜ್ಞಾನಿಕ ಭೂಭರ್ತಿ ವೆಚ್ಚಗಳು ಸೇರಿ)
	ಸಿ) ಪ್ರತಿ ಕೆಜಿಗೆ ಸಂಗ್ರಹ ಚೀಲದ ಬೆಲೆ

ಕೆಪಿಪಿ ಪೋರ್ಟಲ್ ಮೂಲಕ ಇಓಐ ಸಲ್ಲಿಸಲು ಕೊನೆಯ ದಿನಾಂಕ. : 06.07.2026 ರಂದು ಸಂಜೆ 4.00 ಗಂಟೆಯ ಒಳಗೆ. ಯಾವುದೇ ಸ್ಪಷ್ಟೀಕರಣಗಳಿಗಾಗಿ ನೀವು ಬೆಳಿಗ್ಗೆ 10.00 ರಿಂದ ಸಂಜೆ 5.30 ರ ನಡುವೆ ಮೇಲೆ ತಿಳಿಸಲಾದ ವಿಳಾಸದಲ್ಲಿರುವ ಕಚೇರಿಯನ್ನು ಸಂಪರ್ಕಿಸಬಹುದು. ಯಾವುದೇ ಕಾರಣವನ್ನು ನೀಡದೆ ಅರ್ಜಿದಾರರಿಂದ ಇಓಐ ಅನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಇಲಾಖೆ ಕಾಯ್ದಿರಿಸಿದೆ.
ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು-4, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ.
DIPR/CP/1340/NR/2026-27

ಕರ್ನಾಟಕ ಸರ್ಕಾರ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಆರ್.ನಗರ
ಮೈಸೂರು-ಹಾಸನ ರಸ್ತೆ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ. ದೂ : 08223-262342,
ಇ-ಮೇಲ್: apmckrnagar@gmail.com
ಸಂ:ಕೃಉಮಾಸ(ಕೃರಾನ)/156/2026-27 ದಿನಾಂಕ: 19.06.2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
2026-27 ನೇ ಸಾಲಿಗಾಗಿ (ದಿನಾಂಕ: 01.07.206 ರಿಂದ 31.03.2027 ರವರೆಗೆ) ಕೆ.ಆರ್.ನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಂಗಣ, ತರಕಾರಿ ಮಾರುಕಟ್ಟೆ ಪ್ರಾಂಗಣ, ಮತ್ತು ಸಾಲಿಗ್ರಾಮ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಈ ಕೆಳಕಂಡಂತೆ ಕಛೇರಿ ಸಿಬ್ಬಂದಿ ಮತ್ತು ಭದ್ರತಾ ಸೇವೆ ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಅರ್ಹ ಏಜೆನ್ಸಿ / ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ **https://kppp.karnataka.gov.in/** ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕ್ರ ಸಂ	ಕೆಲಸದ ಹೆಸರು	ಪೂರೈಸಬೇಕಾದ ಒಟ್ಟು ಸಿಬ್ಬಂದಿ ವಿವರ ಮತ್ತು ಸಂಖ್ಯೆ	ಇ.ಎಂ.ಡಿ ಮೊತ್ತ	ಖಾಲಿ ಟೆಂಡರ್ ಫಾರಂ ಬೆಲೆ
1	ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಮತ್ತು ಸ್ವಚ್ಚತಾ ಸಿಬ್ಬಂದಿ ಪೂರೈಸುವುದು	1. ಗಣಕಯಂತ್ರ ನಿರ್ವಾಹಕರು-01 2. ವಾಹನ ಚಾಲಕರು-01 3. ಭದ್ರತಾ ಸಿಬ್ಬಂದಿ-04 4. ಸ್ವಚ್ಚತಾಗಾರ-02	80,000-00	e-portal ನಿಯಮಗಳನ್ವಯ

1) ಭರ್ತಿ ಮಾಡಿದ ಇ-ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 15-07-2026 ಸಂಜೆ 4-30 ಗಂಟೆವರೆಗೆ
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17-07-2026 ಬೆಳಿಗ್ಗೆ 11-30 ಗಂಟೆಗೆ,
3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 24-07-2026 ಬೆಳಿಗ್ಗೆ 11-30 ಗಂಟೆಗೆ.
ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ-ಪೋರ್ಟಲ್‌ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗು ನಿಬಂಧನೆಗಳು ಇ-ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ **http://eproc.karnataka.gov.in** ವೆಬ್‌ಸೈಟ್ ನಲ್ಲಿ ಪಡೆಯಬಹುದಾಗಿದೆ. ಇ-ಪ್ರೊಕ್ಯೂಮರ್ಂಟ್ ಟೆಂಡರ್‌ನಲ್ಲಿ ಭಾಗವಹಿಸಲು ನೊಂದಾಯಿಸುವ ಬಗ್ಗೆ ಸಹಾಯವಾಣಿ ದೂರವಾಣಿ ಸಂಖ್ಯೆ **080-22230960** ಅಥವಾ **080-22234115** ಅನ್ನು ಸಂಪರ್ಕಿಸಬಹುದು
ಸಹಿ /- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಆರ್.ನಗರ
ಸಹಿ /- ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಆರ್.ನಗರ
ವಾಸಾಸಂಇ/ಮೈಸೂರು/372/ಎಸ್‌ಎಸ್‌ಸಿ/2026-27

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ವಿಭಾಗ, ಜಯಂತಿನಗರ ವೃತ್ತ, ಹೊರಮಾವು ಮುಖ್ಯರಸ್ತೆ, ಹೊರಮಾವು, ಬೆಂಗಳೂರು-560113
ನಂ.: ಬೆಂಪೂನಪಾ/ಕಾಪಾಅ/ಹೊರಮಾವು/ಟೆಂಡರ್/01/2026-27 ದಿನಾಂಕ: 25.06.2026

ಟೆಂಡರ್ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಜಿಓಕೆ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಹೊರಮಾವು ವಿಭಾಗ, ಬೆಂಪೂನಪಾ ಇವರು, ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕೆಳಗೆ ನೀಡಿರುವ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು
1	ಕೆ.ಆರ್. ಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ, ಕರ್ನಾಟಕ ಸರ್ಕಾರದ (ಜಿಓಕೆ) ಅನುದಾನದಡಿ, ಹೊರಮಾವು ವಿಭಾಗದ ಕೆ. ನಾರಾಯಣಪುರ ವಾರ್ಡ್ ಸಂಖ್ಯೆ 1, ಹೊರಮಾವು ವಾರ್ಡ್ ಸಂಖ್ಯೆ 2 ಮತ್ತು ಚೆಳ್ಳಕೆರೆ ವಾರ್ಡ್ ಸಂಖ್ಯೆ 3 ರಲ್ಲಿ ಪ್ರಧಾನ, ಉಪ-ಪ್ರಧಾನ ರಸ್ತೆಗಳು, ವಾರ್ಡ್ ರಸ್ತೆಗಳು, ಚರಂಡಿಗಳು ಮತ್ತು ಇತರ ಸಂಬಂಧಿತ ಕಾಮಗಾರಿಗಳ ಸಮಗ್ರ ಅಭಿವೃದ್ಧಿ. ಪ್ಯಾಕೇಜ್-1. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 2641.00, ಇಎಂಡಿ (ರೂ. ಲಕ್ಷಗಳಲ್ಲಿ): 26.42 (ರೂಪಾಯಿ ಒಂದು ಲಕ್ಷ ಕೆ.ಪಿ.ಪಿ ಪೋರ್ಟಲ್ ಮೂಲಕ ಮತ್ತು ಇನ್ನುಳಿದ ರೂ. 25.42 ಲಕ್ಷವನ್ನು ಬಿಡ್ ದಸ್ತಾವೇಜಿನಲ್ಲಿ ನಿರ್ದಿಷ್ಟಪಡಿಸಿದಂತೆ ಪಾವತಿಸತಕ್ಕದ್ದು).**

ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02.07.2026 ಮಧ್ಯಾಹ್ನ 3:00** ಗಂಟೆವರೆಗೆ. (3) ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: **02.07.2026 ಮಧ್ಯಾಹ್ನ 3:30** ಗಂಟೆಗೆ. (4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **06.07.2026 ಸಂಜೆ 4:00** ಗಂಟೆಯವರೆಗೆ. (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **07.07.2026**ರ **ಸಂಜೆ 4:30** ಗಂಟೆಗೆ. (6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **08.07.2026**ರ **ಸಂಜೆ 4:30** ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಹೊರಮಾವು ವಿಭಾಗ, ಬೆಂಪೂನಪಾ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ.: 08182 – 222943, ಇ-ಮೇಲ್ :spdivision@gmail.com
ಐ.ಎಫ್.ಟಿ ಸಂಖ್ಯೆ: 15/2026-27 ದಿನಾಂಕ: 25-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)
(ಕೆ.ಪಿ.ಪಿ. ಪೋರ್ಟ್‌ಲ್ ಮೂಲಕ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-3&4 ನಿಯುಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ತೀರ್ಥಹಳ್ಳಿ ತಾಲ್ಲೂಕಿನ 8443-00-117-0-14-542 ಠೇವಣಿ ವಂತಿಕೆ (ರಾಜ್ಯ ವಿಪತ್ತು ಉಪಶಮನ ನಿಧಿ- ಎಸ್.ಡಿ.ಎಮ್.ಎಫ್) ಕಾಮಗಾರಿ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಒಟ್ಟು-14 ಕಾಮಗಾರಿಗಳು (ಇಂಡೆಂಟ್ ನಂ-36632, 36641, 36643, 36654, 36631, 36634, 36642, 36646, 36649, 36653, 36655, 36686, 36702, 36813) ಕಾಮಗಾರಿಗಳಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ.156.74 ಲಕ್ಷ ಮತ್ತು ಟೆಂಡರ್ ಗಿಟ್ಟ ಕನಿಷ್ಠ ಮೊತ್ತ ರೂ. 82.18 ಲಕ್ಷ ಹಾಗೂ ಇ.ಎಂ.ಡಿ. ಗರಿಷ್ಟ ಮೊತ್ತ ರೂ. 2.351 ಲಕ್ಷ ಮತ್ತು ಇ.ಎಂ.ಡಿ. ಕನಿಷ್ಠ ಮೊತ್ತ ರೂ.1.644 ಲಕ್ಷ. ಕಾಲಾವಧಿ ಮಳೆಗಾಲ ಸೇರಿ ಕೆ.ಪಿ.ಪಿ. ಪೋರ್ಟ್‌ಲ್‌ನಲ್ಲಿ ನಮೂದಿಸಿದಂತೆ.
ಅರ್ಹ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 25-06-2026 ರಿಂದ 06-07-2026 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ:06-07-2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ:07-07-2026 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ:08-07-2026 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/121/06/433

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ. ಭಾರತ.
ಸಂಖ್ಯೆ : ವಿ.ತಾ.ವಿ./ಬೆ/ಎಸ್.ಎ.ಪಿ./ಸಿ.ಡಬ್ಲ್ಯೂ-1/ಟಿ-746/2026-27/1347
ದಿನಾಂಕ : 23-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ 2ನೇ ಕರೆ
ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ-ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು : **Subscription of 1Gbps Leased Line Internet Connectivity for 03 Years to VTU CNC Section, Belagavi.** ಟೆಂಡರಿಗಿಟ್ಟ ಮೊತ್ತ : ರೂ. 57,52,500/- ಮುಂಗಡ ಠೇವಣಿ : ರೂ. 1,15,500/-, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 30-06-2026 ರ ಮಧ್ಯಾಹ್ನ 2.30 ರವರೆಗೆ. ಟೆಂಡರ್ ತೆರೆಯುವ ದಿನಾಂಕ : 01-07-2026 ರ ಸಂಜೆ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ಮತ್ತು **www.vtu.ac.in** ನೋಡಬಹುದು.
ಸಹಿ/- ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/484/ಮಣಿಪಾಲ್/2026-27

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ, ತಾ: ಹುಣಸಗಿ
Office of the EXECUTIVE ENGINEER, KBJNL, Dam Safety Unit-3 Narayanpur-585219
ಸಂ. ಕೃಭಾಜನಿನಿ/ಕಾನಿಅ/ಆಸುಘ-3/ಪಿಬಿ-1/ಕೊಟೇಷನ್/2026-27/415 ದಿನಾಂಕ: 24.06.2026

ಕೊಟೇಷನ್ ಅಧಿಸೂಚನೆ
ಉಲ್ಲೇಖ: ಕರ್ನಾಟಕ ಸರ್ಕಾರದ ತಿದ್ದುಪಡಿ ಆದೇಶ ಸಂ:ಕಸಂಪಾ:04: ವಾಪ್ರಜಾ:2017 ದಿ:19-01-2017
****
ವ್ಯವಸ್ಥಾಪಕ ನಿರ್ದೇಶಕರು, ಕೃ.ಭಾ.ಜ.ನಿ.ನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ವಾರ್ಷಿಕ ನಿರ್ವಹಣೆ ಕಾಮಗಾರಿಯ ಅಂದಾಜು ಪತ್ರಿಕೆಯನ್ನು ತಯಾರಿಸುವ ಸಲುವಾಗಿ ನಮೂದಿತ ಸ್ಪೆಸಿಫಿಕೇಷನ್‌ಗಳಿಗಾಗಿ ದರಗಳನ್ನು ಪಡೆಯಲು ಪರಿಣಿತ ಏಜನ್ಸಿದಾರರಿಂದ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದ್ದು, ಐಟಂಗಳ ವಿವರವಾದ ತಾಂತ್ರಿಕ ಸ್ಪೆಸಿಫಿಕೇಷನ್‌ಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಿಯ ಅಧಿಕೃತ ವೆಬ್ ಸೈಟ್: **www.kbjnl.karnataka.gov.in** ನಲ್ಲಿ ಪ್ರಕಟಿಸಲಾಗಿರುತ್ತದೆ.
ಇಚ್ಛೆಯುಳ್ಳ ಪರಿಣಿತ ಏಜನ್ಸಿದಾರರು ಜಿ.ಎಸ್.ಟಿ ಹಾಗೂ ಇತರೆ ತೆರಿಗೆ ಹೊರತು ಪಡಿಸಿ ಮೊಹರು ಮಾಡಿದ ದರ ಪಟ್ಟಿಗಳನ್ನು ಈ ಕಛೇರಿಗೆ ದಿನಾಂಕ:02/07/2026 ರಂದು ಸಂಜೆ 5.30 ಗಂಟೆಯೊಳಗೆ ತಲುಪುವ ಹಾಗೆ ಸಲ್ಲಿಸತಕ್ಕದ್ದು. ಮೊಹರು ಮಾಡಿದ ಲಖೋಟಿಗಳನ್ನು ದಿನಾಂಕ:03/07/2026 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.
ಸಹಿ/-
ಕಾರ್ಯನಿರ್ವಾಹಕ ಇಂಜಿನಿಯರರು
ಕೃ.ಭಾ.ಜ.ನಿ.ನಿ., ಆಣೆಕಟ್ಟು ಸುರಕ್ಷತಾ ಘಟಕ-3
ನಾರಾಯಣಪೂರ

ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು. ದೂರವಾಣಿ : 0816 – 2278387,
ಇ-ಮೇಲ್ : dhotumkur@gmail.com
ಸಂಖ್ಯೆ : ಜಿ.ಆ.ತು./ವಾ.ವಿ./01/2026-27 ದಿನಾಂಕ : 24-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ತುಮಕೂರು ಜಿಲ್ಲೆಯಲ್ಲಿನ ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳ ದೈನಂದಿನ ಕಾರ್ಯಗಳನ್ನು ನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇರೆಗೆ ಬಾಡಿಗೆ ವಾಹನವನ್ನು (ಚಾಲಕರ ಸಮೇತ) ಪಡೆಯುವ ಸಂಬಂಧ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಟೆಂಡರ್‌ದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು **https://kppp.karnataka.gov.in** ವೆಬ್‌ಸೈಟ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ದಸ್ತಾವೇಜುಗಳನ್ನು ಪಡೆಯುವ ವಿಧಾನ.
1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಿಕೊಳ್ಳಬೇಕಾದ ದಿನಾಂಕ : 24-06-2026 ರಿಂದ, 2) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭರ್ತಿ ಮಾಡಲಾದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಬೇಕಾದ ಕೊನೆಯ ದಿನಾಂಕ : 08-07-2026, 3) ಟೆಂಡರ್ ಅಂದಾಜು ಮೊತ್ತ : ರೂ. 72.00 ಲಕ್ಷಗಳು.
ಸಹಿ/-ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.
ಡಿಐಪಿಆರ್/ತುಮಕೂರು/46/ಮಣಿಪಾಲ್/2026-27

ಹಾಸನ ವಿಶ್ವವಿದ್ಯಾನಿಲಯ
(ಸ್ಥಾಪನೆ-2023)
ಹೇಮಗಂಗೋತ್ರಿ, ಕೆಂಚಟಹಳ್ಳಿ, ಹಾಸನ-573226
ವಿಶ್ವವಿದ್ಯಾಲಯ ಕಾರ್ಯಾಲಯ https://hassanuniversity.ac.in./Home.aspx.
ದೂರವಾಣಿ ಸಂಖ್ಯೆ:08172-220014 ಇ-ಮೇಲ್:reg.hassan.uni@gmail.com
ನಂ.ಇಎಸ್‌ಟಿ-02(ಅ ಉ)/2026-2027 ದಿನಾಂಕ: 25-06-2026

ಪ್ರಕಟಣೆ
ವಿಷಯ: ಹಾಸನ ವಿಶ್ವವಿದ್ಯಾಲಯದ ಹೇಮಗಂಗೋತ್ರಿ ಕ್ಯಾಂಪಸ್ ಹಾಗೂ ಘಟಕ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರ ತಾತ್ಕಾಲಿಕ ಹುದ್ದೆಗೆ ಅರ್ಜಿ ಆಹ್ವಾನಿಸುವ ಬಗ್ಗೆ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಸನ ವಿಶ್ವವಿದ್ಯಾಲಯ ಹೇಮಗಂಗೋತ್ರಿ ಕ್ಯಾಂಪಸ್ ಹಾಗೂ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಎರಡು ಸ್ನಾತಕ ಪದವಿ ಘಟಕ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಹೇಮಗಂಗೋತ್ರಿ ಕ್ಯಾಂಪಸ್ ಹಾಗೂ ಘಟಕ ಕಾಲೇಜುಗಳಲ್ಲಿನ ಈ ಕೆಳಕಂಡ ಕೋಷ್ಠಕದಲ್ಲಿನ ವಿಷಯಗಳನ್ನು ಬೋಧಿಸಲು ಅರ್ಹ ಅಭ್ಯರ್ಥಿಗಳಿಂದ ಅತಿಥಿ ಉಪನ್ಯಾಸಕರ ಹುದ್ದೆಗೆ 2026-27ನೇ ಶೈಕ್ಷಣಿಕ ಸಾಲಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ವಿಶೇಷ ಸೂಚನೆ: ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅರ್ಹ ಅತಿಥಿ ಉಪನ್ಯಾಸಕರು ಪುನಃ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. **ಕಾಲೇಜಿನ ಹೆಸರು:** ಹಾಸನ ವಿಶ್ವವಿದ್ಯಾಲಯದ ಹೇಮಗಂಗೋತ್ರಿ ಕ್ಯಾಂಪಸ್ **ವಿಷಯ:**ಕನ್ನಡ, ಇಂಗ್ಲೀಷ್, ಇತಿಹಾಸ, ಅರ್ಥಶಾಸ್ತ್ರ, ವಿದ್ಯುನ್ಮಾನ, ವಾಣಿಜ್ಯಶಾಸ್ತ್ರ, ಸಮಾಜ ಕಾರ್ಯ, ರಸಾಯನಶಾಸ್ತ್ರ, ಗಣಕವಿಜ್ಞಾನ, ಗಣಿತಶಾಸ್ತ್ರ, ಸಸ್ಯಶಾಸ್ತ್ರ. **ಕಾಲೇಜಿನ ಹೆಸರು:** ಹಳ್ಳಿಮೈಸೂರು ಘಟಕ ಕಾಲೇಜು **ವಿಷಯ:**ಕನ್ನಡ, ಇಂಗ್ಲೀಷ್, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಭೂಗೋಳಶಾಸ್ತ್ರ, ವಾಣಿಜ್ಯಶಾಸ್ತ್ರ, ದೈಹಿಕ ಶಿಕ್ಷಣ. **ಕಾಲೇಜಿನ ಹೆಸರು:** ಹೆತ್ತೂರು ಘಟಕ ಕಾಲೇಜು **ವಿಷಯ:**ಕನ್ನಡ, ಇಂಗ್ಲೀಷ್, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ. ದೈಹಿಕ ಶಿಕ್ಷಣ. ವಿಶ್ವವಿದ್ಯಾಲಯದ ಅಂತರ್ಜಾಲ ತಾಣದಲ್ಲಿ https://hassanuniversity.ac.in/ ನಲ್ಲಿ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿ ಅಥವಾ ಕಛೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 25-06-2026 ರಿಂದ ದಿನಾಂಕ: 01-07-2026ರ ಸಂಜೆ 5.00ರೊಳಗೆ ನಿರ್ವಾಹಣ ಶುಲ್ಕ ಸಾಮಾನ್ಯ ಅಭ್ಯರ್ಥಿಗಳು 500 ರೂಪಾಯಿಯನ್ನು, ಎಸ್ಸಿ/ಎಸ್ಟಿ/ಪ್ರವರ್ಗ1ರ ಅಭ್ಯರ್ಥಿಗಳು 250 ರೂಪಾಯಿಗಳನ್ನು ಚಲನ್ ಮೂಲಕ ಅಥವಾ ಡಿಡಿಯನ್ನು ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ತೆಗೆದು ಕುಲಸಚಿವರು, ಹಾಸನ ವಿಶ್ವವಿದ್ಯಾಲಯ, ಹಾಸನ ಇವರಿಗೆ ಅಥವ ವಿಶ್ವವಿದ್ಯಾಲಯದ ಇ-ಮೇಲ್ ವಿಳಾಸ reg.hassan.uni@gmail.com ವಿಳಾಸಕ್ಕೆ ಸಲ್ಲಿಸಲು ತಿಳಿಸಲಾಗಿದೆ. ಸಂದರ್ಶನ ದಿನದಂದು ಅರ್ಜಿಯ ಎರಡು (02) ಪ್ರತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು.
ಸಹಿ/-ಬಿ.ಎ.ಜಗದೀಶ, ಕೆ.ಎ.ಎಸ್.
ಕುಲಸಚಿವರು, ಹಾ.ವಿ.ಹಾಸನ
ವಾಸಾಸಂಇ/ಹಿಸನಿ/ಹಾಸನ/276/ಕೆಎಸ್‌ಎಂಸಿಎ/2026-27

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,021
ಇಂದಿನ ಅಂತ್ಯ:	24,056
ದಿನದ ಗರಿಷ್ಠ:	24,261
	34

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹705
12 ಕ್ಕೆ	₹94
ಮೈಸೂರು: 100 ಕ್ಕೆ	₹720

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹267
ಆರ್‌ಎಸ್‌ಎಸ್-5	₹261
ಗುಡ್ ಲಾಟ್	₹228

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹375-715
ದ್ವಿತಳಿ (ಬಿ.ವಿ)	₹470-835

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1455 (1460)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1460 (1460)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23500
ಎಸಿ	₹14000
ಆರ್‌ಪಿ	₹18600
ಆರ್‌ಸಿ	₹10250

ಪ್ರತಿ ಕುಟುಂಬಕ್ಕೆ 35 ಕೆ.ಜಿ ಬದಲು, ಪ್ರತಿ ವ್ಯಕ್ತಿಗೆ 7 ಕೆ.ಜಿ ಆಹಾರಧಾನ್ಯ

ನವದೆಹಲಿ (ಪಿಟಿಐ): ಅಂತ್ಯೋದಯ ಅನ್ನ ಯೋಜನೆಯಡಿ (ಎಎವೈ) ಪ್ರತಿ ಕುಟುಂಬಕ್ಕೆ, ಪ್ರತಿ ತಿಂಗಳಿಗೆ ನೀಡಲಾಗುತ್ತಿದ್ದ ಆಹಾರ ಧಾನ್ಯದ ಪ್ರಮಾಣವನ್ನು, ಒಂದು ಕುಟುಂಬಕ್ಕೆ 35 ಕೆ.ಜಿ ಬದಲು, ಪ್ರತಿ ವ್ಯಕ್ತಿಗೆ 7 ಕೆ.ಜಿಯಂತೆ ನಿಗದಿಪಡಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ-2013ಕ್ಕೆ ತಿದ್ದುಪಡಿ ತರಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಪ್ರಸ್ತಾವ ಸಲ್ಲಿಸಿದ್ದು, ಆಹಾರ ಸಚಿವಾಲಯವು ಜುಲೈ 13ರವರೆಗೆ ಆಹಾರ ಭದ್ರತಾ (ತಿದ್ದುಪಡಿ) ಮಸೂದೆ-2026ಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರ ಅಭಿಪ್ರಾಯಗಳನ್ನು ಆಹ್ವಾನಿಸಿದೆ.

ಸದ್ಯ ಜಾರಿಯಲ್ಲಿರುವ ಕಾನೂನಿನಂತೆ ಎಎವೈ ಕುಟುಂಬಗಳಿಗೆ, ಕುಟುಂಬದ ಗಾತ್ರವನ್ನು (ಸದಸ್ಯರ ಸಂಖ್ಯೆ) ಪರಿಗಣಿಸದೆ ಪ್ರತಿ ತಿಂಗಳು 35 ಕೆ.ಜಿಯಷ್ಟು ಆಹಾರ ಧಾನ್ಯ ವಿತರಿಸಲಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಆದ್ಯತೆಯ ಕುಟುಂಬಗಳ ಪ್ರತಿ ವ್ಯಕ್ತಿಗೆ ತಿಂಗಳಿಗೆ 5 ಕೆ.ಜಿ ಆಹಾರ ಧಾನ್ಯ ಲಭಿಸುತ್ತಿದೆ.

ಪ್ರಸ್ತಾವಿತ ಯೋಜನೆಯಡಿ, ಇಬ್ಬರು ಸದಸ್ಯರಿರುವ ಎಎವೈ ಕುಟುಂಬಕ್ಕೆ ತಲಾ 7 ಕೆ.ಜಿಯಂತೆ ತಿಂಗಳಿಗೆ ಒಟ್ಟು 14 ಕೆ.ಜಿ ಆಹಾರ ಧಾನ್ಯ ಲಭಿಸಲಿದೆ. ಇದೇ ವೇಳೆ, ಕುಟುಂಬದಲ್ಲಿ ಐದು ಅಥವಾ ಅದಕ್ಕಿಂತ ಹೆಚ್ಚಿನ ಸದಸ್ಯರಿದ್ದರೆ ಅವರು ಸದ್ಯ ಅಸ್ತಿತ್ವದಲ್ಲಿರುವ 35 ಕೆ.ಜಿ ಆಹಾರ ಧಾನ್ಯ ಪಡೆಯಲು ಅರ್ಹರಾಗಿರುತ್ತಾರೆ. ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಆಹಾರಧಾನ್ಯ ಹಂಚಿಕೆ ಆಗುವುದರಿಂದ ಇನ್ನಷ್ಟು ಬಡ ಕುಟುಂಬಗಳಿಗೆ ಅನುಕೂಲ ಆಗಲಿದೆ ಎಂದು ಸರ್ಕಾರ ಅಂದಾಜಿಸಿದೆ.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	21600-40010
ಕೋಕ	10509-32871
ಹಳೆಚಾಲಿ	46098-46498
ಹೊಸಚಾಲಿ	33671-46119
ಸಿಪ್ಪೆಗೋಟು	8009-21799

ಪುತ್ತೂರು	
ಕೋಕ	20000-33000
ಹೊಸತು	30000-47000

ಸಾಗರ	
ಬಿಳಿಗೋಟು	11219-34599
ಚಾಲಿ	17109-41319
ಕೋಕ	14219-34899
ಕೆಂಪುಗೋಟು	13109-39499
ರಾಶಿ	28109-60899

ಶಿವಮೊಗ್ಗ	
ಸರಕು	51779-98999
ಬೆಟ್ಟೆ	50909-60729
ರಾಶಿ	40099-52599
ಗೊರಬಲು	19100-42199

ಸಿದ್ದಾಪುರ	
ಬಿಳಿಗೋಟು	26099-35089
ಚಾಲಿ	37099-46800
ಕೋಕ	22299-34509
ಕೆಂಪುಗೋಟು	30089-35600
ರಾಶಿ	44299-50009
ತಟ್ಟಿಬೆಟ್ಟೆ	36600-45889

ಶಿರಸಿ	
ಬೆಟ್ಟೆ	40099-47200
ಬಿಳಿಗೋಟು	27309-34523
ಚಾಲಿ	44199-48215
ಕೆಂಪುಗೋಟು	28699-33699
ರಾಶಿ	48909-52099

ಯಲ್ಲಾಪುರ	
ಆಪಿ	55299-55299
ಬಿಳಿಗೋಟು	21600-34109
ಚಾಲಿ	36009-47711
ಕೋಕ	16012-27699
ಕೆಂಪುಗೋಟು	20600-35199
ರಾಶಿ	48699-53735
ತಟ್ಟಿಬೆಟ್ಟೆ	36719-46099

₹1.22 ಲಕ್ಷ ಕೋಟಿ ಹೂಡಿಕೆ

ಎ.ಐ, ಕ್ಲೌಡ್ ಮೂಲಸೌಕರ್ಯ ಅಭಿವೃದ್ಧಿಗೆ ಅಮೆಜಾನ್‌ನಿಂದ ಹೆಚ್ಚುವರಿ ಬಂಡವಾಳ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು

- 2026ರಿಂದ 2030ರ ಅವಧಿಯಲ್ಲಿ ₹4.5 ಲಕ್ಷ ಕೋಟಿ ಹೂಡಿಕೆ
- ಈ ವರ್ಷದಲ್ಲಿ 20ಕ್ಕೂ ಹೆಚ್ಚು ಸರಕು ದಾಸ್ತಾನು ಕೇಂದ್ರಗಳ ಆರಂಭ
- ಡೆಲಿವರಿ ಪಾಲುದಾರರ ನೆರವಿಗಾಗಿ 'ಅಮೆಜಾನ್ ಸಮ್ಮಾನ್' ಕಾರ್ಯಕ್ರಮ

ನವದೆಹಲಿ / ಬೆಂಗಳೂರು: ದೇಶದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಮತ್ತು ಕ್ಲೌಡ್ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು 2026ರಿಂದ 2030ರ ಅವಧಿಯಲ್ಲಿ ಹೆಚ್ಚುವರಿಯಾಗಿ ₹1.22 ಲಕ್ಷ ಕೋಟಿ (13 ಬಿಲಿಯನ್ ಡಾಲರ್) ಹೂಡಿಕೆ ಮಾಡುವುದಾಗಿ ಇ-ಕಾಮರ್ಸ್ ವಲಯದ ದೈತ್ಯ ಕಂಪನಿ ಅಮೆಜಾನ್ ಘೋಷಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಬಳಿಕ ಅಮೆಜಾನ್ ಕಂಪನಿಯ ಸಿಇಒ ಆ್ಯಂಡಿ ಜಸ್ಸಿ ಅವರು ಈ ಘೋಷಣೆ ಮಾಡಿದ್ದಾರೆ.

ಕಳೆದ ವರ್ಷದ ಅಂತ್ಯದಲ್ಲಿ ₹3.30 ಲಕ್ಷ ಕೋಟಿ (35 ಬಿಲಿಯನ್ ಡಾಲರ್) ಹೂಡಿಕೆ ಮಾಡುವುದಾಗಿ ಕಂಪನಿ ತಿಳಿಸಿತ್ತು. ಇದೀಗ ಮತ್ತೆ ₹1.22 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಘೋಷಿಸಿದ್ದು, ಒಟ್ಟು ಘೋಷಣೆ ₹4.5 ಲಕ್ಷ ಕೋಟಿ ದಾಟಿದೆ. 2010ರಿಂದ 2030ರ ಅವಧಿಯಲ್ಲಿನ ಕಂಪನಿ ಘೋಷಿಸಿದ ಒಟ್ಟು ಹೂಡಿಕೆಯು ₹8.30 ಲಕ್ಷ ಕೋಟಿಗೂ (88 ಬಿಲಿಯನ್ ಡಾಲರ್) ಹೆಚ್ಚು ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಹೂಡಿಕೆಯು ಅಮೆಜಾನ್ ಅನ್ನು ಭಾರತದಲ್ಲಿನ ಅತಿದೊಡ್ಡ ಜಾಗತಿಕ ಎ.ಐ ಮತ್ತು ಕ್ಲೌಡ್ ಮೂಲಸೌಕರ್ಯ ಹೂಡಿಕೆದಾರರಲ್ಲಿ ಒಂದನ್ನಾಗಿ ಮಾಡಲಿದೆ. ಮುಂಬೈ ಮತ್ತು ಹೈದರಾಬಾದ್‌ನಲ್ಲಿನ ಎಡಬ್ಲ್ಯುಎಸ್ ದತ್ತಾಂಶ ಕೇಂದ್ರದ ಸಾಮರ್ಥ್ಯವನ್ನು ವಿಸ್ತರಿಸಲಿದ್ದು, ನವೋದ್ಯಮಗಳು, ಉದ್ಯಮಗಳು ಮತ್ತು ಸರ್ಕಾರಿ ಸಂಸ್ಥೆಗಳಿಗೆ ಸುರಕ್ಷಿತ, ವಿಶ್ವಾಸಾರ್ಹ ಕ್ಲೌಡ್ ತಂತ್ರಜ್ಞಾನ, ಎ.ಐ ಸೇವೆಗಳನ್ನು ಒದಗಿಸಲಾಗುವುದು ಎಂದು ತಿಳಿಸಿದೆ.

2030ರ ವೇಳೆಗೆ 38 ಲಕ್ಷಕ್ಕೂ ಅಧಿಕ ಉದ್ಯೋಗ ಸೃಷ್ಟಿ, ₹7.55 ಲಕ್ಷ ಕೋಟಿ ಮೌಲ್ಯದ ಇ-ಕಾಮರ್ಸ್ ರಫ್ತುಗಳನ್ನು ಇದು ಸಾಧ್ಯವಾಗಿಸುತ್ತದೆ. 1.5 ಕೋಟಿ ಸಣ್ಣ ಉದ್ಯಮಗಳಿಗೆ ಮತ್ತು 40 ಲಕ್ಷ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಪ್ರಯೋಜನ ದೊರೆಯುವಂತೆ ಮಾಡಲಾಗುವುದು ಎಂದು ತಿಳಿಸಿದೆ.

'ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಲಭ್ಯತೆಯನ್ನು ಎಲ್ಲರಿಗೂ ಸಿಗುವಂತೆ ಮಾಡುವುದು, ಸಣ್ಣ ಉದ್ಯಮಗಳನ್ನು ಡಿಜಿಟಲೀಕರಣ ಮಾಡುವುದು, ಉದ್ಯೋಗಗಳನ್ನು ಸೃಷ್ಟಿಸುವುದು ಮತ್ತು ರಫ್ತುಗಳನ್ನು ಉತ್ತೇಜಿಸುವುದು ನಮ್ಮ ಆದ್ಯತೆಯಾಗಿದೆ' ಎಂದು ಕಂಪನಿಯ ಸಿಇಒ ಆ್ಯಂಡಿ ಜಸ್ಸಿ ಹೇಳಿದ್ದಾರೆ.

ಅಮೆಜಾನ್ ಕಂಪನಿಯ ಸಿಇಒ ಆ್ಯಂಡಿ ಜಸ್ಸಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರುವಾರ ಭೇಟಿ ಮಾಡಿದರು

> ದೇಶದಲ್ಲಿ ಅಮೆಜಾನ್ ದಾಖಲೆಯ ₹4.5 ಲಕ್ಷ ಕೋಟಿ ಹೂಡಿಕೆ ಮಾಡುತ್ತಿದೆ. ಇದು ನಮ್ಮ ಯುವಜನರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ. ಭಾರತದಲ್ಲಿ ಹೂಡಿಕೆ ಮಾಡಲು ಜಾಗತಿಕವಾಗಿ ಹೆಚ್ಚುತ್ತಿರುವ ಆಸಕ್ತಿಯನ್ನು ಇದು ತೋರಿಸುತ್ತಿದೆ
>
> **ನರೇಂದ್ರ ಮೋದಿ,** ಪ್ರಧಾನಮಂತ್ರಿ

ಸುದ್ದಿ 2 ನಿಮಿಷ

ಮನೆ ಮಾರಾಟ ಶೇ 19ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಆರ್ಥಿಕ ಅನಿಶ್ಚಿತತೆಯ ನಡುವೆಯೂ ದೇಶದ ಪ್ರಮುಖ 9 ನಗರಗಳಲ್ಲಿ ಜೂನ್ ತ್ರೈಮಾಸಿಕದ ಇದುವರೆಗೆ ಮನೆ ಮಾರಾಟದಲ್ಲಿ ಶೇ 19ರಷ್ಟು ಹೆಚ್ಚಳವಾಗಿದ್ದು, 1.12 ಲಕ್ಷ ಮನೆಗಳು ಮಾರಾಟವಾಗಿವೆ ಎಂದು ರಿಯಲ್ ಎಸ್ಟೇಟ್ ದತ್ತಾಂಶ ವಿಶ್ಲೇಷಣಾ ಕಂಪನಿ ಪ್ರಾಪ್‌ಈಕ್ವಿಟಿ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಈ ನಗರಗಳಲ್ಲಿ 94,864 ಮನೆಗಳು ಮಾರಾಟವಾಗಿದ್ದವು. ಹೊಸ ಮನೆಗಳ ಪೂರೈಕೆಯು ಶೇ 43ರಷ್ಟು ಏರಿಕೆಯಾಗಿದ್ದು, 1.17 ಲಕ್ಷವಾಗಿದೆ.

ಬೆಂಗಳೂರಿನಲ್ಲಿ ಹೆಚ್ಚು ಮಾರಾಟ: ಕಳೆದ ವರ್ಷದ ಏಪ್ರಿಲ್-ಜೂನ್ ಅವಧಿಯಲ್ಲಿ ಬೆಂಗಳೂರಿನಲ್ಲಿ 14,676 ಮನೆಗಳು ಮಾರಾಟವಾಗಿದ್ದವು. ಅದು ಈ ಬಾರಿ 21,516ಕ್ಕೆ ಹೆಚ್ಚಳವಾಗಿದೆ. ಹೈದರಾಬಾದ್ (14,410), ಮುಂಬೈ (10,561), ನವಿ ಮುಂಬೈ (11,029), ಠಾಣೆ (16,386) ಮತ್ತು ಪುಣೆಯಲ್ಲಿ 18,737 ಮನೆಗಳು ಮಾರಾಟವಾಗಿವೆ.

ಚೆನ್ನೈ (5,354), ದೆಹಲಿ-ಎನ್‌ಸಿಆರ್ (10,082) ಮತ್ತು ಕೋಲ್ಕತ್ತದಲ್ಲಿ 3,414 ಮನೆಗಳ ಮಾರಾಟವಾಗಿದ್ದು, ಇಳಿಕೆ ಆಗಿದೆ ಎಂದು ತಿಳಿಸಿದೆ.



'ಮೂಲಸೌಕರ್ಯ ವಿಸ್ತರಣೆ ಮತ್ತು ಉದ್ಯೋಗ ಸೃಷ್ಟಿ ಹೆಚ್ಚಳದಿಂದ ಬೆಂಗಳೂರಿನಲ್ಲಿ ಮನೆಗಳ ಮಾರಾಟದಲ್ಲಿ ಹೆಚ್ಚಳವಾಗಿದೆ' ಎಂದು ಪ್ರಾಪರ್ಟಿ ಫರ್ಸ್ಟ್ ರಿಯಾಲ್ಟಿ ಸಂಸ್ಥೆಯ ಸಂಸ್ಥಾಪಕ ಮತ್ತು ಸಿಇಒ ಭವೇಶ್ ಕೊಠಾರಿ ಹೇಳಿದ್ದಾರೆ.

ಹೊಸ ಮಾರ್ಗದಲ್ಲಿ ಸಾಗಿದ ತೈಲ ಟ್ಯಾಂಕರ್‌ಗಳು

ದುಬೈ (ಎಪಿ): ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಸಮುದ್ರಯಾನ ಸಂಘಟನೆಯು (ಐಎಂಒ) ಸೂಚಿಸಿರುವ ಹೊಸ ಮಾರ್ಗವನ್ನು ಬಳಸಿಕೊಂಡು ಹಲವಾರು ತೈಲ ಟ್ಯಾಂಕರ್‌ಗಳು ಹೊರ್ಮುಜ್ ಜಲಸಂಧಿಯಿಂದ ಗುರುವಾರ ಹೊರಬಂದಿವೆ.

ಇದರ ಬೆನ್ನಲ್ಲೇ, ಒಮಾನ್ ಕರಾವಳಿಯಲ್ಲಿ ಸಾಗುವ ಈ ಮಾರ್ಗವನ್ನು ಬಳಸುವ ಹಡಗುಗಳ ಮೇಲೆ ದಾಳಿ ನಡೆಸುವುದಾಗಿ ಇರಾನ್ ಬೆದರಿಕೆ ಹಾಕಿದೆ.

ಈ ಜಲಸಂಧಿಯಲ್ಲಿ ಹಡಗುಗಳ ಸಂಚಾರ ದಟ್ಟಣೆ ಹೆಚ್ಚಾಗಿದೆ. ಆದರೆ, ಯುದ್ಧಪೂರ್ವಕ್ಕಿಂತ ಕಡಿಮೆ ಇದೆ. ಕಳೆದ ವಾರ 125 ಹಡಗುಗಳು ಜಲಸಂಧಿಯನ್ನು ದಾಟಿದ್ದವು. ಬುಧವಾರ 78 ಹಡಗುಗಳು ಸಾಗಿವೆ. ಈ ಪೈಕಿ 10 ಕಚ್ಚಾ ತೈಲ ಟ್ಯಾಂಕರ್‌ಗಳು ಸೇರಿವೆ.

ಈ ಜಲಮಾರ್ಗದ ಮೂಲಕ ಪರ್ಯಾಯ ಮಾರ್ಗವನ್ನು ತೆರೆಯುವುದರಿಂದ ಜಾಗತಿಕ ಆರ್ಥಿಕತೆಯ ಮೇಲಿನ ಒತ್ತಡ ಕಡಿಮೆಯಾಗಲಿದೆ.

ಅಮೆರಿಕದ ಮಿತ್ರರಾಷ್ಟ್ರಗಳಿಗೆ ಧೈರ್ಯ ತುಂಬಲು ಕೊಲ್ಲಿಗೆ ಭೇಟಿ ನೀಡಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, 'ಈ ಹೊಸ ಮಾರ್ಗಕ್ಕೆ ಅಮೆರಿಕ ಬದ್ಧವಾಗಿದೆ' ಎಂದು ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿನ ಸಂಘರ್ಷ ತಗ್ಗಿದ್ದರಿಂದ ಬೆಲೆ ಇಳಿಕೆ

ಕಚ್ಚಾ ತೈಲ ದರ: 4 ತಿಂಗಳ ಕನಿಷ್ಠಕ್ಕೆ

ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿದೆ.

ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾಗುವ ಮುನ್ನಾ ದಿನವಾದ ಫೆಬ್ರುವರಿ 27ರಂದು ಪ್ರತಿ ಬ್ಯಾರಲ್ ಬ್ರೆಂಟ್ ಕಚ್ಚಾ ತೈಲ ದರವು 71.17 ಡಾಲರ್ ಆಗಿತ್ತು. ಜೂನ್ 24ರಂದು ಇದು 70.71 ಡಾಲರ್‌ಗೆ ಇಳಿದಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕ (ಪಿಪಿಎಸಿ) ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿದ್ದ ಸಂಘರ್ಷ ಕಡಿಮೆ ಆಗುತ್ತಿರುವುದರಿಂದ ಅಂತರರಾಷ್ಟ್ರೀಯ ಮಾನದಂಡವಾದ ಬ್ರೆಂಟ್ ಕಚ್ಚಾ ತೈಲ ದರವು ಬ್ಯಾರಲ್‌ಗೆ 72-73 ಡಾಲರ್‌ಗೆ ಇಳಿದಿದೆ. ಅಮೆರಿಕದ ಕಚ್ಚಾ ತೈಲ ದರ 70 ಡಾಲರ್‌ಗಿಂತ ಕಡಿಮೆಯಾಗಿದೆ. ಸಂಘರ್ಷದ ವೇಳೆ ಬ್ಯಾರಲ್ ದರ 120 ಡಾಲರ್‌ಗೆ ತಲುಪಿತ್ತು. ಈ ಎರಡೂ ಮಾನದಂಡಗಳು ಫೆಬ್ರುವರಿ ಅಂತ್ಯದ ಮಟ್ಟಕ್ಕೆ ಮರಳಿವೆ.

ಜೂನ್ ತಿಂಗಳ ಇದುವರೆಗೆ ಬ್ರೆಂಟ್ ಕಚ್ಚಾ ತೈಲ ದರವು ಶೇ 20ರಷ್ಟು ಇಳಿಕೆ ಆಗಿದ್ದರೆ, ಸಂಘರ್ಷದ ಮೊದಲಿಗೆ ಹೋಲಿಸಿದರೆ ಶೇ 30ಕ್ಕೂ ಹೆಚ್ಚು ಇಳಿದಿದೆ.

ಕಚ್ಚಾ ತೈಲ ದರ ಇಳಿಕೆಯ ನಡುವೆಯೂ ರಿಟೇಲ್ ಮಾರುಕಟ್ಟೆಯಲ್ಲಿ ಇಂಧನ ದರದಲ್ಲಿ ಯಾವುದೇ ಬದಲಾಗಿಲ್ಲ. ಇತ್ತೀಚೆಗೆ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರುಕಟ್ಟೆ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ ₹7.5 ಹೆಚ್ಚಿಸಿದ್ದವು.

ಜಾಗತಿಕ ಮಾರುಕಟ್ಟೆಯಲ್ಲಿ ದಿನನಿತ್ಯದ ಏರಿಳಿತದ ಆಧಾರದ ಮೇಲೆ ಕಚ್ಚಾ ತೈಲದ ಬೆಲೆಯನ್ನು ಸರಿಹೊಂದಿಸಲಾಗುವುದಿಲ್ಲ. ಪಾಕ್ಷಿಕ ಅಥವಾ ಮಾಸಿಕ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ನಿರಂತರವಾಗಿ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರದಲ್ಲಿ ಇಳಿಕೆಯಾದರೆ, ಆಗ ಬೆಲೆ ಇಳಿಕೆ ಪ್ರಯೋಜನ ದೊರೆಯಲಿದ್ದು, ಇದಕ್ಕೆ ಸಮಯ ಹಿಡಿಯಲಿದೆ ಎಂದು ಉದ್ಯಮದ ಅಧಿಕಾರಿಗಳು ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲವು ಈಗ ಸಂಘರ್ಷ ಪೂರ್ವದ ಮಟ್ಟಕ್ಕೆ ಮರಳಿರುವುದರಿಂದ, ಇಂಧನ ಮಾರಾಟಗಾರರು ತೈಲ ಬೆಲೆ ಕಡಿಮೆ ಮಾಡ ಬಹುದು. ಕಚ್ಚಾ ತೈಲ ಬೆಲೆಯಲ್ಲಿನ ಇಳಿಕೆಯು ಇಂಧನ, ಸಾರಿಗೆ ಮತ್ತು ತಯಾರಿಕಾ ವೆಚ್ಚಗಳನ್ನು ಕಡಿಮೆ ಮಾಡುವ ಮೂಲಕ ಚಿಲ್ಲರೆ ಹಣದುಬ್ಬರದ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ. ಆಮದು ವೆಚ್ಚವನ್ನೂ ಸಹ ತಗ್ಗಿಸಲಿದೆ ಎಂದು ಹೇಳಿದ್ದಾರೆ.

ಸಹಜ ಸ್ಥಿತಿಗೆ ಮರಳಿದ ವಾಣಿಜ್ಯ ಸಿಲಿಂಡರ್ ಪೂರೈಕೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ತಗ್ಗಿದ ಬೆನ್ನಲ್ಲೇ ಅನಿಲ ಪೂರೈಕೆಗೆ ಕೇಂದ್ರ ಸರ್ಕಾರ ಕ್ರಮವಹಿಸಿದ್ದು, ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಸಹಜ ಸ್ಥಿತಿಗೆ ಮರಳಿದೆ.

ಹೋಟೆಲ್, ರೆಸ್ಟೋರೆಂಟ್ ಮತ್ತು ಇತರೆ ವಹಿವಾಟು ನಡೆಸುವವರಿಗೆ ಸಿಲಿಂಡರ್ ಪೂರೈಕೆಯು ಸಂಘರ್ಷ ಆರಂಭಕ್ಕೂ ಮೊದಲಿನ ಸ್ಥಿತಿಗೆ ಮರಳಲಿದೆ. ಸಂಘರ್ಷದ ವೇಳೆ ಹೇರಿದ್ದ ನಿರ್ಬಂಧಗಳನ್ನು ಸರ್ಕಾರ ಗುರುವಾರ ತೆಗೆದುಹಾಕಿದೆ.

ದೇಶದಲ್ಲಿ ಹೆಚ್ಚಿದ ಎಲ್‌ಪಿಜಿ ಉತ್ಪಾದನೆ ಮತ್ತು ಆಮದು ಹೆಚ್ಚಳದ ನಿರೀಕ್ಷೆಯಿಂದ ಈ ನಿರ್ಬಂಧಗಳನ್ನು ತೆಗೆದುಹಾಕಲಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯ ತಿಳಿಸಿದೆ.

ಸಂಘರ್ಷದ ವೇಳೆ ಎಲ್‌ಪಿಜಿ ಸರಬರಾಜಿನಲ್ಲಿ ಅಡ್ಡಿ ಉಂಟಾಗಿದ್ದರಿಂದ ಗೃಹಬಳಕೆಯ ಅಡುಗೆ ಅನಿಲ ಪೂರೈಕೆಗೆ ಆದ್ಯತೆ ನೀಡಲು, ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಮೇಲೆ ನಿರ್ಬಂಧ ಹೇರಲಾಗಿತ್ತು. ಬಳಿಕ ಹಂತ-ಹಂತವಾಗಿ ಪೂರೈಕೆಯನ್ನು ಹೆಚ್ಚಿಸಲಾಯಿತು.

ಯುದ್ಧದ ವಿರುದ್ಧ ಮತ: ಪಕ್ಷದ ಸದಸ್ಯರೊಂದಿಗೆ ಟ್ರಂಪ್ ವಾಗ್ವಾದ

ವಾಷಿಂಗ್ಟನ್ (ಪಿಟಿಐ): ಇರಾನ್ ಜೊತೆಗಿನ ಯುದ್ಧವನ್ನು ತಡೆಯುವ ನಿರ್ಣಯದ ಪರ ಮತ ಚಲಾಯಿಸಿದ ರಿಪಬ್ಲಿಕನ್ ಪಕ್ಷದ ಸೆನೆಟ್ ಸದಸ್ಯರೊಂದಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಾಗ್ವಾದ ನಡೆಸಿದ್ದಾರೆ.

ಡೊನಾಲ್ಡ್ ಟ್ರಂಪ್

ಫ್ಲಾರಿಡಾ ಸೆನೆಟರ್ ರಿಕ್ ಸ್ಕಾಟ್ ಅವರು ವಾಷಿಂಗ್ಟನ್‌ನಲ್ಲಿ ಆಯೋಜಿಸಿದ್ದ ಭೋಜನಕೂಟದಲ್ಲಿ ಟ್ರಂಪ್ ಭಾಗಿಯಾಗಿದ್ದರು.

ಯುದ್ಧವನ್ನು ನಿಲ್ಲಿಸುವ ನಿರ್ಧಾರದ ಪರ ಮತ ಚಲಾಯಿಸಿದ ಸೆನೆಟರ್‌ಗಳಾದ ಲಿಸಾ ಮುರ್ಕೊವಸ್ಕಿ , ಸುಸಾನ್ ಕೊಲಿನ್ಸ್, ರ್‍ಯಾಂಡ್ ಪೌಲ್ ಹಾಗೂ ಬಿಲ್ ಕ್ಯಾಸಿಡಿ ಅವರನ್ನು 'ಲೂಸರ್ಸ್' (ಸೋತವರು) ಎಂದು ಅಣಕಿಸಿ ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಳ್ಳುವ ಮೂಲಕ ಟ್ರಂಪ್ ಕಿಡಿಕಾರಿದ್ದರು.

ತಮ್ಮ ವಿರುದ್ಧ ಮತ ಚಲಾಯಿಸಿದ್ದಕ್ಕಾಗಿ ನಾಲ್ವರೂ ಸೆನೆಟರ್‌ಗಳನ್ನು ಟ್ರಂಪ್ ದೂಷಿಸಿದರು. ಈ ವೇಳೆ ಕ್ಯಾಸಿಡಿ ಎದ್ದು ನಿಂತು ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡರು. ಆಗ ಟ್ರಂಪ್ ಮತ್ತು ಕ್ಯಾಸಿಡಿ ನಡುವೆ ವಾಕ್ಸಮರ ಮುಂದುವರಿಯಿತು. ಕ್ಯಾಸಿಡಿಗೆ ಕುಳಿತುಕೊಳ್ಳುವಂತೆ ಟ್ರಂಪ್ ಪದೇ ಪದೇ ಹೇಳಿದರು. ಕೊನೆಗೆ ಕ್ಯಾಸಿಡಿಯನ್ನು ಅವರು 'ಹುಚ್ಚ' ಎಂದೂ ಕರೆದರು ಎಂದು ಮೂಲಗಳು ತಿಳಿಸಿವೆ.

'ಏನು ನಡೆಯುತ್ತಿದೆ ಎಂಬುದನ್ನು ನೀವು ಅಮೆರಿಕದ ಜನರಿಗೆ ತಿಳಿಸಿಲ್ಲ' ಎಂದು ಟ್ರಂಪ್‌ಗೆ ಪ್ರತ್ಯುತ್ತರ ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕ್ಯಾಸಿಡಿ, 'ಇದು ನಾಲ್ಕು ವಾರಗಳ ಕಾಲ ನಡೆಯಬೇಕಿತ್ತು. ಆದರೆ ನಾಲ್ಕು ತಿಂಗಳು ಮುಂದುವರಿಯಿತು. ಆದರೂ ನಮ್ಮ ಮೂಲ ಉದ್ದೇಶ ಈಡೇರಿಲ್ಲ. ಯುದ್ಧದ ಬಗ್ಗೆ ಸಂಪೂರ್ಣ ಮಾಹಿತಿ ನೀಡುವವರೆಗೂ ನಾನು ಅದರ ವಿರುದ್ಧ ಮತ ಚಲಾಯಿಸುವುದನ್ನು ಮುಂದುವರಿಸುತ್ತೇನೆ. ನಾನು ಹೆದರುವುದಿಲ್ಲ' ಎಂದು ಹೇಳಿದರು.

'ಸಭೆಯಲ್ಲಿರುವ ಎಲ್ಲರೂ ನನಗೆ ಇಷ್ಟ. ಆದರೆ ಕೆಲವರು ನನಗೆ ಇಷ್ಟವಾಗುವುದಿಲ್ಲ ಮತ್ತು ಇದರಲ್ಲಿ ಯಾವುದೇ ತೊಂದರೆಯಿಲ್ಲ' ಎಂದು ಹೇಳುತ್ತ ಸಭೆ ಬಳಿಕ ಟ್ರಂಪ್ ಹೊರನಡೆದರು.

ಚಿನ್ನದ ದರ ₹2,800 ಬೆಳ್ಳಿ ₹5 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಚಿನ್ನ ಮತ್ತು ಬೆಳ್ಳಿಗೆ ಬೇಡಿಕೆ ಕಡಿಮೆ ಆಗಿದ್ದರಿಂದ ಗುರುವಾರದ ವಹಿವಾಟಿನಲ್ಲಿ ಈ ಲೋಹಗಳ ಬೆಲೆಯಲ್ಲಿ ಇಳಿಕೆ ಆಗಿದೆ.

ಶೇ 99.9ರಷ್ಟು ಪರಿಶುದ್ಧತೆಯ 10 ಗ್ರಾಂ ಚಿನ್ನದ ದರವು ₹2,800 ಇಳಿಕೆಯಾಗಿ, ₹1,45,300ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹5 ಸಾವಿರ ಕಡಿಮೆಯಾಗಿ, ₹2.26 ಲಕ್ಷಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

25-06-2026	
ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಪಾಮ್ ವಾರದ ಡೆಲಿವರಿ	1458 (1458)
ಸೂರ್ಯಕಾಂತಿ ಎಣ್ಣೆ ಕಚ್ಚಾ	1575 (1580)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,40,400 (1,41,000)
ಬೆಳ್ಳಿ ಕೆ.ಜಿಗೆ	2,19,000 (2,21,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಹದಿನಾರನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ. ಸತ್ಯವತಿ

ದಿವಂಗತ ಶ್ರೀ ಸಿ. ಟಿ. ರಾಮಚಂದ್ರನ್ ರವರ ಧರ್ಮಪತ್ನಿ

Birth: 19.04.1944 Expired: 26.06.2010

ಸಂಸ್ಥಾಪಕ ಕಾರ್ಯದರ್ಶಿಗಳು

ಎಸ್. ಎಸ್. ಬಿ. ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್ಸ್

ಇಂದಿರಾನಗರ, ಬೆಂಗಳೂರು – 560 038.

ಸದಾ ನಿಮ್ಮನ್ನು ಸ್ಮರಿಸುವ –

ಪ್ರೀತಿಯ ಮಗ, ಮಗಳು ಮತ್ತು ಕುಟುಂಬ ವರ್ಗ ಮ್ಯಾನೇಜ್‌ಮೆಂಟ್ ಕಮಿಟಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು

1ನೇ ವರ್ಷದ ಸವಿನೆನಪು

ನನ್ನ ತಂದೆತಾಯಿಯ ಮಡಿಲಲ್ಲಿ ಬೆಳೆಯುವ ಮೊದಲೇ ನನ್ನನ್ನು ದೇವರ ಮಡಿಲಿಗೆ ಕಳುಹಿಸಿದರು. ದೇವರಲ್ಲೂ ಮತ್ತು ನಿಮ್ಮಲ್ಲಿಯೂ ಸಹ ಮಗುವಾಗಿರುವೆ.

ನಿನ್ನ ನೆನಪು ನಮ್ಮ ಹೃದಯದಲ್ಲಿ ಸದಾ ಸ್ಮರಿಸುವ

ಇಂತಿ ದುಃಖತಪ್ತರು: ಜಿ. ಹನುಮಂತು, ಭಾಗ್ಯಮ್ಮ ಮತ್ತು ಕುಟುಂಬದವರು ಹಾಗೂ ಸ್ನೇಹಿತರು ಹುಸ್ಕೂರು ಗ್ರಾಮ, ಬೆಂಗಳೂರು ಉತ್ತರ ತಾಲ್ಲೂಕು

ನಂದಿನಿ ಹೆಚ್.

'ಬಾಂಗ್ಲಾ: ವೇತನ ವಂಚಿತ ಭಾರತೀಯರಿಗೆ ನೆರವು'

ಸಿಂಗಪುರ (ಪಿಟಿಐ): ತಿಂಗಳುಗಳಿಂದ ಮಾಸಿಕ ವೇತನ ದೊರೆಯದೆ ಸಿಂಗಪುರದಲ್ಲಿ ಕೆಲಸ ಮಾಡುತ್ತಿರುವ ಭಾರತೀಯರೊಂದಿಗೆ ಸಂಪರ್ಕದಲ್ಲಿರುವುದಾಗಿ ಭಾರತೀಯ ಹೈಕಮಿಷನ್ ತಿಳಿಸಿದೆ.

ಎಸ್‌ಕೆ ಇಂಡಸ್ಟ್ರೀಸ್, ಕೆಪಿಎ ಎಂಜಿನಿಯರಿಂಗ್ ಮತ್ತು ವಿವಿಆರ್ ಪ್ಲಾಂಟ್ ಎಂಜಿನಿಯರಿಂಗ್ ಎಂಬ ಸಿಂಗಪುರದ ಮೂರು ಕಂಪನಿಗಳು ಭಾರತ ಮತ್ತು ಬಾಂಗ್ಲಾದೇಶದ 400ಕ್ಕೂ ಹೆಚ್ಚು ಕಾರ್ಮಿಕರಿಗೆ ವೇತನ ಮತ್ತು ವಸತಿ ನೀಡುತ್ತಿಲ್ಲ.

ಭಾರತದ ರಾಮು ಪಳನಿ ವೇಲು ಎಂಬವರು ಈ ಮೂರು ಕಂಪನಿಗಳಿಗೂ ನಿರ್ದೇಶಕರಾಗಿದ್ದಾರೆ ಎಂದು 'ದಿ ಸ್ಟ್ರೈಟ್ಸ್ ಟೈಮ್ಸ್' ದಿನಪತ್ರಿಕೆ ವರದಿ ಮಾಡಿದೆ.

ನ್ಯಾಷನಲ್ ಟ್ರೇಡ್ಸ್ ಯೂನಿಯನ್ ಕಾಂಗ್ರೆಸ್ (ಎನ್‌ಟಿಯುಸಿ) ಮತ್ತು ಮಾನವಶಕ್ತಿ ಸಚಿವಾಲಯ (ಎಂಒಎಂ) ಕಾರ್ಮಿಕರಿಗೆ ನೆರವು ನೀಡುತ್ತಿದೆ.

ತೀಸ್ತಾ ನದಿ ನಿರ್ವಹಣೆ: ಒಪ್ಪಂದ

ಬೀಜಿಂಗ್ (ಪಿಟಿಐ): ತೀಸ್ತಾ ಮತ್ತು ಇತರ ನದಿಗಳ ನಿರ್ವಹಣೆಯಲ್ಲಿ ಸಹಕಾರವನ್ನು ಬಲಪಡಿಸಲು ಬಾಂಗ್ಲಾದೇಶ ಮತ್ತು ಚೀನಾ ಒಪ್ಪಿಕೊಂಡಿವೆ.

ಬೀಜಿಂಗ್ ಪ್ರವಾಸದಲ್ಲಿರುವ ಬಾಂಗ್ಲಾದೇಶದ ಪ್ರಧಾನಿ ತಾರಿಕ್ ರೆಹಮಾನ್ ಅವರು, ಚೀನಾದ ಜಲಸಂಪನ್ಮೂಲ ಸಚಿವ ಲೀ ಕುವೋಯಿಂಗ್ ಅವರನ್ನು ಭೇಟಿ ಮಾಡಿದಾಗ ಈ ಒಪ್ಪಂದಕ್ಕೆ ಬರಲಾಯಿತು ಎಂದು ಬಾಂಗ್ಲಾದ ಸರ್ಕಾರಿ ಮಾಧ್ಯಮ ವರದಿ ಮಾಡಿದೆ.

ಈ ವರ್ಷದ ಆರಂಭದಲ್ಲಿ ಅಧಿಕಾರ ವಹಿಸಿಕೊಂಡಿದ್ದ ರೆಹಮಾನ್ ಅವರು, ಪ್ರಧಾನಿಯಾಗಿ ತಮ್ಮ ಮೊದಲ ವಿದೇಶ ಪ್ರವಾಸವನ್ನು ಮಲೇಷ್ಯಾಕ್ಕೆ ಕೈಗೊಂಡಿದ್ದರು. ಜೂನ್ 22ರಂದು ಮಲೇಷ್ಯಾದ ಕ್ವಾಲಾಲಂಪುರದಿಂದ ಚೀನಾದ ದಾಲಿಅನ್ ನಗರಕ್ಕೆ ತೆರಳಿ, ಅಲ್ಲಿ ಅವರು ವಿಶ್ವ ಆರ್ಥಿಕ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಬುಧವಾರ ದಾಲಿಅನ್‌ನಿಂದ ಹೈಸ್ಪೀಡ್ ರೈಲಿನ ಮೂಲಕ ಬೀಜಿಂಗ್‌ಗೆ ಆಗಮಿಸಿದರು. ಇಲ್ಲಿ ಅವರು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ಪ್ರಧಾನಿ ಲೀ ಕಿಯಾಂಗ್ ಮತ್ತು ಇತರ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸುವ ನಿರೀಕ್ಷೆಯಿದೆ.

ಬಾಂಗ್ಲಾ: ಪ್ರವಾಸಿ ವೀಸಾ ಪುನರಾರಂಭ

ಢಾಕಾ (ಪಿಟಿಐ): ಭಾರತದ ನೂತನ ಹೈಕಮಿಷನರ್ ಆಗಿ ಗುರುವಾರ ಇಲ್ಲಿ ಅಧಿಕಾರ ಸ್ವೀಕರಿಸಿದ ದಿನೇಶ್ ತ್ರಿವೇದಿ ಅವರು ಬಾಂಗ್ಲಾದೇಶದ ನಾಗರಿಕರಿಗೆ ಪ್ರವಾಸಿ ವೀಸಾ ವಿತರಿಸುವುದನ್ನು ಪುನರಾರಂಭ ಮಾಡಲಾಗುವುದು ಎಂದು ಘೋಷಿಸಿದ್ದಾರೆ.

ಏಪ್ರಿಲ್‌ನಲ್ಲಿ ಬಿಜೆಪಿಯ ಹಿರಿಯ ನಾಯಕ ದಿನೇಶ್ ತ್ರಿವೇದಿ ಅವರನ್ನು ಬಾಂಗ್ಲಾದೇಶದ ಹೈಕಮಿಷನರ್ ಆಗಿ ನೇಮಿಸಿದ್ದ ಕೇಂದ್ರ ಸರ್ಕಾರ, ಬುಧವಾರವಷ್ಟೇ ಕೇಂದ್ರ ಸಚಿವ ಸ್ಥಾನಮಾನವನ್ನು ನೀಡಿತ್ತು.

'ಗುರುವಾರ ಬಾಂಗ್ಲಾ ರಾಷ್ಟ್ರಪತಿ ಮೊಹಮ್ಮದ್ ಶಹಾಬುದ್ದೀನ್ ಅವರನ್ನು ಭೇಟಿಯಾದ ತ್ರಿವೇದಿ ಅವರು ರಾಜತಾಂತ್ರಿಕ ಕಾರ್ಯಭಾರ ಆರಂಭಿಸಲು ಅಗತ್ಯವಿರುವ ಅಧಿಕಾರ ಪತ್ರಗಳನ್ನು ಸಲ್ಲಿಸಿದರು' ಎಂದು ರಾಷ್ಟ್ರಪತಿ ಭವನದ ವಕ್ತಾರರು ತಿಳಿಸಿದ್ದಾರೆ.

'ಮುಂದಿನ ವಾರ ಅಮೆರಿಕ– ಇರಾನ್ ಮಾತುಕತೆ ಸಾಧ್ಯತೆ'

ಇಸ್ಲಾಮಾಬಾದ್ (ಪಿಟಿಐ): ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆ ಮುಂದಿನ ವಾರ ಪುನರಾರಂಭವಾಗುವ ಸಾಧ್ಯತೆಯಿದೆ ಎಂದು ಪಾಕಿಸ್ತಾನ ಹೇಳಿದೆ.

'ಮಾತುಕತೆಗೆ ಉಭಯ ದೇಶಗಳು ಚರ್ಚೆ ನಡೆಸಿದ್ದು, ಆ ಕುರಿತು ತಯಾರಿ ನಡೆಯುತ್ತಿದೆ' ಎಂದು ಪಾಕಿಸ್ತಾನ ವಿದೇಶಾಂಗ ಇಲಾಖೆಯ ವಕ್ತಾರ ತಾಹಿರ್ ಅಂದ್ರಾಬಿ ತಿಳಿಸಿದ್ದಾರೆ.

'ಮಾತುಕತೆ ಮುಂದುವರಿದಿದೆ. ಮುಂದಿನ ಮಂಗಳವಾರ ಮಾತುಕತೆ ಪುನರಾರಂಭವಾಗುವ ಸಾಧ್ಯತೆಯಿದೆ. ಈ ಮಾತುಕತೆ ನಡೆಯುವ ಸಂದರ್ಭದಲ್ಲಿ ನಮ್ಮ ನಿಯೋಗವೂ ಇರಲಿದೆ' ಎಂದು ತಾಹಿರ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಆದರೆ, ಈ ಕುರಿತು ಅಮೆರಿಕ ಮತ್ತು ಇರಾನ್ ಯಾವುದೇ ಮಾಹಿತಿ ನೀಡಿಲ್ಲ.

ಪಶ್ಚಿಮ ಏಷ್ಯಾದಲ್ಲಿ ಶಾಂತಿಯನ್ನು ಪುನರ್ ಸ್ಥಾಪಿಸುವ ಗುರಿ ಹೊಂದಿರುವ ಒಪ್ಪಂದಕ್ಕೆ ಅಮೆರಿಕ ಮತ್ತು ಇರಾನ್ ಕಳೆದ ವಾರ ಸಹಿ ಹಾಕಿದವು.

ಜಪಾನ್: 7.2ರ ತೀವ್ರತೆಯ ಭೂಕಂಪ

ಟೋಕಿಯೊ (ಎಪಿ): ಜಪಾನ್‌ನ ಉತ್ತರ ಕರಾವಳಿಯಲ್ಲಿ ಗುರುವಾರ 7.2ರ ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ. ಆದರೆ, ಸುನಾಮಿಯ ಅಪಾಯವಿಲ್ಲ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಪೂರ್ವ ಕರಾವಳಿಯ ಇವಾಟೆಯಲ್ಲಿ 50 ಕಿಲೋ ಮೀಟರ್ ಆಳದಲ್ಲಿ ಭೂಕಂಪದ ಕೇಂದ್ರಬಿಂದು ಇತ್ತೆಂದು ವರದಿಯಾಗಿದೆ. ತಕ್ಷಣಕ್ಕೆ ಯಾವುದೇ ದೊಡ್ಡ ಮಟ್ಟದ ಹಾನಿ ಸಂಭವಿಸಿರುವ ಮಾಹಿತಿ ಲಭ್ಯವಾಗಿಲ್ಲ ಎಂದು ಸರ್ಕಾರದ ವಕ್ತಾರ ತಿಳಿಸಿದ್ದಾರೆ.

ಭೂಕಂಪದಿಂದ ಕೆಲವು ನಿಮಿಷಗಳವರೆಗೆ ಭೂಮಿ ಅಲುಗಾಡಿದ ಅನುಭವವಾಗಿದೆ. ಆದರೆ, ಎಲ್ಲಿಯೂ ತೀವ್ರ ಹಾನಿ ಸಂಭವಿಸಿರುವುದು ಕಂಡುಬಂದಿಲ್ಲ. ಆದಾಗ್ಯೂ, ಈಶಾನ್ಯ ಪ್ರದೇಶಗಳಲ್ಲಿ ಬುಲೆಟ್ ರೈಲುಗಳು ಮತ್ತು ಸ್ಥಳೀಯ ರೈಲುಗಳನ್ನು ಸುರಕ್ಷತಾ ತಪಾಸಣೆಗೆ ಒಳಪಡಿಸಲು ತಾತ್ಕಾಲಿಕವಾಗಿ ಸಂಚಾರ ಸ್ಥಗಿತಗೊಳಿಸಲಾಗಿತ್ತು ಎಂದು ಮಾಧ್ಯಮಗಳು ವರದಿ ಮಾಡಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

ತಕ್ಷಣ ಬೇಕಾಗಿದ್ದಾರೆ. ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. 20,000 - 25,000 ಸಂಪಾದಿಸಿ. 8095222026

General

Multiple Vacancy

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

WANTED ACCOUNTANTS, Receptionists, Supervisors, Managers & Site Engineers in Bangalore. Email Resume to bengaluruoffice@karunamay i.in. Contact: 8277193108

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಲಸಿಕೆ, ಕ್ಯಾನ್ಸರ್ ರೋಗಗಳ ಔಷಧಕ್ಕೆ ಅನ್ವಯ: ಕೇಂದ್ರ ಆರೋಗ್ಯ ಸಚಿವಾಲಯ

ಔಷಧ: ಕ್ಯೂಆರ್ ಕೋಡ್ ಕಡ್ಡಾಯ

ನವದೆಹಲಿ (ಪಿಟಿಐ): ನಕಲಿ ಹಾಗೂ ಕಳಪೆ ಗುಣಮಟ್ಟದ ಔಷಧ ಮಾರಾಟವನ್ನು ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಸರ್ಕಾರವು ಕೆಲವೊಂದು ಔಷಧಗಳ ಪ್ಯಾಕೇಜಿಂಗ್ ಮೇಲೆ ಕ್ಯೂಆರ್ ಕೋಡ್ ಮುದ್ರಿಸುವುದನ್ನು ಕಡ್ಡಾಯಗೊಳಿಸಿದೆ.

ಎಲ್ಲ ರೀತಿಯ ಆ್ಯಂಟಿ ಮೈಕ್ರೋಬಿಯಲ್ ಔಷಧಗಳು, ಲಸಿಕೆಗಳು, ನಾರ್ಕೋಟಿಕ್ ಮತ್ತು ಸೈಕೋಟ್ರೋಪಿಕ್ ಡ್ರಗ್ಸ್ ಹಾಗೂ ಕ್ಯಾನ್ಸರ್ ರೋಗದ ಚಿಕಿತ್ಸೆಗೆ ಬಳಸುವ ಔಷಧಗಳು ಇನ್ನು ಮುಂದೆ ಕಡ್ಡಾಯವಾಗಿ ಕ್ಯೂಆರ್ ಕೋಡ್ ಹೊಂದಿರಬೇಕು.

ಕೇಂದ್ರ ಆರೋಗ್ಯ ಸಚಿವಾಲಯವು ಔಷಧ ನಿಯಮ-1945ಕ್ಕೆ ತಿದ್ದುಪಡಿಗಳನ್ನು ತಂದು, ಕ್ಯೂಆರ್ ಕೋಡ್ ಆಧಾರಿತ 'ಟ್ರ್ಯಾಕ್-ಅಂಡ್-ಟ್ರೇಸ್' ಕಾರ್ಯವಿಧಾನದ ವ್ಯಾಪ್ತಿಯನ್ನು ವಿಸ್ತರಿಸಿದೆ.

ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ಈ ವರ್ಗಗಳ ಔಷಧಗಳನ್ನು 'ಎಚ್2' ಪಟ್ಟಿ ಅಡಿಯಲ್ಲಿ ತರಲಾಗಿದೆ. 'ಎಚ್2' ಪಟ್ಟಿಯಡಿ ಬರುವ ಔಷಧಗಳ ಗುರುತಿಸುವಿಕೆ ಮತ್ತು ಪರಿಶೀಲನೆಗಾಗಿ ಬಾರ್ ಕೋಡ್‌ಗಳು ಅಥವಾ ಕ್ವಿಕ್ ರೆಸ್ಪಾನ್ಸ್ (ಕ್ಯೂಆರ್) ಕೋಡ್‌ಗಳ ಬಳಕೆಯನ್ನು ಕಡ್ಡಾಯಗೊಳಿಸುತ್ತದೆ.

'ತಿದ್ದುಪಡಿ ಮಾಡಿದ ನಿಯಮಗಳ ಪ್ರಕಾರ, ತಯಾರಕರು ಔಷಧದ ಪ್ರಾಥಮಿಕ ಪ್ಯಾಕೇಜಿಂಗ್ ಲೇಬಲ್‌ನಲ್ಲಿ ಅಥವಾ ದ್ವಿತೀಯ ಹಂತದ ಪ್ಯಾಕೇಜಿಂಗ್‌ನಲ್ಲಿ ಬಾರ್‌ಕೋಡ್ ಅಥವಾ ಕ್ಯೂಆರ್ ಕೋಡ್‌ಅನ್ನು ಮುದ್ರಿಸುವುದು ಕಡ್ಡಾಯವಾಗಿರುತ್ತದೆ' ಎಂದು ಸಚಿವಾಲಯ ತಿಳಿಸಿದೆ.

ಕ್ಯೂಆರ್ ಕೋಡ್‌ಗಳು, ಪೂರೈಕೆ ಸರಪಳಿಯಾದ್ಯಂತ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳ ಮೂಲಕ ಔಷಧಗಳ ದೃಢೀಕರಣ ಮತ್ತು ಪರಿಶೀಲನೆಯನ್ನು ಸಾಧ್ಯವಾಗಿಸಲಿವೆ.

'ಇದುವರೆಗೆ ದೇಶದ ಅಗ್ರ 300 ಔಷಧ ಬ್ರ್ಯಾಂಡ್‌ಗಳಿಗೆ ಮಾತ್ರ ಕ್ಯೂಆರ್ ಕೋಡ್ ಮುದ್ರಿಸುವುದು ಕಡ್ಡಾಯವಾಗಿತ್ತು. ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ಅದರ ವ್ಯಾಪ್ತಿಯನ್ನು ಗಮನಾರ್ಹವಾಗಿ ವಿಸ್ತರಿಸಲಾಗಿದೆ' ಎಂದು ಸಚಿವಾಲಯ ಹೇಳಿದೆ.

ಯಾವೆಲ್ಲಾ ಮಾಹಿತಿ?

ಉತ್ಪನ್ನದ ವಿಶಿಷ್ಟ ಗುರುತಿನ ಕೋಡ್, ಜೆನೆರಿಕ್ ಮತ್ತು ಬ್ರ್ಯಾಂಡ್ ಹೆಸರುಗಳು, ತಯಾರಕರ ಹೆಸರು ಮತ್ತು ವಿಳಾಸ, ಬ್ಯಾಚ್ ಸಂಖ್ಯೆ, ಔಷಧ ತಯಾರಾದ ಹಾಗೂ ಕಾಲಮಿತಿ ಕೊನೆಗೊಳ್ಳುವ ದಿನಾಂಕ, ಉತ್ಪಾದನಾ ಪರವಾನಗಿ ಸಂಖ್ಯೆ ಸೇರಿದಂತೆ ಔಷಧಗಳ ಪ್ರಮುಖ ಮಾಹಿತಿಯನ್ನು ಕ್ಯೂಆರ್ ಕೋಡ್ ಒಳಗೊಂಡಿರುತ್ತದೆ.

ತೋತಾಪುರಿ: ಕ್ವಿಂಟಲ್‌ಗೆ ₹1,750

ಕೇಂದ್ರ ಸರ್ಕಾರದಿಂದ ಮಾವಿಗೆ ನೆರವು ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹವಾಮಾನ ವೈಪರೀತ್ಯ ಮತ್ತು ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಗುರಿಯಾಗಿದ್ದ ಕರ್ನಾಟಕದ ಮಾವು ಬೆಳೆಗಾರರಿಗೆ ನೆರವು ನೀಡಲು ಮುಂದಾಗಿರುವ ಕೇಂದ್ರ ಸರ್ಕಾರ, ಮಾರುಕಟ್ಟೆ ಹಸ್ತಕ್ಷೇಪ ಯೋಜನೆ ಅಡಿಯಲ್ಲಿ 1.30 ಲಕ್ಷ ಟನ್ ಮಾವಿಗೆ ಪ್ರತಿ ಕ್ವಿಂಟಲ್‌ಗೆ ₹1,750 ಘೋಷಿಸಿದೆ.

ಈ ಸಂಬಂಧ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ನವದೆಹಲಿಯಲ್ಲಿ ಬುಧವಾರ ಭೇಟಿ ಮಾಡಿ ಮಾತುಕತೆ ನಡೆಸಿದರು. ಮಾವು ಬೆಳೆಗಾರರ ರಕ್ಷಣೆಗೆ ತ್ವರಿತವಾಗಿ ಧಾವಿಸಬೇಕು ಎಂದು ಮನವಿ ಮಾಡಿದ್ದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರೂ ಚೌಹಾಣ್ ಅವರಿಗೆ ಪತ್ರ ಬರೆದಿದ್ದರು.

ಜೂನ್ 17ರಂದು ಸಚಿವ ಚೌಹಾಣ್ ಅವರಿಗೆ ಪತ್ರ ಬರೆದಿದ್ದ ಕುಮಾರಸ್ವಾಮಿ, ಮಾವು ಬೆಳೆಗಾರರ ನೆರವಿಗೆ ಬರುವಂತೆ ಕೋರಿದ್ದರು. ಬೆಲೆ ಕೊರತೆ ಪಾವತಿ ಯೋಜನೆಯಡಿ ನೆರವಾಗುವಂತೆ ಕೇಳಿದ್ದರು.

ಎಂಐಎಸ್ ಮಾರ್ಗಸೂಚಿಯಂತೆ 2026-27ರ ಮಾರುಕಟ್ಟೆ ಹಂಗಾಮಿನಲ್ಲಿ ರಾಜ್ಯದಲ್ಲಿ ತೋತಾಪುರಿ ಮಾವಿಗೆ ಬೆಂಬಲ ಬೆಲೆ ನೀಡಲು ಕೃಷಿ ಸಚಿವಾಲಯ ನಿರ್ದೇಶಿಸಿದೆ. ಒಂದು ತಿಂಗಳವರೆಗೆ 'ಬೆಲೆ ಕೊರತೆ ಪಾವತಿ' ಯೋಜನೆ ಜಾರಿಯಲ್ಲಿರುತ್ತದೆ. ರೈತರು ತಮ್ಮ ಉತ್ಪನ್ನಗಳನ್ನು ಎಪಿಎಂಸಿ ಮಂಡಿಗಳಲ್ಲಿ ವ್ಯಾಪಾರ ಮಾಡಬೇಕು.

ರಾಜ್ಯ ಸರ್ಕಾರವು ತೋತಾಪುರಿ ಮಾವಿನ ವ್ಯಾಪಾರಿಗಳ ಪಟ್ಟಿ ಪ್ರಕಟಿಸಬೇಕು. ನೋಂದಾಯಿತ ರೈತರಿಗೆ ಬೆಲೆ ನಷ್ಟ ಪಾವತಿಯನ್ನು ನೇರ ನಗದು ವರ್ಗಾವಣೆ (ಡಿಬಿಟಿ)/ಆಧಾರ್ ಪರಿಶೀಲಿಸಿದ ಬ್ಯಾಂಕ್ ಖಾತೆ ಮೂಲಕವೇ ಭರಿಸಬೇಕು ಎಂದು ಸೂಚಿಸಿದೆ.

ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಧಾರವಾಡ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ತುಮಕೂರು, ಮಂಡ್ಯ, ಹಾಸನ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ರೈತರು ತೋತಾಪುರಿ ಮಾವು ಬೆಳೆಯುತ್ತಿದ್ದಾರೆ.

ಕೃಷಿ ವಿಶ್ವವಿದ್ಯಾಲಯ: ಲೋಕಾಯುಕ್ತಕ್ಕೆ ದೂರು

ಬೆಂಗಳೂರು: 'ಧಾರವಾಡ ಕೃಷಿ ವಿಶ್ವ ವಿದ್ಯಾಲಯ, ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾ ಲಯದ ಕುಲಪತಿಯ ಆಯ್ಕೆಗೆ ರಚನೆ ಯಾಗಿರುವ ಶೋಧನಾ ಸಮಿತಿ ರದ್ದು ಪಡಿಸಬೇಕು, ಈ ವಿಷಯದಲ್ಲಿ ಲೋಕಾಯುಕ್ತರು ಮಧ್ಯಪ್ರವೇಶಿಸ ಬೇಕು' ಎಂದು ನಿವೃತ್ತ ಪ್ರಾಧ್ಯಾಪಕ ಟಿ.ಎನ್.ಪ್ರಕಾಶ್ ಕಮ್ಮರಡಿ ಒತ್ತಾಯಿಸಿದ್ದಾರೆ.

'ನಿಷ್ಪಕ್ಷಪಾತ ಮತ್ತು ಸ್ವತಂತ್ರವಾದ ಶೋಧನಾ ಸಮಿತಿ ರಚನೆಯಾಗಿಲ್ಲ. ಲೋಕಾಯುಕ್ತ ತನಿಖೆ ಎದುರಿಸುತ್ತಿರುವ ವ್ಯಕ್ತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿರುವುದು ನಿಯಮಬಾಹಿರ' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಶಿವಮೊಗ್ಗ ಕೃಷಿ ಮತ್ತು ತೋಟ ಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾ ಲಯದ ಕುಲಪತಿಯ ಆಯ್ಕೆಗೆ ಕ್ರಮ ವಾಗಿ ಎಸ್.ವಿ.ಸುರೇಶ್, ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ಶೋಧನಾ ಸಮಿತಿ ರಚಿಸಲಾಗಿದೆ. ಇದರಲ್ಲಿ ಹಿತಾ ಸಕ್ತಿ ಸಂಘರ್ಷ, ಪಕ್ಷಪಾತ ಮತ್ತು ಪ್ರಭಾವಗಳಿಗೆ ಒಳಗಾಗುವ ಸಾಧ್ಯತೆ ಇರುತ್ತದೆ ಎಂದಿದ್ದಾರೆ.

'ಶೋಧನಾ ಸಮಿತಿಗೆ ಮಾಡಿರುವ ಅಧ್ಯಕ್ಷರ ನೇಮಕವು ವಿಶ್ವವಿದ್ಯಾಲಯ ಅನುದಾನ ಆಯೋಗದ ನಿಯಮಗಳಿಗೆ ವಿರುದ್ಧವಾಗಿದೆ. ಈ ಬಗ್ಗೆ ರಾಜ್ಯಪಾಲರಿಗೆ ಮತ್ತು ಕೃಷಿ ಸಚಿವರಿಗೆ ಈಗಾಗಲೇ ದೂರು ನೀಡಲಾಗಿದೆ. ಈ ಬೆಳವಣಿಗೆ ಗಳ ನಡುವೆಯೇ ಜುಲೈ 3 ಮತ್ತು 4ರಂದು ಶೋಧನಾ ಸಮಿತಿ ಸಭೆ ನಿಗದಿ ಯಾಗಿರುವುದು ಆಶ್ಚರ್ಯವನ್ನುಂಟು ಮಾಡಿದೆ' ಎಂದು ಹೇಳಿದ್ದಾರೆ.

ಶೋಧನಾ ಸಮಿತಿಗಳು ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸುವುದನ್ನು ತಡೆ ಯಬೇಕು. ಶೋಧನಾ ಸಮಿತಿ ಅಧ್ಯಕ್ಷರ ವಿರುದ್ಧ ಲೋಕಾಯುಕ್ತದಲ್ಲಿ ದಾಖಲಾಗಿ ರುವ ಪ್ರಕರಣಗಳ ತನಿಖೆಯನ್ನು ಆದ್ಯತೆ ಮೇಲೆ ಮಾಡಿ, ಆದಷ್ಟು ಬೇಗ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

...ಗೆ ಪ್ರಶಸ್ತಿ

...' ಸುದ್ದಿ ತಾಣಗಳಿಗೆ ಅತ್ಯುತ್ತಮ ...ದೊರೆತಿದ್ದು ಸ್ಟಿಗ್ ಆರ್ನ್ಸೋವ್ ಹಾಗೂ ... ಅವರು ಪ್ರದಾನ ಮಾಡಿದರು. ... ಹಿರಿಯ ವರದಿಗಾರ ...್ ವ್ಯವಹಾರಗಳ ವಿಭಾಗದ ಮುಖ್ಯಸ್ಥ ...ನ ಅಧಿಕಾರಿ ಅನೂಪ್ ಮಂಡಲ್

...ಐ' ಬಳಕೆ

ಆರೋಪ

ಮಾಡಿದರೆ, ಯಾವುದೇ ಸಮಸ್ಯೆ ತಲೆ ದೋರುವುದಿಲ್ಲ. ಆ ವ್ಯಕ್ತಿ ಎಲ್ಲಿಯೇ ಇದ್ದರೂ ಮಾಹಿತಿ ಲಭ್ಯವಾಗುತ್ತದೆ. ನಕಲಿ ಮತದಾನ ಆಗುವುದಿಲ್ಲ. ಮತದಾರರ ಹೆಸರಿನಲ್ಲಿ ವಂಚಿಸುವ ಪ್ರಮೇಯ ಬರುವುದಿಲ್ಲ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಎಸ್‌ಐಆರ್ ಜಾರಿಗೊಳಿಸುವ ಉದ್ದೇಶವಾದರೂ ಏನು? ಉದಾಹರಣೆಗೆ, ಎಸ್‌ಐಆರ್ ಪ್ರಕ್ರಿಯೆಯಡಿ ಉತ್ತರ ಪ್ರದೇಶದಲ್ಲಿ ಎರಡೂವರೆ ಕೋಟಿ ಮತದಾರರನ್ನು ಮತ್ತು ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮತದಾರರನ್ನು ಕೈಬಿಡಲಾಗಿದೆ. ಕರ್ನಾಟಕದಲ್ಲಿ 60 ಲಕ್ಷ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವ ಸಾಧ್ಯತೆಯಿದೆ. ಇದಕ್ಕೆ ನಮ್ಮ ತಕರಾರಿಲ್ಲ. ಆದರೆ, ಯಾಕೆ ಹೀಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬುದು ಗೊತ್ತಾಗಬೇಕು' ಎಂದರು.

...ಷೇಧಕ್ಕೆ ಹೋರಾಟ'

ಖಜಾನೆಯಲ್ಲಿ ಇರುವುದು ಕೇವಲ ₹700 ಕೋಟಿ. ನಮ್ಮದು ಬಡವರ ಪಕ್ಷವಾಗಿದ್ದು, ಚೆಕ್ ಮೂಲಕವೇ ವ್ಯವಹಾರ ನಡೆಸುತ್ತದೆ. ಬೆಂಗಳೂರಿನಲ್ಲಿ ಚಾಣಕ್ಯ ವಿಶ್ವವಿದ್ಯಾಲಯ ನಿರ್ಮಾಣಕ್ಕೆ ಬಡ ರೈತರ 106 ಎಕರೆ ಜಮೀನನ್ನು ಕೇವಲ ₹50 ಲಕ್ಷಕ್ಕೆ ಖರೀದಿಸಿದ ಬಿಜೆಪಿಯವರ ಬಗ್ಗೆ ನಮಗೆ ಗೊತ್ತಿಲ್ಲವೆ' ಎಂದು ಅವರು ಪ್ರಶ್ನಿಸಿದರು.

'ಎಸ್‌ಐಆರ್ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ, ನಿಜವಾದ ಯಾವೊಬ್ಬ ಮತದಾರನೂ ಪಟ್ಟಿಯಿಂದ ಬಿಟ್ಟುಹೋಗಬಾರದು ಎನ್ನುವುದು ನಮ್ಮ ಉದ್ದೇಶ. ತಮ್ಮನ್ನು ವಿರೋಧಿಸುವವರನ್ನು ಚುನಾವಣಾ ಆಯೋಗದ ಮೂಲಕ ಮತದಾರರ ಪಟ್ಟಿಯಿಂದ ಹೊರಗಿಡುವ ಷಡ್ಯಂತ್ರ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಡೆಸುತ್ತಿವೆ. ಇದರ ಕುರಿತು ಜನರಲ್ಲಿ ಜಾಗೃತಿ ಮೂಡಿಸುತ್ತೇವೆ' ಎಂದರು.

ಪಿಎಂ ಕಚೇರಿಗೆ ಮಾಹಿತಿ ನಿರಾಕರಣೆ

ರಾಮಮಂದಿರ ಕಾಣಿಕೆ ದುರುಪಯೋಗ ತನಿಖೆ ಮುಗಿದ ಬಳಿಕ ಮಾಹಿತಿ –ಟ್ರಸ್ಟ್

ಪ್ರಜಾವಾಣಿ ವಾರ್ತೆ/ಪಿಟಿಐ

ಅಯೋಧ್ಯೆಯ ರಾಮಮಂದಿರ

ಲಖನೌ/ನವದೆಹಲಿ: ಅಯೋಧ್ಯೆ ಶ್ರೀರಾಮಮಂದಿರಕ್ಕೆ ಸಂಬಂಧಿಸಿದಂತೆ ಹಣಕಾಸಿನ ಮಾಹಿತಿಯನ್ನು ಪ್ರಧಾನ ಮಂತ್ರಿ ಕಚೇರಿಗೆ ನೀಡಲು ಶ್ರೀರಾಮ ಜನ್ಮಭೂಮಿ ದೇಗುಲ ತೀರ್ಥ ಕ್ಷೇತ್ರ ಟ್ರಸ್ಟ್ ನಿರಾಕರಿಸಿದೆ.

'ರಾಮಮಂದಿರದ ಕಾಣಿಕೆಗಳ ದುರುಪಯೋಗದ ಬಗ್ಗೆ ಕೇಂದ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಲಿದೆ. ಟ್ರಸ್ಟ್ ತನ್ನ ಕಾಣಿಕೆ ಹಾಗೂ ಭೂಮಿ ಖರೀದಿ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು' ಎಂದು ಒತ್ತಾಯಿಸಿ ಬಿಜೆಪಿ ಮುಖಂಡ ರಜನೀಶ್ ಸಿಂಗ್ ಅವರು ಬರೆದ ಪತ್ರವನ್ನು ಆಧರಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಪ್ರಧಾನಮಂತ್ರಿ ಕಚೇರಿಯು ಅಯೋಧ್ಯೆ ಜಿಲ್ಲಾಡಳಿತಕ್ಕೆ ಸೂಚಿಸಿತ್ತು.

ಹಣಕಾಸಿನ ಮಾಹಿತಿ ನೀಡುವಂತೆ ಟ್ರಸ್ಟ್ ಪದಾಧಿಕಾರಿಗಳನ್ನು ಜಿಲ್ಲಾಡಳಿತವು ಸಂಪರ್ಕಿಸಿತ್ತು. ಆದರೆ, ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಯನ್ನು ಉಲ್ಲೇಖಿಸಿ ಮಾಹಿತಿ ನೀಡಲು ನಿರಾಕರಿಸಲಾಗಿದೆ.

'ಈ ಪ್ರಕರಣದ ಬಗ್ಗೆ ಎಸ್‌ಐಟಿ ತನಿಖೆ ನಡೆಸುತ್ತಿದ್ದು, ಅಗತ್ಯವಿರುವ ಎಲ್ಲ ದಾಖಲೆಗಳನ್ನು ಸಂಗ್ರಹಿಸುವ ಕಾರ್ಯ ಪ್ರಗತಿಯಲ್ಲಿದೆ. ಎಸ್‌ಐಟಿ ತನಿಖೆ ಪೂರ್ಣಗೊಳ್ಳುವವರೆಗೆ ಯಾವುದೇ ರೀತಿಯ ಮಾಹಿತಿಯನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ' ಎಂದು ಟ್ರಸ್ಟ್ ಹೇಳಿದೆ.

ಜೂನ್ 13ರಂದು ರಚನೆಯಾಗಿದ್ದ ಎಸ್‌ಐಟಿ ತನ್ನ ಮಧ್ಯಂತರ ವರದಿಯನ್ನು ರಾಜ್ಯ ಸರ್ಕಾರಕ್ಕೆ ಮಂಗಳವಾರ ಸಲ್ಲಿಸಿತ್ತು. 15 ದಿನಗಳೊಳಗೆ ಅಂತಿಮ ವರದಿಯನ್ನು ಸಲ್ಲಿಸಲಿದೆ. ಆದರೆ, ಮಧ್ಯಂತರ ವರದಿಯಲ್ಲಿರುವ ಅಂಶಗಳನ್ನು ಬಹಿರಂಗಪಡಿಸಿಲ್ಲ.

ಮೂಲಗಳ ಪ್ರಕಾರ, ಕಾಣಿಕೆ ಹಣದ ಎಣಿಕೆ ಕಾರ್ಯದಲ್ಲಿ ತೊಡಗಿದ್ದ ಟ್ರಸ್ಟ್‌ನ ಕೆಲ ಸಿಬ್ಬಂದಿ ಮೇಲೆ ಎಸ್‌ಐಟಿ ನಿಗಾ ಇಟ್ಟಿದೆ. ಕೆಲವು ಉದ್ಯೋಗಿಗಳ ನಿವಾಸಗಳಿಂದ ನಗದನ್ನು ವಶಪಡಿಸಿಕೊಂಡಿದೆ.

ರಾಮಮಂದಿರಕ್ಕೆ ಆಭರಣಗಳನ್ನು ದಾನ ಮಾಡಿದ ಕೆಲವರು, ಅದಕ್ಕೆ ಇನ್ನೂ ರಸೀದಿಗಳನ್ನು ಪಡೆದಿಲ್ಲ ಎಂದು ದೂರಿದ್ದಾರೆ. 'ಈ ವಿಷಯದಲ್ಲಿ ಸರ್ಕಾರವು ನಿಷ್ಕ್ರಿಯವಾಗಿದೆ' ಎಂದು ವಿರೋಧ ಪಕ್ಷಗಳು ಮತ್ತು ಕೆಲವು ಸ್ವಾಮೀಜಿಗಳು ವಾಗ್ದಾಳಿ ನಡೆಸಿದ್ದಾರೆ.

> ರಾಮ ಮಂದಿರ ದೇಣಿಗೆ ಅಕ್ರಮದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿರುವುದು ಕಣ್ಣೊರೆಸುವ ತಂತ್ರವಾಗಿದ್ದು, ಕಾನೂನುಬದ್ಧವಾಗಿಲ್ಲ
> **ಅರವಿಂದ ಕೇಜ್ರಿವಾಲ್,** ಎಎಪಿ ರಾಷ್ಟ್ರೀಯ ಸಂಚಾಲಕ

ಎಸ್‌ಐಟಿಗೆ ದಾಖಲೆ ಸಲ್ಲಿಸಿದ ಸಂಸದ

ರಾಮ ಮಂದಿರಕ್ಕೆ ಬಂದಿರುವ ದೇಣಿಗೆಗಳ ದುರುಪಯೋಗದ ಆರೋಪಗಳ ಕುರಿತು ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಮಹತ್ವದ ದಾಖಲೆಗಳನ್ನು ಸಲ್ಲಿಸಿರುವುದಾಗಿ ಆಮ್ ಆದ್ಮಿ ಪಕ್ಷದ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಹೇಳಿದ್ದಾರೆ.

'ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಜಮೀನು ಖರೀದಿ ಮೂಲಕ ಕೋಟ್ಯಂತರ ರೂಪಾಯಿ ಹಗರಣ ಮಾಡಿದೆ' ಎಂದು ಅವರು 'ಎಕ್ಸ್'ನಲ್ಲಿ ಆರೋಪಿಸಿದ್ದಾರೆ. 'ನಾನು ಎಲ್ಲ ದಾಖಲೆಗಳನ್ನು ಎಸ್‌ಐಟಿಗೆ ಹಸ್ತಾಂತರಿಸಿದ್ದೇನೆ. ಮುಂದೆ ಯಾವ ಕ್ರಮ ಆಗುತ್ತದೆ ಎಂಬುದು ಭಗವಂತ ಶ್ರೀರಾಮನಿಗೆ ಮಾತ್ರ ಗೊತ್ತು' ಎಂದು ಅವರು ತಿಳಿಸಿದ್ದಾರೆ.

ಜೂನ್ 29ರಂದು ವಿಚಾರಣೆ ಸಾಧ್ಯತೆ

ಅಯೋಧ್ಯೆಯ ರಾಮ ಮಂದಿರದಲ್ಲಿ ದೇಣಿಗೆಗಳ ದುರುಪಯೋಗ ಆರೋಪದ ಕುರಿತು ಎಫ್‌ಐಆರ್ ದಾಖಲಿಸಲು ಮತ್ತು ನ್ಯಾಯಯುತ, ಕಾಲಮಿತಿಯ ತನಿಖೆ ನಡೆಸಲು ಕೋರಿ ಸಲ್ಲಿಸಿರುವ ಅರ್ಜಿಯನ್ನು ಇದೇ 29ರಂದು ನೆನಪಿಸುವಂತೆ ಸುಪ್ರೀಂ ಕೋರ್ಟ್ ಗುರುವಾರ ಅರ್ಜಿದಾರರಿಗೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠದ ಮುಂದೆ ಈ ವಿಷಯವನ್ನು ತುರ್ತು ಪಟ್ಟಿಗೆ ಸೇರಿಸಲು ಪ್ರಸ್ತಾಪಿಸಲಾಗಿತ್ತು. ಅರ್ಜಿಯಲ್ಲಿ ಯಾವುದೇ ನ್ಯೂನತೆ ಇಲ್ಲದಿದ್ದರೆ ರಿಜಿಸ್ಟ್ರಿ ಪ್ರಕ್ರಿಯೆ ಮುಂದುವರಿಸುತ್ತದೆ ಎಂದು ಪೀಠ ಇದೇ ವೇಳೆ ಹೇಳಿತು. ಆಗ ಯಾವುದೇ ನ್ಯೂನತೆಗಳಿಲ್ಲ ಎಂದು ಅರ್ಜಿದಾರರು ಉಲ್ಲೇಖಿಸಿದರು. ಹಾಗಾದರೆ ಅರ್ಜಿ ಕುರಿತು ಇದೇ 29ರಂದು ಪ್ರಸ್ತಾಪಿಸುವಂತೆ ಪೀಠ ತಿಳಿಸಿತು.

ಎಫ್‌ಐಆರ್ ದಾಖಲು

ಆಯೋಧ್ಯೆಯ ಕಾಣಿಕೆ ಕಳವು ಆರೋಪಕ್ಕೆ ಸಂಬಂಧಿಸಿದಂತೆ ಗುರುವಾರ ಎಫ್‌ಐಆರ್ ದಾಖಲಿಸಲಾಗಿದೆ. ಟ್ರಸ್ಟ್‌ನ ಸದಸ್ಯ ಕೃಷ್ಣ ಮೋಹನ್ ಎಂಬವರು ನೀಡಿದ ದೂರಿನಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಫ್‌ಐಆರ್‌ನಲ್ಲಿ ಅನುಕಲ್ಪ್ ಮಿಶ್ರಾ, ಲವಕೇಶ್ ಮಿಶ್ರಾ, ಅವಿನಾಶ್ ಶುಕ್ಲಾ, ರಮಾಶಂಕರ್ ಯಾದವ್ ಮತ್ತು ಮನೀಷ್ ಯಾದವ್ ಅವರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಈ ಐವರು ಆರೋಪಿಗಳನ್ನು ಬಂಧಿಸುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

ಮಾನಹಾನಿಕರ ಹೇಳಿಕೆ: ವಿಷಾದ ವ್ಯಕ್ತಪಡಿಸಿದ ರಾಹುಲ್ ಗಾಂಧಿ

ರಾಹುಲ್ ಗಾಂಧಿ

ಜಬಲ್ಪುರ (ಪಿಟಿಐ): ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪುತ್ರ ಕಾರ್ತಿಕೇಯ ಸಿಂಗ್ ಬಗ್ಗೆ ನೀಡಿದ್ದ, 'ಮಾನಹಾನಿಕರ' ಎಂದು ಆರೋಪಿಸಲಾದ ಹೇಳಿಕೆಗೆ ಸಂಬಂಧಿಸಿದಂತೆ ವಿಷಾದ ವ್ಯಕ್ತಪಡಿಸಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಗುರುವಾರ ಮಧ್ಯಪ್ರದೇಶ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ, ಕಾರ್ತಿಕೇಯ ಸಿಂಗ್ ಭೋಪಾಲ್ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. '2018ರಲ್ಲಿ ಜಬುವಾದಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಪನಾಮ ಪೇಪರ್ ಸೋರಿಕೆ ಹಗರಣದ ಬಗ್ಗೆ ಮಾತನಾಡುವಾಗ ರಾಹುಲ್ ಗಾಂಧಿ, ನನ್ನ ಹೆಸರು ಉಲ್ಲೇಖಿಸಿದ್ದಾರೆ' ಎಂದು ಆರೋಪಿಸಿದ್ದರು.

ಭೋಪಾಲ್ ನ್ಯಾಯಾಲಯ ರಾಹುಲ್ ಗಾಂಧಿ ಅವರಿಗೆ ಖುದ್ದಾಗಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಸಮನ್ಸ್ ಜಾರಿಗೊಳಿಸಿತ್ತು. ಈ ಸಮನ್ಸ್ ರದ್ದುಗೊಳಿಸಬೇಕು, ಮಾನನಷ್ಟ ಮೊಕದ್ದಮೆ ಕೈಬಿಡಬೇಕು ಎಂದು ಕೋರಿ ಅವರು ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ಸೂಚನೆಯಂತೆ ಅರ್ಜಿದಾರರ ಪರ ವಕೀಲರು ಬುಧವಾರವೇ ಭೋಪಾಲ್ ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರುಪಡಿಸಿದರು. 'ಆದರೆ, ಇದು ಸಿಂಗ್‌ಗೆ ಸಂಬಂಧಿಸಿದ ಅರ್ಜಿ ಅಲ್ಲ' ಎಂದು ರಾಹುಲ್ ಪರ ವಕೀಲರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

ನ್ಯಾಯಮೂರ್ತಿ ಪ್ರಮೋದ್ ಕುಮಾರ್ ಅಗರ್‌ವಾಲ್ ಅವರು ರಾಹುಲ್ ಗಾಂಧಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ನಡೆಸಿದರು.

ರಾಷ್ಟ್ರಪತಿ ಭೇಟಿಯಾದ ಶಾ

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಸಂಪುಟ ಪುನರ್‌ರಚನೆ ವದಂತಿಯ ನಡುವೆಯೇ ಗೃಹ ಸಚಿವ ಅಮಿತ್ ಶಾ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಗುರುವಾರ ಭೇಟಿಯಾದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಭವನದಲ್ಲಿ ಭೇಟಿ ಮಾಡಿದ್ದಾರೆ' ಎಂದು ರಾಷ್ಟ್ರಪತಿ ಭವನವು 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದು, ಇಬ್ಬರ ಭೇಟಿಯ ಚಿತ್ರವನ್ನು ಹಂಚಿಕೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ರಾಷ್ಟ್ರಪತಿ ಮುರ್ಮು ಅವರನ್ನು ಭೇಟಿ ಮಾಡಿದ್ದರು. ಅದಾದ ಎರಡು ದಿನಗಳ ಬಳಿಕ ಶಾ ಅವರ ಭೇಟಿ ನಡೆದಿದೆ. ಶೀಘ್ರದಲ್ಲೇ ಕೇಂದ್ರ ಸಂಪುಟ ಪುನರ್‌ರಚನೆ ನಡೆಯಲಿದೆ ಎಂಬ ವದಂತಿ ಹಬ್ಬಿರುವ ಕಾರಣ ಈ ಭೇಟಿಗಳು ಮಹತ್ವ ಪಡೆದುಕೊಂಡಿವೆ.

ಕೇರಳಂನ ಬಿಜೆಪಿ ಮುಖಂಡ ಜಾರ್ಜ್ ಕುರಿಯನ್ ಅವರು ರಾಜ್ಯಸಭಾ ಸದಸ್ಯತ್ವದ ಅವಧಿ ಪೂರ್ಣಗೊಂಡ ಬೆನ್ನಲ್ಲೇ, ಸಚಿವ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದರು. ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ಅವರು ಅಲ್ಪಸಂಖ್ಯಾತ ವ್ಯವಹಾರ, ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಖಾತೆಯ ರಾಜ್ಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಕುರಿಯನ್ ಅವರ ರಾಜ್ಯಸಭಾ ಸದಸ್ಯತ್ವದ ಜೂನ್ 21ರಂದು ಪೂರ್ಣಗೊಂಡಿತ್ತು. ಬಿಜೆಪಿ ಹೈಕಮಾಡ್ ಅವರನ್ನು ಮತ್ತೆ ರಾಜ್ಯಸಭೆಗೆ ಕಳುಹಿಸದಿರಲು ನಿರ್ಧರಿಸಿದ್ದರಿಂದ ರಾಜೀನಾಮೆ ಸಲ್ಲಿಸಿದ್ದರು. ಅದೇ ರೀತಿ ಜೂನ್ 21ರಂದು ರಾಜ್ಯಸಭಾ ಸದಸ್ಯತ್ವದ ಅವಧಿ ಪೂರ್ಣಗೊಳಿಸಿರುವ ರೈಲ್ವೆ ಖಾತೆ ರಾಜ್ಯ ಸಚಿವ ರವನೀತ್ ಸಿಂಗ್ ಅವರನ್ನೂ ಬಿಜೆಪಿಯು ಮತ್ತೊಂದು ಅವಧಿಗೆ ಮೇಲ್ಮನೆಗೆ ಕಳುಹಿಸಿಲ್ಲ.

ಕೆಲವು ಕೇಂದ್ರ ಸಚಿವರಿಗೆ ಅವರ ತವರು ರಾಜ್ಯಗಳಲ್ಲಿ ಪಕ್ಷದ ಪ್ರಮುಖ ಸಾಂಸ್ಥಿಕ ಜವಾಬ್ದಾರಿಗಳನ್ನು ನೀಡಲಾಗಿದೆ. ಈ ಬೆಳವಣಿಗೆ ಕೂಡಾ ಸಂಪುಟ ಪುನರ್‌ರಚನೆಯ ಕುರಿತಾದ ಊಹಾಪೋಹಗಳಿಗೆ ಪುಷ್ಟಿ ನೀಡಿದೆ.

ಹೊಸ ನಿಯಮ ಹಿಂಪಡೆಯಲು 'ಕೈ', ಸಿಪಿಎಂ ಸಂಸದರ ಒತ್ತಾಯ

ನವದೆಹಲಿ: ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ (ಎಫ್‌ಸಿಆರ್‌ಎ) ಹೊಸ ನಿಯಮ ಗಳನ್ನು ಹಿಂಪಡೆಯುವಂತೆ ಕೇರಳದ ಸಂಸದರಾದ ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್ ಹಾಗೂ ಸಿಪಿಎಂನ ಜಾನ್ ಬ್ರಿಟ್ಟಾಸ್ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿರುವ ಅವರು, 'ವಿದೇಶಿ ದೇಣಿಗೆ ಪಡೆಯುವ ಪ್ರಕ್ರಿಯೆಯನ್ನು ನಿಯಂತ್ರಿಸುವುದಕ್ಕಾಗಿ ಈ ಹೊಸ ನಿಯಮಗಳನ್ನು ರೂಪಿಸಲಾಗಿಲ್ಲ. ಎನ್‌ಜಿಒಗಳ ಸ್ವಾಯತ್ತತೆ ಮತ್ತು ಅವುಗಳ ನಿಯಂತ್ರಣಕ್ಕೆ ಸಂಬಂಧಿಸಿದ ಪ್ರಕ್ರಿಯೆ ನಡುವಿನ ಸೂಕ್ಷ್ಮ ಸಮತೋಲನವನ್ನು ನಾಶ ಮಾಡುವ ಉದ್ದೇಶದಿಂದ ಈ ನಿಯಮಗಳನ್ನು ರೂಪಿಸಲಾಗಿದೆ' ಎಂದು ತಿಳಿಸಿದ್ದಾರೆ.

ಎನ್‌ಜಿಒಗಳು ತಾವು ಕೈಗೊಳ್ಳುವ ಒಟ್ಟು 105 ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಗೆ ವಿದೇಶಿ ದೇಣಿಗೆ ಪಡೆಯುವುದರ ಮೇಲೆ ಈ ಹೊಸ ನಿಯಮಗಳು ನಿರ್ಬಂಧ ಹೇರುತ್ತವೆ. ಅಲ್ಲದೇ, ಮತಾಂತರಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ವಿದೇಶಿ ದೇಣಿಗೆ ಪಡೆಯುವುದನ್ನು ಕೂಡ ನಿಷೇಧಿಸುತ್ತವೆ.

'ಅಧಿಸೂಚಿತ ಹೊಸ ನಿಯಮಗಳು ಎನ್‌ಜಿಒಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತವೆ. ಹೊಸ ನಿಯಮಗಳ ಪ್ರಕಾರ ಅವು ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟ ಸಂಸ್ಥೆಗಳಾಗಲಿವೆ. ಇಂತಹ ನಿಯಮಗಳು ಎನ್‌ಜಿಒಗಳ ಶವಪೆಟ್ಟಿಗೆಗೆ ಹೊಡೆಯುವ ಕೊನೆ ಮೊಳೆಯಂತಾಗಲಿವೆ' ಎಂದು ಸಂಸದರು ಪತ್ರದಲ್ಲಿ ವಿವರಿಸಿದ್ದಾರೆ.

'ಸರ್ಕಾರವೇ ಸಿದ್ಧಪಡಿಸುವ ಪಟ್ಟಿಯಲ್ಲಿನ ಚಟುವಟಿಕೆಗಳನ್ನೇ ಆಯ್ಕೆ ಮಾಡಿಕೊಳ್ಳುವಂತೆ ಎನ್‌ಜಿಒಗಳ ಮೇಲೆ ಒತ್ತಡ ಹಾಕಲಾಗುತ್ತದೆ. ಅವುಗಳ ಕಾರ್ಯ ಕ್ಷೇತ್ರದ ಮೇಲೂ ನಿರ್ಬಂಧ ಹೇರಲಾಗುತ್ತದೆ. ಎನ್‌ಜಿಒಗಳು ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಕಾರ್ಯ ನಿರ್ವಹಣೆ ಮಾಡುವುದನ್ನು ಇಂತಹ ಕ್ರಮಗಳು ತಡೆಯಲಿವೆ' ಎಂದು ಸಂಸತ್‌ನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಅಧ್ಯಕ್ಷರೂ ಆಗಿರುವ ವೇಣುಗೋಪಾಲ್ ಪ್ರತಿಪಾದಿಸಿದ್ದಾರೆ.

'ಬಲವಂತದ ಮತಾಂತರವನ್ನು ಯಾರೂ ಬೆಂಬಲಿಸುವುದಿಲ್ಲ. ಆದರೆ, ಮತಾಂತರ ಕುರಿತಂತೆ ಎಫ್‌ಸಿಆರ್‌ಎ ನಿಯಮಗಳಲ್ಲಿ ಸ್ಪಷ್ಟ ವ್ಯಾಖ್ಯಾನವೇ ಇಲ್ಲದಿರುವುದು ಸಮಸ್ಯೆಗೆ ಕಾರಣವಾಗಲಿದೆ' ಎಂದು ಸಿಪಿಎಂ ಸಂಸದ ಜಾನ್ ಬ್ರಿಟ್ಟಾಸ್ ವಿವರಿಸಿದ್ದಾರೆ.

'ಪಾಸ್‌ಪೋರ್ಟ್ ಪೌರತ್ವ ಪುರಾವೆ ಅಲ್ಲ'

ನವದೆಹಲಿ (ಪಿಟಿಐ): ಪಾಸ್‌ಪೋರ್ಟ್ ಎಂದಿಗೂ ಪೌರತ್ವ ಸಾಬೀತುಪಡಿಸುವ ದಾಖಲೆಯಾಗಿರಲಿಲ್ಲ ಮತ್ತು ನರೇಂದ್ರ ಮೋದಿ ಸರ್ಕಾರವು ಕಳೆದ 12 ವರ್ಷಗಳಲ್ಲಿ ಈ ಬಗ್ಗೆ ಯಾವುದೇ ಹೊಸ ನಿರ್ಧಾರವನ್ನು ತೆಗೆದುಕೊಂಡಿಲ್ಲ ಎಂದು ಸರ್ಕಾರಿ ಮೂಲಗಳು ಗುರುವಾರ ತಿಳಿಸಿವೆ.

'ಪಾಸ್‌ಪೋರ್ಟ್ ಪ್ರಯಾಣ ದಾಖಲೆ ಮಾತ್ರ, ಅದು ಪೌರತ್ವಕ್ಕೆ ಪುರಾವೆಯಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಸ್ಪಷ್ಟಪಡಿಸಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿತ್ತು.
ಈ ವರದಿ ಕುರಿತಂತೆ, 'ಪಾಸ್‌ಪೋರ್ಟ್ ಪೌರತ್ವದ ಪುರಾವೆಯಲ್ಲ ಎಂಬುದು ಇಂದು–ನಿನ್ನೆ ತೆಗೆದುಕೊಂಡ ನಿರ್ಧಾರ ಅಲ್ಲ' ಎಂದು ಮೂಲಗಳು ಹೇಳಿವೆ.

'ಪಾಸ್‌ಪೋರ್ಟ್, ಒಬ್ಬ ವ್ಯಕ್ತಿಯ ಪೌರತ್ವ ಸಾಬೀತುಪಡಿಸುವ ದಾಖಲೆ ಅಲ್ಲ ಎಂಬುದು ನಿನ್ನೆ ಅಥವಾ ಕಳೆದ 12 ವರ್ಷಗಳಲ್ಲಿ ನಿರ್ಧರಿಸಲಾಗಿಲ್ಲ. ಪಾಸ್‌ಪೋರ್ಟ್ ಎಂದಿಗೂ ಪೌರತ್ವದ ಪುರಾವೆಯಾಗಿರಲಿಲ್ಲ. 1967ರ ಪಾಸ್‌ಪೋರ್ಟ್ ಕಾಯ್ದೆ ಪ್ರಕಾರ, ನಾಗರಿಕರಲ್ಲದವರಿಗೂ ಪಾಸ್‌ಪೋರ್ಟ್‌ಗಳನ್ನು ನೀಡಬಹುದು' ಎಂದು ತಿಳಿಸಿವೆ.

'ಪಾಸ್‌ಪೋರ್ಟ್ ಪ್ರಯಾಣ ದಾಖಲೆಯಾಗಿದೆ. ಅದು ಪೌರತ್ವದ ಪುರಾವೆಯಲ್ಲ' ಎಂದು ವಿದೇಶಾಂಗ ಸಚಿವಾಲಯದ ಅಧಿಕಾರಿಗಳು ಹೇಳಿರುವುದನ್ನು ಉಲ್ಲೇಖಿಸಿ ಮಾಧ್ಯಮಗಳು ಬುಧವಾರ ವರದಿ ಮಾಡಿದ್ದವು.

'ಪಾಸ್‌ಪೋರ್ಟ್, ಪೌರತ್ವದ ದಾಖಲೆಯಲ್ಲ ಎಂಬುದನ್ನು ಬಾಂಬೆ ಹೈಕೋರ್ಟ್ 2013ರಲ್ಲಿ ನೀಡಿರುವ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ' ಎಂದು ಅಧಿಕೃತ ಮೂಲಗಳು ಹೇಳಿವೆ.

ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಕುರಿತ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್, 'ಆಧಾರ್, ಪೌರತ್ವದ ನಿರ್ಣಾಯಕ ಪುರಾವೆಯಲ್ಲ, ಕೇವಲ ಗುರುತಿನ ದಾಖಲೆ' ಎಂದು ಹೇಳಿತ್ತು.

ಶುಲ್ಕ ಹೆಚ್ಚಳ

ಕೇಂದ್ರ ಸರ್ಕಾರವು 1980ರ ಪಾಸ್‌ಪೋರ್ಟ್ ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ಪಾಸ್‌ಪೋರ್ಟ್ ಅರ್ಜಿ ಶುಲ್ಕವನ್ನು ಪರಿಷ್ಕರಿಸಿದೆ. 36 ಪುಟಗಳನ್ನು ಹೊಂದಿರುವ ಹೊಸ ಪಾಸ್‌ಪೋರ್ಟ್‌ನ ಅರ್ಜಿ ಶುಲ್ಕವನ್ನು ಪ್ರಸ್ತುತ ₹1,500ರಿಂದ ₹2,500ಕ್ಕೆ ಹೆಚ್ಚಿಸಿದೆ.

ಇದೇ ವರ್ಗದ ಪಾಸ್‌ಪೋರ್ಟ್‌ನ ತತ್ಕಾಲ್ ಅರ್ಜಿ ಶುಲ್ಕವನ್ನು ಈಗಿನ ₹3,500ರಿಂದ ₹5,000ಕ್ಕೆ ಹೆಚ್ಚಳ ಮಾಡಿದೆ. ಪರಿಷ್ಕೃತ ಶುಲ್ಕ ಜುಲೈ 1ರಿಂದ ಜಾರಿಗೆ ಬರಲಿದೆ. 60 ಪುಟಗಳ ಪಾಸ್‌ಪೋರ್ಟ್‌ನ ಅರ್ಜಿ ಶುಲ್ಕವನ್ನು ಪ್ರಸ್ತುತ ₹2,000ದಿಂದ ₹3,500ಕ್ಕೆ ಹಾಗೂ ತತ್ಕಾಲ್‌ನಲ್ಲಿ ಇದೇ ವರ್ಗದ ಪಾಸ್‌ಪೋರ್ಟ್ ಅರ್ಜಿ ಶುಲ್ಕವನ್ನು ಈಗಿನ ₹4,000ದಿಂದ ₹6,000ಕ್ಕೆ ಏರಿಕೆ ಮಾಡಲಾಗಿದೆ.

> ಈಗಿನ ಸಂದರ್ಭದಲ್ಲಿ ಹಿಂದೂ ಹಾಗೂ ಬಿಜೆಪಿ ಮತದಾರನಾಗಿರಬೇಕಾದುದು ಪೌರತ್ವದ ಏಕೈಕ ಪುರಾವೆಯಾಗಿದೆ ಎಂದು ತೋರುತ್ತದೆ
> **ಮಹುವಾ ಮೊಯಿತ್ರಾ,** ಟಿಎಂಸಿ ನಾಯಕಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ದಾವಣಗೆರೆ ವಿಭಾಗ, ದಾವಣಗೆರೆ

1. ಸಂಖ್ಯೆ. ಕರಾಸಾ/ದಾವಿ/ಸಂಚಾರ/ವಾಣಿಜ್ಯ/869/2026–27 ದಿನಾಂಕ: 25/06/2026
2. ಸಂಖ್ಯೆ ಕರಾಸಾ/ದಾವಿ/ಸಂಚಾರ/ವಾಣಿಜ್ಯ/871/2026–27 ದಿನಾಂಕ: 25/06/2026

ಇ-ಟೆಂಡರ್ ಪ್ರಕಟಣೆ ಸಂಖ್ಯೆ : 31 & 33 /2026–27

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, ಸ್ಮಾರ್ಟ್ ಸಿಟಿ ಅಡಿಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ದಾವಣಗೆರೆ ಬಸ್ ನಿಲ್ದಾಣ, ಬೇತೂರು ರಸ್ತೆಯಲ್ಲಿರುವ ಬಸ್ ನಿಲ್ದಾಣ, ಜಗಳೂರು ಹಾಗೂ ಮಲೇಬೆನ್ನೂರು ಬಸ್ ನಿಲ್ದಾಣದಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗಳಿಗೆ ಹಾಗೂ ದಾವಣಗೆರೆ ಬಸ್ ನಿಲ್ದಾಣದಲ್ಲಿ ಹೊರ ಆವರಣ ಜಾಹೀರಾತು ಅಳವಡಿಸಲು ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.
ಸದರಿ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿ:25.06.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 14.07.2026ರ ಸಂಜೆ 5.00 ಗಂಟೆಗೆ.
ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ 7760990452, ಸಹಾಯಕ ಸಂಚಾರ ಅಧೀಕ್ಷಕರು 7022030183.
ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕ ರಾ ರ ಸಾ ನಿಗಮ, ದಾವಣಗೆರೆ
ವಾಸಾಸಂಇ/ಬೆಂ.ನಗರ/1356/ಆಕಾರ್/2026–27

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ. ಭಾರತ.
ಸಂಖ್ಯೆ : ವಿ.ತಾ.ವಿ./ಬೆ/ಎಸ್.ಎ.ಪಿ./ಸಿ.ಡಬ್ಲ್ಯೂ–1/ಟಿ–756/2026–27/1409
ದಿನಾಂಕ : 25–06–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು : Tender for Establishment of Centre of Excellence in Electrical Vehicle Power Train Technologies at VTU Regional Centre, Bengaluru. ಟೆಂಡರ್ ಪ್ರೀ–ಬಿಡ್ ಮಿಟಿಂಗ್ ದಿನಾಂಕ : 02–07–2026 ರ ಬೆಳಿಗ್ಗೆ 11.00 ಗಂಟೆಗೆ ಆನ್‌ಲೈನ್ ಮೂಲಕ ಟೆಂಡರಿಗಿಟ್ಟ ಮೊತ್ತ : ರೂ. 4,99,00,000/– ಮುಂಗಡ ಠೇವಣಿ : ರೂ. 7,50,000/–, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 10–07–2026 ರ ಮಧ್ಯಾಹ್ನ 2.30 ರವರೆಗೆ. ಟೆಂಡರ್ ತೆರೆಯುವ ದಿನಾಂಕ : 11–07–2026 ರ ಸಂಜೆ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಮತ್ತು www.vtu.ac.in ನೋಡಬಹುದು.
ಸಹಿ/– ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/501/ಮಣಿಪಾಲ್/2026–27

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಬಿಟಿಎಂ ಲೇಔಟ್ ವಿಭಾಗ, ಜಿ.ಬಿ.ಎ ಸಂಕೀರ್ಣ, 2ನೇ ಮಹಡಿ,
ಲಸ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು – 560030.
ಸಂಖ್ಯೆ: ಕಾಅ/ಬಿಟಿಎಂ/ಕೆಪಿಪಿಪಿ/08/2026–27 ದಿನಾಂಕ: 25–06–2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರವು ಈ ಕೆಳಗೆ ಪಟ್ಟಿ ಮಾಡಿರುವ ಕಾಮಗಾರಿಯನ್ನು ಕೈಗೊಳ್ಳಲು **ಬಜೆಟ್‌ನಲ್ಲಿ ದಿನಾಂಕ: 18–06–2026 ರ ಜಿ.ಓ. ಸಂಖ್ಯೆ: ಯುಡಿಡಿ 429 ಎಂಎನ್‌ಯು 2026, ಬೆಂಗಳೂರು** ಅನುಸಾರ ತಾಂತ್ರಿಕ ಅನುಮೋದನೆ ನೀಡಿ ಮತ್ತು ಮಂಜೂರು ಮಾಡಿದೆ. ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಲೇಔಟ್ ವಿಭಾಗ, ಬೆಂದನಪಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	1ನೇ ಕರೆ
1	ಬಿಟಿಎಂ ಲೇಔಟ್ ವಿಭಾಗದ ಆರ್ಟಿರಿಯಲ್, ಸಬ್ ಆರ್ಟಿರಿಯಲ್ ಮತ್ತು ವಾರ್ಡ್ ರಸ್ತೆಗಳಲ್ಲಿ ರಸ್ತೆ ಡಾಂಬರೀಕರಣ, ಒಳಚರಂಡಿ ಸುಧಾರಣೆ ಮತ್ತು ಹೂಳು ತೆಗೆಯುವುದು, ಪಾದಚಾರಿಮಾರ್ಗ ಅಭಿವೃದ್ಧಿ, ಮೀಡಿಯನ್ ಮಾರ್ಕಿಂಗ್, ರೋಡ್ ಸ್ಟಡ್ ಅಳವಡಿಸುವುದು ಮತ್ತು ಇತರೆ ಅಭಿವೃದ್ಧಿ ಕೆಲಸಗಳು ಒಳಗೊಂಡಂತೆ ಬಿಟಿಎಂ ಲೇಔಟ್ ಮತಕ್ಷೇತ್ರದಲ್ಲಿ ಸಮಗ್ರ ಮೂಲಸೌಕರ್ಯ ಸುಧಾರಣೆ ಕಾಮಗಾರಿ. **(3 ಕಾಮಗಾರಿಗಳು) – (ಪ್ಯಾಕೇಜ್ ಸಂಖ್ಯೆ.8) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 1500.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 15,00,000/– (ರೂ. 1.00 ಲಕ್ಷ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಾವತಿಸಬೇಕು ಮತ್ತು ಬಾಕಿ ಮೊತ್ತ ರೂ. 14,00,000/– ಗಳನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಪಾವತಿಸಬೇಕು).**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: **29–06–2026** ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **01–07–2026 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ವಲಯ–2, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ ವಲಯ ಕಛೇರಿ, ಬೆಂಗಳೂರು – 560068 ಇಲ್ಲಿ ನಡೆಯುವುದು.** 3) ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **06–07–2026 ರಂದು 16.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **07–07–2026 ರಂದು 16.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಾಂತ್ರಿಕ ಪ್ರಸ್ತಾವನೆಗಳು ಅನುಮೋದನೆಯಾದ ನಂತರ ಕೆ.ಪಿ.ಪಿ. ಪೋರ್ಟಲ್ ಮೂಲಕ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಬಿಟಿಎಂ ಲೇಔಟ್ ವಿಭಾಗ, ಬೆಂದನಪಾ.

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಸರ್ವಜ್ಞನಗರ ವಿಭಾಗ, 9ನೇ ಸಿ ಮುಖ್ಯರಸ್ತೆ,
ಹೆಚ್‌ಆರ್‌ಬಿಆರ್ ಬಡಾವಣೆ, 1ನೇ ಹಂತ ಕಲ್ಯಾಣನಗರ, ಬೆಂಗಳೂರು – 560 043.
ಸಂಖ್ಯೆ:ಕಾಪಾಅ/ಸನವಿ/ಕೆಪಿಪಿಪಿ/ಟೆಂಡರ್/04/2026–27 ದಿನಾಂಕ: 25–06–2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಸರ್ವಜ್ಞನಗರ ವಿಭಾಗ) ಬೆಂಉನಪಾ, ವಲಯ–1 ಬೆಂಗಳೂರು ಇವರು ಆಯುಕ್ತರು, ಬೆಂಉನಪಾ ಇವರ ಪರವಾಗಿ ಜಿ.ಬಿ.ಎ ಅಥವಾ ತತ್ಸಮಾನವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು
1.	**ಪ್ಯಾಕೇಜ್ –1,** ವಾರ್ಡ್ ಸಂಖ್ಯೆ –32 ಬಾಣಸವಾಡಿ ಮತ್ತು 31 ಕಲ್ಯಾಣನಗರ , 23 ಹೆಣ್ಣೂರು, 24 ಹೆಚ್‌ಬಿಆರ್, ಹೆಚ್ ಆರ್ ಬಿಆರ್ ಬಡಾವಣೆ 1ನೇ ಬ್ಲಾಕ್, 8ನೇ ಮುಖ್ಯರಸ್ತೆ ಮತ್ತು 2 ಮಾರುತಿ ಬಡಾವಣೆ ಅಪ್ರೋಚ್ ರಸ್ತೆಗಳು 6ನೇ ಅಡ್ಡರಸ್ತೆ, ಹಾಗೂ ಪ್ರಕೃತಿ ಬಡಾವಣೆಯ 1ನೇ ಅಡ್ಡರಸ್ತೆಗಳು, ಟೆಲಿಕಾಂ ಬಡಾವಣೆ 3,4,9,10 ನೇ ಅಡ್ಡರಸ್ತೆಗಳು, ಚಿಕ್ಕಣ್ಣ ಬಡಾವಣೆ ಅಡ್ಡರಸ್ತೆಗಳು, ಭೈರವೇಶ್ವರ ಬಡಾವಣೆ 2ನೇ ಎ, 2ನೇ ಮುಖ್ಯರಸ್ತೆಗಳು, ನಾಗವಾರ ಗ್ರಾಮದಲ್ಲಿ ದ್ವಿತೀಯ ಹಂತದ ಚರಂಡಿ, ಹೆಚ್‌ಬಿಆರ್ ಬಡಾವಣೆಯ, 2 ಮತ್ತು 3ನೇ ಬ್ಲಾಕ್ ಮಟ್ಕರ್ ಮುಖ್ಯರಸ್ತೆ, 1ರಿಂದ6ನೇ ಅಡ್ಡರಸ್ತೆಗಳು, 1ನೇ ಎ ಮುಖ್ಯರಸ್ತೆ ಮತ್ತು ಸಿಮೆಟ್ರಿ ರಸ್ತೆ, 16ರಿಂದ 21ನೇ ಅಡ್ಡರಸ್ತೆಗಳು, ಯಾಸೀನ್‌ನಗರದ 10ನೇ ಅಡ್ಡರಸ್ತೆಗಳು, ಬೃಂದಾವನನಗರ, ಯಾಸೀನ್‌ನಗರ ಬೃ.ನೀ.ಕಾ ಸರ್ವಿಸ್ ರಸ್ತೆ, ಹೆಣ್ಣೂರು ಮುಖ್ಯರಸ್ತೆ, ಶನಿಮಹಾತ್ಮ ದೇವಸ್ಥಾನ 4ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆ, 1ನೇ ಎ 1ನೇ ಬಿ ಅಡ್ಡರಸ್ತೆಗಳು, 10ನೇ ಮುಖ್ಯರಸ್ತೆ, 7ನೇ ಮುಖ್ಯರಸ್ತೆ ಹೆಚ್‌ಬಿಆರ್ ಬಡಾವಣೆ 4ನೇ ಬ್ಲಾಕ್, ಹೆಚ್‌ಬಿಆರ್ ಬಡಾವಣೆ 9ನೇ ಮುಖ್ಯರಸ್ತೆ ಹೆಚ್‌ಬಿಆರ್ ಬಡಾವಣೆ 4ನೇ ಬ್ಲಾಕ್ 10,11 ನೇ ಅಡ್ಡರಸ್ತೆಗಳು, ಹೆಚ್‌ಬಿಆರ್ ಬಡಾವಣೆ 4ನೇ ಬ್ಲಾಕ್ 6,7,8ನೇ ಅಡ್ಡರಸ್ತೆಗಳಿಂದ ಬುದ್ಧಶೈಲ ಬಡಾವಣೆ ಅಡ್ಡರಸ್ತೆಯವರೆಗೆ ಮತ್ತು ಸಬ್ ಅಡ್ಡರಸ್ತೆಗಳು, ಅಶೋಕ ಲೆಜೆಂಡ್ಸ್ ಅಪಾರ್ಟ್‌ಮೆಂಟ್ ಹತ್ತಿರ ರಸ್ತೆಗಳು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಅನುಬಂಧ ಸಂಖ್ಯೆ–04 ಸರ್ಕಾರಿ ಆದೇಶ ಸಂಖ್ಯೆ–38,40,41,42,43) ಅಂದಾಜು ಮೊತ್ತ **₹.1000.00** ಲಕ್ಷಗಳು, ಇಎಂಡಿ : **₹.15,00,000.00 (1** ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.14,00,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು).
2.	**ಪ್ಯಾಕೇಜ್ –2,** ವಾರ್ಡ್ ಸಂಖ್ಯೆ–22 ನಾಗವಾರ , 25–ಗೋವಿಂದಪುರ, 26 ಸಮಾಧಾನನಗರ ಮತ್ತು ವಾರ್ಡ್ ಸಂಖ್ಯೆ–27 ಕೆ.ಜಿ ಹಳ್ಳಿಯ ಕುಪ್ಪುಸ್ವಾಮಿ ಬಡಾವಣೆಯ 2ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ ಮತ್ತು ಸಬ್ ಅಡ್ಡರಸ್ತೆಗಳು, ನಾಗವಾರ ಗ್ರಾಮದ ಸಬ್ ಅಡ್ಡರಸ್ತೆಗಳು ಎಲ್ಲಮ್ಮ ದೇವಸ್ಥಾನ ರಸ್ತೆಯ 1,2 ಮತ್ತು ಅಡ್ಡರಸ್ತೆಗಳು ಭೈರಕುಂಟೆಯ 4,5,6,7,8 ಮತ್ತು 9ನೇ ಅಡ್ಡರಸ್ತೆಗಳು ಗೋವಿಂದಪುರ ಮುಖ್ಯರಸ್ತೆ 1,2 ಮತ್ತು 3ನೇ ಅಡ್ಡರಸ್ತೆಗಳು ಹನಿಫಿಯಾ ಮಸೀದಿ ಹಿಂಭಾಗ ರಷದ್‌ನಗರ ಮತ್ತು ಭೈರಪ್ಪ ಬಡಾವಣೆಯ 8,11 ಮತ್ತು 18ನೇ ಅಡ್ಡರಸ್ತೆಗಳು ಎಎಂಸಿ ಮುಖ್ಯರಸ್ತೆ, ಬಸವನಗರ ಮತ್ತು 1,2ನೇ ಅಡ್ಡರಸ್ತೆಗಳು ಗಾಂಧಿನಗರದ 1,2ನೇ ಮುಖ್ಯರಸ್ತೆಗಳು, ವಿನೋಭಾನಗರ 10ನೇ ಅಡ್ಡರಸ್ತೆ ಮತ್ತು ಸಬ್ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಬಿಎಂ ಬಡಾವಣೆ, ಇದಾಯತ್‌ನಗರ, ಮುಕ್ತಿನಗರದ ಅಡ್ಡರಸ್ತೆಗಳಲ್ಲಿ ರಸ್ತೆಗಳು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಅನುಬಂಧ ಸಂಖ್ಯೆ–04 ಸರ್ಕಾರಿ ಆದೇಶ ಸಂಖ್ಯೆ–39,44,45 ಮತ್ತು 46) ಅಂದಾಜು ಮೊತ್ತ **₹.1000.00** ಲಕ್ಷಗಳು, ಇಎಂಡಿ : **₹.15,00,000.00 (1** ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.14,00,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು).
3.	**ಪ್ಯಾಕೇಜ್ –3,** ವಾರ್ಡ್ ಸಂಖ್ಯೆ–30 ಕಾಚರಕನಹಳ್ಳಿ, 31 ಕಲ್ಯಾಣನಗರ ಮತ್ತು 28 ವೆಂಕಟೇಶಪುರ, 29 ಲಿಂಗರಾಜಪುರದ ಪಿಳ್ಳಣ್ಣ ಗಾರ್ಡನ್, ಟೆಲಿಗ್ರಾಫ್‌ಬೀದಿ, ಪಿಎನ್‌ಟಿ ಕಾಲೋನಿ, ರಾಮಚಂದ್ರ ಬಡಾವಣೆ, ಕೆಎಸ್‌ಎಫ್‌ಸಿ ಬಡಾವಣೆ, ಗ್ರೀನ್ಸ್ ಗಾರ್ಡನ್, ತಿಪ್ಪಣ್ಣ ಬಡಾವಣೆ, ಸುಭಾಷ್ ಬಡಾವಣೆ, ಲಕ್ಷ್ಮೀಪತಿ ಬಡಾವಣೆ ಮತ್ತು ಕಮ್ಮನಹಳ್ಳಿ ಮುಖ್ಯರಸ್ತೆ, ಹೆಚ್‌ಬಿಆರ್ ಬಡಾವಣೆ 2ನೇ ಬ್ಲಾಕ್ ಹೆಚ್‌ಆರ್‌ಬಿಆರ್ ಬಡಾವಣೆ 3ನೇ ಬ್ಲಾಕ್, ಪಿಎನ್‌ಎಸ್ ಬಡಾವಣೆ, ಎಕೆ ಕಾಲೋನಿ, ಅಶ್ವಥಪ್ಪ ಬಡಾವಣೆ, ಹೆಚ್‌ಆರ್‌ಬಿಆರ್ 2ನೇ ಬ್ಲಾಕ್, 2ನೇ ಎ.ಬಿ.ಸಿ.ಡಿ.ಇ ಅಡ್ಡರಸ್ತೆಗಳಲ್ಲಿ ರಸ್ತೆಗಳು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಅನುಬಂಧ ಸಂಖ್ಯೆ–04 ಸರ್ಕಾರಿ ಆದೇಶ ಸಂಖ್ಯೆ–47,48,49,50) ಅಂದಾಜು ಮೊತ್ತ **₹.1000.00** ಲಕ್ಷಗಳು, ಇಎಂಡಿ : **₹.15,00,000.00 (1** ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.14,00,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು).
4.	**ಪ್ಯಾಕೇಜ್ –4,** ವಾರ್ಡ್ ಸಂಖ್ಯೆ–32 ಬಾಣಸವಾಡಿ, 33 ಹೆಚ್‌ಆರ್‌ಬಿಆರ್ ಬಡಾವಣೆ, 34 ಸುಬ್ಬಯ್ಯನಪಾಳ್ಯ ಮತ್ತು ವಾರ್ಡ್ ಸಂಖ್ಯೆ–35 ಕಮ್ಮನಹಳ್ಳಿಯ ಅಣ್ಣಾರೆಡ್ಡಿ ಬಡಾವಣೆ, ಗೋಪಾಲ್‌ರೆಡ್ಡಿ ಬಡಾವಣೆ, ಕೃಷ್ಣಾರೆಡ್ಡಿ ಬಡಾವಣೆ ಹೆಚ್‌ಆರ್‌ಬಿಆರ್ 1ನೇ ಬ್ಲಾಕ್ ಓಎಂಬಿಆರ್ ಬಡಾವಣೆ 8ನೇ ಅಡ್ಡರಸ್ತೆ ಆಯಿಲ್‌ಮಿಲ್ ರಸ್ತೆಯ ಹತ್ತಿರ, ಇಂದಿರಾ ಬೀದಿ, ಕಮ್ಮನಹಳ್ಳಿಗ್ರಾಮ ನಾರಾಯಣಪ್ಪ ರಸ್ತೆಯಿಂದ ಮುನಿಸ್ವಾಮಪ್ಪ ರಸ್ತೆಯವರೆಗೆ, ನಾರಾಯಣಪ್ಪ ರಸ್ತೆ ಮತ್ತು ಅಡ್ಡರಸ್ತೆಗಳು ಅಂಗನವಾಡಿ ಹತ್ತಿರ ಮುನಿಸ್ವಾಮಪ್ಪ ರಸ್ತೆ, ಆರ್‌ಎಸ್ ಪಾಳ್ಯ ಗ್ರಾಮ ಉದ್ಯಾನವನ ಹತ್ತಿರ ಮತ್ತು ಕೃಷ್ಣಪ್ಪ ಬಡಾವಣೆ, ಎ,ಬಿ ಬ್ಲಾಕ್ ಜಾನಕಿರಾಮ ಬಡಾವಣೆ, ಗುಂಡಪ್ಪ ಮಠದ ರಸ್ತೆ, ಕೃಷ್ಣಪ್ಪ ಬಡಾವಣೆ, ಮುನಿತಾಯಪ್ಪ ಬಡಾವಣೆ, ಕನಕದಾಸ ಬಡಾವಣೆ, ಸ್ಟಾರ್ ವರ್ಲ್ಡ್ ಬೇಕರಿ ಹತ್ತಿರದಿಂದ ಸದಾಶಿವ ದೇವಸ್ಥಾನದ ರಸ್ತೆಯವರೆಗೆ, ಕೆಹೆಚ್‌ಬಿ ಕ್ವಾಟರ್ಸ್ ಬಳಿ ರಸ್ತೆಗಳು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಅನುಬಂಧ ಸಂಖ್ಯೆ–04 ಸರ್ಕಾರಿ ಆದೇಶ ಸಂಖ್ಯೆ–51,52,53&54) ಅಂದಾಜು ಮೊತ್ತ **₹.1000.00** ಲಕ್ಷಗಳು, ಇಎಂಡಿ : **₹.15,00,000.00 (1** ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.14,00,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು).
5.	**ಪ್ಯಾಕೇಜ್ –5,** ವಾರ್ಡ್ ಸಂಖ್ಯೆ–29 ಲಿಂಗರಾಜಪುರ, 36 ಮಾರುತಿಸೇವಾನಗರ, 37 ಜೀವನಹಳ್ಳಿ ಮತ್ತು ವಾರ್ಡ್ ಸಂಖ್ಯೆ–22 ನಾಗವಾರದ ಜೈಭಾರತ್‌ನಗರ 7ರಿಂದ16ನೇ ಅಡ್ಡರಸ್ತೆಗಳು, ಮಾರಿಯಮ್ಮ ದೇವಸ್ಥಾದ ಬೀದಿ, ವಿವೇಕಾನಂದನಗರದ ಅಡ್ಡರಸ್ತೆಗಳು, ಡಿ' ಕೋಸ್ಟಾ ಬಡಾವಣೆ, ಬಾಲಾಜಿ ಬಡಾವಣೆ, ಲಿಂಗರಾಜಪುರ ಗ್ರಾಮ, ಎಕೆ ಕಾಲೋನಿ, ಕೆಆರ್ ಗಾರ್ಡನ್, ನಂಜುಂಡಪ್ಪ ಗಾರ್ಡನ್, ಹೀರಾಚಂದ್ ಬಡಾವಣೆ, ನಾಗಯ್ಯನಪಾಳ್ಯ ಅಡ್ಡರಸ್ತೆಗಳು, ಸತ್ಯನಗರ ಅಡ್ಡರಸ್ತೆಗಳು, ರೈಲ್ವೆ ಸಮನಾಂತರ ರಸ್ತೆಯ ದ್ವಿತೀಯ ದರ್ಜೆ ಚರಂಡಿಗಳು ಮತ್ತು ಕೆಎಸ್‌ಎಫ್‌ಸಿ ಬಡಾವಣೆಯಲ್ಲಿ ರಸ್ತೆಗಳು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಅನುಬಂಧ ಸಂಖ್ಯೆ–04 ಸರ್ಕಾರಿ ಆದೇಶ ಸಂಖ್ಯೆ–55,56,57 & 58) ಅಂದಾಜು ಮೊತ್ತ **₹.1000.00** ಲಕ್ಷಗಳು, ಇಎಂಡಿ : **₹.15,00,000.00 (1** ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.14,00,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು).
6.	**ಪ್ಯಾಕೇಜ್ –6,** ವಾರ್ಡ್ ಸಂಖ್ಯೆ–22 ನಾಗವಾರ, 23 ಹೆಣ್ಣೂರು, 24 ಹೆಚ್‌ಬಿಆರ್ ಬಡಾವಣೆ, 25 ಗೋವಿಂದಪುರದ ಮೆಹಬೂಬ್‌ನಗರ 5,8,9,10ನೇ ಅಡ್ಡರಸ್ತೆಗಳು ಮತ್ತು ವಿಹೆಚ್‌ಬಿಸಿಎಸ್ ಬಡಾವಣೆ, ಚಿಕ್ಕಗೂಳಪ್ಪ ಅಡ್ಡರಸ್ತೆಗಳು, ನೂರಾನಿ ಮಸೀದಿ, ಗ್ರೇಪ್ ಗಾರ್ಡನ್, ನಂಜುಂಡಪ್ಪ ಬಡಾವಣೆ ಅಡ್ಡರಸ್ತೆಗಳು, 5ನೇ ಬ್ಲಾಕ್ 20,21, 22ನೇ ಅಡ್ಡರಸ್ತೆಗಳು, ಕರ್ನಾಟಕ ಬ್ಯಾಂಕ್ 4ನೇ ಬ್ಲಾಕ್ ಸಿಎಂಆರ್ ಗಾರ್ಡನ್, ಹೆಚ್‌ಬಿಆರ್ ಬಡಾವಣೆ 3ನೇ ಬ್ಲಾಕ್ 8,9ನೇ ಅಡ್ಡರಸ್ತೆಗಳು 5,6ನೇ ಮುಖ್ಯರಸ್ತೆಗಳು ಜಫ್ರುಲ್ಲಾ ಬಡಾವಣೆ 1ನೇ ಅಡ್ಡರಸ್ತೆ 1,2,3 ಮತ್ತು 4ನೇ ಅಡ್ಡರಸ್ತೆಗಳು ಹೊಸ ನೊಬಲ್ ಶಾಲೆ, ನೂರ್ ಮಸೀದಿ ರಸ್ತೆಯ 9,10,11ನೇ ಅಡ್ಡರಸ್ತೆಗಳು, 4ನೇ ಅಡ್ಡರಸ್ತೆಗಳಲ್ಲಿ ರಸ್ತೆಗಳು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಅನುಬಂಧ ಸಂಖ್ಯೆ–4 ಸರ್ಕಾರಿ ಆದೇಶ ಸಂಖ್ಯೆ–59,60,61,62) ಅಂದಾಜು ಮೊತ್ತ **₹.1000.00** ಲಕ್ಷಗಳು, ಇಎಂಡಿ : **₹.15,00,000.00 (1** ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.14,00,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು).
7.	**ಪ್ಯಾಕೇಜ್ –7,** ವಾರ್ಡ್ ಸಂಖ್ಯೆ–29 ಲಿಂಗರಾಜಪುರ, 26 ಸಮಾಧಾನನಗರ, 27 ಕೆ.ಜಿ ಹಳ್ಳಿ, 28 ವೆಂಕಟೇಶಪುರದ ಚುನಾ ಲೇನ್ ಮತ್ತು ಶಾಂಪುರ ಮುಖ್ಯರಸ್ತೆ, ಮಕ್ಕಾ ಮಸೀದಿ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳು ರೈಲ್ವೆ ಸಮನಾಂತರ ರಸ್ತೆಗಳು ಇಡಬ್ಲ್ಯೂಎಸ್ ಕ್ವಾಟರ್ಸ್ ಹಿಂಬದಿ, ಪ್ರಾಥಮಿಕ ಆರೋಗ್ಯ ಸುರಕ್ಷಾ ಕೇಂದ್ರದ ಹಿಂಬದಿ, ಮಾರಿಯಮ್ಮ ದೇವಸ್ಥಾನದ ಸುತ್ತಮುತ್ತಲ ಪ್ರದೇಶ, ಆರೋಕ್ಯಮ್ಮ ಬಡಾವಣೆಯ ಅಡ್ಡರಸ್ತೆಗಳು, ಪಿಎನ್‌ಟಿ ಕಾಲೋನಿ ಮತ್ತು ಪಿಳ್ಳಣ್ಣ ಗಾರ್ಡನ್ ಮುಖ್ಯರಸ್ತೆ, ಸೇಠ್‌ಪಾಳ್ಯ, ಕರಿಯಣ್ಣ ಪಾಳ್ಯ, 1ರಿಂದ 7ನೇ ಅಡ್ಡರಸ್ತೆಗಳು ಸಿದ್ಧಾರ್ಥ ಶಾಲೆ ರಸ್ತೆಗಳಲ್ಲಿ ರಸ್ತೆಗಳು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಅನುಬಂಧ ಸಂಖ್ಯೆ–4 ಸರ್ಕಾರಿ ಆದೇಶ ಸಂಖ್ಯೆ–63,64,65,66) ಅಂದಾಜು ಮೊತ್ತ **₹.900.00** ಲಕ್ಷಗಳು, ಇಎಂಡಿ : **₹.13,50,000.00 (1** ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.12,50,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು).
8.	**ಪ್ಯಾಕೇಜ್ –8,** ವಾರ್ಡ್ ಸಂಖ್ಯೆ–33 ಹೆಚ್‌ಆರ್‌ಬಿಆರ್ ಬಡಾವಣೆ, 30 ಕಾಚರಕನಹಳ್ಳಿ, 31 ಕಲ್ಯಾಣನಗರ, 32 ಬಾಣಸವಾಡಿಯ ರಾಮಯ್ಯ ಬಡಾವಣೆ, ವಾಲ್ಮೀಕಿ ರಸ್ತೆ 10ನೇ ಅಡ್ಡರಸ್ತೆ, ಯಲ್ಲಮ್ಮ ರಸ್ತೆ, ಅರಳಿಮರ ರಸ್ತೆ, ಹೆಚ್‌ಆರ್‌ಬಿಆರ್ ಬಡಾವಣೆಯ 2ನೇ ಬ್ಲಾಕ್‌ನ 7ನೇ ಎ ಮುಖ್ಯರಸ್ತೆ, ಚೇರ್‌ಮನ್ ಬಡಾವಣೆ, ಹೆಚ್‌ಆರ್‌ಬಿಆರ್ ಬಡಾವಣೆಯ 1ನೇ ಬ್ಲಾಕ್ 1ನೇ ಎ ಮತ್ತು 1ನೇ ಬಿ ಅಡ್ಡರಸ್ತೆಗಳು, ಲಕ್ಷ್ಮಮ್ಮ ಬಡಾವಣೆ, ಚಂದ್ರಮ್ಮ ಬಡಾವಣೆ, ಗ್ರೀನ್ ಪಾರ್ಕ್ ಬಡಾವಣೆ, ಹೆಚ್‌ಆರ್‌ಬಿಆರ್ ಬಡಾವಣೆಯ 1ನೇ ಬ್ಲಾಕ್ 8ನೇ ಎ,ಬಿ,ಸಿ,ಡಿ ಅಡ್ಡರಸ್ತೆಗಳು ಭುವನಗಿರಿ, ಸೀತಮ್ಮ ರಸ್ತೆ, ಕಾಳಮ್ಮ ರಸ್ತೆ, ಚಿನ್ನಪ್ಪ ರಸ್ತೆ, ನೇತಾಜಿ ರಸ್ತೆ, ವಿನಾಯಕ ರಸ್ತೆ, ಸಂಪಣ್ಣ ರಸ್ತೆಗಳಲ್ಲಿ ರಸ್ತೆಗಳು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಅನುಬಂಧ ಸಂಖ್ಯೆ–4 ಸರ್ಕಾರಿ ಆದೇಶ ಸಂಖ್ಯೆ–67,68,69 ಮತ್ತು70) ಅಂದಾಜು ಮೊತ್ತ **₹.1000.00** ಲಕ್ಷಗಳು, ಇಎಂಡಿ : **₹.15,00,000.00 (1** ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.14,00,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು).
9.	**ಪ್ಯಾಕೇಜ್ –9,** ವಾರ್ಡ್ ಸಂಖ್ಯೆ–37 ಜೀವನಹಳ್ಳಿ, 34 ಸುಬ್ಬಯ್ಯನಪಾಳ್ಯ, 35 ಕಮ್ಮನಹಳ್ಳಿ, 36 ಮಾರುತಿ ಸೇವಾನಗರದ ಅರಳಿಮರ ರಸ್ತೆ, ಸುಬ್ಬಯ್ಯನಪಾಳ್ಯ ಗ್ರಾಮ, ಪಂಚಮುಖಿ ದೇವಸ್ಥಾನ, ಪಟೇಲ್ ನಂಜುಂಡಪ್ಪ ರಸ್ತೆ, ಮುನೇಗೌಡ ರಸ್ತೆ, ದೆಹಲಿ ನಾರಾಯಣಪ್ಪ ರಸ್ತೆ, ಜಯಭಾರತ ನಗರ 6ನೇ ಅಡ್ಡರಸ್ತೆ, ಕೂಕ್‌ಟೌನ್, ಅಶೋಕ ರಸ್ತೆ, ಉತ್ತರ ರಸ್ತೆ, ಸದ್ದಾಮಪ್ಪ ಗಾರ್ಡನ್, ಮುನಿವೀರಪ್ಪ ಲೇನ್, ಅನಂತರಾಮ ಬಡಾವಣೆ, ಕೃಷ್ಣಪ್ಪ ಲೇನ್ ರಸ್ತೆ, ಜೀವನಹಳ್ಳಿ ಕ್ರೀಡಾ ಸಂಕೀರ್ಣದ ಹತ್ತಿರ, ಮುನಿಗಾ ಬಡಾವಣೆ, ಜೀವನಹಳ್ಳಿ ಅಡ್ಡರಸ್ತೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಅನುಬಂಧ ಸಂಖ್ಯೆ–4 ಸರ್ಕಾರಿ ಆದೇಶ ಸಂಖ್ಯೆ–71,72,73 ಮತ್ತು 74) ಅಂದಾಜು ಮೊತ್ತ **₹.1000.00** ಲಕ್ಷಗಳು, ಇಎಂಡಿ : **₹.15,00,000.00 (1** ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.14,00,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು).

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **08–07–2026** ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **01–07–2026**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **08–07–2026**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **09–07–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಮೌಲ್ಯಮಾಪನಗಳಿಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ವಲಯ–1, ಬೆಂ.ಉ.ನ.ಪಾ

ಗೆಲುವಿನೊಡನೆ 32ರ ಸುತ್ತಿಗೆ ಬ್ರೆಜಿಲ್

ಮೊದಲ ಬಾರಿ ನಾಕೌಟ್‌ಗೆ ಮುನ್ನಡೆದ ದಕ್ಷಿಣ ಆಫ್ರಿಕಾ, ಕೆನಡಾ, ಬೋಸ್ನಿಯಾ

ಲಾಸ್ ಏಂಜಲೀಸ್ (ಎಎಫ್‌ಪಿ): ಸ್ಕಾಟ್ಲೆಂಡ್ ತಂಡದ ರಕ್ಷಣೆ ವಿಭಾಗದ ಲೋಪಗಳ ಲಾಭ ಎತ್ತಿದ ಬ್ರೆಜಿಲ್ ತಂಡ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಬುಧವಾರ ಗೆಲುವಿನೊಡನೆ ನಿರೀಕ್ಷೆಯಂತೆ 32ರ ಸುತ್ತಿಗೆ ಮುನ್ನಡೆಯಿತು. ದಕ್ಷಿಣ ಆಫ್ರಿಕಾ, ಕೆನಡಾ ಮತ್ತು ಬೋಸ್ನಿಯಾ–ಹರ್ಜೆಗೋವಿನಾ ತಂಡಗಳು ಇದೇ ಮೊದಲ ಬಾರಿ ನಾಕೌಟ್ ಸುತ್ತು ತಲುಪಿ ಚಾರಿತ್ರಿಕ ಸಾಧನೆಗೆ ಪಾತ್ರವಾದವು.

ಐದು ಬಾರಿಯ ವಿಶ್ವ ಚಾಂಪಿಯನ್ ಬ್ರೆಜಿಲ್ ತಂಡ ಮಯಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 3–0 ಯಿಂದ ಸ್ಕಾಟ್ಲೆಂಡ್ ತಂಡವನ್ನು ಮಣಿಸಿ 'ಸಿ' ಗುಂಪಿನಲ್ಲಿ ಮೊದಲ ಸ್ಥಾನ ಗಳಿಸಿತು. ಬ್ರೆಜಿಲ್ ಮತ್ತು ಮೊರಾಕ್ಕೊ ತಂಡಗಳು ತಲಾ ಏಳು (2 ಗೆಲುವು, 1 ಡ್ರಾ) ಅಂಕಗಳನ್ನು ಪಡೆದವು. ಆದರೆ ಗೋಲು ವ್ಯತ್ಯಾಸದ ಆಧಾರದಲ್ಲಿ ಬ್ರೆಜಿಲ್‌ಗೆ ಅಗ್ರಸ್ಥಾನ ಒಲಿಯಿತು.

2022ರ ವಿಶ್ವಕಪ್‌ನಲ್ಲಿ ಸೆಮಿಫೈನಲ್ ತಲುಪಿದ್ದ ಮೊರಾಕ್ಕೊ ತಂಡ ಅಟ್ಲಾಂಟಾದಲ್ಲಿ ನಡೆದ ಗುಂಪಿನ ಕೊನೆಯ ಪಂದ್ಯದಲ್ಲಿ ಹೈಟಿ ತಂಡವನ್ನು ಸೋಲಿಸಿತು. ಬುಧವಾರದ ಪಂದ್ಯಗಳ ಬಳಿಕ ಈ ವಿಶ್ವಕಪ್ ಅರ್ಧದಷ್ಟು ಹಾದಿ ಕ್ರಮಿಸಿದೆ. 104 ಪಂದ್ಯಗಳಲ್ಲಿ 54 ಪಂದ್ಯಗಳು ಮುಕ್ತಾಯಗೊಂಡವು.

ಮಿಂಚಿದ ಬ್ರೆಜಿಲ್: ಮಯಾಮಿಯ ಹಾರ್ಡ್‌ರಾಕ್ ಕ್ರೀಡಾಂಗಣದಲ್ಲಿ ಬ್ರೆಜಿಲ್ ತಂಡದ ಗೆಲುವಿನಿಂದ ಸ್ಕಾಟ್ಲೆಂಡ್ ಈಗ ನಿರ್ಗಮನದ ಅಂಚಿಗೆ ತಲುಪಿದೆ. ಈ ಸೋಲು 'ಟಾರ್ಟನ್ ಆರ್ಮಿ'ಯ ಉತ್ಸಾಹ ಕುಗ್ಗಿಸಿತು.

ಪಂದ್ಯಗಳು

ಟರ್ಕಿ–ಅಮೆರಿಕ ಶುಕ್ರವಾರ ಬೆಳಿಗ್ಗೆ 7.30
ಪರಗ್ವೆ–ಆಸ್ಟ್ರೇಲಿಯಾ ಶುಕ್ರವಾರ ಬೆಳಿಗ್ಗೆ 7.30
ನಾರ್ವೆ–ಫ್ರಾನ್ಸ್ ಶುಕ್ರವಾರ ರಾತ್ರಿ 12.30
ಸೆನೆಗಲ್–ಇರಾಕ್ ಶುಕ್ರವಾರ ರಾತ್ರಿ 12.30
ಕೇಪ್ ವರ್ದೆ–ಸೌದಿ ಅರೇಬಿಯಾ ಶನಿವಾರ ಬೆಳಿಗ್ಗೆ 5.30
ಉರುಗ್ವೆ–ಸ್ಪೇನ್ ಶನಿವಾರ ಬೆಳಿಗ್ಗೆ 5.30
(ಸಮಯ: ಭಾರತೀಯ ಕಾಲಮಾನ)
ಲೈವ್ ಯುನೈಟೆಡ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೀ5 ಆ್ಯಪ್

ರಕ್ಷಣಾ ಲೋಪಗಳು ಸ್ಕಾಟ್ ಪಡೆಗೆ ದುಬಾರಿಯಾಗಿ ಬ್ರೆಜಿಲ್ ಸುಲಭ ಜಯಗಳಿಸಿತು. ಒಳ್ಳೆಯ ಲಯದಲ್ಲಿರುವ ವಿನೀಷಿಯಸ್ ಜೂನಿಯರ್ ಎರಡು ಗೋಲು ಹೊಡೆದರು. ಏಳನೇ ನಿಮಿಷ ಸ್ಕಾಟ್ಲೆಂಡ್ ಡಿಫೆಂಡರ್ ಮೆಕ್‌ಕೆನ್ನಾ ಅವರ ಪ್ರಮಾದದ ಲಾಭ ಪಡೆದ ವಿನೀಷಿಯಸ್ ತಂಡಕ್ಕೆ ಮುನ್ನಡೆ ಒದಗಿಸಿದರು.

ರಿಯಲ್ ಮ್ಯಾಡ್ರಿಡ್‌ನ ಈ ಆಟಗಾರ ಮೊದಲಾರ್ಧದ ಸ್ಟಾಪೇಜ್ ಅವಧಿಯಲ್ಲಿ (45+3) ಮತ್ತೊಂದು ಗೋಲು ಹೊಡೆದರು. 60ನೇ ನಿಮಿಷ ಮಥಾಯಸ್ ಕುನ್ಹಾ ಅವರು ಬ್ರೆಜಿಲ್ ಮುನ್ನಡೆಯನ್ನು ಮತ್ತಷ್ಟು ಹಿಗ್ಗಿಸಿದರು.

ಗೋಲು ಗಳಿಸುವ ಅವಕಾಶದಲ್ಲಿ ಎಡವಿದ ನಂತರ ವಿನೀಷಿಯಸ್ ಅವರ ಹತಾಶೆಯ ಪ್ರತಿಕ್ರಿಯೆ... ಎಎಫ್‌ಪಿ ಚಿತ್ರ

ಗಾಯದಿಂದ ಚೇತರಿಸಿಕೊಂಡಿರುವ ಅನುಭವಿ ಆಟಗಾರ ನೇಮರ್ ಅವರನ್ನು ಕೋಚ್ ಕಾರ್ಲೊ ಆನ್ಸೆಲೋಟಿ ಇದೇ ಮೊದಲ ಬಾರಿ ಕಣಕ್ಕಿಳಿಸಿದರು. ಅವರು ವಿರಾಮದ ನಂತರ ಸಬ್‌ಸ್ಟಿಟ್ಯೂಟ್ ಆಟಗಾರನಾಗಿ ಆಡಿದರು.

'ನಾವು ಸಾಂಘಿಕ ಪ್ರದರ್ಶನ ನೀಡಿದೆವು. ಇದು ಸಕಾರಾತ್ಮಕ ಅಂಶ' ಎಂದು ಸಂತುಷ್ಟರಾದಂತೆ ಕಂಡ ಆನ್ಸೆಲೋಟಿ ಪ್ರತಿಕ್ರಿಯಿಸಿದರು.

ಮೊರಾಕ್ಕೊ ಮುನ್ನಡೆ: ಹಿನ್ನಡೆಯಿಂದ ಚೇತರಿಸಿಕೊಂಡ ಮೊರಾಕ್ಕೊ 4–2ರಿಂದ ಹೈಟಿ ತಂಡವನ್ನು ಸೋಲಿಸಿತು. ಅಚ್ರಫ್ ಹಕಿಮಿ (39ನೇ ನಿಮಿಷ), ಇಸ್ಮಾಯಿಲ್ ಸೈಬರಿ (45+1), ಸೌಫಿಯಾನ್ ರಹಿಮಿ (78ನೇ), ಗೆಸ್ಸಿಮೆ ಯಾಸಿನ್ (89) ಅವರು ಮೊರಾಕ್ಕೊ ಪರ ಸ್ಕೋರ್ ಮಾಡಿದರು. ಯಾಸಿನ್ ಬೌಮೌ (10ನೇ) ಮತ್ತು ವಿಲ್ಸನ್ ಇಸಿಡೊರ್ (43ನೇ) ಅವರು ಹೈಟಿ ತಂಡದ ಪರ ಗೋಲು ಗಳಿಸಿದರು.

ಕೊರಿಯಾಕ್ಕೆ ದಕ್ಷಿಣ ಆಫ್ರಿಕಾ ಆಘಾತ

ಮಾಂಟೆರಿ (ಕೆನಡಾ) (ಎಎಫ್‌ಪಿ): ದಕ್ಷಿಣ ಆಫ್ರಿಕಾ ತಂಡವು ಅಚ್ಚರಿಯ ಫಲಿತಾಂಶದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು 1–0 ಗೋಲಿನಿಂದ ಸೋಲಿಸಿ 'ಎ' ಗುಂಪಿನಿಂದ ನಾಕೌಟ್‌ಗೆ ಮುನ್ನುಗ್ಗಿತು.



ಥಪೆಲೊ ಮಸೆಕೊ

ಏಷ್ಯಾದ ದಿಗ್ಗಜ ದಕ್ಷಿಣ ಕೊರಿಯಾ ತಂಡವು ಗುಂಪಿನಿಂದ ನಾಕೌಟ್ ತಲುಪುವುದೆಂದು ನಿರೀಕ್ಷಿಸಲಾಗಿತ್ತು. ಆದರೆ 63ನೇ ನಿಮಿಷ ಥಪೆಲೊ ಮಸೆಕೊ ಪಂದ್ಯದ ನಿರ್ಣಾಯಕ ಗೋಲನ್ನು ಗಳಿಸಿ ಆಫ್ರಿಕಾ ತಂಡದ ಪಾಳಯದಲ್ಲಿ ಸಂಭ್ರಮದ ಅಲೆಗಳನ್ನೆಬ್ಬಿಸಿದರು.

'ಈ ಕ್ಷಣವನ್ನು ಬಣ್ಣಿಸಲು ಕಷ್ಟವಾಗು ತ್ತಿದೆ. ಇದೊಂದು ಅಪೂರ್ವ ಅನುಭವ' ಎಂಬುದು ದಕ್ಷಿಣ ಆಫ್ರಿಕಾ ಕೋಚ್ ಹ್ಯೂಗೊ ಬ್ರೂಸ್ ಪ್ರತಿಕ್ರಿಯೆಯಾಗಿತ್ತು.

ಆಫ್ರಿಕಾ ತಂಡವು ಭಾನುವಾರ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ 32ರ ಸುತ್ತಿನ ಮೊದಲ ಪಂದ್ಯದಲ್ಲಿ ಜಂಟಿ ಆತಿಥೇಯ ಕೆನಡಾ ತಂಡವನ್ನು ಎದುರಿಸಲಿದೆ

ಕೆನಡಾ ತಂಡವು ವ್ಯಾಂಕೂವರ್‌ನಲ್ಲಿ ಬುಧವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ 1–2 ಗೋಲುಗಳಿಂದ ಸ್ವಿಟ್ಜರ್ಲೆಂಡ್ ತಂಡಕ್ಕೆ ತಲೆಬಾಗಿದರೂ ಗೋಲು ವ್ಯತ್ಯಾಸದ ಆಧಾರದಲ್ಲಿ ಎರಡನೇ ಸ್ಥಾನ ಪಡೆಯಿತು.

ಸ್ವಿಜರ್ಲೆಂಡ್ 'ಬಿ' ಗುಂಪಿನಲ್ಲಿ 7 ಪಾಯಿಂಟ್ ಪಡೆದು ಅಗ್ರಸ್ಥಾನ ಗಳಿಸಿತು. ಕೆನಡಾ(3 ಅಂಕ) ಎರಡನೇ ಸ್ಥಾನ ಪಡೆದು ಮುಂದಿನ ಸುತ್ತಿಗೆ ಅರ್ಹತೆ ಪಡೆಯಿತು. ಇಷ್ಟೇ ಅಂಕ ಗಳಿಸಿದ ಬೋಸ್ನಿಯಾ– ಹರ್ಜೆಗೋವಿನಾ ತಂಡವು ಮೂರನೇ ಸ್ಥಾನ ಪಡೆದ ಅತ್ಯುತ್ತಮ ತಂಡಗಳಲ್ಲಿ ಒಂದೆನಿಸಿ 32ರ ಸುತ್ತಿಗೆ ಲಗ್ಗೆಯಿಟ್ಟಿತು.

ಬೋಸ್ನಿಯಾ– ಹರ್ಜೆಗೋವಿನಾ ತಂಡವು ಅಮೆರಿಕದ ಸಿಯಾಟಲ್‌ನಲ್ಲಿ ನಡೆದ ದಿನದ ಕೊನೆಯ ಪಂದ್ಯದಲ್ಲಿ 3–1 ಗೋಲುಗಳಿಂದ (ವಿರಾಮದ ವೇಳೆ 2–1 ಅಂತರ) ಕತಾರ್ ತಂಡವನ್ನು ಮಣಿಸಿತು.

ಮೆಕ್ಸಿಕೊಗೆ ಮೂರನೇ ಜಯ

ಮೆಕ್ಸಿಕೊ ಸಿಟಿಯ ಅಝ್ಟೆಕಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಆತಿಥೇಯ ಮೆಕ್ಸಿಕೊ ತಂಡ 3–0 ಗೋಲುಗಳಿಂದ ಜೆಕ್ ರಿಪಬ್ಲಿಕ್ ತಂಡವನ್ನು ಸೋಲಿಸಿ ಪರಿಪೂರ್ಣ ಸಾಧನೆಯೊಡನೆ (9 ಅಂಕ) ನಾಕೌಟ್‌ಗೆ ಲಗ್ಗೆಯಿಟ್ಟಿತು.

ಮೆಕ್ಸಿಕೊ ನಾಕೌಟ್‌ನ ತನ್ನ ಮೊದಲ ಪಂದ್ಯವನ್ನು ಭಾನುವಾರ ಇದೇ ಕ್ರೀಡಾಂಗಣದಲ್ಲಿ ಆಡಲಿದೆ.

ಗುಂಪಿನಲ್ಲಿ ಕೊನೆಯ ಸ್ಥಾನ ಪಡೆದ ಜೆಕ್ ತಂಡ ಆಡಿದ ಮೂರರಲ್ಲಿ ಎರಡು ಸೋತು, ಮತ್ತೊಂದನ್ನು ಡ್ರಾ ಮಾಡಿಕೊಂಡಿದ್ದು ತವರಿಗೆ ಮರಳಲಿದೆ. ಮೆಕ್ಸಿಕೊ ಪರ ಮಾಟಿಯೊ ಚವೆಝ್ (55ನೇ), ಜೂಲಿಯನ್ ಕ್ವಿನೊನೆಸ್ (61ನೇ ನಿಮಿಷ) ಮತ್ತು ಆಲ್ವಾರೊ ಫಿದಾಲ್ಗೊ ಅಂತಿಮ ಕ್ಷಣದಲ್ಲಿ (90+4) ಗೋಲು ಹೊಡೆದರು.

ದಾಖಲೆ: ಮೆಕ್ಸಿಕೊದ ಗಿಲೆರ್ಮೊ 'ಮೆಮೊ' ಒಚುವಾ ಅವರು ಕೊನೆಯ ಹಂತದಲ್ಲಿ ಸಬ್‌ಸ್ಟಿಟ್ಯೂಟ್ ಗೋಲ್‌ಕೀಪರ್ ಆಗಿ ಕಣಕ್ಕಿಳಿದು ದಾಖಲೆ ಸ್ಥಾಪಿಸಿದರು. ಇದು ಅವರಿಗೆ 6ನೇ ವಿಶ್ವಕಪ್.

ಭಾರತ– ಐರ್ಲೆಂಡ್ ಮೊದಲ ಟಿ20 ಕ್ರಿಕೆಟ್ ಪಂದ್ಯ ಇಂದು

ವೈಭವ್‌ಗೆ ಸ್ಥಾನ ಕಲ್ಪಿಸುವ ಸವಾಲು

ಬೆಲ್‌ಫಾಸ್ಟ್ (ಪಿಟಿಐ): ಮಿಂಚಿನ ಬ್ಯಾಟಿಂಗ್‌ನಿಂದ ಸಂಚಲನ ಮೂಡಿಸಿರುವ ಹದಿಹರೆಯದ ಆಟಗಾರ ವೈಭವ್ ಸೂರ್ಯವಂಶಿ ಅವರಿಗೆ ಆಡುವ 11ರಲ್ಲಿ ಸ್ಥಾನ ಕಲ್ಪಿಸುವುದು ಭಾರತ ತಂಡಕ್ಕೆ ಸವಾಲಾಗಿದೆ. ಶ್ರೇಯಸ್ ಅಯ್ಯರ್ ಸಾರಥ್ಯದಲ್ಲಿ ಹೊಸ ಯುಗ ಆರಂಭಿಸಲಿರುವ ಭಾರತ ತಂಡವು ಶುಕ್ರವಾರ ಆರಂಭವಾಗುವ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಎದುರಿಸಲಿದೆ.

15 ವರ್ಷ ವಯಸ್ಸಿನ ಸೂರ್ಯವಂಶಿ ಈ ಪಂದ್ಯದಲ್ಲಿ ಪದಾರ್ಪಣೆ ಮಾಡುವರೇ ಎಂಬ ಕುತೂಹಲ ಗರಿಗೆದರಿದೆ. ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಆಡಿ ಆರೆಂಜ್ ಕ್ಯಾಪ್ ಧರಿಸಿದ ಈ ಚಿಗುರುಮೀಸೆಯ ಹುಡುಗ ಇತ್ತೀಚೆಗೆ ದಂಬುಲ್ಲಾದಲ್ಲಿ ನಡೆದ ತ್ರಿಕೋನ ಏಕದಿನ ಸರಣಿಯ ಫೈನಲ್‌ನಲ್ಲಿ ಶ್ರೀಲಂಕಾ ಬೌಲರ್‌ಗಳ ಮೇಲೆ ಸವಾರಿ ಮಾಡಿ ಕೇವಲ 29 ಎಸೆತಗಳಲ್ಲಿ 94 ರನ್ ಸಿಡಿಸಿದ್ದರು.

ಕ್ರಿಕೆಟ್‌ಪ್ರೇಮಿಗಳು ಕಾತರದಿಂದ ಅವರ ಪದಾರ್ಪಣೆಗೆ ಕಾಯುತ್ತಿರಬಹುದು. ಆದರೆ ಅವರನ್ನು ಸೇರ್ಪಡೆ ಮಾಡಲು ಯಾರನ್ನು ಬಿಡಬೇಕೆಂಬ ದ್ವಂದ್ವ ಚಿಂತಕರ ಚಾವಡಿಯನ್ನು ಕಾಡಲಿದೆ. ಪ್ರಸಕ್ತ ಭಾರತದ ಅಗ್ರ ಮೂವರು ಆಟಗಾರರಾದ ಸಂಜು ಸ್ಯಾಮ್ಸನ್, ಅಭಿಷೇಕ್ ಶರ್ಮಾ ಮತ್ತು ಇಶಾನ್ ಕಿಶನ್ ಅವರನ್ನು ಕಡೆಗಣಿಸುವುದು ಸುಲಭವಲ್ಲ. ಇತ್ತೀಚೆಗೆ ಈ ಮೂವರೂ ಚುಟುಕು ಮಾದರಿಯಲ್ಲಿ ಉತ್ತಮವಾಗಿಯೇ ಆಡಿದ್ದಾರೆ. ವಿಶ್ವಕಪ್ ಫೈನಲ್‌ನಲ್ಲಿ ಮೂವರೂ ಅರ್ಧ ಶತಕಗಳನ್ನು ಬಾರಿಸಿದ್ದಾರೆ.

ವೈಭವ್‌ಗೆ ಅವಕಾಶ ನೀಡಬೇಕಾದರೆ ಸ್ಯಾಮ್ಸನ್– ಅಭಿಷೇಕ್ ಇವರಲ್ಲಿ ಒಬ್ಬರನ್ನು ಕೈಬಿಡಬೇಕಾಗುತ್ತದೆ. ಇಲ್ಲವೇ ಸ್ಯಾಮ್ಸನ್ ಅವರನ್ನು ಕೆಳಕ್ರಮಾಂಕದಲ್ಲಿ ಆಡಿಸಬೇಕಾಗುತ್ತದೆ. ಆದರೆ ನಾಲ್ಕು ಮತ್ತು ಐದನೇ ಕ್ರಮಾಂಕದಲ್ಲಿ ಈಗ ಕ್ರಮವಾಗಿ ನಾಯಕ ಶ್ರೇಯಸ್ ಅಯ್ಯರ್ ಮತ್ತು ಉಪನಾಯಕ ತಿಲಕ್ ವರ್ಮಾ ಅವರು ಆಡುವ ಸಾಧ್ಯತೆ ಬಲವಾಗಿದೆ.

ವೈಭವ್ ಸೂರ್ಯವಂಶಿ

INDIA VS IRELAND
TODAY, 5:30 PM
SONY SPORTS 1 SONY SPORTS 4 SONY liv
ಕನ್ನಡ

ಹೀಗಾಗಿ ಆರನೇ ಕ್ರಮಾಂಕವೊಂದೇ ಉಳಿದಿದೆ. ಆದರೆ ಈ ಕ್ರಮಾಂಕದಲ್ಲಿ ಸಾಮಾನ್ಯವಾಗಿ ಶಿವಂ ದುಬೆ, ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ಹೊಸಮುಖ ಸೂರ್ಯಾಂಶ್ ಶೆಡ್ಗೆ ಅಂಥ ಆಲ್‌ರೌಂಡರ್‌ಗಳು ಆಡುತ್ತಾರೆ. ಒಂದೊಮ್ಮೆ ಆರನೇ ಕ್ರಮಾಂಕದಲ್ಲಿ ಆಡಿಸಿದರೆ, ಒಬ್ಬ ಬೌಲರ್‌ನನ್ನು ಕೈಬಿಡಬೇಕಾಗುತ್ತದೆ. ಆದರೆ ಈ ವಿಭಾಗವು ಬೂಮ್ರಾ, ಸಿರಾಜ್, ವರುಣ್ ಚಕ್ರವರ್ತಿ ಅವರಿಲ್ಲದೇ ಸೊರಗಿದೆ. ಅಗ್ರ ಕ್ರಮಾಂಕದಲ್ಲಿ ಆಡಿದಾಗ ಸಂಜು 28 ಇನಿಂಗ್ಸ್‌ಗಳಲ್ಲಿ 926 ರನ್ ಕಲೆಹಾಕಿ ಸಾಮರ್ಥ್ಯ ತೋರಿದ್ದಾರೆ.

ಅಭಿಷೇಕ್ ವಿಶ್ವ ಕ್ರಮಾಂಕದಲ್ಲಿ ಮೊದಲ ಸ್ಥಾನದಲ್ಲಿದ್ದು, ಅವರನ್ನು ಕೆಳಕ್ರಮಾಂಕದಲ್ಲಿ ಆಡಿಸುವ ಸಾಧ್ಯತೆಯಿಲ್ಲ. ಪೂರ್ಣ ಪ್ರಮಾಣದಲ್ಲಿ ನಾಯಕರಾಗಿರುವ ಅಯ್ಯರ್ ಅವರಿಗೂ ಈ ಪ್ರವಾಸ ಸವಾಲಿನದ್ದು. ಸರಣಿಯನ್ನು ಗೆಲುವಿನೊಡನೆ ಆರಂಭಿಸುವುದು ಅವರ ವಿಶ್ವಾಸ ವೃದ್ಧಿಸಲಿದೆ.

ಹರ್ಷಿತ್ ರಾಣಾ ಮರಳಿರುವುದು ತಂಡದ ಬೌಲಿಂಗ್ ಬಲ ಹೆಚ್ಚಿಸಿದೆ. ಅವರಿಗೆ ಪ್ರಸಿದ್ಧ ಕೃಷ್ಣ ಮತ್ತು ಪ್ರಿನ್ಸ್ ಯಾದವ್ ಅವರ ಪೈಪೋಟಿಯಿದೆ.

ಐರ್ಲೆಂಡ್ ತಂಡವೂ ಅನುಭವಿಗಳಾದ ಜೋಶ್ ಲಿಟ್ಲ್, ಮಾರ್ಕ್ ಅಡೇರ್, ಪಾಲ್ ಸ್ಟರ್ಲಿಂಗ್ ಮತ್ತು ಕರ್ಟಿಸ್ ಕ್ಯಾಂಫರ್ ಇಲ್ಲದೇ ಆಡಬೇಕಾಗಿದೆ. ಇವರು ಗಾಯಾಳಾಗಿದ್ದಾರೆ. ಲೋರ್ಕನ್ ಟಕರ್ ಅವರಿಗೆ ಸಾರಥ್ಯ ವಹಿಸಲಾಗಿದೆ. ತಂಡದಲ್ಲಿ ಟಿ20 ಪರಿಣತರಾದ ಜಾರ್ಜ್ ಡಾಕ್ರೆಲ್, ಗರೆತ್ ಡೆಲಾನಿ, ಹ್ಯಾರಿ ಟೆಕ್ಟರ್, ಭಾರತ ಮೂಲದ ಜೈ ಮುಂದ್ರಾ ಅವರಿದ್ದಾರೆ. ಆದರೆ ಹಾಲಿ ಟಿ20 ವಿಶ್ವ ಚಾಂಪಿಯನ್ ತಂಡವನ್ನು ಕಟ್ಟಿಹಾಕುವುದು ಈ ದ್ವೀಪ ರಾಷ್ಟ್ರದ ತಂಡಕ್ಕೆ ಸುಲಭವಂತೂ ಅಲ್ಲ.

ತಂಡಗಳು: ಶ್ರೇಯಸ್ ಅಯ್ಯರ್ (ನಾಯಕ), ತಿಲಕ್ ವರ್ಮಾ (ಉಪ ನಾಯಕ), ರವಿ ಬಿಷ್ಣೋಯಿ, ಅಭಿಷೇಕ್ ಶರ್ಮಾ, ಸೂರ್ಯಾಂಶ್ ಶೆಡ್ಗೆ, ಪ್ರಸಿದ್ಧ ಕೃಷ್ಣ, ಸಂಜು ಸ್ಯಾಮ್ಸನ್, ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ಇಶಾನ್ ಕಿಶನ್, ವಾಷಿಂಗ್ಟನ್ ಸುಂದರ್, ಅರ್ಷದೀಪ್ ಸಿಂಗ್, ಶಿವಂ ದುಬೆ, ಪ್ರಿನ್ಸ್ ಯಾದವ್, ವೈಭವ್ ಸೂರ್ಯವಂಶಿ

ಐರ್ಲೆಂಡ್: ಲೋರ್ಕನ್ ಟಕರ್ (ನಾಯಕ), ರಾಸ್ ಅಡೇರ್, ಬೆನ್ ಕ್ಯಾಲಿಟ್ಜ್, ಗರೆತ್ ಡೆಲಾನಿ, ಜಾರ್ಜ್ ಡಾಕ್ರೆಲ್, ಸ್ಟೀನ್ ಡೊಹೆನಿ, ಮ್ಯಾಥ್ಯೂ ಹಂಫ್ರೀಸ್, ಗ್ಯಾವಿನ್ ಹೊಯ್ಯೆ, ಮ್ಯಾಥ್ಯೂ ಹೊಲಾರ್ಡ್, ಲಿಯಾಮ್ ಮೆಕಾರ್ಥಿ, ಜೈ ಮೂಂಡ್ರಾ, ಹ್ಯಾರಿ ಟೆಕ್ಟರ್, ಟಿಮ್ ಟೆಕ್ಟರ್ ಮತ್ತು ರುಬೆನ್ ವಿಲ್ಸನ್.

ಪಂದ್ಯ ಆರಂಭ: ಸಂಜೆ 6.00

ಸಾಯಿ ಸುದರ್ಶನ್ ಅಮೋಘ ಶತಕ

ಗಾಲೆ (ಶ್ರೀಲಂಕಾ), (ಪಿಟಿಐ): ಆರಂಭ ಆಟಗಾರ ಸಾಯಿ ಸುದರ್ಶನ್ ಅವರ ಸೊಗಸಾದ ಶತಕ, ನಾಯಕ ಧ್ರುವ್ ಜುರೇಲ್ ಮತ್ತು ಶೇಕ್ ರಶೀದ್ ಅವರ ಅಜೇಯ ಅರ್ಧ ಶತಕಗಳ ನೆರವಿನಿಂದ ಭಾರತ ಎ ತಂಡವು ಗುರುವಾರ ಇಲ್ಲಿ ಶ್ರೀಲಂಕಾ ಎ ವಿರುದ್ಧ ಆರಂಭವಾದ ಮೊದಲ 'ಟೆಸ್ಟ್' ಪಂದ್ಯದಲ್ಲಿ ದಿನದಾಟ ಮುಗಿದಾಗ 4 ವಿಕೆಟ್‌ಗೆ 333 ರನ್ ಗಳಿಸಿ ಉತ್ತಮ ಸ್ಥಿತಿಗೆ ತಲುಪಿತು.

ಸುದರ್ಶನ್ 19 ಬೌಂಡರಿಗಳಿದ್ದ 132 ರನ್ (175 ಎಸೆತ) ಬಾರಿಸಿದರು. ನಾಲ್ಕು ದಿನಗಳ ಈ ಪಂದ್ಯದಲ್ಲಿ ಟಾಸ್ ಗೆದ್ದ ನಂತರ ಅವರು, ಆಯುಷ್ ಪಾಂಡೆ (25) ಜೊತೆ ಮೊದಲ ವಿಕೆಟ್‌ಗೆ 82 ರನ್ ಸೇರಿಸಿದರು. ನಾಯಕ ಧ್ರುವ್ ಜುರೇಲ್ (ಔಟಾಗದೇ 68) ಮತ್ತು ರಶೀದ್ (ಔಟಾಗದೇ 53) ಅವರು ಮುರಿಯದ ಐದನೇ ವಿಕೆಟ್‌ಗೆ 116 ರನ್ ಸೇರಿಸಿದ್ದಾರೆ.

ದೇವದತ್ತ ಪಡಿಕ್ಕಲ್ (12) ಮತ್ತು ಋತುರಾಜ ಗಾಯಕವಾಡ್ (22) ದೊಡ್ಡ ಮೊತ್ತ ಗಳಿಸಲು ವಿಫಲರಾದರು. ಆತಿಥೇಯರ ಕಡೆ ಎಡಗೈ ಸ್ಪಿನ್ನರ್ ದಿಲಮ್ ಸುದೀರ 98 ರನ್‌ಗಳಿಗೆ 2 ವಿಕೆಟ್ ಪಡೆದರು.

ಪೋಲ್‌ವಾಲ್ಟ್: ದಾಖಲೆಯೊಂದಿಗೆ ಏಷ್ಯನ್ ಗೇಮ್ಸ್‌ಗೆ ಸಿಂಧುಶ್ರೀ ಅರ್ಹತೆ

ಭುವನೇಶ್ವರ (ಪಿಟಿಐ): ಯಾರೂ ನಿರೀಕ್ಷಿಸದ ರೀತಿ ಕರ್ನಾಟಕದ ಜಿ.ಸಿಂಧುಶ್ರೀ ಅವರು, 65ನೇ ರಾಷ್ಟ್ರೀಯ ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಗುರುವಾರ ಪೋಲ್‌ವಾಲ್ಟ್‌ನಲ್ಲಿ ರಾಷ್ಟ್ರೀಯ ದಾಖಲೆಯೊಡನೆ ಮಿಂಚಿದರು. ಜಪಾನ್‌ನಲ್ಲಿ ಇದೇ ವರ್ಷದ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೂ ಅರ್ಹತೆ ಪಡೆದರು.

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ 25 ವರ್ಷ ವಯಸ್ಸಿನ ಈ ಅಥ್ಲೀಟ್ 4.25 ಮೀ. ಎತ್ತರ ಜಿಗಿದರು. ಆ ಮೂಲಕ ತಮಿಳುನಾಡಿನ ಬರನಿಕಾ ಅವರ ಹೆಸರಿನಲ್ಲಿದ್ದ ಒಂದು ತಿಂಗಳ ಹಳೆಯ ರಾಷ್ಟ್ರೀಯ ದಾಖಲೆ (4.20 ಮೀ.) ಸಲೀಸಾಗಿ ಮುರಿದರು. ಬರನಿಕಾ (4.20 ಮೀ.) ಎರಡನೇ ಸ್ಥಾನ ಪಡೆದರೆ, ಮಧ್ಯಪ್ರದೇಶದ ನಿತಿಕಾ ಅಕರೆ (4.10 ಮೀ.) ಕಂಚಿನ ಪದಕ ಗೆದ್ದುಕೊಂಡರು. ಮೂವರೂ ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ನಿಗದಿಪಡಿಸಿದ ಏಷ್ಯನ್ ಗೇಮ್ಸ್ ಅರ್ಹತಾ ಮಾನದಂಡ (4.10 ಮೀ.) ದಾಟಿದರು. ಟ್ರ್ಯಾಕ್ ಅಂಡ್ ಫೀಲ್ಡ್ ಸ್ಪರ್ಧೆಯೊಂದರಲ್ಲಿ ಪ್ರತಿ ದೇಶವು ಗರಿಷ್ಠ ಇಬ್ಬರನ್ನಷ್ಟೇ ಏಷ್ಯನ್ ಗೇಮ್ಸ್‌ಗೆ ಕಳಿಸಲು ಅವಕಾಶವಿದೆ.

ಚೆನ್ನೈನಲ್ಲಿ ಮೇ ತಿಂಗಳಲ್ಲಿ ನಡೆದ ಇಂಡಿಯನ್ ಅಥ್ಲೆಟಿಕ್ ಸರಣಿಯ ಆರನೇ ಸ್ಪರ್ಧೆಯಲ್ಲಿ ಸಿಂಧುಶ್ರೀ 4 ಮೀ. ಜಿಗಿದಿದ್ದು ಅವರ ಈ ಹಿಂದಿನ ವೈಯಕ್ತಿಕ ಶ್ರೇಷ್ಠ ಪ್ರದರ್ಶನವಾಗಿತ್ತು. ಈ ಹಿಂದೆ 2023ರಲ್ಲಿ ಇದೇ ಕ್ರೀಡಾಂಗಣದಲ್ಲಿ 3.80 ಮೀ. ಜಿಗಿದು ಬೆಳ್ಳಿ ಗೆದ್ದಿದ್ದು ಬಿಟ್ಟರೆ, ಪ್ರಮುಖ ರಾಷ್ಟ್ರೀಯ ಕೂಟಗಳಲ್ಲಿ ಅವರು ಪದಕಗಳನ್ನು ಗಳಿಸಿರಲಿಲ್ಲ.

ತಂದೆಗೆ ಸಮರ್ಪಣೆ: ಸಿಂಧುಶ್ರೀ ಇಲ್ಲಿ ಗೆದ್ದ ಚಿನ್ನವನ್ನು ಮತ್ತು ದಾಖಲೆಯ ಶ್ರೇಯವನ್ನು 2022ರಲ್ಲಿ ಹೃದಯಾಘಾತದಿಂದ ನಿಧನರಾದ ತಮ್ಮ ತಂದೆಗೆ ಸಮರ್ಪಿಸಿದರು. ಎಲೆಕ್ಟ್ರಿಷಿಯನ್ ಆಗಿದ್ದ ಅವರ ತಂದೆ, ಮಗಳನ್ನು ಕ್ರೀಡೆಯಲ್ಲಿ ಮುಂದುವರಿಯಲು ಉತ್ತೇಜಿಸಿದ್ದರು. ತಾಯಿ ಟೈಲರ್ ಆಗಿದ್ದು, ಕಠಿಣ ಆರ್ಥಿಕ ಪರಿಸ್ಥಿತಿಯಲ್ಲೂ ಮಗಳ ಕ್ರೀಡಾಸಕ್ತಿಗೆ ಬೆನ್ನೆಲುಬಾಗಿ ನಿಂತಿದ್ದಾರೆ.

ಗೆಲುವನ್ನು ತಂದೆಗೆ ಅರ್ಪಿಸಿದ ಕರ್ನಾಟಕದ ಜಿ.ಸಿಂಧುಶ್ರೀ

ಅನಿಮೇಶ್, ಹರಿತಾಗೆ ಚಿನ್ನ: 200 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಒಡಿಶಾದ ಅನಿಮೇಶ್ ಕುಜೂರ್ 20.74 ಸೆ.ಗಳಲ್ಲಿ ದೂರ ಕ್ರಮಿಸಿ ಚಿನ್ನ ಗೆದ್ದರು. ಏಷ್ಯನ್ ಗೇಮ್ಸ್ ಮಾನದಂಡವನ್ನೂ (20.88 ಸೆ.) ದಾಟಿದರು.

ಮಹಾರಾಷ್ಟ್ರದ ಹರಿತಾ ಭದ್ರ ಅವರು ಮಹಿಳೆಯರ 200 ಮೀಟರ್ ಓಟವನ್ನು 23.14 ಸೆಕೆಂಡುಗಳಲ್ಲಿ ಕ್ರಮಿಸಿ, ವೈಯಕ್ತಿಕ ಅತ್ಯುತ್ತಮ ಸಮಯದೊಂದಿಗೆ ಚಿನ್ನ ಗೆದ್ದರು. ಏಷ್ಯನ್ ಕ್ರೀಡಾಕೂಟದ ಮಾನದಂಡವನ್ನೂ (3.70 ಸೆ) ಪೂರೈಸಿದರು. ಕರ್ನಾಟಕದ ಉನ್ನತಿ ಬೊಲ್ಲಂಡ (23.40ಸೆ) ಮತ್ತು ಪ್ರಕೃತಿ ರೂಪಾ (23).58 ಅವರು ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು. ಇಬ್ಬರೂ ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಗಳಿಸಿದರು.

ಮಂಜುನಾಥ್, ಆಪ್ತರ ಬಳಿ ₹5.5 ಕೋಟಿ ನಗದು

ಒಂದನೇ ಪುಟದಿಂದ...

ಈ ಪ್ರಕರಣದ ಎಫ್‌ಐಆರ್ ಆಧಾರದಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ಇ.ಡಿ ಅಧಿಕಾರಿಗಳು ತನಿಖೆ ಆರಂಭಿಸಿದ್ದರು ಎಂದು ಮೂಲಗಳು ತಿಳಿಸಿವೆ.

'ಬೆಳಗಾವಿ, ಬೆಂಗಳೂರು ಮತ್ತು ಮೈಸೂರಿನ 14 ಸ್ಥಳಗಳಲ್ಲಿ ದಾಳಿ ನಡೆಸಲಾಗಿತ್ತು. ಜಗದೀಶ್ ನಾಯ್ಕ್, ಅಬಕಾರಿ ಇಲಾಖೆಯ ಮತ್ತೊಬ್ಬ ಅಧಿಕಾರಿ ಕೆ.ಎಂ. ತಮ್ಮಯ್ಯ, ಮಂಜುನಾಥ್ ಅವರ ಮನೆ ಹಾಗೂ ಮೂವರು ಅಧಿಕಾರಿಗಳ ಆಪ್ತರ ಮನೆಗಳಲ್ಲಿ ಶೋಧ ನಡೆಸಲಾಗಿತ್ತು' ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

'ದಾಳಿಯ ವೇಳೆ ಮಂಜುನಾಥ್ ಮತ್ತು ಅವರ ಕಾರು ಚಾಲಕ, ಸಂಬಂಧಿಕರು ಮತ್ತು ಆಪ್ತರ ಮನೆಯಲ್ಲಿ ₹5.5 ಕೋಟಿ ನಗದು, ₹7.8 ಕೋಟಿ ಮೌಲ್ಯದ ಚಿನ್ನಾಭರಣ ಮತ್ತು ₹3.3 ಲಕ್ಷ ಮೌಲ್ಯದ ವಿದೇಶಿ ಕರೆನ್ಸಿ ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿದೆ.

ಬುಧವಾರ ಬೆಳಿಗ್ಗೆ ಆರಂಭವಾಗಿದ್ದ ಶೋಧಕಾರ್ಯವು ಗುರುವಾರ ಮಧ್ಯಾಹ್ನದವರೆಗೂ ಮುಂದುವರಿದಿತ್ತು.

ಈವರೆಗೆ ಚರಾಸ್ತಿಗಳ ವಿವರಗಳಷ್ಟೇ ಲಭ್ಯವಾಗಿವೆ. ಶೋಧದ ವೇಳೆ ಜಮೀನು, ನಿವೇಶನ ಮತ್ತು ವಾಣಿಜ್ಯ ಸಂಕೀರ್ಣಗಳ ದಾಖಲೆ ಪತ್ರಗಳು ದೊರೆತಿವೆ. ಅವುಗಳ ಮೌಲ್ಯವನ್ನು ಲೆಕ್ಕ ಹಾಕಲಾಗುತ್ತಿದೆ. ಬ್ಯಾಂಕ್ ಖಾತೆ ಠೇವಣಿ, ಷೇರು ಹೂಡಿಕೆ ಬಾಂಡ್‌ಗಳು ಮತ್ತು ಬ್ಯಾಂಕ್ ಲಾಕರ್‌ಗಳ ಪರಿಶೀಲನೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮಂಜುನಾಥ್ ಅವರು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಬಿಜೆಪಿ ಶಾಸಕರಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ, ಪರಿಷತ್ತಿನ ಸದಸ್ಯ ಲಖನ್ ಜಾರಕಿಹೊಳಿ ಅವರ ಸೋದರಿಯನ್ನು ಮದುವೆಯಾಗಿದ್ದಾರೆ.

ಲಂಚ ಸಂಗ್ರಹಕ್ಕೆ ಅಕ್ರಮ ಕೂಟ

'ಈ ಮೂವರು ಅಧಿಕಾರಿಗಳು ಒಳಗೊಂಡು ಅಬಕಾರಿ ಇಲಾಖೆಯೇ ಲಂಚ ಸಂಗ್ರಹಕ್ಕೆ ಅಕ್ರಮ ಕೂಟದಂತೆ ಕೆಲಸ ಮಾಡುತ್ತಿದೆ' ಎಂದು ಇ.ಡಿ ಹೇಳಿದೆ.

'ಈ ಅಧಿಕಾರಿಗಳು, ಇಲಾಖೆಯ ಇತರ ಅಧಿಕಾರಿಗಳು ಮತ್ತು ಕೆಲವು ವ್ಯಕ್ತಿಗಳು ಸೇರಿ ಅಕ್ರಮ ಕೂಟ ರಚಿಸಿಕೊಂಡು, ಮದ್ಯದಂಗಡಿಗಳಿಂದ ಪ್ರತಿ ತಿಂಗಳು ಇಂತಿಷ್ಟು ಲಂಚ ಬರುವಂತೆ ವ್ಯವಸ್ಥೆ ಮಾಡಿಕೊಂಡಿದ್ದಾರೆ' ಎಂದಿದೆ.

'ಮದ್ಯದಂಗಡಿಗಳಿಂದ ಲಂಚ ಸಂಗ್ರಹದ ಹೊಣೆಯನ್ನು ಕೆಲವು ವ್ಯಕ್ತಿಗಳಿಗೆ ವಹಿಸಲಾಗಿದೆ. ಅವರು ತಂದ ಹಣವನ್ನು ಒಂದೆಡೆ ಸಂಗ್ರಹಿಸಿ, ಸಮನಾಗಿ ಪಾಲು ಮಾಡಿ ಹಂಚಿಕೆ ಮಾಡುವ ಹೊಣೆಯನ್ನು ಇತರ ಕೆಲವು ವ್ಯಕ್ತಿಗಳಿಗೆ ವಹಿಸಲಾಗಿದೆ. ಮೂವರೂ ಅಧಿಕಾರಿಗಳ ಆಪ್ತರ ಮನೆಯಲ್ಲಿ ಶೋಧದ ವೇಳೆ ಈ ಎಲ್ಲ ವಿವರಗಳು ಇರುವ ಲೆಕ್ಕಪತ್ರದ ಡೈರಿ ಲಭ್ಯವಾಗಿದೆ' ಎಂದು ವಿವರಿಸಿದೆ.

'ಇದರ ಜತೆಯಲ್ಲಿ ಮದ್ಯ ಮಾರಾಟ ಸನ್ನದು ಮಂಜೂರು ಮತ್ತು ನವೀಕರಣದ ವೇಳೆ ಆರೋಪಿ ಅಧಿಕಾರಿಗಳು ಲಂಚ ಪಡೆಯುತ್ತಿದ್ದಾರೆ. ಈ ಹಣದಲ್ಲೂ ಪಾಲು ಮಾಡಿಕೊಳ್ಳಲಾಗಿದೆ. ಎರಡೂ ಮೂಲಗಳಿಂದ ಬಂದ ಹಣವನ್ನು ಆಸ್ತಿ ಖರೀದಿ ಮತ್ತು ಮದ್ಯದಂಗಡಿಗಳ ಮೇಲೆ ಹೂಡಿಕೆ ಮಾಡಿದ್ದಾರೆ. ಮೂವರೂ ಅಧಿಕಾರಿಗಳು ತಮ್ಮ ಕುಟುಂಬದ ಸದಸ್ಯರು ಮತ್ತು ಆಪ್ತರ ಹೆಸರಿನಲ್ಲಿ ಮದ್ಯ ಮಾರಾಟ ಸನ್ನದುಗಳನ್ನು ಹೊಂದಿದ್ದಾರೆ. ಈ ಅಂಗಡಿಗಳಿಂದ ಬಂದ ವರಮಾನವನ್ನು ಕುಟುಂಬದವರ ಗಳಿಕೆ ಎಂದು ತೋರಿಸಿದ್ದಾರೆ' ಎಂದು ವಿವರಿಸಿದೆ.

ಡಿಜಿಟಲ್ ಅರೆಸ್ಟ್: 80 ಕಡೆ ಸಿಬಿಐ ದಾಳಿ

ಒಂದನೇ ಪುಟದಿಂದ...

ಚೆನ್ನೈ, ಕೋಲ್ಕತ್ತದಲ್ಲಿ ಇಬ್ಬರ ಬಂಧನ: 'ಗುರುವಾರ ನಡೆದ ಕಾರ್ಯಾಚರಣೆಯಲ್ಲಿ ಚೆನ್ನೈ ಮತ್ತು ಕೋಲ್ಕತ್ತದಿಂದ ಇಬ್ಬರು ಸೈಬರ್ ವಂಚಕರನ್ನು ಸಿಬಿಐ ಬಂಧಿಸಿದೆ. ಬಿ. ನರೇಶ್ ಮತ್ತು ಸಂಜೀಬ್ ಸಹಾ ಬಂಧಿತ ಆರೋಪಿಗಳು. ಇವರಿಬ್ಬರು ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಜನರನ್ನು ವಂಚಿಸುತ್ತಿದ್ದ ದೊಡ್ಡ ಜಾಲದ ಭಾಗವಾಗಿದ್ದಾರೆ' ಎಂದು ಮೂಲಗಳು ಹೇಳಿವೆ.

ಆರೋಪಿಗಳು ನಕಲಿ ಕಂಪನಿಗಳನ್ನು ಸೃಷ್ಟಿಸಿ, ಅವುಗಳ ಹೆಸರಿನಲ್ಲಿ ನಕಲಿ ಬ್ಯಾಂಕ್ ಖಾತೆಗಳನ್ನು ತೆರೆದಿದ್ದರು. ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಜನರನ್ನು ಬೆದರಿಸಿ ಅಕ್ರಮವಾಗಿ ಗಳಿಸಿದ ಹಣಕಾಸಿನ ನಿರ್ವಹಣೆ ಮಾಡುತ್ತಿದ್ದರು. ಈ ನಕಲಿ ಖಾತೆಗಳ ಮೂಲಕ ಇತ್ತೀಚೆಗೆ ಸುಮಾರು ₹2 ಕೋಟಿಯಷ್ಟು ಅಕ್ರಮವಾಗಿ ವರ್ಗಾವಣೆ ಆಗಿದೆ ಎಂದು ಸಿಬಿಐ ಪ್ರಕಟಣೆಯಲ್ಲಿ ತಿಳಿಸಿದೆ.

ವಂಚಕರು ಸುಪ್ರೀಂ ಕೋರ್ಟ್ ವೆಬ್‌ಸೈಟ್ ಹೋಲುವ ವೆಬ್ ವಿಳಾಸದಲ್ಲಿ ನ್ಯಾಯಾಲಯದ ಅಧಿಕೃತ ಆದೇಶಗಳು, ವಾರಂಟ್‌ಗಳು, ಕಾನೂನು ಜಾರಿ ಸಂಸ್ಥೆಗಳ ಪ್ರಕಟಣೆ ಮತ್ತು ಸೂಚನೆಗಳನ್ನು ಹೋಲುವ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಾರ್ವಜನಿಕರ ವಿಶ್ವಾಸವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಸಿಬಿಐ ಹೇಳಿದೆ.

ಡಿಜಿಟಲ್ ವಂಚನೆಗೆ ಸಂಬಂಧಿಸಿದಂತೆ ಭಾರತ ಮತ್ತು ವಿದೇಶದ ಅಪರಾಧ ಮೂಲಸೌಕರ್ಯದ ಬಗ್ಗೆಯೂ ಸಿಬಿಐ ಮಾಹಿತಿ ಸಂಗ್ರಹಿಸಿದೆ. ಭಾರತೀಯರು ಮಾತ್ರವಲ್ಲ ವಿದೇಶಿ ಪ್ರಜೆಗಳನ್ನೂ ಈ ಜಾಲವು ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವಂಚಿಸಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

6 ತಿಂಗಳಲ್ಲಿ 2 ಸಾವಿರ ಕರೆ: ಕೊಲೆಗೆ ಸಂಚು

ಪುಣೆ (ಪಿಟಿಐ): ಚಾರಣದ ನೆಪದಲ್ಲಿ ಭಾವಿ ಪತಿ ಕೇತನ್ ವಿಶಾಲ್ ಅಗರವಾಲ್ (26) ಅವರನ್ನು ಲೋಹಾಗಢಕ್ಕೆ ಕರೆದೊಯ್ದು, ಕಣಿವೆಗೆ ನೂಕಿ ಕೊಲೆ ಮಾಡಿದ ಆರೋಪಿ ಸಿಯಾ ಗೋಯಲ್ (20), ಪ್ರಿಯಕರ ಚೇತನ್ ಬಾಬುಲಾಲ್ ಚೌಧರಿ (22) ಜತೆಗೆ ಆರು ತಿಂಗಳಿಂದ ನಿರಂತರ ಸಂಪರ್ಕದಲ್ಲಿ ಇದ್ದರು. ಈ ಅವಧಿಯಲ್ಲಿ ಇಬ್ಬರೂ ಸೇರಿ 2,004 ಕರೆಗಳನ್ನು ಮಾಡಿದ್ದಾರೆ. 238 ಗಂಟೆ ಮೊಬೈಲ್‌ನಲ್ಲಿ ಮಾತನಾಡಿದ್ದಾರೆ, ಹಲವು ಬಾರಿ ರಹಸ್ಯವಾಗಿ ಭೇಟಿಯಾಗಿದ್ದಾರೆ ಎಂದು ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು ಹೇಳಿದ್ದಾರೆ.

'ಇಬ್ಬರ ನಡುವೆ ನಡೆದಿರುವ ಸುದೀರ್ಘ ದೂರವಾಣಿ ಸಂಭಾಷಣೆಯಲ್ಲಿ ಕೇತನ್ ಅಗರವಾಲ್ ಕೊಲೆಗೆ ಸಂಚು ರೂಪಿಸಿದ ಮಾಹಿತಿಯೂ ಲಭಿಸಿದೆ. ಇಬ್ಬರ ನಡುವಿನ ದೂರವಾಣಿ ಕರೆ ಕೆಲವೊಮ್ಮೆ 2ರಿಂದ 3 ಗಂಟೆಯವರೆಗೂ ಮುಂದುವರಿದಿದೆ' ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

ಪೊಲೀಸ್ ವಶದಲ್ಲಿರುವ ಸಿಯಾ ಗೋಯಲ್

ಎಸ್‌ಐಟಿ ರಚನೆಗೆ ಸೂಚನೆ: ಕೇತನ್ ಅಗರ್‌ವಾಲ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಮಹಾರಾಷ್ಟ್ರ ವಿಧಾನಸಭಾ ಅಧ್ಯಕ್ಷರ ಪೀಠದಲ್ಲಿದ್ದ ರಾಜು ಖರೆ ಸೂಚಿಸಿದ್ದಾರೆ.

ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಸಿಯಾ ಗೋಯಲ್ (20), ಆಕೆಯ ಪ್ರಿಯಕರ ಚೇತನ್ ಬಾಬುಲಾಲ್ ಚೌಧರಿಯನ್ನು ಪೊಲೀಸರು ಬಂಧಿಸಿದ್ದಾರೆ.

ಗುರುವಾರ ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಎನ್‌ಸಿಪಿ ಸದಸ್ಯ ಸುನಿಲ್ ಶೆಳ್ಕೆ ಅವರು, 'ಸಿಯಾ ಗೋಯಲ್ ಅವರ ಕುಟುಂಬ ಸದಸ್ಯರನ್ನೂ ಈ ಕೊಲೆ ಪ್ರಕರಣದ ಆರೋಪಿಗಳನ್ನಾಗಿ ಪರಿಗಣಿಸಬೇಕು. ಪ್ರಿಯಕರ ಚೇತನ್ ಜತೆಗೆ ಸಿಯಾಗೆ ಸಂಬಂಧ ಇರುವ ವಿಚಾರವನ್ನು ಮುಚ್ಚಿಟ್ಟು, ಸಿಯಾ ಕುಟುಂಬವು ಕೇತನ್ ಅಗರವಾಲ್ ಜತೆಗೆ ಮದುವೆ ನಿಶ್ಚಯ ಮಾಡಿತ್ತು' ಎಂದು ಆರೋಪಿಸಿದ್ದಾರೆ.

ವೆನೆಜುವೆಲಾ ಭೂಕಂಪ: 188 ಸಾವು

ಒಂದನೇ ಪುಟದಿಂದ...

ಕರಾಕಸ್‌ನಿಂದ ಉತ್ತರಕ್ಕೆ ಸುಮಾರು 30 ಕಿ.ಮೀ. ಅಂತರದಲ್ಲಿ ಮತ್ತು ಲಾ ಗ್ವೈರಾ ರಾಜ್ಯದ ವಿವಿಧೆಡೆ ಹಲವು ಕಟ್ಟಡಗಳು ಕುಸಿದಿವೆ. ಹಲವರು ಮೃತಪಟ್ಟಿದ್ದಾರೆ. ಬದುಕುಳಿದಿರುವವರನ್ನು ರಕ್ಷಿಸಲು ರಕ್ಷಣಾ ಕಾರ್ಯ ನಡೆಸಲಾಗುತ್ತಿದೆ ಎಂದು ಅವರು ವಿವರಿಸಿದರು.

ಕರಾಕಸ್ ಬಳಿಯಿರುವ ದೇಶದ ಪ್ರಮುಖ ವಿಮಾನ ನಿಲ್ದಾಣವಾದ ಸೈಮನ್ ಬೊಲಿವರ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹಾನಿಯಾಗಿದ್ದು, ಅದನ್ನು ಮುಚ್ಚಲಾಗಿದೆ. ಶಾಲೆಗಳನ್ನು ಬಂದ್ ಮಾಡಲಾಗಿದ್ದು, ನೈಸರ್ಗಿಕ ಅನಿಲ ಪೂರೈಕೆ ಸೇವೆಗಳನ್ನು ನಿಲ್ಲಿಸಲಾಗಿದೆ ಎಂದು ರಾಡ್ರಿಗಸ್ ತಿಳಿಸಿದರು.

ಭೂಕಂಪದ ಕೇಂದ್ರ ಬಿಂದು: 'ಯುನೈಟೆಡ್ ಸ್ಟೇಟ್ಸ್ ಜಿಯಾಲಜಿಕಲ್ ಸರ್ವೆ' (ಯುಎಸ್‌ಜಿಎಸ್) ಪ್ರಕಾರ 7.2ರ ತೀವ್ರತೆಯ ಮೊದಲ ಭೂಕಂಪದ ಕೇಂದ್ರ ಬಿಂದುವು ಕೆರೀಬಿಯನ್‌ನ ಕರಾವಳಿಯಲ್ಲಿ ಮೊರೊನ್‌ನ ಪಶ್ಚಿಮಕ್ಕೆ ಕರಾಕಸ್‌ನಿಂದ 168 ಕಿ.ಮೀ. ದೂರದಲ್ಲಿ, 22 ಕಿ.ಮೀ. ಆಳದಲ್ಲಿ ಇತ್ತು. ಅದರ ಬೆನ್ನಲ್ಲೇ ಸಂಭವಿಸಿದ 7.5ರ ತೀವ್ರತೆಯ ಭೂಕಂಪದ ಕೇಂದ್ರ ಬಿಂದುವು ಮೊರಾನ್‌ನ ನೈರುತ್ಯಕ್ಕೆ 16 ಕಿ.ಮೀ ದೂರದಲ್ಲಿ, 10 ಕಿ.ಮೀ. ಆಳದಲ್ಲಿ ಇತ್ತು.

ವಿದೇಶಗಳಿಂದ ನೆರವಿನ ಹಸ್ತ: ಭೂಕಂಪದಿಂದ ತತ್ತರಿಸಿರುವ ವೆನೆಜುವೆಲಾಗೆ ಅಮೆರಿಕ, ಅರ್ಜೆಂಟೀನಾ, ಚಿಲಿ, ಪನಾಮ, ಉರುಗ್ವೆ ಸೇರಿದಂತೆ ಹಲವು ದೇಶಗಳು ನೆರವಿನ ಹಸ್ತ ಚಾಚಿವೆ. 'ಅಮೆರಿಕವು ತಕ್ಷಣವೇ ವೆನೆಜುವೆಲಾಗೆ ರಕ್ಷಣಾ ತಂಡಗಳು ಮತ್ತು ವೈದ್ಯಕೀಯ ಸಂಪನ್ಮೂಲ ಹಾಗೂ ಮಾನವೀಯ ನೆರವು ಒದಗಿಸುತ್ತದೆ' ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕತಾರ್, ಮೆಕ್ಸಿಕೊ, ಎಲ್ ಸಾಲ್ವಡಾರ್ ಸಹ ರಕ್ಷಣಾ ಸಿಬ್ಬಂದಿಯನ್ನು ಕಳುಹಿಸಿವೆ ಎಂದು ರಾಡ್ರಿಗಸ್ ಹೇಳಿದರು.

ಶಫಾಲಿ ಅರ್ಧಶತಕ: ಭಾರತಕ್ಕೆ ಜಯ

ಬೌಲಿಂಗ್‌ನಲ್ಲಿ ಮಿಂಚಿದ ರಾಧಾ, ಶ್ರೀಚರಣಿ

• ಹರ್ಮನ್‌ಪ್ರೀತ್ ಪಡೆಗೆ ಮೂರನೇ ಜಯ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಮ್ಯಾಂಚೆಸ್ಟರ್ (ಪಿಟಿಐ): ಶಫಾಲಿ ವರ್ಮಾ ಅವರ ಅರ್ಧ ಶತಕದ ನೆರವಿನಿಂದ ಭಾರತ ತಂಡ, ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಒಂದನೇ ಗುಂಪಿನ ನಿರ್ಣಾಯಕ ಪಂದ್ಯದಲ್ಲಿ ಗುರುವಾರ ಬಾಂಗ್ಲಾದೇಶ ತಂಡವನ್ನು ಐದು ವಿಕೆಟ್‌ಗಳಿಂದ ಸೋಲಿಸಿತು.

ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟ್ ಮಾಡಲು ನಿರ್ಧರಿಸಿದ ಬಾಂಗ್ಲಾದೇಶ ತಂಡವನ್ನು ಸ್ಪಿನ್ನರ್‌ಗಳಾದ ರಾಧಾ ಯಾದವ್ (28ಕ್ಕೆ3) ಮತ್ತು ಶ್ರೀಚರಣಿ (21ಕ್ಕೆ2) ಅವರು ಕಟ್ಟಿಹಾಕಿದರು. ಭಾರತ ತಂಡದ ಕಳಪೆ ಫೀಲ್ಡಿಂಗ್ ಮುಂದುವರಿದು ಪವರ್‌ಪ್ಲೇ ಅವಧಿಯಲ್ಲಿ ನಾಲ್ಕು ಕ್ಯಾಚ್‌ಗಳನ್ನು ಬಿಟ್ಟರೂ, ಬಾಂಗ್ಲಾ ತಂಡ 8 ವಿಕೆಟ್‌ಗೆ 136 ರನ್‌ಗಳ ಸಾಧಾರಣ ಮೊತ್ತ ಗಳಿಸಲಷ್ಟೇ ಶಕ್ತವಾಯಿತು. ಇದರೊಂದಿಗೆ ಭಾರತ ಸೆಮಿಫೈನಲ್ ಕನಸನ್ನು ಜೀವಂತವಾಗಿ ಉಳಿಸಿಕೊಂಡಿತು.

ಭಾರತ ತಂಡಕ್ಕೆ ಶಫಾಲಿ (53 ರನ್, 34 ಎಸೆತ, 4x8, 6x1) ಅವರು ಉತ್ತಮ ಆರಂಭ ನೀಡಿದರು. ಸ್ಮೃತಿ ಮಂದಾನ (8) ಬೇಗ ನಿರ್ಗಮಿಸಿದರು. ಆದರೆ ತಂಡ 3 ಓವರುಗಳಾಗುವಷ್ಟರಲ್ಲಿ ಶಫಾಲಿ ಅವರ ಮಿಂಚಿನ ಆಟದಿಂದ 31 ರನ್‌ಗಳಿಸಿತ್ತು.

ಶಫಾಲಿ ಎರಡನೇ ವಿಕೆಟ್‌ಗೆ ಯಷ್ಟಿಕಾ ಭಾಟಿಯಾ (23) ಅವರ ಜೊತೆ ಉಪಯುಕ್ತ 45 ರನ್‌ಗಳ ಜೊತೆಯಾಟವಾಡಿದ್ದರಿಂದ ತಂಡ ಚೇತರಿಸಿತು. ನಂತರ ಜೆಮಿಮಾ ರಾಡ್ರಿಗಸ್ (26, 15 ಎಸೆತ) ಅವರೂ ತಂಡ ಬೇಗ ಗುರಿತಲುಪಲು ನೆರವಾದರು. ನಾಯಕಿ ಹರ್ಮನ್‌ಪ್ರೀತ್ ಕೌರ್ 15 ರನ್ ಗಳಿಸಿ ಅಜೇಯರಾಗುಳಿದರು.

ಇಂದಿನ ಪಂದ್ಯ		
ಶ್ರೀಲಂಕಾ	V/s	ಸ್ಕಾಟ್ಲೆಂಡ್
ತಾಣ: ಮಾಂಚೆಸ್ಟರ್		
ಪಂದ್ಯ ಆರಂಭ: ರಾತ್ರಿ 11		
ಲೈವ್	ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್	

ಇದಕ್ಕೆ ಮೊದಲು ಬಾಂಗ್ಲಾದೇಶ ತಂಡದ ಪರ ಅಗ್ರ ಸರದಿಯಲ್ಲಿ ಜುವಾರಿಯಾ ಫಿರ್ದೂಸ್ (33, 31ಎ), ಸೋಭನಾ ಮೊಸ್ತಾರಿ (22) ಮತ್ತು ನಾಯಕಿ ನಿಗರ್ ಸುಲ್ತಾನಾ (32, 27 ಎ) ಅವರು ಮಾತ್ರ ಉಪಯುಕ್ತ ಕಾಣಿಕೆ ನೀಡಿದರು. ಸ್ಪಿನ್ನರ್‌ಗಳ ದಾಳಿಗೆ ಮಧ್ಯಮ ಕ್ರಮಾಂಕ ಕುಸಿಯಿತು. ಭಾರತದ ಬೌಲರ್‌ಗಳು ಏಳು ವೈಡ್, ಮೂರು ನೋಬಾಲ್‌ಗಳನ್ನೂ ಮಾಡಿದರು. ಫೀಲ್ಡಿಂಗ್ ಕೂಡ ಕಳಪೆಯಾಗಿತ್ತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರುಗಳಲ್ಲಿ 8 ವಿಕೆಟ್‌ಗೆ 136 (ಜುವಾರಿಯಾ ಫಿರ್ದೂಸ್ 33, ನಿಗರ್ ಸುಲ್ತಾನಾ 32; ಶ್ರೀಚರಣಿ 21ಕ್ಕೆ2, ರಾಧಾ ಯಾದವ್ 28ಕ್ಕೆ3); ಭಾರತ: 16.5 ಓವರುಗಳಲ್ಲಿ 5 ವಿಕೆಟ್‌ಗೆ 139 (ಶಫಾಲಿ ವರ್ಮಾ 53, ಯಷ್ಟಿಕಾ ಭಾಟಿಯಾ 23, ಜೆಮಿಮಾ ರಾಡ್ರಿಗಸ್ 26; ರಿತು ಮೋನಿ 29ಕ್ಕೆ2). ಪಂದ್ಯದ ಆಟಗಾರ್ತಿ: ಶಫಾಲಿ ವರ್ಮಾ.

ಮೂರು ವಿಕೆಟ್ ಪಡೆದ ರಾಧಾ ಯಾದವ್ (ಎಡ) ಅವರನ್ನು ಸಹ ಆಟಗಾರ್ತಿಯರು ಅಭಿನಂದಿಸಿದರು ಬಿಸಿಸಿಐ ಎಕ್ಸ್ ಚಿತ್ರ

ಗೆಲುವಿನೊಡನೆ ಸೆಮಿಗೆ ಇಂಗ್ಲೆಂಡ್ ತಂಡ

ಲಂಡನ್ (ಎಎಫ್‌ಪಿ): ಆರಂಭಿಕ ಆಟಗಾರ್ತಿ ಡ್ಯಾನಿ ವ್ಯಾಟ್ ಹಾಡ್ಜ್ (65;42ಎ) ಅವರ ಸೊಗಸಾದ ಅರ್ಧಶತಕದ ನೆರವಿನಿಂದ ಇಂಗ್ಲೆಂಡ್ ತಂಡವು ಮಹಿಳಾ ಟಿ20 ವಿಶ್ವಕಪ್‌ನ ಪಂದ್ಯದಲ್ಲಿ ಬುಧವಾರ ರಾತ್ರಿ 38 ರನ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿತು.

ಇದರೊಂದಿಗೆ ಆತಿಥೇಯ ತಂಡವು ಬಿ ಗುಂಪಿನಲ್ಲಿ ಸತತ ನಾಲ್ಕನೇ ಗೆಲುವಿನೊಡನೆ ಸೆಮಿಫೈನಲ್ ಪ್ರವೇಶಿಸಿತು. ಆಸ್ಟ್ರೇಲಿಯಾ ತಂಡವು 'ಎ' ಗುಂಪಿನಿಂದ ಈಗಾಗಲೇ ನಾಲ್ಕರ ಘಟ್ಟಕ್ಕೆ ಅರ್ಹತೆ ಪಡೆದಿದೆ.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 186 (ಡ್ಯಾನಿ ವ್ಯಾಟ್ ಹಾಡ್ಜ್ 65, ಹೀದರ್ ನೈಟ್ 43; ಅಶ್ಮಿನಿ ಮುನಿಸರ್ 42ಕ್ಕೆ 2). ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 148 (ಷಿನೆಲ್ ಹೆನ್ರಿ ಔಟಾಗದೇ 51; ಲಾರೆನ್ ಬೆಲ್ 20ಕ್ಕೆ 1, ಶಾರ್ಲೆಟ್ ಡೀನ್ 31ಕ್ಕೆ 2, ಸೋಫಿ ಎಕ್ಲೆಸ್ಟೋನ್ 21ಕ್ಕೆ 1). ಪಂದ್ಯದ ಆಟಗಾರ್ತಿ: ಡ್ಯಾನಿ ವ್ಯಾಟ್ ಹಾಡ್ಜ್

ಜೂನಿಯರ್ ಶೂಟಿಂಗ್: ಬೆಳ್ಳಿ ಗೆದ್ದ ಐಶ್ವರ್ಯಾ

ಐಶ್ವರ್ಯಾ

ಹುಬ್ಬಳ್ಳಿ: ಇಲ್ಲಿನ ಶೂಟರ್ ಐಶ್ವರ್ಯಾ ಬಾಲೆಹೊಸೂರು ಅವರು ಜರ್ಮನಿಯ ಝೂಲ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ.

50 ಮೀ. ಫ್ರೀ ಪಿಸ್ತೂಲ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು, ಫೈನಲ್‌ನಲ್ಲಿ 540.11 ಅಂಕ ಸಂಪಾದಿಸಿದರು. ರಷ್ಯಾದ ಸೋಫಿಯಾ (540.12) ಚಿನ್ನ, ಮಂಗೋಲಿಯಾದ ಅರಿವುಝುಯ (535) ಕಂಚು ಗೆದ್ದರು.

ಐಶ್ವರ್ಯಾಗೆ ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಮೊದಲ ಚಾಂಪಿಯನ್‌ಷಿಪ್ ಆಗಿದೆ. ಅವರು ಹುಬ್ಬಳ್ಳಿ ಶೂಟಿಂಗ್ ಅಕಾಡೆಮಿಯ ರವಿಚಂದ್ರ ಬಾಲೆಹೊಸೂರ್ ಬಳಿ ತರಬೇತಿ ಪಡೆದಿದ್ದಾರೆ.

ಬಿಸಿಸಿಐ ಒಂಬುಡ್ಸ್‌ಮನ್ ನ್ಯಾ.ಅರುಣ್ ಮಿಶ್ರಾ ಆದೇಶ

ಕೆಎಸ್‌ಸಿಎ ಕಾರ್ಯದರ್ಶಿ: ಮೆನನ್ ಅನರ್ಹ

ಪ್ರಜಾವಾಣಿ ವಾರ್ತೆ

ಸಂತೋಷ್ ಮೆನನ್

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ (ಕೆಎಸ್‌ಸಿಎ) ಸಂತೋಷ್ ಮೆನನ್ ಅವರು ಸಂಸ್ಥೆಯ ವಿವಿಧ ಹುದ್ದೆಗಳಲ್ಲಿ ಒಂಬತ್ತು ವರ್ಷ ಪೂರೈಸಿದ್ದಾರೆ. ಆದ್ದರಿಂದ ಅವರನ್ನು ಕಾರ್ಯದರ್ಶಿ ಸ್ಥಾನದಲ್ಲಿ ಮುಂದುವರಿಸಬಾರದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಒಂಬುಡ್ಸ್‌ಮನ್, ವಿಶ್ರಾಂತ ನ್ಯಾಯಮೂರ್ತಿ ಅರುಣ್ ಮಿಶ್ರಾ ಆದೇಶಿಸಿದ್ದಾರೆ. ಇದರಿಂದಾಗಿ ವೆಂಕಟೇಶ ಪ್ರಸಾದ್ ಅಧ್ಯಕ್ಷತೆಯ ಆಡಳಿತ ಸಮಿತಿಗೆ ದೊಡ್ಡ ಹಿನ್ನಡೆಯಾದಂತಾಗಿದೆ.

ಕೆಎಸ್‌ಸಿಎ ಸಾಂಸ್ಥಿಕ ಸದಸ್ಯತ್ವ ಹೊಂದಿರುವ 'ಡಾಲ್ಫಿನ್ ಕ್ರಿಕೆಟರ್ಸ್' ಸಲ್ಲಿಸಿದ್ದ ದೂರನ್ನು ಪರಿಶೀಲಿಸಿದ ನ್ಯಾಯಮೂರ್ತಿ ಮಿಶ್ರಾ ಅವರು ಈ ಆದೇಶ ಪ್ರಕಟಿಸಿದ್ದಾರೆ.

ಬಿಸಿಸಿಐ ನಿಯಮಾವಳಿಯ ಪ್ರಕಾರ ಪದಾಧಿಕಾರಿಯೊಬ್ಬರು ವಿವಿಧ ಹುದ್ದೆಗಳಲ್ಲಿ ಒಟ್ಟು 9 ವರ್ಷ ಕಾರ್ಯನಿರ್ವಹಣೆ ಮಾಡಬಹುದು. ಅದರ ನಂತರ ಯಾವುದೇ ಹುದ್ದೆಯಲ್ಲಿ ಮುಂದುವರಿಯುವ ಅವಕಾಶ ಇಲ್ಲ.

ಮೆನನ್ 2013ರ ಡಿಸೆಂಬರ್ 1 ರಿಂದ 2019ರ ಡಿಸೆಂಬರ್ 3ರವರೆಗೆ ಆಡಳಿತ ಮಂಡಳಿ (2132 ದಿನ) ಸದಸ್ಯರಾಗಿದ್ದರು. ನಂತರ 2019ರ ಡಿಸೆಂಬರ್ 3ರಿಂದ 2022ರ ನವೆಂಬರ್ 20ರವರೆಗೆ (1144 ದಿನ) ಕಾರ್ಯದರ್ಶಿ ಆಗಿದ್ದರು. ಅಂದರೆ ಒಟ್ಟು 3276 ದಿನ. 2027ರ ಡಿಸೆಂಬರ್ 7ರಂದು ಕಾರ್ಯದರ್ಶಿಯಾಗಿ ಮರಳಿ ಆಯ್ಕೆಯಾದ ಅವರಿಗೆ 9 ವರ್ಷ (3285 ದಿನ) ಅವಧಿ ಮುಗಿಯಲು 9 ದಿನಗಳಷ್ಟೇ ಉಳಿದಿದ್ದವು. ಅದರಂತೆ ಅವರು 2025ರ ಡಿಸೆಂಬರ್ 16ಕ್ಕೆ ಹುದ್ದೆಯಿಂದ ಇಳಿಯಬೇಕಿತ್ತು ಎಂದು ದೂರುದಾರರು ವಿವರಿಸಿದ್ದರು.

'ಮೂರನೇ ಪ್ರತಿವಾದಿಯು (ಸಂತೋಷ್ ಮೆನನ್) ವ್ಯವಸ್ಥಾಪಕ ಸಮಿತಿಯ ಸದಸ್ಯರಾಗಿ ಮತ್ತು ಪದಾಧಿಕಾರಿಯಾಗಿ 9 ವರ್ಷಗಳ ಸಂಚಿತ ಅವಧಿಯನ್ನು ಪೂರ್ಣಗೊಳಿಸಿಯಾಗಿದೆ. ಅವರನ್ನು ಅನರ್ಹಗೊಳಿಸಲಾಗಿದೆ. ಕೂಲಿಂಗ್ ಆಫ್ ಅವಧಿ ನಿಯಮಗಳನ್ನೂ ಪರಿಶೀಲಿಸಲಾಗಿದೆ' ಎಂದು ಒಂಬುಡ್ಸ್‌ಮನ್ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'2025ರ ಫೆಬ್ರುವರಿ 5ರಂದು ರಾಜ್ಯ ಸಂಸ್ಥೆಯ ಒಂಬುಡ್ಸ್‌ಮನ್ ಅವರು ನೀಡಿರುವುದು ಸ್ಪಷ್ಟನೆಯೇ ಹೊರತು ಕೆಎಸ್‌ಸಿಎ ನಿಯಮಾವಳಿಯ 41ನೇ ನಿಯಮದಡಿ ಆದೇಶವಲ್ಲ. ಪದಾಧಿಕಾರಿಗಳ ಕಾರ್ಯಾವಧಿಯ ಪ್ರಕರಣಗಳು ಬಿಸಿಸಿಐ ಒಂಬುಡ್ಸ್‌ಮನ್ ವ್ಯಾಪ್ತಿಗೆ ಒಳಪಡುತ್ತವೆ' ಎಂದೂ ಮಿಶ್ರಾ ಉಲ್ಲೇಖಿಸಿದ್ದಾರೆ. 'ಈ ಆದೇಶ ಜಾರಿಗೊಳಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬಹುದು' ಎಂದು ಮಿಶ್ರಾ ಹೇಳಿದ್ದಾರೆ.

ಕೆಎಸ್‌ಸಿಎ ಪ್ರತಿಕ್ರಿಯೆ: 'ಬಿಸಿಸಿಐ ಒಂಬುಡ್ಸ್‌ಮನ್ ಮಾಡಿರುವ ಆದೇಶವನ್ನು ನಾವು ಗಮನಿಸಿದ್ದೇವೆ. ಅದನ್ನು ವಿವರವಾಗಿ ಪರಿಶೀಲಿಸುತ್ತಿದ್ದೇವೆ. ಕಾನೂನಿನ ಅಡಿಯಲ್ಲಿ ಲಭ್ಯವಿರುವ ಎಲ್ಲಾ ಪರಿಹಾರಗಳು ಮತ್ತು ಆಯ್ಕೆಗಳನ್ನು ಮೌಲ್ಯಮಾಪನ ಮಾಡಲು ಸೂಕ್ತ ಕಾನೂನು ಸಲಹೆಯನ್ನು ಕೋರುತ್ತಿದ್ದೇವೆ' ಎಂದು ವೆಂಕಟೇಶ್ ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕೆಎಸ್‌ಸಿಎ ಒಂಬುಡ್ಸ್‌ಮನ್ ಆಗಿರುವ ನಿವೃತ್ತ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಅವರು 2025ರ ಫೆಬ್ರುವರಿ 5ರಂದು ಹೊರಡಿಸಿದ ಆದೇಶವು ಕೆಎಸ್‌ಸಿಎ ನಿಯಮಾವಳಿ ಅಡಿ ಎಲ್ಲ ಸದಸ್ಯರಿಗೂ ಅನ್ವಯವಾಗುತ್ತದೆ. ಆದರೆ ಬಿಸಿಸಿಐ ಒಂಬುಡ್ಸ್‌ಮನ್ ಅವರು ಈ ವಿಷಯದಲ್ಲಿ ವ್ಯತಿರಿಕ್ತ ದೃಷ್ಟಿಕೋನ ಹೊಂದಿರುವುದು ದುರದೃಷ್ಟಕರ. ಈ ಎರಡೂ ಆದೇಶಗಳನ್ನು ಪ್ರಸ್ತುತ ಪರಿಶೀಲಿಸಲಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

ಪ್ರಸಾದ್ ನೇತೃತ್ವದ ಸಮಿತಿಯು ಹೋದ ವರ್ಷದ ಡಿಸೆಂಬರ್ 7ರಂದು ಅಧಿಕಾರಕ್ಕೆ ಬಂದಿತ್ತು. ಕಾರ್ಯದರ್ಶಿ ಹುದ್ದೆಯ ಸ್ಪರ್ಧೆಯಲ್ಲಿ ಮೆನನ್, ಇ.ಎಸ್.ಜಯರಾಮ್ ವಿರುದ್ಧ ಜಯ ಗಳಿಸಿದ್ದರು.

ಶ್ರೇಯಸ್ ಆಲ್‌ರೌಂಡ್ ಆಟ: ಕರುಣ್ ನಾಯರ್ ಅರ್ಧಶತಕ

ವಾರಿಯರ್ಸ್ ಹಣಿದ ಮಂಗಳೂರು 'ಕಿಂಗ್ಸ್'

• ಆರ್. ಜಿತೇಂದ್ರ

ಮೈಸೂರು: ಅನುಭವಿ ಶ್ರೇಯಸ್ ಗೋಪಾಲ್ ಆಲ್‌ರೌಂಡ್ ಆಟದ (ಔಟಾಗದೇ 84, 25ಕ್ಕೆ 2 ವಿಕೆಟ್) ಎದುರು ಮಂಕಾದ ಮೈಸೂರು ವಾರಿಯರ್ಸ್, ಕೋಸ್ಟಲ್ ಕಿಂಗ್ಸ್ ಮಂಗಳೂರು ಎದುರು 6 ವಿಕೆಟ್ ಅಂತರದಿಂದ ಸೋಲು ಅನುಭವಿಸಿತು.

ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಕ್ರಿಕೆಟ್ ಟೂರ್ನಿಯ ಗುರುವಾರದ ಪಂದ್ಯದಲ್ಲಿ ಮೈಸೂರು ಒಡ್ಡಿದ 192 ರನ್ ಗುರಿ ಮಂಗಳೂರಿಗೆ ಹೆಚ್ಚು ಸವಾಲಾಗಲಿಲ್ಲ.

42ಕ್ಕೆ 3 ವಿಕೆಟ್ ಕಳೆದುಕೊಂಡಿದ್ದ ತಂಡವನ್ನು ನಾಯಕ ಕರುಣ್ ನಾಯರ್ (61 ರನ್. 32 ಎ, 4X6, 6X3) ಹಾಗೂ ಶ್ರೇಯಸ್ ಗೋಪಾಲ್ (84, 43 3, 4X9, 6X3) 60 ಎಸೆತಗಳಲ್ಲಿ 123 ರನ್ ಜೊತೆಯಾಟದ ಮೂಲಕ ಜಯದ ಹಾದಿಗೆ ಮುನ್ನಡೆಸಿದರು. ಕಡೆಗೆ ಸೂರಜ್ ಅಹುಜಾ (ಔಟಾಗದೆ 8) ಶ್ರೇಯಸ್ ಜೊತೆಗೂಡಿ ಗೆಲುವಿನ ಓಟ ಪೂರ್ಣಗೊಳಿಸಿದರು. ವಾರಿಯರ್ಸ್ ಪರ ಅರವಿಂದ್ 2 ವಿಕೆಟ್ ಪಡೆದರು.

ಚೇತನ್ ಅರ್ಧಶತಕ: ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಮೈಸೂರು ವಾರಿಯರ್ಸ್ ಪರ ಎಲ್.ಆರ್. ಚೇತನ್ (67 ರನ್, 36 ಎ, 4X4, 6X6) ಅಬ್ಬರಿಸಿದರು. ಕಡೆ ಓವರ್‌ಗಳಲ್ಲಿ ಯುವರಾಜ್ ಅರೋರ(37) ಉತ್ತಮವಾಗಿ ಆಡಿದರು. ಮಂಗಳೂರು ಪರ ವಿ. ಕೌಶಿಕ್ 3 ಹಾಗೂ ಶ್ರೇಯಸ್ ಗೋಪಾಲ್ 2 ವಿಕೆಟ್ ಪಡೆದರು.

ಕೋಸ್ಟಲ್ ಕಿಂಗ್ಸ್ ಮಂಗಳೂರು ಪರ ಆಲ್‌ರೌಂಡ್ ಪ್ರದರ್ಶನ ನೀಡಿದ ಶ್ರೇಯಸ್ ಗೋಪಾಲ್ ಬ್ಯಾಟಿಂಗ್ ವೈಖರಿ ಪ್ರಜಾವಾಣಿ ಚಿತ್ರ: ಅನೂಪ್ ರಾಘ್ ಟಿ

ಮಹಾರಾಜ ಟ್ರೋಫಿ: ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಅಂಕ
ಬೆಂಗಳೂರು ಬ್ಲಾಸ್ಟರ್ಸ್	4	3	1	0	6
ಕೋಸ್ಟಲ್ ಕಿಂಗ್ಸ್ ಮಂಗಳೂರು	4	2	1	1	5
ಶಿವಮೊಗ್ಗ ಯೋಧಾಸ್	4	2	2	0	4
ಗುಲ್ಬರ್ಗ ಮಿಸ್ಟಿಕ್ಸ್	4	2	2	0	4
ಹುಬ್ಬಳ್ಳಿ ಟೈಗರ್ಸ್	4	1	2	1	3
ಮೈಸೂರು ವಾರಿಯರ್ಸ್	4	1	3	0	2

ಶನಿವಾರದಿಂದ (ಜೂನ್ 27) ಹುಬ್ಬಳ್ಳಿಯಲ್ಲಿ ಎರಡನೇ ಹಂತದ ಪಂದ್ಯಗಳು ನಡೆಯಲಿವೆ.

ಸಂಕ್ಷಿಪ್ತ ಸ್ಕೋರು: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 191 (ಎಲ್.ಆರ್. ಚೇತನ್ 67, ಯುವರಾಜ್ ಅರೋರ 37. ವಿ. ಕೌಶಿಕ್ 43ಕ್ಕೆ 3, ಶ್ರೇಯಸ್ ಗೋಪಾಲ್ 25ಕ್ಕೆ 2). ಕೋಸ್ಟಲ್ ಕಿಂಗ್ಸ್ ಮಂಗಳೂರು: 17.4 ಓವರ್‌ಗಳಲ್ಲಿ 4 ವಿಕೆಟ್‌ಗೆ 195 (ಶ್ರೇಯಸ್ ಗೋಪಾಲ್ ಔಟಾಗದೇ 84, ಕರುಣ್ ನಾಯರ್ 64. ಅರವಿಂದಕುಮಾರ್ ರೈ 31ಕ್ಕೆ 2). ಪಂದ್ಯದ ಆಟಗಾರ: ಶ್ರೇಯಸ್ ಗೋಪಾಲ್

ಗುಲ್ಬರ್ಗಗೆ ಮಣಿದ ಹುಬ್ಬಳ್ಳಿ ಟೈಗರ್ಸ್

ಮೈಸೂರು: ಉತ್ತಮ ಬೌಲಿಂಗ್ ದಾಳಿ ಸಂಘಟಿಸಿದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಹುಬ್ಬಳ್ಳಿ ಟೈಗರ್ಸ್ ಅನ್ನು 7 ವಿಕೆಟ್ ಅಂತರದಿಂದ ಮಣಿಸಿತು.

ಗುರುವಾರದ ಎರಡನೇ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಹುಬ್ಬಳ್ಳಿ ಪರ ಬ್ಯಾಟರ್‌ಗಳು ನಿರೀಕ್ಷಿತ ಪ್ರದರ್ಶನ ನೀಡುವಲ್ಲಿ ವಿಫಲರಾದರು. ತಂಡವು 9 ವಿಕೆಟ್ ನಷ್ಟಕ್ಕೆ 119 ರನ್ ಗಳಿಸಿತು. ಶಿಖರ್ ಶೆಟ್ಟಿ 26 ರನ್ ಗಳಿಸಿ ಅಜೇಯರಾಗಿ ಉಳಿದರು. ಗುಲ್ಬರ್ಗ ಪರ ಕ್ರಾಂತಿಕುಮಾರ್ 17ಕ್ಕೆ 3 ವಿಕೆಟ್ ಮೂಲಕ ಎದುರಾಳಿಗಳನ್ನು ನಿಯಂತ್ರಿಸಿದರು. ಗುಲ್ಬರ್ಗ 13.2 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಮೆಕ್ನಿಲ್ ನೊರೊನಾ (42) ಹಾಗೂ ತಿಪ್ಪಾರೆಡ್ಡಿ (34) ಅಜೇಯ ಜೊತೆಯಾಟದ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಹುಬ್ಬಳ್ಳಿ ಪರ ಶಿಖರ್ ಶೆಟ್ಟಿ 26ಕ್ಕೆ 2 ವಿಕೆಟ್ ಪಡೆದರು.

ಐಟಿಎಫ್ ಇನ್ನು ಮುಂದೆ 'ವರ್ಲ್ಡ್ ಟೆನಿಸ್'

ಲಂಡನ್ (ಎಪಿ): ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್ ತನ್ನ ಹೆಸರನ್ನು ಬದಲಾಯಿಸಲಿದ್ದು, ಇನ್ನು ಮುಂದೆ 'ವರ್ಲ್ಡ್ ಟೆನಿಸ್' (ವಿಶ್ವ ಟೆನಿಸ್) ಎಂದು ಕರೆಸಿಕೊಳ್ಳಲಿದೆ.

ಈ ಸಂಸ್ಥೆಯು ಡೇವಿಸ್ ಕಪ್, ಬಿಲ್ಲಿ ಜೀನ್ ಕಿಂಗ್ ಕಪ್ ಸ್ಪರ್ಧೆಗಳನ್ನು ಮತ್ತು ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್‌ನಲ್ಲಿ ಟೆನಿಸ್ ಸ್ಪರ್ಧೆಗಳನ್ನು ಆಯೋಜಿಸುವ ಹೊಣೆ ಹೊತ್ತಿದೆ. ಕಳೆದ ಅಕ್ಟೋಬರ್‌ನಲ್ಲಿ ನಡೆದ ಐಟಿಎಫ್‌ನ ವಾರ್ಷಿಕ ಮಹಾಸಭೆಯಲ್ಲಿ ಹೆಸರು ಬದಲಾವಣೆಗೆ ಸದಸ್ಯ ಟೆನಿಸ್ ಸಂಸ್ಥೆಗಳು ಒಪ್ಪಿಗೆ ಸೂಚಿಸಿದ್ದವು.

ಭಾರತಕ್ಕೆ ಇಂದು ಇಂಗ್ಲೆಂಡ್ ಸವಾಲು

ಲಂಡನ್: ಪಾಕಿಸ್ತಾನ ತಂಡವನ್ನು ಮಣಿಸಿ ಎಫ್‌ಐಎಚ್ ಪ್ರೊ ಲೀಗ್ ಲಂಡನ್ ಚರಣದಲ್ಲಿ ಶುಭಾರಂಭ ಮಾಡಿರುವ ಭಾರತ ತಂಡವು ಶುಕ್ರವಾರ ಆತಿಥೇಯ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಹರ್ಮನ್‌ಪ್ರೀತ್ ಸಿಂಗ್ ಪಡೆಯು ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದೆ. ರೋಟರ್‌ಡ್ಯಾಮ್ ಚರಣದ ತನ್ನ ಕೊನೆಯ ಪಂದ್ಯದಲ್ಲಿ ಬಲಿಷ್ಠ ನೆದರ್ಲೆಂಡ್ಸ್ ತಂಡವನ್ನು 3-2ರಿಂದ ಸೋಲಿಸಿದ್ದ ಭಾರತ ತಂಡವು ಪಾಕ್ ತಂಡವನ್ನು 4-3ರಿಂದ ಸದೆಬಡಿದಿತ್ತು.

ಭಾರತ ತಂಡವು ಆಡಿದ 12 ಪಂದ್ಯಗಳ ಪೈಕಿ ಎರಡು ಜಯ, ಮೂರು ಡ್ರಾ ಮತ್ತು ಏಳು ಸೋಲಿನೊಂದಿಗೆ 10 ಪಾಯಿಂಟ್ ಗಳಿಸಿದೆ.

MARUTI SUZUKI
NEXA
EXPERIENCE A NEW DAWN
OF ELECTRIC MOBILITY.
Redefine your boundaries with Maruti Suzuki's First Electric SUV, the e VITARA.
Turn long drives into epic journeys, backed by India's Largest** Fast Charging Network.
Designed to offer everything you expect from an SUV, and everything you didn't expect from an EV.
e VITARA
e VITARA
India goes electric
543km RANGE
INDIA'S LARGEST** FAST-CHARGING NETWORK
543 km RANGE#
BHARAT NCAP
5 STAR SAFETY RATING BNCAP
NEXA edge
60% ASSURED BUYBACK AFTER 3 YEARS
8 YEARS WARRANTY
• BATTERY: 8 YEARS
• VEHICLE: 3+5(PAID) YEARS
COMPLIMENTARY
HOME CHARGER & INSTALLATION
WORTH ₹ 50 000
SCAN TO CONNECT TO A SHOWROOM NEAR YOU
E-BOOK TODAY @ WWW.NEXAEXPERIENCE.COM
Creative Visualisation. Images used are for illustration purposes only. | Applicable T&C available at the dealership. | **As certified by Kantar IMRB for an OEM platform for end-to-end usage as on November 28, 2025. | #543 km range: Certified range; actual results may vary by driving conditions and usage. | Assured buyback plan is available on payment basis with the option of 3 years/45 000 km or 4 years/60 000 km ownership plans (whichever is earlier). The program is offered through an insurance company. e VITARA comes with standard warranty of 3 years/1 00 000 km (whichever is earlier) with an option of extending the same on payment basis to 5 years/1 40 000 km and service activated coverage for 6th to 8th year for EV related components.